ಭಾನುವಾರ, ಫೆಬ್ರುವರಿ 15, 2026 ₹ 7.00 • www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ವಾನ ಪ್ರೇಮಿ
ವಿಜಯಪುರದ ಪೊಲೀಸ್ ಪರೇಡ್ ಮೈದಾನದಲ್ಲಿ ಶನಿವಾರ ಏರ್ಪಡಿಸಿದ್ದ ಶ್ವಾನ ಪ್ರದರ್ಶನಕ್ಕೆ ಬಾಲಕಿಯೊಬ್ಬರು ತಮ್ಮ ನಾಯಿಯನ್ನು ತಂದಿದ್ದರು

ಗೆಳತಿಯೊಂದಿಗೆ ಹಾರ್ದಿಕ್
ಭಾರತದ ಕ್ರಿಕೆಟಿಗ ಹಾರ್ದಿಕ್ ಪಾಂಡ್ಯ ಅವರು ತಮ್ಮ ಗೆಳತಿ ಮಹೀಕಾ ಶರ್ಮಾ ಜೊತೆ ಕೊಲಂಬೊ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡರು

ಸಾರ್ಥಕ ಸಾವಿರ ದಿನಗಳು

ಸಾಕಾರಗೊಂಡಿವೆ ಕೋಟಿ ಕನಸುಗಳು



"ವರ್ತಮಾನದಲ್ಲಿ ನಾವು ಏನು ಕೆಲಸಗಳನ್ನು ಮಾಡುತ್ತೇವೆಯೋ, ಅದರ ಮೇಲೆ ಭವಿಷ್ಯ ನಿರ್ಧಾರವಾಗುತ್ತದೆ."

ಮಹಾತ್ಮ ಗಾಂಧೀಜಿ

ಮಹಾತ್ಮ ಗಾಂಧೀಜಿಯವರ **'ಅಂತ್ಯೋದಯ'** ಮತ್ತು **'ಸರ್ವೋದಯ'** ತತ್ವದ ಅಡಿಯಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳಾದ **ಶ್ರೀ ಡಿ ಕೆ ಶಿವಕುಮಾರ್** ಅವರ ನಾಯಕತ್ವದ ಕರ್ನಾಟಕ ಸರ್ಕಾರ ಸಾರ್ಥಕ ಸಾವಿರ ದಿನಗಳನ್ನು ಪೂರೈಸಿದೆ.

ಪ್ರಮುಖ ಮೈಲಿಗಲ್ಲುಗಳು

₹1.16+ ಲಕ್ಷ ಕೋಟಿ
ಪಂಚ ಗ್ಯಾರಂಟಿಗಳಿಗೆ ಈವರೆಗೆ ವಿನಿಯೋಗ

2.11+ ಲಕ್ಷ
ಕುಟುಂಬಗಳಿಗೆ ಹಕ್ಕುಪತ್ರ

₹1.5 ಲಕ್ಷ ಕೋಟಿ
ಬೆಂಗಳೂರು ಮೂಲಸೌಕರ್ಯಕ್ಕೆ ವೆಚ್ಚ

₹1.12+ ಲಕ್ಷ ಕೋಟಿ
ಸಾರ್ವಜನಿಕ ಕಲ್ಯಾಣ ಯೋಜನೆಗಳಿಗೆ ಮೀಸಲು (ವಾರ್ಷಿಕ)

1.37+ ಕೋಟಿ
ಕುಟುಂಬಗಳು ಸರ್ಕಾರದ ಯೋಜನೆಗಳ ನೇರ ಫಲಾನುಭವಿಗಳು

ಕರ್ನಾಟಕದ ನವ ನಿರ್ಮಾಣಕ್ಕೆ
ಗ್ಯಾರಂಟಿ ಸರ್ಕಾರ

ಪ್ರಗತಿಯ ಹಾದಿ
ಇದು ಕರ್ನಾಟಕ ಅಭಿವೃದ್ಧಿ ಮಾದರಿ

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

‘ರಾಜ್ಯಕ್ಕೆ ಅನ್ಯಾಯ: ಬಾಯಿಬಿಡದ ಬಿಜೆಪಿ ಸಂಸದರು’

ಹಾವೇರಿ ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಇಡೀ ದೇಶದ ಜಿಡಿಪಿಯಲ್ಲಿ (ಒಟ್ಟು ದೇಶೀಯ ಉತ್ಪನ್ನ) ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಸಂಗ್ರಹದಲ್ಲೂ ಮುಂದಿದೆ. ಆದರೆ, ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಬಿಜೆಪಿ ಸಂಸದರು, ಇದರ ಬಗ್ಗೆ ಬಾಯಿ ಬಿಡುತ್ತಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ‘ರಾಜ್ಯ ಸರ್ಕಾರದ ಸಾವಿರ ದಿನಗಳ ಸಾಧನಾ ಸಮಾವೇಶ’ ಮತ್ತು ‘ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ’ ಉದ್ಘಾಟಿಸಿ ಮಾತನಾಡಿದ ಅವರು, ‘ರಾಜ್ಯದಿಂದ ಕೇಂದ್ರಕ್ಕೆ ₹4.50 ಲಕ್ಷ ಕೋಟಿ ತೆರಿಗೆ ಪಾವತಿಯಾಗಿದೆ. ಆದರೆ, ಕೇಂದ್ರವು ರಾಜ್ಯಕ್ಕೆ ಕೇವಲ ₹60 ಸಾವಿರ ಕೋಟಿ ಮಾತ್ರ ನೀಡಿದೆ. ₹100 ತೆರಿಗೆ ತುಂಬಿದರೆ, ಅದರಲ್ಲಿ ₹13ರಿಂದ ₹14 ಸಿಗುತ್ತಿದೆ’ ಎಂದರು.

‘ನಿರಂತರ ಅನ್ಯಾಯ ನಡೆಯುತ್ತಿದ್ದರೂ ಸಂಸದರಾದ ಬಸವರಾಜ ಬೊಮ್ಮಾಯಿ, ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸುತ್ತಿಲ್ಲ. ಬಾಯಿಬಿಡುತ್ತಿಲ್ಲ. ಅನ್ಯಾಯದ ನಡುವೆಯೂ ನಮ್ಮ ಸರ್ಕಾರ ಅಭಿವೃದ್ಧಿ ಮಾಡುತ್ತಿದೆ’ ಎಂದರು.

‘ನಮ್ಮ ಸರ್ಕಾರ ಬಂದು 2 ವರ್ಷ 9 ತಿಂಗಳಾಯಿತು. ನಿನ್ನೆಗೆ 1,000 ದಿನವಾಯಿತು. ನುಡಿದಂತೆ ನಡೆದಿದ್ದೇವೆ. ಇಲ್ಲಿಯವರೆಗೂ ಗ್ಯಾರಂಟಿಗಳಿಗೆ ₹1.18 ಲಕ್ಷ ಕೋಟಿ ಗ್ಯಾರಂಟಿ ಯೋಜನೆಗೆ ಖರ್ಚು ಆಗಿದೆ. 1,000 ದಿನಗಳ ಸಮಾವೇಶ ನಮಗೆ ಮೈಲಿಗಲ್ಲು. ಬಡವರ, ಪರಿಶಿಷ್ಟರ, ಹಿಂದುಳಿದವರ, ಅಲ್ಪಸಂಖ್ಯಾತರ, ಕಾರ್ಮಿಕರ, ರೈತರ ಕೆಲಸ ಬದ್ಧತೆಯಿಂದ ಮಾಡುತ್ತೇವೆ’ ಎಂದರು.

ಹಾವೇರಿಯಲ್ಲಿ ಶನಿವಾರ ಆಯೋಜಿಸಿದ್ದ ‘ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ’ದಲ್ಲಿ ಪಾಲ್ಗೊಂಡಿದ್ದ ಜನರು

ಸಿದ್ದರಾಮಯ್ಯ ಅವರ ಮೂರ್ತಿ ಅನಾವರಣಗೊಳಿಸಿದ ಡಿಕೆಶಿ

ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯ ಉತ್ಸವ ರಾಕ್ ಗಾರ್ಡನ್‌ನವರು ಸಿದ್ಧಪಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಿಮೆಂಟ್ ಮೂರ್ತಿಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅನಾವರಣಗೊಳಿಸಿದರು.

ಬೆಳಿಗ್ಗೆ ಸಿದ್ದರಾಮಯ್ಯ ಅವರು ಬರುತ್ತಿದ್ದಂತೆಯೇ ಸಮಾವೇಶ ಶುರುವಾಯಿತು. ತಡವಾಗಿ ಬಂದ ಡಿ.ಕೆ. ಶಿವಕುಮಾರ, ವೇದಿಕೆಯಲ್ಲಿದ್ದ ಎಲ್ಲರನ್ನೂ ಮಾತನಾಡಿಸಿ ದರು. ಆದರೆ, ಮುಖ್ಯಮಂತ್ರಿ ಅವರನ್ನು ಮಾತನಾಡಿಸದೇ, ಅವರ ಪಕ್ಕವೇ ಹೋಗಿ ಕೂತರು. ಕೆಲ ನಿಮಿಷಗಳ ಬಳಿಕ ಮಾತನಾಡಿದರು.

ಮೂರ್ತಿ ಅನಾವರಣ ವೇಳೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ನಗುತ್ತ ಮಾತನಾಡಿದರು. ನಂತರ, ಡಿ.ಕೆ. ಶಿವಕುಮಾರ ಭಾಷಣ ಮಾಡಿದರು. ಸಿದ್ದರಾಮಯ್ಯ ಅವರು ಭಾಷಣ ಮಾಡಲು ಮುಂದಾದಾಗ, ಶಿವಕುಮಾರ ವೇದಿಕೆಯಿಂದ ಇಳಿದು ಹೊರಟರು.

‘ರಾಜ್ಯಕ್ಕೆ 7ನೇ ಗ್ಯಾರಂಟಿ ನೀರು’

‘ಪಂಚ ಗ್ಯಾರಂಟಿ ನೀಡಿದ್ದ ನಾವು, ಈಗ ಆರನೇ ಗ್ಯಾರಂಟಿಯಾಗಿ ಭೂಮಿ ಕೊಡುತ್ತಿದ್ದೇವೆ. ಮುಂದಿನ 7ನೇ ಗ್ಯಾರಂಟಿಯಾಗಿ ನೀರು ಕೊಡುತ್ತೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಘೋಷಿಸಿದರು.

‘ಕೃಷ್ಣಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ಎಕರೆಗೆ ₹35 ಲಕ್ಷದಿಂದ ₹40 ಲಕ್ಷ ಪರಿಹಾರ ನೀಡಲು ತೀರ್ಮಾನಿಸಿದ್ದೇವೆ. ರಾಜ್ಯದ ಕೃಷ್ಣಾ ಮೇಲ್ದಂಡೆ, ಮೇಕೆದಾಟು, ಮಹದಾಯಿ, ಎತ್ತಿನಹೊಳೆ ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರವು ಅನುಮತಿ ಕೊಟ್ಟರೆ, ಏಳನೇ ಗ್ಯಾರಂಟಿಯಾಗಿ ನೀರನ್ನು ನೀಡುತ್ತೇವೆ’ ಎಂದು ಅವರು ಹೇಳಿದರು.

‘ಚುನಾವಣೆಯಲ್ಲಿ ನಮಗೆ 136 ಸೀಟುಗಳು ಬಂದಿದ್ದವು. ಮುಂದಿನ ಚುನಾವಣೆಯಲ್ಲಿ ನಮಗೆ 141 ಸೀಟುಗಳು ಬರಲಿವೆ. ನನ್ನ ಈ ಮಾತನ್ನು ಬರೆದಿಟ್ಟುಕೊಳ್ಳಿ. ನನಗೆ ನಮ್ಮ ಶಾಸಕರಿಗೆ ಆತ್ಮವಿಶ್ವಾಸವಿದೆ’ ಎಂದು ಶಿವಕುಮಾರ ಹೇಳಿದರು.

‘ಜನರು ನೆಮ್ಮದಿಯಿಂದ ಬದುಕುತ್ತಿರುವುದು, ಮಹಿಳೆಯರು ಸಂತೋಷದಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿರುವುದು, ಗೃಹಿಣಿಯರ ಬದುಕಿನಲ್ಲಿ ಬದಲಾವಣೆ ಆಗಿರುವುದು, ಯುವಕರು ಉದ್ಯೋಗ ಸೃಷ್ಟಿ ಮಾಡಿಕೊಳ್ಳುತ್ತಿರುವ ದಿನಗಳನ್ನು ನಾವು ನೋಡುತ್ತಿದ್ದೇವೆ. ಬಿಜೆಪಿಯವರು ತಮ್ಮ ಆಡಳಿತ ಅವಧಿಯಲ್ಲಿ ಇಂಥ ಒಂದು ಕೆಲಸವನ್ನೂ ಮಾಡಲಿಲ್ಲ ಅವರಿಗೆ ಮಾತನಾಡುವ ಹಕ್ಕು ಇಲ್ಲ’ ಎಂದರು.

ನನ್ನದು ಸೇರಿ 150 ಮನೆಗಳು ಅಕ್ರಮ ಎಂದೇ ಹೇಳಲಾಗುತಿತ್ತು. 25 ವರ್ಷಗಳಿಂದ ಮಾಲೀಕತ್ವ ಸಿಕ್ಕಿರಲಿಲ್ಲ. ಶಾಸಕ, ಜಿಲ್ಲಾಧಿಕಾರಿ, ತಹಶೀಲ್ದಾರ್ ಮುತುವರ್ಜಿ ವಹಿಸಿ ಹಕ್ಕುಪತ್ರ ನೀಡಿದ್ದಾರೆ. ಬಡವರಿಗೆ ಅನುಕೂಲ ಆಗಿದೆ

ಸಿದ್ದಪ್ಪ, ಫಲಾನುಭವಿ, ಕಡೂರು ಗ್ರಾಮ ರಟ್ಟೇಹಳ್ಳಿ ತಾಲ್ಲೂಕು

ರಾಜ್ಯ ಸರ್ಕಾರ ಸಾವಿರ ದಿನಗಳ ಸಂಭ್ರಮ ಆಚರಿಸಿದೆ. ಆಡಳಿತದ ಬಗ್ಗೆ ಜನ ಸಂತೃಪ್ತರಾಗಿದ್ದರೆ, ಸರ್ಕಾರ ಸಂಭ್ರಮಿಸಬಹುದಿತ್ತು. ಆದರೆ, ಜನ ಕಷ್ಟದಲ್ಲಿರುವಾಗ ಕಾಂಗ್ರೆಸ್‌ನವರು ಸಂಭ್ರಮಿಸುತ್ತಿರುವುದು ವಿಕೃತಿ

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

ಸಾವಿರ ದಿನಗಳ ಆಡಳಿತಕ್ಕೆ ವಿಪಕ್ಷಗಳ ಟೀಕೆ

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರವು 1,000 ದಿನ ಪೂರೈಸಿದ ನೆಪದಲ್ಲಿ ಭೂಗ್ಯಾರಂಟಿ ಸಮಾವೇಶ ನಡೆಸುತ್ತಿದ್ದರೆ, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನನೆಗುದಿಗೆ ಬಿದ್ದಿವೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ. ಇದು ಪ್ರಚಾರದ ಗೀಳಿನ ಸರ್ಕಾರ ಎಂದು ಹೇಳಿವೆ.

‘ಜನರ ಲೂಟಿ ಮಾಡುವ ಸರ್ಕಾರ’



‘ಸರ್ಕಾರಿ ಭೂಮಿಯನ್ನು ನೋಂದಣಿ ಮಾಡಿಕೊಡುವ ನೆಪದಲ್ಲಿ ರಾಜ್ಯ ಸರ್ಕಾರವು ಜನರನ್ನು ಲೂಟಿ ಮಾಡುತ್ತಿದೆ. ಆದರೆ ಅದಕ್ಕೆ, ‘ಹಕ್ಕುಪತ್ರ ವಿತರಣೆ’ ಎಂದು ಕರೆಯುತ್ತಿದೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ನಮ್ಮ ಸರ್ಕಾರ ಇದ್ದಾಗ, ಅಕ್ರಮ ಇದ್ದುದನ್ನು ಸಕ್ರಮ ಮಾಡಿದ್ದೆವು. ಜತೆಗೆ ಸಾಲಸಿಗುವ ವ್ಯವಸ್ಥೆಯನ್ನೂ ಮಾಡಿದ್ದೆವು. ಈಗ ಸರ್ಕಾರವು, ಸರ್ಕಾರಿ ಜಮೀನನ್ನೇ ನೋಂದಣಿ ಮಾಡಿಕೊಳ್ಳಿ ಎಂದು ಹೇಳಿ ಬಡ ಕುಟುಂಬದ ಮೇಲೆ ಮೂರು–ನಾಲ್ಕು ಲಕ್ಷ ರೂಪಾಯಿ ಹೊರೆ ಹೇರಿದೆ’ ಎಂದಿದ್ದಾರೆ. ‘ಗ್ರಾಮೀಣ ಪ್ರದೇಶದಲ್ಲಿ ಹಕ್ಕುಪತ್ರ ವಿತರಣಾ ಸಮಾವೇಶ ಮಾಡಿದರೆ, ಜನರು ಬರುವುದಿಲ್ಲ ಎಂದು ಇವರಿಗೆ ಗೊತ್ತು. ಹೀಗಾಗಿ ಹಳ್ಳಿಗಾಡಿನಲ್ಲಿ ಸಮಾವೇಶ ಮಾಡಿದ್ದಾರೆ. ಇದು ಶೂನ್ಯ ಸಾಧನೆಯ, ಭ್ರಷ್ಟಾಚಾರದ ಸಮಾವೇಶ’ ಎಂದು ಟೀಕಿಸಿದ್ದಾರೆ.

‘ಸಾವಿರ ಸುಳ್ಳಿನ, ಸಾವಿರ ದಿನಗಳು’



‘ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತದ 1,000 ದಿನಗಳನ್ನು, 1,000 ಸುಳ್ಳುಗಳ ಮೂಲಕ ಪೂರೈಸಿದೆ. ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ಭರವಸೆಗಳ ಪೈಕಿ ಯಾವೊಂದನ್ನೂ ಪೂರೈಸಿಲ್ಲ’ ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಸರ್ಕಾರದ ಮೇಲೆ ಶೇ 40ರಷ್ಟು ಕಮಿಷನ್ ಆರೋಪ ಹೊರಿಸಿ, ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ ಎಂದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿತು. ಆದರೆ, ಈ ಸರ್ಕಾರದಲ್ಲಿ ಭ್ರಷ್ಟಾಚಾರ ವಿಪರೀತ ಎನಿಸುವಷ್ಟಾಗಿದೆ’ ಎಂದರು.

‘ಹಳೆಯ ಪಿಂಚಣಿ ಯೋಜನೆ ಮರುಜಾರಿ, ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮಾಡುತ್ತೇವೆ ಎಂದು ಭರವಸೆ ನೀಡಿತ್ತು. ಆದರೆ, ಕಾಂಗ್ರೆಸ್ ತಾನು ನೀಡಿದ ಈ ಭರವಸೆಗಳನ್ನು ಈಡೇರಿಸಿಯೇ ಇಲ್ಲ. ಬಡವರಿಗೆ ಲಕ್ಷ ಮನೆಗಳನ್ನು ನೀಡುತ್ತೇವೆ ಎಂದಿದ್ದರು. ಮನೆಗಳು ಎಲ್ಲಿವೆ’ ಎಂದು ಪ್ರಶ್ನಿಸಿದರು.

‘ಭೂಗ್ಯಾರಂಟಿ ಸಿಕ್ಕಿದ್ದು ಸಚಿವರಿಗೆ’

‘ರಾಜ್ಯ ಸರ್ಕಾರಕ್ಕೆ 1,000 ದಿನ ಆಗಿದೆ ಎಂದು ಜನರಿಗೆ ಭೂಗ್ಯಾರಂಟಿ ಕೊಡುತ್ತಿದ್ದಾರಂತೆ. ನಿಜಕ್ಕೂ ಭೂಗ್ಯಾರಂಟಿ ಸಿಕ್ಕಿರುವುದು ರಾಜ್ಯ ಸರ್ಕಾರದ ಸಚಿವರಿಗೆ. ಕೆರೆಯ ಜಮೀನು ಕಬಳಿಕೆ ಮಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಈ ಗ್ಯಾರಂಟಿ ಸಿಕ್ಕಿದೆ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಲಕ್ಷ ಜನರಿಗೆ ಹಕ್ಕುಪತ್ರಗಳನ್ನು ನೀಡುತ್ತಿದ್ದೇವೆ ಎಂದು ಕಾಂಗ್ರೆಸ್ ಸರ್ಕಾರ ಹೇಳುತ್ತಿದೆ. ಆ ಒಂದು ಲಕ್ಷ ಜನರು ಯಾರು, ಎಲ್ಲಿಂದ ಬಂದರು, ಅವರಿಗೆ ನೀಡುತ್ತಿರುವ ಹಕ್ಕುಪತ್ರಗಳು ಯಾವುವು, ಹಕ್ಕಪತ್ರಕ್ಕೆ ಜನರನ್ನು ಯಾವ ಮಾನದಂಡದ ಮೇಲೆ ಆಯ್ಕೆ ಮಾಡಿದರು ಎಂಬುದಕ್ಕೆ ಸಿದ್ದರಾಮಯ್ಯ ಉತ್ತರಿಸಬೇಕು’ ಎಂದು ಆಗ್ರಹಿಸಿದರು.

‘ಇದು ಅಭಿವೃದ್ಧಿ ಶೂನ್ಯ ಸರ್ಕಾರ. ರಾಜ್ಯವು ಅಭಿವೃದ್ಧಿ ಆಗಿದೆಯೇ ಎಂಬುದನ್ನು ಪರಿಶೀಲಿಸಲು ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕೆ ಎಷ್ಟು ಹಣ ನೀಡಲಾಗಿದೆ ಮತ್ತು ಅದರಲ್ಲಿ ಎಷ್ಟು ವಿನಿಯೋಗ ಮಾಡಲಾಗಿದೆ ಎಂಬುದನ್ನು ನೋಡಬೇಕು. ಸುಮ್ಮನೆ ರಾಜ್ಯದ ಸಾಲ ಹೆಚ್ಚು ಮಾಡಿದರೆ ಅಭಿವೃದ್ಧಿ ಆಗುವುದಿಲ್ಲ. ಹತ್ತಾರು ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರು ರಾಜ್ಯದ ಜನರ ಮುಂದೆ ಈ ಎಲ್ಲ ವಿವರಗಳನ್ನು ತೆರೆದಿಡಲಿ’ ಎಂದು ಸವಾಲು ಹಾಕಿದರು.

ಚಿಟಿಕೆ ಸುದ್ದಿ

‘ಅಧಿಕಾರ ಹಂಚಿಕೆ: ಹೈಕಮಾಂಡ್ ಹೇಳಲಿ’

ಹಾವೇರಿ: ‘ಪದೇ ಪದೇ ಕೇಳಬೇಡಿ. ಹೈಕಮಾಂಡ್ ಹೇಳಲಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಾಧನಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಬಂದಿದ್ದ ವೇಳೆ ಅಧಿಕಾರ ಹಂಚಿಕೆ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ನಾನು ಈ ಬಗ್ಗೆ ಮಾತಾಡಲ್ಲ ಎಂದು ಹೇಳಿದ್ದೇನೆ. ಆದರೂ ಏಕೆ ಪದೇ ಪದೇ ಕೇಳುತ್ತೀರಾ’ ಎಂದು ಗರಂ ಆದರು.

‘ಶ್ರಮಕ್ಕೆ ಫಲ ಸಿಗುತ್ತೆ ಎಂದು ಡಿ.ಕೆ. ಶಿವಕುಮಾರ ಮಾಡಿರುವ ಟ್ವೀಟ್ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಹೈಕಮಾಂಡ್ ಟ್ವೀಟ್ ಮಾಡಿದೆಯಾ’ ಎಂದು ಪ್ರಶ್ನಿಸಿದರು. ಸಮಾವೇಶಕ್ಕೆ ಬಂದಿದ್ದ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಹಂಚಿಕೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಕಾವ್ಯ ಗೌಡ ವಿರುದ್ಧದ ಪ್ರಕರಣಕ್ಕೆ ತಡೆ

ಬೆಂಗಳೂರು: ಕೌಟುಂಬಿಕ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ನಟಿ ಕಾವ್ಯ ಗೌಡ ಮತ್ತು ಅವರ ಪತಿ ಸೋಮಶೇಖರ್ ವಿರುದ್ಧದ ಎಫ್‌ಐಆರ್ ಹಾಗೂ ಪ್ರಕರಣದ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಎಫ್‌ಐಆರ್‌ಗೆ ತಡೆ ನೀಡುವಂತೆ ಕೋರಿ ಕಾವ್ಯ ಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಸರ್ಕಾರದ ಒಳಮೀಸಲಾತಿ ವರ್ಗೀಕರಣಕ್ಕೆ ಬಂಜಾರ ಸಮುದಾಯದ ವಿರೋಧ

ಶಿವಕುಮಾರ್‌ಗೆ ಕಪ್ಪುಬಟ್ಟೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಸೂರಗೊಂಡನಕೊಪ್ಪ (ದಾವಣಗೆರೆ): ಇಲ್ಲಿನ ಭಾಯಾಗಡ್‌ದಲ್ಲಿ ಶನಿವಾರ ನಡೆದ ಸಂತ ಸೇವಾಲಾಲರ 287ನೇ ಜಯಂತಿ ಆಚರಣೆ ಸಮಾರಂಭದಲ್ಲಿ ಭಾಗವಹಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಂಜಾರ ಸಮುದಾಯದ ಕೆಲ ಯುವಕರು ಕಪ್ಪು ಬಟ್ಟೆ ಪ್ರದರ್ಶಿಸಿದರು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಒಳಮೀಸಲಾತಿ ವರ್ಗೀಕರಣದಿಂದ ಸಮುದಾಯಕ್ಕೆ ಅನ್ಯಾಯ ಆಗಿದೆ ಎಂದು ವಿರೋಧ ವ್ಯಕ್ತಪಡಿಸಿದರು.

ಡಿ.ಕೆ. ಶಿವಕುಮಾರ್ ಅವರು ವೇದಿಕೆಗೆ ಬರುತ್ತಿದ್ದಂತೆಯೇ ಸಭಾಂಗಣದಲ್ಲಿದ್ದ ಬಹುತೇಕ ಯುವಕರು ಎದ್ದು ನಿಂತು ‘ಗೋ ಬ್ಯಾಕ್’ ಘೋಷಣೆ ಕೂಗಿದರು. ಒಳಮೀಸಲಾತಿ ವರ್ಗೀಕರಣ ವಿರೋಧಿಸುವ ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು. ಇದರಿಂದ ಉಪ ಮುಖ್ಯಮಂತ್ರಿ ಮುಜುಗರಕ್ಕೆ ಒಳಗಾದರು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ನಿಯಂತ್ರಿಸಲು ಪ್ರಯತ್ನಿಸಿದರು.

‘ಸರ್ಕಾರದ ಒಳಮೀಸಲಾತಿ ವರ್ಗೀಕರಣದ ನೀತಿಯಿಂದ ಸಮುದಾಯಕ್ಕೆ ದೊಡ್ಡ ಅನ್ಯಾಯ ಆಗಿದೆ’ ಎಂದು ಯುವಕರು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಸಭಾಂಗಣದಲ್ಲಿ ಕೆಲಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಆಗ ಧ್ವನಿವರ್ಧಕದ ಬಳಿ ಬಂದ ಮಾಜಿ ಶಾಸಕ ಪಿ.ರಾಜೀವ್, ‘ಕಾರ್ಯಕ್ರಮಕ್ಕೆ ಬಂದಿರುವ ಉಪ ಮುಖ್ಯಮಂತ್ರಿಗೆ ಗೌರವ ಕೊಡುವುದು ಸಮುದಾಯದ ಜವಾಬ್ದಾರಿ. ಕುಪಿತಗೊಂಡವರ ಮನವೊಲಿಸುವ ಹೊಣೆಗಾರಿಕೆ ನಮ್ಮದು. ಪೊಲೀಸರು ಯಾರನ್ನಾದರೂ ಬಂಧಿಸಿದರೆ ಸುಮ್ಮನೆ ಕೂರಲ್ಲ’ ಎಂದು ಎಚ್ಚರಿಸಿದರು.

ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ‘ಇದು ಧಾರ್ಮಿಕ ಕಾರ್ಯಕ್ರಮ. ಸಮುದಾಯದ ವಿಚಾರಕ್ಕೂ ಇದಕ್ಕೂ ಸಂಬಂಧ ಇಲ್ಲ. ಎಲ್ಲರೂ ಕುಳಿತು ಮಾತನಾಡಿ ಪರಿಹಾರ ಕಂಡುಕೊಳ್ಳೋಣ’ ಎಂದಾಗ ಸಭಿಕರು ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು. ಉಪಸಭಾಧ್ಯಕ್ಷರ ಭಾಷಣಕ್ಕೆ ವಿರೋಧ ವ್ಯಕ್ತಪಡಿಸಿದರು. ಪಿ. ರಾಜೀವ್ ಪರ ಘೋಷಣೆ ಕೂಗಿದರು.

ಸಚಿವರಾದ ಎನ್.ಎಸ್. ಬೋಸರಾಜು, ಮಂಕಾಳ ವೈದ್ಯ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಬಿ.ವೈ. ರಾಘವೇಂದ್ರ, ಶಾಸಕರಾದ ಡಿ.ಜಿ. ಶಾಂತನಗೌಡ, ಬಿ.ಪಿ. ಹರೀಶ್, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ವಿಧಾನ ಪರಿಷತ್ ಸದಸ್ಯೆ ಜಲಜಾ ನಾಯ್ಕ ಹಾಜರಿದ್ದರು.

ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನ ಭಾಯಾಗಡ್‌ದಲ್ಲಿ ನಡೆದ ಸಂತ ಸೇವಾಲಾಲ್ ಅವರ 287ನೇ ಜಯಂತಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬಂಜಾರ ಸಮುದಾಯದ ಯುವಕರು ಕಪ್ಪುಬಟ್ಟೆ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

‘ಬೆದರಿಕೆಗೆ ಜಗ್ಗುವ ಮಗ ನಾನಲ್ಲ’

‘ನಾನು ವೇದಿಕೆಗೆ ಬಂದಾಗ ಕೆಲ ಯುವಕರು ಕಿರುಚಾಡಿದರು. ಇಂತಹ ಬೆದರಿಕೆಗಳಿಗೆ ಜಗ್ಗುವ ಮಗ ನಾನಲ್ಲ. ಕೆಲವರು ಗೋಬ್ಯಾಕ್ ಅಂತ ಘೋಷಣೆ ಕೂಗಬಹುದು. ಆದರೆ, ಕಮ್ ಬ್ಯಾಕ್ ಎಂದು ಕರೆದು ಜೊತೆಗೆ ನಿಲ್ಲುವ ಜನರೂ ಇದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ನಂತರ ಭಾಷಣದಲ್ಲಿ ಹೇಳಿದರು.

‘ನನ್ನನ್ನು ಬೆಂಬಲಿಸಿದ ಜನರ ಜೊತೆಗೆ ಇದ್ದೇನೆ ಎಂಬುದನ್ನು ಹೇಳಲು ಇಲ್ಲಿಗೆ ಬಂದಿದ್ದೇನೆ. ನನ್ನ ತತ್ವ, ನಿಷ್ಠೆ, ಸಿದ್ಧಾಂತ ನಿಮಗೆ ಗೊತ್ತಿಲ್ಲ. ಬಂಜಾರ ಸಮುದಾಯಕ್ಕೆ ಅನ್ಯಾಯ ಆಗುತ್ತಿದ್ದಾಗ ಜೊತೆಗೆ ನಿಂತವನು ನಾನು ಮಾತ್ರ. ಹೋರಾಟ ಮಾಡುವುದು ತಪ್ಪಲ್ಲ, ಧಾರ್ಮಿಕ ಸಭೆಯಲ್ಲಿ ಗಲಾಟೆ ಮಾಡುವುದರಿಂದ ಪ್ರಯೋಜನ ಆಗುವುದಿಲ್ಲ’ ಎಂದು ಹೇಳಿದರು.

‘ಬಿಜೆಪಿ ರಾಜಕೀಯ’: ‘ಪರಿಶಿಷ್ಟ ಜಾತಿಗೆ ನಿಗದಿಯಾದ ಮೀಸಲಾತಿಯನ್ನು ವೈಜ್ಞಾನಿಕವಾಗಿ ಹಂಚಿಕೆ ಮಾಡಿ ಎಲ್ಲರಿಗೂ ನ್ಯಾಯ ಕೊಡಲಾಗಿದೆ. ಇದರಿಂದ ಬಿಜೆಪಿ ನಾಯಕರಿಗೆ ಅಸ್ತಿತ್ವದ ಪ್ರಶ್ನೆ ಎದುರಾಗಿದ್ದು, ನೂರು ಜನರನ್ನು ಸೇರಿಸಿ ರಾಜಕೀಯ ಮಾಡಿದ್ದಾರೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಮನಸಿನಲ್ಲಿರುವ ಅಸಮಾಧಾನ ಹೊರಹಾಕುವ ವೇದಿಕೆ ಇದಲ್ಲ. ಸೇವಾಲಾಲ್ ಮಹಾರಾಜರು ಶಾಂತಿಯ ಸಂಕೇತವಾಗಿದ್ದರು. ಬಂಜಾರ ಸಮುದಾಯಕ್ಕೆ ಸಮಾಧಾನ ಅತಿ ಮುಖ್ಯ

ಟಿ. ವೆಂಕಟೇಶ ನಾಯ್ಕ, ಹೈಕೋರ್ಟ್ ನ್ಯಾಯಮೂರ್ತಿ

ಭೀಮಣ್ಣ ಖಂಡ್ರೆ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಬಿ.ಎಸ್‌. ಯಡಿಯೂರಪ್ಪ, ಶಿವಮೂರ್ತಿ ಶಿವಾಚಾರ್ಯ, ಬಸವಲಿಂಗ ಪಟ್ಟದ್ದೇವರು, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಈಶ್ವರ ಬಿ ಖಂಡ್ರೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ನುಡಿನಮನ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಖರ್ಗೆ

ಹಠಕ್ಕೆ ಬಿದ್ದು ಕೆಲಸ ಮಾಡಿಸುತ್ತಿದ್ದ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಡಿದ ಕೆಲಸವನ್ನು ಹಠ ಹಿಡಿದು ಮಾಡಿಸುವ ಛಾತಿ ಇದ್ದ ಭೀಮಣ್ಣ ಖಂಡ್ರೆ ಅವರು ಜನರಿಗಾಗಿ ಬದುಕಿದವರು. ಸಮಾಜದ ಏಳಿಗೆಗಾಗಿ ದುಡಿದವರು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ವೀರಶೈವ ಲಿಂಗಾಯತ ಮಹಾಸಭಾ ಮತ್ತು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ನಗರದಲ್ಲಿ ಶನಿವಾರ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನನಗೆ 1957ರಿಂದಲೇ ಭೀಮಣ್ಣ ಖಂಡ್ರೆ ಅವರ ಪರಿಚಿತರಾಗಿದ್ದರು. ನಮ್ಮ ಅನೇಕ ವಿಚಾರಗಳು ಹೊಂದಿಕೆಯಾಗುತ್ತಿದ್ದವು. ಹೀಗಾಗಿ ಅದೇ ವಿಶ್ವಾಸ ಕೊನೆಯವರೆಗೂ ಉಳಿದಿತ್ತು. ಅವರು ನಂಬಿಕೆ ಇಟ್ಟಿದ್ದ ಸಿದ್ಧಾಂತದ ಮೇಲೆ ನಾವೂ ನಂಬಿಕೆ ಇಟ್ಟಿದ್ದೇವೆ’ ಎಂದು ನೆನಪು ಮಾಡಿಕೊಂಡರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ‘ಬಸವಾದಿ ಶರಣರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು 102 ವರ್ಷ ಸಾಮಾಜಿಕ ಚಿಂತನೆಯೊಂದಿಗೆ ಸಾರ್ಥಕ ಜೀವನವನ್ನು ಭೀಮಣ್ಣ ಖಂಡ್ರೆ ನಡೆಸಿದ್ದರು. ಮಹಾತ್ಮ ಗಾಂಧೀಜಿ ಅವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದರು. ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತಿದ್ದರು’ ಎಂದು ಸ್ಮರಿಸಿದರು.

ಹೈದ್ರಾಬಾದ್ ಕರ್ನಾಟಕ ವಿಮೋಚನೆ ಮತ್ತು ಏಕೀಕರಣದ ಚಳವಳಿಯಲ್ಲಿ ಭಾಗವಹಿಸಿ, ಜನಪರ ಹೋರಾಟಗಾರರಾಗಿ ಗುರುತಿಸಿಕೊಂಡಿದ್ದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿಯೂ ಸಕ್ರಿಯರಾಗಿದ್ದರು. 1972ರ ಬರಗಾಲದ ಪರಿಸ್ಥಿತಿಯಲ್ಲಿ ಬೀಜ ಚಳವಳಿ ಕೈಗೊಳ್ಳುವ ಮೂಲಕ ರೈತರಿಗೆ ನೆರವಾಗಿದ್ದರು. ಕಿಸಾನ್ ರ್‍ಯಾಲಿಗಳನ್ನು ಆಯೋಜಿಸಿ, ರೈತರ ಸಮಸ್ಯೆಗಳನ್ನು ಕೇಂದ್ರದ ಗಮನಕ್ಕೆ ತಂದಿದ್ದರು ಎಂದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ‘ಭೀಮಣ್ಣ ಖಂಡ್ರೆ ವ್ಯಕ್ತಿಯಲ್ಲ, ಸಮಾಜದ ಶಕ್ತಿಯಾಗಿದ್ದರು. ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ಮತ್ತು ಔದ್ಯಮಿಕ ಕ್ಷೇತ್ರಕ್ಕೆ ಅವರ ಕೊಡುಗೆ ದೊಡ್ಡದು’ ಎಂದು ಹೇಳಿದರು.

ಭಾಲ್ಕಿ ಹಿರೇಮಠದ ಬಸವಲಿಂಗ ಪಟ್ಟದ್ದೇವರು ಮಾತನಾಡಿ, ‘ಫಲಾಹಾರ ಮಾಡುತ್ತಾ ಶತಾಯುಷಿಗಳಾಗಿ ಬದುಕಿದ್ದ ಭೀಮಣ್ಣ ಖಂಡ್ರೆ ಯೋಗಿಯಂತಿದ್ದರು. ಅವರು ರಾಜೀ ಮಾಡಿಕೊಂಡಿದ್ದರೆ ಮುಖ್ಯಮಂತ್ರಿಯೇ ಆಗಿರುತ್ತಿದ್ದರು. ಅವರು ಎಂದೂ ರಾಜೀ ಮಾಡಿಕೊಂಡವರಲ್ಲ. ಹೀಗಾಗಿಯೇ ತಮ್ಮ ಗುರುಗಳು ಅವರಿಗೆ ಲೋಕನಾಯಕ ಎಂದು ಬಿರುದು ನೀಡಿದ್ದರು’ ಎಂದರು.

ಜನಪರ ಕಾಳಜಿ ಇದ್ದ ಭೀಮಣ್ಣ ಖಂಡ್ರೆ ಅವರ ಬದುಕು ಅವಿಸ್ಮರಣೀಯ ಅಧ್ಯಾಯ. ಅವರ ಅಗಲಿಕೆಯಿಂದ ಸಮಾಜ ಒಬ್ಬ ಹಿರಿಯ ಮುತ್ಸದ್ದಿಯ ಮಾರ್ಗದರ್ಶನವನ್ನು ಕಳೆದುಕೊಂಡಿದೆ

ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಶಾಸಕರ ಭವನದಲ್ಲಿ ಕೊಠಡಿ ಸಿಗದಿದ್ದಾಗ ಮುಖ್ಯಮಂತ್ರಿ ಕುರ್ಚಿಯಲ್ಲೇ ಭೀಮಣ್ಣ ಖಂಡ್ರೆ ಕುಳಿತಿದ್ದರು. ಕೊಠಡಿ ನೀಡಲಾಗಿದೆ ಎಂದು ಘೋಷಿಸಿದ ಬಳಿಕವೇ ಎದ್ದಿದ್ದರು. ಯಾರಿಗೂ ಅಂಜುತ್ತಿರಲಿಲ್ಲ

ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

ಭೀಮಣ್ಣ ಖಂಡ್ರೆ ಅವರು 1000 ಬಾಲಕಿಯರ ವಸತಿ ನಿಲಯ ಕಟ್ಟುವ ಕನಸು ಕಂಡಿದ್ದರು. ಇದಕ್ಕೆ ಬಿಡಿಎ ವತಿಯಿಂದ ಬೆಂಗಳೂರಿನಲ್ಲಿ ಜಾಗ ನೀಡಲಾಗುವುದು.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ‘ಸರ್ಕಾರ ಪ್ರಶಸ್ತಿ ನೀಡುವುದು ಸಾಮಾನ್ಯ ಆದರೆ, ಜನರೇ ನೀಡುವ ಪ್ರಶಸ್ತಿ ಅಪರೂಪದ್ದು. ಕರ್ನಾಟಕದ ಲೋಕನಾಯಕ ಎಂದು ಜನರಿಂದ ಪ್ರಶಸ್ತಿ ಪಡೆದ ಭೀಮಣ್ಣ ಖಂಡ್ರೆ ಹಿರಿಮೆ ಅಸಾಧಾರಣವಾದ್ದು’ ಎಂದು ಹೇಳಿದರು.

ಭೀಮಣ್ಣ ಖಂಡ್ರೆ ನಡೆದು ಬಂದ ಹಾದಿಯನ್ನು ಅವರ ಮಗ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಈಶ್ವರ ಖಂಡ್ರೆ ವಿವರಿಸಿದರು. ವಿವಿಧ ಸ್ವಾಮೀಜಿಗಳು, ಸಚಿವರು, ಶಾಸಕರು, ಅಧಿಕಾರಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

₹17 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಠೇವಣಿದಾರರ ₹65 ಕೋಟಿಯನ್ನು ವಂಚಿಸಿದ ಪ್ರಕರಣದಲ್ಲಿ ಸಿರಿವೈಭವ ಸೌಹಾರ್ದ ಪತ್ತಿನ ಸಹಕಾರ ಸೊಸೈಟಿಯ ಅಧ್ಯಕ್ಷೆ ಬಿ.ಎಸ್. ನಾಗವಲ್ಲಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ಆರ್. ರಾಜೇಶ್ ದಂಪತಿಗೆ ಸೇರಿದ ₹17 ಕೋಟಿ ಮೊತ್ತದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ನಾಗವಲ್ಲಿ ಮತ್ತು ರಾಜೇಶ್ ಅವರು ಹಲವು ಕಂಪನಿಗಳನ್ನು ಹೊಂದಿದ್ದು, ಯಾವುದೇ ಭದ್ರತೆ ಪಡೆಯದೆ ಸೊಸೈಟಿಯಿಂದ ಆ ಕಂಪನಿಗಳಿಗೆ ಸಾಲ ಮಂಜೂರು ಮಾಡಿದ್ದರು. ಸಾಲ ಮರುಪಾವತಿ ಮಾಡಿರಲಿಲ್ಲ. ಭದ್ರತೆ ಇಲ್ಲದ ಕಾರಣ, ಅಸಲು ಮತ್ತು ಬಡ್ಡಿ ಸೇರಿ ಸೊಸೈಟಿಗೆ ₹65 ಕೋಟಿ ನಷ್ಟವಾಗಿತ್ತು.

ಈ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರು ನೀಡಿದ್ದ ದೂರಿನ ಆಧಾರದಲ್ಲಿ ಸುಬ್ರಹ್ಮಣ್ಯಪುರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಅದರ ಆಧಾರದಲ್ಲಿ ಇ.ಡಿ ತನಿಖೆ ಆರಂಭಿಸಿತ್ತು.

ನಾಗವಲ್ಲಿ ಮತ್ತು ರಾಜೇಶ್ ಅವರು ಉದ್ದೇಶಪೂರ್ವಕವಾಗಿ ಭದ್ರತೆ ಒದಗಿಸದೆ ತಮ್ಮದೇ ಕಂಪನಿಗಳಿಗೆ ಸಾಲ ಮಂಜೂರು ಮಾಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಯಿತು. ಈ ಅಕ್ರಮ ಗಳಿಕೆಯಿಂದ ಅವರು ಖರೀದಿಸಿದ್ದ 11 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆ. ಬೆಂಗಳೂರು, ರಾಮನಗರ ಮತ್ತು ಮೈಸೂರಿನಲ್ಲಿನ ನಿವೇಶನ, ಕಟ್ಟಡ ಮತ್ತು ಕೃಷಿ ಜಮೀನು ಇದರಲ್ಲಿ ಸೇರಿವೆ ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

---

8 ವರ್ಷದಿಂದ ಯಶಸ್ವಿ ನಿರ್ವಹಣೆ • ದೇಗುಲ ಅಭಿವೃದ್ಧಿ, ಗ್ರಂಥಾಲಯ ಸ್ಥಾಪನೆಗೆ ವರಮಾನ ಬಳಕೆ

ನೀರಿನ ಘಟಕ ನಿರ್ವಹಣೆಯ ‘ಭಗೀರಥ’ರು...

• ಜಗನ್ನಾಥ ಡಿ.ಶೇರಿಕಾರ

ಒಳ್ಳೆ ಸುದ್ದಿ

ಚಿಂಚೋಳಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಹಸರಗುಂಡಗಿ ಗ್ರಾಮದ ಯುವಕರ ತಂಡವು ಯಾರ ನೆರವಿಗೂ ಕಾಯದೇ ಎಂಟು ವರ್ಷಗಳಿಂದ ಸಾರ್ವಜನಿಕ ನೀರಿನ ಘಟಕವನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುತ್ತಿದೆ.

ಈ ಮೂಲಕ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಒತ್ತು ನೀಡಿದೆ. ಘಟಕದಿಂದ ಬಂದ ಲಾಭವನ್ನು ಗ್ರಾಮದ ವೀರಭದ್ರೇಶ್ವರ ದೇಗುಲದ ಅಭಿವೃದ್ಧಿ, ಬಯಲು ಗ್ರಂಥಾಲಯ ನಡೆಸಲು ಬಳಸುತ್ತಿದೆ.

ತಾಲ್ಲೂಕಿನಲ್ಲಿ 90ಕ್ಕೂ ಹೆಚ್ಚು ಕುಡಿಯುವ ನೀರಿನ ಶುದ್ಧೀಕರಣ ಘಟಕಗಳಿವೆ. ಈ ಪೈಕಿ ಅರ್ಧಕ್ಕೂ ಹೆಚ್ಚು ಘಟಕಗಳು ಕೆಟ್ಟಿವೆ. ಹಸರಗುಂಡಗಿ ಗ್ರಾಮದ ಘಟಕ ಇದಕ್ಕೆ ಅಪವಾದ.

ಎಂಟು ವರ್ಷಗಳ ಹಿಂದೆ ಸ್ಥಾಪನೆಯಾದ ಈ ಘಟಕವನ್ನು ಅದೇ ಗ್ರಾಮದ ವೀರಭದ್ರೇಶ್ವರ ಗೆಳೆಯರ ಬಳಗ ಸೇವಾ ಸಂಸ್ಥೆ ನಿರ್ವಹಣೆ ಜತೆಗೆ, ಇತರೆ ಅಭಿವೃದ್ಧಿಗೂ ಬಳಸಲು ಮುಂದಾಗಿದೆ.

ಹಸರಗುಂಡಗಿ ಗ್ರಾಮ, ಸುತ್ತಲಿನ ತಾಂಡಾದವರು ಕ್ಯಾನ್‌ಗಳಲ್ಲಿ ನೀರು ಒಯ್ಯುತ್ತಿದ್ದಾರೆ. ‘ಕಲ್ಯಾಣ ಕರ್ನಾಟಕದ ಭಾಗದಲ್ಲಿ ಫ್ರಿಜ್ ಅಳವಡಿಸಿರುವ, ಯಶಸ್ವಿಯಾಗಿ ಮುನ್ನಡೆಯುತ್ತಿರುವ ಏಕೈಕ ಘಟಕ ತಮ್ಮದಾಗಿದೆ’ ಎಂದು ಸಂಸ್ಥೆಯ ಅಧ್ಯಕ್ಷ ಸುರೇಶ ಬಿ.ರೆಡ್ಡಿ ವಡ್ಡನಕೇರಿ ಹೆಮ್ಮೆಯಿಂದ ಹೇಳುತ್ತಾರೆ.

ಘಟಕ ನಿರ್ವಹಣೆಗೆ ಗ್ರಾಮದ ಸಂತೋಷ ಸ್ವಾಮಿ ಅವರನ್ನು ನಿಯೋಜಿಸಿರುವ ಸಂಸ್ಥೆಯು, ಇವರಿಗೆ ಮಾಸಿಕ ₹6 ಸಾವಿರ ಗೌರವಧನವನ್ನು ನೀಡುತ್ತಿದೆ. 2023ರವರೆಗೆ ಮಾಸಿಕ ₹400ರಿಂದ ₹500 ವಿದ್ಯುತ್ ಬಿಲ್ ಬರುತ್ತಿತ್ತು. 2023ರ ನಂತರದಿಂದ ₹1600ರಿಂದ ₹1800 ಬರುತ್ತಿದೆ. ಇದನ್ನೂ ಸಂಸ್ಥೆಯೇ ಭರಿಸುತ್ತಿದೆ.

‘ಶುದ್ಧ ನೀರು ವಿತರಣೆಯಿಂದ ಬಂದ ಆದಾಯದಲ್ಲಿ ವೀರಭದ್ರೇಶ್ವರ ದೇವಾಲಯಕ್ಕೆ 30 ಎಲ್‌ಇಡಿ ಬಲ್ಬ್ ಹಾಗೂ 2 ಫೋಕಸ್ ಬಲ್ಬ್, ವೀರಭದ್ರೇಶ್ವರ ದೇವಾಲಯದ ಗರ್ಭಗುಡಿ ಎದುರು ಭಕ್ತರ ಅನುಕೂಲಕ್ಕಾಗಿ ಎಸ್‌ಎಸ್ ಗ್ರಿಲ್ ಅಳವಡಿಸಲಾಗಿದೆ. ವೀರಭದ್ರೇಶ್ವರ ದೇವಾಲಯದಲ್ಲಿ ಬಯಲು ಗ್ರಂಥಾಲಯ ನಡೆಸುವ ಸೇವೆ ಸಲ್ಲಿಸಲಾಗುತ್ತಿದೆ’ ಎಂದು ಸೇವಾ ಸಂಸ್ಥೆಯ ಖಜಾಂಚಿ ಅಶೋಕ ಕೋರಿ ತಿಳಿಸಿದರು.

ವೀರಭದ್ರೇಶ್ವರ ಗೆಳೆಯರ ಬಳಗ ಸೇವಾ ಸಂಸ್ಥೆಯ ಕುಡಿಯುವ ನೀರಿನ ಘಟಕದಿಂದ ಶುದ್ಧ ಕುಡಿಯುವ ನೀರನ್ನು ಕ್ಯಾನ್‌ಗೆ ತುಂಬಿಕೊಳ್ಳುತ್ತಿರುವುದು

ಇನ್ವರ್ಟರ್ ಅಳವಡಿಕೆ, ಫ್ರಿಜ್ ಸೌಲಭ್ಯ

ವಿದ್ಯುತ್ ವ್ಯತ್ಯಯವಾಗಿರುವ ಅವಧಿಯಲ್ಲೂ ನೀರು ಲಭಿಸುವಂತಾಗಲು ಇನ್ವರ್ಟರ್ ಅನ್ನು ಘಟಕದಲ್ಲಿ ಅಳವಡಿಸಲಾಗಿದೆ. ಶುದ್ಧೀಕರಿಸಿದ ನೀರು ತಂಪಾಗಿರಿಸಲು 2 ಟನ್ ಸಾಮರ್ಥ್ಯದ ಫ್ರಿಜ್ ಅನ್ನು ಖರೀದಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕ ಶೆಡ್ ನಿರ್ಮಿಸಲಾಗಿದೆ.

100 ಸಾಮಾನ್ಯ ಕ್ಯಾನ್, ನೀರು ತಂಪಾಗಿರುವ 100 ಕ್ಯಾನ್ ಖರೀದಿಸಿ ತಂದು ಗ್ರಾಮೀಣ ಜನರಿಗೆ ಸೇವೆ ಒದಗಿಸಲಾಗುತ್ತಿದೆ. ಹೀಗೆ ಹಲವು ಪ್ರಯತ್ನಗಳು ಯಶ ಕಂಡಿವೆ.

ಘಟಕ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗೆ ನೆರವಾಗಲು ಕೊಳವೆಬಾವಿ ಮಂಜೂರು ಮಾಡಿಸಲಾಗಿದೆ. ಈ ನೀರನ್ನೇ ಘಟಕಕ್ಕೆ ಬಳಸಲಾಗುತ್ತಿದೆ. ಸಂಸ್ಥೆಗೆ ಸಹಕಾರವಿದೆ

ಡಾ. ಅವಿನಾಶ ಜಾಧವ, ಶಾಸಕ, ಚಿಂಚೋಳಿ

ಘಟಕ ಯಶಸ್ವಿ ನಿರ್ವಹಣೆಗೆ ತಂಡದ ಭ್ರಷ್ಟಾಚಾರ ರಹಿತ ಸೇವಾ ಮನೋಭಾವ ಕಾರಣ. ನೀರಿನ ಘಟಕಕ್ಕೆ ಸರ್ಕಾರ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಿದರೆ ಅನುಕೂಲ

ರಾಜಶೇಖರ ನಿಪ್ಪಾಣಿ, ಕಾರ್ಯದರ್ಶಿ, ವೀರಭದ್ರೇಶ್ವರ ಗೆಳೆಯರ ಬಳಗ ಸೇವಾ ಸಂಸ್ಥೆ

ಭಾನುವಾರ, ಫೆಬ್ರುವರಿ 15, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 46 | ಪುಟ 20

www.prajavani.net | prajavani.net | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಮೂಲಸೌಕರ್ಯ ವೃದ್ಧಿಗೆ ನಗರ ಸವಾಲು ನಿಧಿ 6

ಸ್ವಾಭಿಮಾನ ಕಲಿಸಿದ ಸಂತ 9

ಸಾಕೇತ್ ಪತ್ತೆಗಾಗಿ ಪತ್ರ ಬರೆದ ಸಿ.ಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಕ್ಯಾಲಿಫೋರ್ನಿಯಾದ ಬರ್ಕ್ಲಿಯಲ್ಲಿ ಕಾಣೆಯಾಗಿರುವ ಕರ್ನಾಟಕದ ವಿದ್ಯಾರ್ಥಿ ಸಾಕೇತ್ ಶ್ರೀನಿವಾಸಯ್ಯ ಅವರ ಪತ್ತೆಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ನೆರವು ಕೋರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪತ್ರ ಬರೆದಿದ್ದಾರೆ.

22 ವರ್ಷದ ಸಾಕೇತ್ ಫೆ. 12ರ ಬೆಳಗ್ಗಿನಿಂದ ಕಾಣೆಯಾಗಿದ್ದಾರೆ. ಸಾಕೇತ್ ಕುಟುಂಬಕ್ಕೆ ಸಹಾಯ ಮಾಡುವುದು ಸೇರಿದಂತೆ ಎಲ್ಲ ಅಗತ್ಯ ನೆರವು ನೀಡಬೇಕು ಎಂದು ಸಚಿವಾಲಯದ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರಿಗೆ ಬರೆದಿರುವ ಪತ್ರದಲ್ಲಿ ಶಾಲಿನಿ ಮನವಿ ಮಾಡಿದ್ದಾರೆ. 8

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಹಾವೇರಿಯಲ್ಲಿ ಶನಿವಾರ ಆಯೋಜಿಸಿದ್ದ 'ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ'ದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ ಅವರು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು ಪ್ರಜಾವಾಣಿ ಚಿತ್ರ

ಹಾವೇರಿಯಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ

ಹಕ್ಕುಪತ್ರ ಪಡೆದು ಹಿಗ್ಗಿದರು

ಪ್ರಜಾವಾಣಿ ವಾರ್ತೆ

ಹಾವೇರಿ: ರಾಜ್ಯದ ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ'ಕ್ಕೆ ಜನಸಾಗರವೇ ಹರಿದು ಬಂದಿತ್ತು. ಕಂದಾಯ ಇಲಾಖೆಯಿಂದ ಹಕ್ಕುಪತ್ರ ಸ್ವೀಕರಿಸಿದ ಜನರು, ದಾಖಲೆಗಳನ್ನು ಹಿಡಿದು ಪರಸ್ಪರ ಮಾಲೀಕತ್ವದ ಖುಷಿ ಹಂಚಿಕೊಂಡರು.

ಸರ್ಕಾರಿ ಹಾಗೂ ಖಾಸಗಿ ಜಾಗದಲ್ಲಿ ಹಲವು ವರ್ಷಗಳಿಂದ ವಾಸವಿದ್ದರೂ ಮಾಲೀಕತ್ವದಿಂದ ವಂಚಿತರಾಗಿದ್ದ ಕುಟುಂಬಗಳಿಗೆ ಕಂದಾಯ ಇಲಾಖೆಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸಮ್ಮುಖದಲ್ಲಿ ದಾಖಲೆಗಳನ್ನು ನೀಡಲಾಯಿತು. ಹಾವೇರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ, ಗದಗ, ಕೊಪ್ಪಳ, ಉತ್ತರ ಕನ್ನಡ ಜಿಲ್ಲೆಯ ಜನರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ರಾಜ್ಯ ಸರ್ಕಾರವು ಸಾವಿರ ದಿನಗಳ ಆಡಳಿತವನ್ನು ಯಶಸ್ವಿಯಾಗಿ ಪೂರೈಸಿದ್ದಕ್ಕಾಗಿ ಸಾಧನಾ ಸಮಾವೇಶವನ್ನೂ ಹಮ್ಮಿಕೊಳ್ಳಲಾಗಿತ್ತು. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಅಜ್ಜಯ್ಯ ದೇವಸ್ಥಾನದ ಎದುರಿನ 130 ಎಕರೆ ಬಯಲು ಜಾಗದಲ್ಲಿ ನಿರ್ಮಿಸಿದ್ದ ವೇದಿಕೆಯಲ್ಲಿ ಸಮಾವೇಶ ಜರುಗಿತು.

ನಸುಕಿನಿಂದಲೇ ಜನರು ಹಾವೇರಿಯತ್ತ ಬಂದು, ಸಮಾವೇಶದ ಸ್ಥಳದಲ್ಲಿ ಜಮೆಗೊಂಡರು. ಮುಖ್ಯವೇದಿಕೆಯತ್ತ ಹೋಗಲು ನೂಕುನುಗ್ಗಲು ಉಂಟಾಯಿತು. ಬಹುತೇಕ ಜನರು, ನಿಂತುಕೊಂಡೇ ಸಮಾವೇಶ ವೀಕ್ಷಿಸಿದರು. ಇ-ಪೋತಿ, ದರಖಾಸ್ತ್ ಪೋಡಿ, ಪಿಎಂಜಿಎ, ಬಗರ್‌ಹುಕುಂ ದಾಖಲೆಗಳನ್ನೂ ಫಲಾನುಭವಿಗಳಿಗೆ ವಿತರಿಸಲಾಯಿತು. ಬಿಗ್‌ಬಾಸ್ ರಿಯಾಲಿಟಿ ಶೋ ವಿಜೇತ ಹನುಮಂತ ಲಮಾಣಿ ಅವರ ತಂದೆಗೂ ಹಕ್ಕುಪತ್ರ ನೀಡಿದ್ದು ವಿಶೇಷವಾಗಿತ್ತು. 7

ಕಿನ್ನಾಳ ಕಲೆಗೀಗ ಯುವೋತ್ಸಾಹ

ಅಳಿವಿನಂಚಿನಲ್ಲಿದ್ದ ಹಳೇಬೇರಿಗೆ ಹೊಸ ಚಿಗುರು ನೀಡಿದ ಯುವಪಡೆ

• ಪ್ರಮೋದ ಕುಲಕರ್ಣಿ

ಒಳನೋಟ

ಕೊಪ್ಪಳ: ಎಂಟು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಆ್ಯನಿಮೇಷನ್ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಕಿನ್ನಾಳದ ಸಂತೋಷಕುಮಾರ್ ಚಿತ್ರಗಾರ ಎಂಬ ಯುವಕನಿಗೆ ಕೈತುಂಬಾ ಸಂಬಳ, ಕಚೇರಿಯಲ್ಲಿ ಉತ್ತಮ ಸ್ಥಾನಮಾನ, ಸ್ನೇಹಿತರೊಂದಿಗೆ ಊರೂರು ಅಲೆದಾಟ, ಬದುಕಿನ ಸಡಗರಕ್ಕೆ ಪಾರವೇ ಇಲ್ಲ ಎನ್ನುವಂಥ ಸಂಭ್ರಮ.

ದೊಡ್ಡ ಸಂಬಳದ ನೌಕರಿಯಿದ್ದರೂ ಒಂದೆಡೆ ಕೆಲಸದ ಏಕಾತನತೆ, ಕಂಪನಿ ಹೇಳಿದ್ದಷ್ಟೇ ಕೆಲಸ ಮಾಡಬೇಕಾದ ಅನಿವಾರ್ಯತೆ. ದಿನಗಳು ಉರುಳಿದಂತೆ ತಮ್ಮೊಳಗಿನ ಹೊಸತನ ಸತ್ತು ಹೋಗುತ್ತಿದೆ ಎನ್ನುವ ಬೇಸರದ ಭಾವ ಅವರನ್ನು ಬಲವಾಗಿ ಕಾಡಿತು. ತಮ್ಮೂರಿನಲ್ಲಿ ತಂದೆ ಮಾಡುತ್ತಿದ್ದ ಕಿನ್ನಾಳ ಕಲಾಕೃತಿಗಳನ್ನು ನೋಡಿದ್ದರಿಂದ ಅವರ ಮನಸ್ಸು ಊರಿನತ್ತ ಸೆಳೆಯುತ್ತಲೇ ಇತ್ತು. ದೇವರ ಮೂರ್ತಿಗಳನ್ನಷ್ಟೇ ತಯಾರಿಸಿ ಅಷ್ಟಕ್ಕೇ ತಮ್ಮ ಕಲಾಪ್ರಪಂಚ ಸೀಮಿತ ಮಾಡಿಕೊಂಡಿದ್ದ ಊರಿನ ಹಿರಿಯರ ಸ್ಥಿತಿಯ ಬಗ್ಗೆಯೂ ಬೇಸರ ಕಾಡಿತ್ತು. ಆದ್ದರಿಂದ ಸಂತೋಷ ಕುಮಾರ್ ತಮ್ಮ ಕೆಲಸಕ್ಕೆ ವಿದಾಯ ಹೇಳಿ ಗ್ರಾಮಕ್ಕೆ ಮರಳಿ ಕಿನ್ನಾಳ ಕಲೆಗೆ ಆಧುನಿಕ ಸ್ಪರ್ಶ ನೀಡಿ, ಯುವಕರ ತಂಡವನ್ನೇ ಕಟ್ಟಿ ಕಿನ್ನಾಳಕ್ಕೆ ಆನ್‌ಲೈನ್ ಮಾರುಕಟ್ಟೆ ಸೃಷ್ಟಿಸಿದ್ದಾರೆ. 4

ಕಿನ್ನಾಳ ಕಲಾಕೃತಿ ತಯಾರಿಕೆಯಲ್ಲಿ ತೊಡಗಿದ್ದ ಸಂತೋಷಕುಮಾರ್ ಚಿತ್ರಗಾರ
–ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ವಿಶ್ವಕಪ್: ಭಾರತ–ಪಾಕಿಸ್ತಾನ ಹಣಾಹಣಿ ಇಂದು

ಟಿ 20: ಬಲಾಬಲ

ಪಂದ್ಯಗಳು	16
ಭಾರತ ಜಯ	13
ಪಾಕ್ ಗೆಲುವು	3

ಮಹಾಶಿವರಾತ್ರಿಯ ದಿನವಾದ ಭಾನುವಾರ ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ.

ಕೈ ಕುಲುಕುವರೇ ನಾಯಕರು?

ಸೂರ್ಯಕುಮಾರ್

ಹೋದ ವರ್ಷ ಏಷ್ಯಾ ಕಪ್ ಟೂರ್ನಿ ನಡೆದಾಗ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಪಾಕಿಸ್ತಾನ ತಂಡದ ನಾಯಕನ ಹಸ್ತಲಾಘವ ಮಾಡಿರಲಿಲ್ಲ. ಅದರಿಂದಾಗಿ ಇಲ್ಲಿ ಅವರು ಕೈಕುಲುಕುವರೇ ಎಂಬ ಕುತೂಹಲ ಗರಿಗೆದರಿದೆ. ಈ ಕುರಿತು ಶನಿವಾರದ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಸೂರ್ಯಕುಮಾರ್, '24 ಗಂಟೆಗಳವರೆಗೆ ಕಾಯಿರಿ. ಆ ಸಂಗತಿಯ ಮೇಲೆ ಅಷ್ಟೇಕೆ ಗಮನ. ಅದರ ಬಗ್ಗೆ ನಾಳೆ ನೋಡುತ್ತೇವೆ. ನಾವಿಲ್ಲಿ ಕ್ರಿಕೆಟ್ ಆಡಲು ಬಂದಿದ್ದೇವೆ. ಆಡುತ್ತೇವೆ' ಎಂದರು.

ಪಾಕ್ ನಾಯಕ ಸಲ್ಮಾನ್ ಅಲಿ ಆಘಾ ಅವರೂ ಇದೇ ಧಾಟಿಯಲ್ಲಿ ಪ್ರತಿಕ್ರಿಯಿಸಿದರು, 'ಈ ಬಗ್ಗೆ ನಾಳೆ (ಭಾನುವಾರ) ನೋಡಿಕೊಳ್ಳೋಣ' ಎಂದರು.

ಸಲ್ಮಾನ್ ಅಲಿ ಆಘಾ



ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ವಾತಾವರಣ ಇರಲಿದೆ

ಕಡತ ಪರಿಶೀಲಿಸುತ್ತ ಮದ್ಯ ಸೇವನೆ

ಪ್ರಜಾವಾಣಿ ವಾರ್ತೆ

ಗುಡಿಬಂಡೆ: ಗುಡಿಬಂಡೆ ಬೆಸ್ಕಾಂ ಸಿಬ್ಬಂದಿ ಡಾಬಾದಲ್ಲಿ ಕುಳಿತು ಮದ್ಯಪಾನ ಮಾಡುತ್ತ ಇಲಾಖೆಯ ಕಡತಗಳನ್ನು ಪರಿಶೀಲಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣ-ಗಳಲ್ಲಿ ಹರಿದಾಡಿದೆ.

ಬೆಸ್ಕಾಂ ಉಪ ವಿಭಾಗದಲ್ಲಿ ಕಿರಿಯ ಎಂಜಿನಿಯರ್ ರಾಘವೇಂದ್ರ ಮತ್ತು ಸಿಬ್ಬಂದಿ ಡಾಬಾದಲ್ಲಿ ಮದ್ಯ ಸೇವಿಸುತ್ತ ಕಡತ ಪರಿಶೀಲಿಸುತ್ತಿದ್ದಾರೆ. ಈ ವಿಡಿಯೊ ಸಾರ್ವಜನಿಕ ವಲಯ ಮತ್ತು ಇಲಾಖೆಯಲ್ಲಿ ಚರ್ಚೆಗೂ ಕಾರಣವಾಗಿದೆ. ಈ ವಿಡಿಯೊ ತಿಂಗಳ ಹಿಂದಿನದ್ದು ಎನ್ನಲಾಗುತ್ತಿದೆ.

‘ಚಿತ್ರರಂಗದಲ್ಲಿ ಸಂಭಾವನೆ ತಾರತಮ್ಯ ಕೊನೆಯಾಗಲಿ’

ಎಸ್‌.ಪಿ.ವರದರಾಜು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಚಿತ್ರರಂಗದಲ್ಲಿ ಸಂಭಾವನೆ ತಾರತಮ್ಯ ತೊಲಗಬೇಕು. ಇಲ್ಲಿನ ಕಲಾವಿದರಿಗೆ ಹೆಚ್ಚಿನ ಅವಕಾಶ ಹಾಗೂ ಸಂಭಾವನೆಯನ್ನು ನೀಡಬೇಕು’ ಎಂದು ನಟ ಶಿವರಾಜ್‌ಕುಮಾರ್ ಆಗ್ರಹಿಸಿದರು.

ಎಸ್‌.ಪಿ. ವರದರಾಜು ಬಳಗ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಂಗಭೂಮಿ ಕ್ಷೇತ್ರದಿಂದ ಕಲಾವಿದೆ ಪುಷ್ಪಮಾಲಾ ಎ.ಅಣ್ಣಿಗೇರಿ ಹಾಗೂ ಚಲನಚಿತ್ರ ಕ್ಷೇತ್ರದಿಂದ ನಿರ್ದೇಶಕ ಬಿ.ಗುರುರಾಜು ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಿವರಾಜ್‌ಕುಮಾರ್, ‘ಬೇರೆ ಭಾಷೆಯಿಂದ ಬಂದವರಿಗೆ ಉತ್ತಮ ಸಂಭಾವನೆ ನೀಡಲಾಗುತ್ತಿದೆ. ಆದರೆ, ನಮ್ಮವರಿಗೆ ಹೆಚ್ಚಿನ ಸಂಭಾವನೆ ನೀಡುತ್ತಿಲ್ಲ. ಚಿತ್ರರಂಗದಲ್ಲಿರುವ ಗುಂಪುಗಾರಿಕೆ ತೊಲಗಬೇಕು. ಇಲ್ಲಿನ ಕಲಾವಿದರಿಗೆ ಹೆಚ್ಚಿನ ಅವಕಾಶ-ಗಳನ್ನು ಒದಗಿಸಬೇಕು. ಅವರು ಕೂಡ ಜೀವನ ಕಟ್ಟಿಕೊಳ್ಳಬೇಕು. ಆದ್ದರಿಂದ ಇಲ್ಲಿನ ಕಲಾವಿದರಿಗೆ ಸೂಕ್ತ ಸಂಭಾವನೆ ನೀಡಬೇಕು. ಅಪ್ಪಾಜಿ (ರಾಜ್‌ಕುಮಾರ್) ಕೂಡ ಇದನ್ನೇ ಹೇಳಿದ್ದರು. ನಾನು ನನ್ನ ಸಿನಿಮಾದಲ್ಲಿ ಇಲ್ಲಿನ ಕಲಾವಿದರಿಗೆ ಅವಕಾಶ ಹಾಗೂ ಸೂಕ್ತ ಸಂಭಾವನೆ ನೀಡುತ್ತಿದ್ದೇನೆ’ ಎಂದು ಹೇಳಿದರು.

‘ಅಪ್ಪಾಜಿ, ಅಮ್ಮ ನಮಗೆ ಜೀವವಾಗಿದ್ದರೆ, ಅಪ್ಪಣ್ಣ (ವರದರಾಜು) ಉಸಿರಾಗಿದ್ದರು’ ಎಂದು ಹೇಳಿದ ಅವರು, ವರದರಾಜು ಅವರ ಜತೆಗಿನ ಒಡನಾಟ ಸ್ಮರಿಸಿಕೊಂಡರು.

ಎಸ್‌.ಪಿ. ವರದರಾಜು ಬಳಗದವರೂ ಆದ ಸಾಹಿತಿ ಬರಗೂರು ರಾಮಚಂದ್ರಪ್ಪ, ‘ರಾಜ್‌ಕುಮಾರ್ ಅವರಿಗೆ ಬೆನ್ನೆಲುಬಾಗಿ ನಿಂತವರು ಅವರ ಸಹೋದರ ವರದರಾಜು. ರಾಜ್‌ಕುಮಾರ್, ಪಾರ್ವತಮ್ಮ ಹಾಗೂ ವರದರಾಜು ಕನ್ನಡ ಚಿತ್ರರಂಗಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಸಿನಿಮಾ ಕ್ಷೇತ್ರದಲ್ಲಿ ರಾಜ್‌ಕುಮಾರ್ ಅವರದ್ದು ಭಾವ ಪ್ರಧಾನ ವ್ಯಕ್ತಿತ್ವವಾದರೆ, ವರದರಾಜು ಅವರದ್ದು ಬುದ್ಧಿ ಪ್ರಧಾನ ವ್ಯಕ್ತಿತ್ವವಾಗಿತ್ತು. ಪಾರ್ವತಮ್ಮ ಆರ್ಥಿಕ ಭದ್ರತೆ ಒದಗಿಸುತ್ತಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಮಾತನಾಡಿದ ಕಲಾವಿದ ರಾಮಕೃಷ್ಣ ಅವರು ರಾಜ್‌ಕುಮಾರ್ ಹಾಗೂ ವರದರಾಜು ಅವರ ಜತೆಗಿನ ಒಡನಾಟ ಸ್ಮರಿಸಿಕೊಂಡರು.

ಎಸ್‌.ಪಿ. ವರದರಾಜು ಕುಟುಂಬದವರು ಇದೇ ವೇಳೆ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹40 ಸಾವಿರ ನಗದು ನೀಡಿ ಗೌರವಿಸಿದರು. ಶಿವರಾಜ್‌ಕುಮಾರ್ ಅವರ ವತಿಯಿಂದಲೂ ತಲಾ ₹25 ಸಾವಿರ ನೀಡಲಾಗುತ್ತಿದೆ ಎಂದು ಬರಗೂರು ರಾಮಚಂದ್ರಪ್ಪ ತಿಳಿಸಿದರು. ನಟ ರಾಘವೇಂದ್ರ ರಾಜ್‌ಕುಮಾರ್, ನಟಿ ಅಂಬಿಕಾ, ಗೀತಾ ಉಪಸ್ಥಿತರಿದ್ದರು.

ಇದಕ್ಕೂ ಮೊದಲು ಮಂಜುಳಾ ಗುರುರಾಜ್ ಅವರು ರಾಜ್‌ಕುಮಾರ್ ಚಿತ್ರಗೀತೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಬಿ. ಗುರುರಾಜು ಹಾಗೂ ಪುಷ್ಪಮಾಲಾ ಅವರಿಗೆ ‘ಎಸ್‌.ಪಿ.ವರದರಾಜು ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಬರಗೂರು ರಾಮಚಂದ್ರಪ್ಪ, ಶಿವರಾಜ್‌ಕುಮಾರ್, ಜಯಮಾಲಾ, ಗೀತಾ, ರಾಘವೇಂದ್ರ ರಾಜ್‌ಕುಮಾರ್, ಅಂಬಿಕಾ, ರಾಮಕೃಷ್ಣ, ಸುಂದರ್‌ರಾಜ್ ಉಪಸ್ಥಿತರಿದ್ದರು

ನಾಯಂಡಹಳ್ಳಿಯಲ್ಲಿ ಲುಲು ಡೈಲಿ ಹೈಪರ್ ಮಾರ್ಕೆಟ್ ಅನ್ನು ಶನಿವಾರ ಉದ್ಘಾಟಿಸಲಾಯಿತು

ನಾಯಂಡಹಳ್ಳಿಯಲ್ಲಿ ಲುಲು ಡೈಲಿ ಹೈಪರ್ ಮಾರ್ಕೆಟ್

ಬೆಂಗಳೂರು: ನಗರದ ಮೈಸೂರು ರಸ್ತೆಯಲ್ಲಿನ ನಾಯಂಡಹಳ್ಳಿಯಲ್ಲಿರುವ ಗ್ಲೋಬಲ್ ಮಾಲ್ಸ್ ಡಿವಿನಿಟಿಯಲ್ಲಿ ಲುಲು ಗ್ರೂಪ್ ಇಂಡಿಯಾ ತನ್ನ ಐದನೇ ಲುಲು ಡೈಲಿ ಹೈಪರ್ ಮಾರ್ಕೆಟ್ ಅನ್ನು ಶನಿವಾರ ಆರಂಭಿಸಿದೆ.

ಮಳಿಗೆಯ ಉದ್ಘಾಟನೆಯಿಂದ ಸಾವಿರಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಉದ್ಘಾಟನೆ ವೇಳೆ ಲುಲು ಗ್ರೂಪ್ ಇಂಡಿಯಾದ ಕಾರ್ಯ-ನಿರ್ವಾಹಕ ನಿರ್ದೇಶಕ ಅಶ್ರಫ್ ಅಲಿ ಎಂ.ಎ, ನಿರ್ದೇಶಕರು ಮತ್ತು ಸಿಇಒ ನಿಶಾದ್ ಎಂ.ಎ, ಫಹಾಜ್ ಅಶ್ರಫ್, ಲುಲು ಇಂಟರ್‌ನ್ಯಾಷನಲ್ ಹೋಲ್ಡಿಂಗ್ಸ್‌ನ ನಿರ್ದೇಶಕ ಆನಂದ್ ಎ.ವಿ, ಮಾಧ್ಯಮ ವಿಭಾಗದ ಮುಖ್ಯಸ್ಥ ಸ್ವರಾಜ್ ಎನ್‌.ಬಿ, ಲುಲು ಕರ್ನಾಟಕ ಪ್ರಾದೇಶಿಕ ನಿರ್ದೇಶಕ ಶರೀಫ್ ಕೆ.ಕೆ, ಪ್ರಾದೇಶಿಕ ವ್ಯವಸ್ಥಾಪಕ ಜಮಾಲ್ ಕೆ.ಪಿ ಹಾಗೂ ಇತರರಿದ್ದರು.

ಲಂಚ; ಕೆಎಎಸ್ ಅಧಿಕಾರಿ ಬಂಧನ

ಶಿವಮೊಗ್ಗ: ಕಚೇರಿ ಉಪಯೋಗಕ್ಕೆ ಬಿಟ್ಟಿದ್ದ ವಾಹನದ ಬಾಡಿಗೆ ಹಣ ನೀಡಲು ₹40,000 ಲಂಚ ಪಡೆಯುವಾಗ ಇಲ್ಲಿನ ರಾಷ್ಟ್ರೀಯ ಹೆದ್ದಾರಿ -206ರ ವಿಶೇಷ ಭೂಸ್ವಾಧೀನಾಧಿಕಾರಿಯೂ ಆದ ಹಿರಿಯ ಕೆಎಎಸ್ ಅಧಿಕಾರಿ ಸಿದ್ಧಲಿಂಗ ರೆಡ್ಡಿ ಹಾಗೂ ಮಧ್ಯವರ್ತಿ, ಹೊಳಲೂರು ಗ್ರಾಮ ಪಂಚಾಯಿತಿಯ ಗ್ರಾಮ ಸಹಾಯಕ ರಾಜೇಶ್ ಶನಿವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ತಾಲ್ಲೂಕಿನ ಓತಿಘಟ್ಟ ಗ್ರಾಮದ ವಿ.ಕೇಶವಮೂರ್ತಿ, ಮಾರುತಿ ಎರ್ಟಿಗಾ ಕಾರನ್ನು ರಾಷ್ಟ್ರೀಯ ಹೆದ್ದಾರಿ ಭೂಸ್ವಾಧೀನಾಧಿಕಾರಿ ಕಚೇರಿಗೆ ಕಳೆದ ಎರಡು ವರ್ಷಗಳಿಂದ ಬಾಡಿಗೆಗೆ ಬಿಟ್ಟಿದ್ದರು. ಕಳೆದ ನವೆಂಬರ್ ತಿಂಗಳಿಂದ ಬಾಡಿಗೆ ಬಾಕಿ ಉಳಿಸಿಕೊಂಡಿದ್ದು, ಅದನ್ನು ಪಾವತಿಸಲು ಸಿದ್ಧಲಿಂಗ ರೆಡ್ಡಿ ₹40,000 ಲಂಚಕ್ಕೆ ರಾಜೇಶ್ ಮೂಲಕ ಬೇಡಿಕೆ ಇಟ್ಟಿದ್ದರು. ಹೀಗಾಗಿ, ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು

ನಮಸ್ಕಾರ ಇಂಡಿಯಾ!

ನಾನು ಸ್ವಿಟ್ಜರ್‌ಲ್ಯಾಂಡ್

ಹೌದು, ಅದೇ ಸ್ವಿಟ್ಜರ್‌ಲ್ಯಾಂಡ್, ನೀವು ಕನಸು ಕಂಡಿರುವ, ಚಲನಚಿತ್ರಗಳಲ್ಲಿ ನೋಡಿರುವ, ಇನ್‌ಸ್ಟಾಗ್ರಾಮ್‌ನಲ್ಲಿ ಸೇವ್ ಮಾಡಿರುವ ಮತ್ತು ಸುಪ್ತವಾಗಿ ನಿಮ್ಮ ಬಕೆಟ್ ಲಿಸ್ಟ್‌ಗೆ ಸೇರಿಸಿರುವ ಸ್ವಿಟ್ಜರ್‌ಲ್ಯಾಂಡ್. ಭಾರತೀಯರ ಹೃದಯದಲ್ಲಿ ನನಗೆ ವಿಶೇಷ ಸ್ಥಾನವಿದೆ ಎಂದು ನನಗೆ ತಿಳಿದಿದೆ ಮತ್ತು ಆ ಬಗ್ಗೆ ನನಗೆ ಹೆಮ್ಮೆಯಿದೆ. ಏಕೆಂದರೆ, ನೀವು ಇಲ್ಲಿಗೆ ಬಂದಾಗ, ಏನೋ ಬದಲಾಗುತ್ತದೆ. ಬೆಳಗು ಹೆಚ್ಚು ಶಾಂತವಾಗಿರುತ್ತದೆ. ದಿನಗಳು ಲಘುವಾಗಿರುತ್ತವೆ. ಫ್ಯಾಮಿಲಿಗಳ ಧಾವಂತ ನಿಧಾನಗೊಳ್ಳುತ್ತದೆ, ಸ್ನೇಹಿತರ ನಗು ಹೆಚ್ಚಾಗುತ್ತದೆ ಮತ್ತು ಮಕ್ಕಳು ಹಿಮ, ರೈಲುಗಳು, ಸರೋವರಗಳು, ಮತ್ತು ಮುಕ್ತ ಸ್ಥಳಗಳಂತಹ ಸರ್ವಸಾಮಾನ್ಯ ವಿಷಯಗಳಲ್ಲಿ ಸಂತೋಷವನ್ನು ಕಂಡುಕೊಳ್ಳುತ್ತಾರೆ. ಭಾರತೀಯ ಪ್ರವಾಸಿಗರು ನೆನಪುಗಳೊಂದಿಗೆ ಮನೆಗೆ ಮರಳಿದಾಗಲೆಲ್ಲಾ, ನನ್ನಲ್ಲಿ ಕೃತಜ್ಞತೆಯ ಭಾವ ಮೂಡುತ್ತದೆ.ಆದ್ದರಿಂದ , ನನ್ನ ಈ ಆಹ್ವಾನವನ್ನು ಸ್ವೀಕರಿಸಿರಿ. ಎರಡು ದಿನಕ್ಕಾಗಿ ಬನ್ನಿ ಅಥವಾ ಹತ್ತು ದಿನಕ್ಕಾಗಿ ಬನ್ನಿ. ನನಗಾಗಿ ಮಾತ್ರ ಬನ್ನಿ ಅಥವಾ ನನ್ನನ್ನು ನಿಮ್ಮ ಯುರೋಪ್ ಪ್ರಯಾಣದ ಅಂಗವಾಗಿಸಿರಿ. ನಿಮ್ಮ ಕನಸುಗಳೊಂದಿಗೆ, ನಿಮ್ಮ ಪ್ರೀತಿಪಾತ್ರರೊಂದಿಗೆ ಮತ್ತು ನಿಮ್ಮದೇ ಆದ ಲಯದೊಂದಿಗೆ ಬನ್ನಿ ... ಬಾಕಿ ಎಲ್ಲವನ್ನೂ ವೀಣಾ ವರ್ಲ್ಡ್ ನೋಡಿಕೊಳ್ಳುತ್ತದೆ.

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ ಸ್ವಿಟ್ಜರ್‌ಲ್ಯಾಂಡ್‌ಗೆ, ಯುರೋಪ್‌ಗೆ, ವೀಣಾ ವರ್ಲ್ಡ್‌ನೊಂದಿಗೆ!

ವೀಣಾ ವರ್ಲ್ಡ್ ಯುರೋಪ್

ಪ್ರತಿಯೊಂದು ಕುಟುಂಬಕ್ಕಾಗಿ ಮತ್ತು ಕುಟುಂಬದ ಪ್ರತಿಯೊಬ್ಬ ಸದಸ್ಯನಿಗಾಗಿ!

ನಿಮ್ಮ ಮೊದಲ ಯುರೋಪ್ ಪ್ರವಾಸವೇ ಇರಲಿ ಅಥವಾ ಐದನೇ ಪ್ರವಾಸವೇ ಇರಲಿ, ನಿಮಗೆ ಅತ್ಯಂತ ಸೂಕ್ತವೆನಿಸುವ ಒಂದಲ್ಲ ಒಂದು ವೀಣಾ ವರ್ಲ್ಡ್ ಟೂರ್ ಇಟಿನರರಿ ಇದ್ದೇ ಇದೆ – ಪ್ರತಿಯೊಂದು ಕಾರಣಕ್ಕಾಗಿ, ಪ್ರತಿಯೊಂದು ಋತುವಿಗಾಗಿ. 5 ದಿನಗಳಿಂದ 30 ದಿನಗಳವರೆಗೆ. ರೂ. 1.5 ಲಕ್ಷದಿಂದ ರೂ. 7ಲಕ್ಷಗಳವರೆಗೆ. ಫ್ಯಾಮಿಲಿ ಟೂರ್ಸ್‌ನಿಂದ ಸೋಲೊ ಎಕ್ಸ್‌ಪ್ಲೋರರ್ಸ್‌ವರೆಗೆ. ವಿಮೆನ್ಸ್ ಸ್ಪೆಷಲ್ ಟೂರ್ಸ್‌ನಿಂದ ಸೀನಿಯರ್ಸ್ ಸ್ಪೆಷಲ್ ಟೂರ್ಸ್‌ವರೆಗೆ. ಕಸ್ಟಮೈಜ್ಡ್ ಹಾಲಿಡೇಸ್‌ನಿಂದ ಖಐಇಉ ಕಾರ್ಪೊರೇಟ್ ಟೂರ್ಸ್‌ವರೆಗೆ.

ನಿಮ್ಮ ಆಯ್ಕೆಗಳು, ಬಜೆಟ್ ಮತ್ತು ಸಮಯಕ್ಕೆ ಸೂಕ್ತವೆನಿಸುವ ಟೂರನ್ನು ಆರಿಸಿದರಾಯಿತು.

ವೆಸ್ಟರ್ನ್ ಅಥವಾ ಈಸ್ಟರ್ನ್ ಯುರೋಪ್, ಸೆಂಟ್ರಲ್, ಬಾಲ್ಟಿಕ್ ಅಥವಾ ಬಾಲ್ಕನ್, ನಾರ್ದರ್ನ್ ಅಥವಾ ಸದರ್ನ್ ಮೆಡಿಟರೇನಿಯನ್... ಇಷ್ಟೊಂದು ಆಯ್ಕೆಗಳಿರುವಾಗ, ನೀವು ಗೊಂದಲಕ್ಕೊಳಗಾಗುವುದು ಸಹಜ. ಆದರೆ, ರಿಲ್ಯಾಕ್ಸ್ ಆಗಿರಿ! ವೀಣಾ ವರ್ಲ್ಡ್ ನಿಮ್ಮ ಪರ್ಫೆಕ್ಟ್ ಯುರೋಪನ್ನು ಹುಡುಕಲು ನಿಮಗೆ ಸಹಾಯ ಮಾಡುತ್ತದೆ.

ನಿಮ್ಮ ಯುರೋಪ್ ಭೇಟಿಯ ಕನಸನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ; ಅದನ್ನು ನನಸಾಗಿಸಲು ನಾವು ನಿಮಗೆ ಸಹಾಯ ಮಾಡುತ್ತೇವೆ; ಕೇವಲ ಈ ವರ್ಷ ಮಾತ್ರವಲ್ಲ, ಯುರೋಪ್‌ನ ಆದ್ಯಂತ ಮುಂದಿನ 10 ವರ್ಷಗಳವರೆಗಿನ ಅವಿಸ್ಮರಣೀಯ ಪ್ರವಾಸಗಳ ಯೋಜನೆಯನ್ನು ನಾವು ಸಿದ್ಧಪಡಿಸಿಕೊಡುತ್ತೇವೆ; ಪ್ರತೀ ಬಾರಿಯೂ ಒಂದೊಂದು ಸುಂದರ ಕಥನ.

ವೀಣಾ ವರ್ಲ್ಡ್ ಎಂದರೆ
100%
ಆಲ್-ಇನ್‌ಕ್ಲೂಸಿವ್ ಟೂರ್ಸ್
ಡಿಸ್ಕೌಂಟ್ ಇಲ್ಲ!
'ಉಚಿತ' ಗಿಮಿಕ್ಸ್ ಇಲ್ಲ!
ಸುಪ್ತ ವೆಚ್ಚಗಳಿಲ್ಲ!
ಆಪ್ಷನಲ್ಸ್ ಇಲ್ಲ!
ಟೂರ್‌ಗಳಲ್ಲಿ ಯಾವುದೇ ಹೆಚ್ಚುವರಿ ಶುಲ್ಕಗಳಿಲ್ಲ. ಬ್ರೇಕ್‌ಫಾಸ್ಟ್-ಲಂಚ್-ಡಿನ್ನರ್, ಗರಿಷ್ಠ ಪ್ರೇಕ್ಷಣೀಯ ಸ್ಥಳದರ್ಶನ ವೀಣಾ ವರ್ಲ್ಡ್ ಟ್ರೀಟ್ಸ್,ಡ್ರೈವರ್ ಟಿಪ್ಸ್, ಗೈಡ್ ಟಿಪ್ಸ್... ಒಳಗೊಂಡಿವೆ

ಕಳೆದ 12 ವರ್ಷಗಳಲ್ಲಿ
1,03,950+
ಅತಿಥಿಗಳು
ವೀಣಾ ವರ್ಲ್ಡ್‌ನೊಂದಿಗೆ ಯುರೋಪನ್ನು ಅನ್ವೇಷಿಸಿದ್ದಾರೆ.
15,250+
ಆರ್ಥಿಕ ವರ್ಷ
2025-2026ರಲ್ಲಿ

ಅಫೋರ್ಡಬಲ್
ವೆಸ್ಟರ್ನ್ ಯುರೋಪ್ ಅಥವಾ ಈಸ್ಟರ್ನ್ ಯುರೋಪ್
₹ 1,75,000ದಿಂದ ಆರಂಭ
ಸದರ್ನ್ ಯುರೋಪ್
₹ 2,00,000
ನಾರ್ದರ್ನ್ ಯುರೋಪ್
₹ 2,50,000

ಆನಂದಮಯ ನೆನಪುಗಳ ಸರ್‌ಪ್ರೈಜ್,
ವೀಣಾ ವರ್ಲ್ಡ್ ಗಿಫ್ಟ್ ಕಾರ್ಡ್ಸ್!
veenaworld.com/gift-card

ಆಲ್-ಇಂಡಿಯಾ ಒನ್ ಪ್ರೈಸ್ ಬೆನಿಫಿಟ್
ಮುಂಬೈ, ಕೋಲ್ಕತ್ತಾ, ಬೆಂಗಳೂರು, ಕೊಚ್ಚಿ, ಹೈದರಾಬಾದ್, ಚೆನ್ನೈ , ಇಂದೋರ್, ದೆಹಲಿ, ಅಹಮದಾಬಾದ್‌ನಿಂದ ಹೊರಡುವ ಟೂರ್‌ಗಳಿಗೆ, ಫೆಬ್ರವರಿ 28ಕ್ಕಿಂತ ಮೊದಲು ಬುಕ್ ಮಾಡಿದಲ್ಲಿ

Travel Now Pay Later!
EMI options available (3 to 24 months) subject to EMI partner approval.
*T&C apply

ನಿಮ್ಮ ಕುಟುಂಬ ಮತ್ತು ಸ್ನೇಹಿತರ ಗ್ರೂಪ್‌ಗಾಗಿ ವಿಶೇಷವಾಗಿ ರೂಪಿಸಲಾಗಿರುವ ಎಕ್ಸ್‌ಕ್ಲೂಸಿವ್ ಟೂರ್ಸ್‌ಗಾಗಿ ನಮ್ಮನ್ನು ಕೇಳಿರಿ

ಯುರೋಪ್‌ಗೆ ಮೊದಲ ಬಾರಿ ಹೋಗುತ್ತಿದ್ದೀರಾ?
ಹಾಗಿದ್ದರೆ, ಕ್ಲಾಸಿಕ್ ರೀತಿಯಲ್ಲಿ ಭೇಟಿ ನೀಡಿರಿ
8 ದಿನಗಳಲ್ಲಿ 8 ದೇಶಗಳು!
10 ದಿನಗಳಲ್ಲಿ 10 ದೇಶಗಳು !
ಅಥವಾ 11 ದಿನಗಳಲ್ಲಿ 11 ದೇಶಗಳು!

ನಿಮ್ಮ ವೀಸಾ ಪ್ರಕ್ರಿಯೆ ಆರಂಭಿಸಿರಿ.
ತ್ವರೆಮಾಡಿ, ಬುಕ್ ಮಾಡಿ ಮತ್ತು ಕಾನ್ಸುಲೇಟ್‌ಗಳಲ್ಲಿ ಜನಸಂದಣಿ ಹೆಚ್ಚಾಗುವ ಮೊದಲೇ ನಿಮ್ಮ ವೀಸಾ ಪ್ರಕ್ರಿಯೆಯನ್ನು ಆರಂಭಿಸಿರಿ. ನಮ್ಮ 118+ ಇನ್-ಹೌಸ್‌ವೀಸಾ ಎಕ್ಸ್‌ಪರ್ಟ್ಸ್ ನಿಮಗೆ ಹಂತ-ಹಂತವಾಗಿ ಮಾರ್ಗದರ್ಶನ ನೀಡುತ್ತಾರೆ

ನಿಮ್ಮ ನಗರದಲ್ಲಿ ವೀಸಾ ಅಸಿಸ್ಟೆನ್ಸ್,
ಸ್ಪೆಷಲ್ ಪ್ರಮೋಶನಲ್ ಸರ್ವಿಸ್ ಶುಲ್ಕದಲ್ಲಿ. ಕಡಿಮೆ ಎಫರ್ಟ್. ಅಧಿಕ ಕಂಫರ್ಟ್. ಇಂದೇ ಸಂಪರ್ಕಿಸಿರಿ!
*ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

Ex-ಡೆಸ್ಟಿನೇಶನ್
ಡೈರೆಕ್ಟ್ ಜಾಯ್ನಿಂಗ್ ಲೀವಿಂಗ್ ಟೂರ್ ಪ್ರೈಸ್ ಲಭ್ಯವಿದೆ

ಪ್ರಿ ಆ್ಯಂಡ್ ಪೋಸ್ಟ್-ಟೂರ್
ಪ್ರಿ ಆ್ಯಂಡ್ ಪೋಸ್ಟ್-ಟೂರ್ ಹಾಲಿಡೇಸ್ ಬಳಸಿಕೊಂಡು ನಿಮ್ಮ ಟೂರನ್ನು ವಿಸ್ತರಿಸಿಕೊಳ್ಳಿ.

ಫುಲ್ ಪೇಮೆಂಟ್ ಪ್ರಯೋಜನ
ಮುಂಗಡ ಫುಲ್ ಪೇಮೆಂಟ್, ಹೆಚ್ಚುವರಿ ಉಳಿತಾಯವನ್ನು ಗಳಿಸುತ್ತದೆ (ಕನಿಷ್ಠ 3ರಿಂದ 12 ತಿಂಗಳುಗಳು) ಪ್ರತೀ ವ್ಯಕ್ತಿಗೆ ರೂ. 3,000ದಿಂದ ರೂ. 15,000 ಉಳಿಸಿರಿ

FOREX
ಫಾರಿನ್ ಎಕ್ಸ್‌ಚೇಂಜ್ ಖರೀದಿಸಿರಿ, ವೀಣಾ ವರ್ಲ್ಡ್ Forexನಲ್ಲಿ

ಕಸ್ಟಮೈಜ್ಡ್ ಯುರೋಪ್
ನಿಮ್ಮ ಪ್ರೈವೇಟ್‌ಹಾಲಿಡೇಯನ್ನು ನಮ್ಮ ಬಳಿ ರೂಪಿಸಿಕೊಳ್ಳಿ

MICE
ಕಾರ್ಪೊರೇಟ್ ಟೂರ್ಸ್
ನಮ್ಮನ್ನು ಸಂಪರ್ಕಿಸಿ ಇನ್ಸೆಂಟಿವ್ ಟೂರ್ಸ್, ಆಫ್‌ಸೈಟ್ಸ್‌ಗಾಗಿ...

veenaworld.com ನಲ್ಲಿ 120+ ಆಲ್-ಇನ್‌ಕ್ಲೂಸಿವ್ ಯುರೋಪ್ ಗ್ರೂಪ್ ಟೂರ್ ಆಯ್ಕೆಗಳ ಕುರಿತು ವಿವರವಾದ ಮಾಹಿತಿಯನ್ನು ಅನ್ವೇಷಿಸಿರಿ.

Ex-Bengaluru/Mumbai ನಿರ್ಗಮನಗಳಿಂದ ಇಲ್ಲವೇ ಭಾರತ ಅಥವಾ ವಿದೇಶದ ಯಾವುದೇ ನಗರದಿಂದ ಜಾಯ್ನಿಂಗ್ ಆ್ಯಂಡ್ ಲೀವಿಂಗ್ (J&L) ಟೂರ್ಸ್‌ನಿಂದ ಆಯ್ಕೆಮಾಡಿ. ಈ ಕೆಳಗಿನ ಬೆಲೆ ಪಟ್ಟಿಯಲ್ಲಿವೆ: • Ex-Bengaluru/Mumbai ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿವೆ). • J&L ಬೆಲೆ (ಏರ್‌ಫೇರ್, ವೀಸಾ ಮತ್ತು ವಿಮೆ ಒಳಗೊಂಡಿಲ್ಲ). ನಿಮ್ಮ J&L ಟ್ರಾವೆಲ್‌ಗೆ ಸಹಾಯ ಬೇಕೇ? ಫ್ಲೈಟ್ಸ್, ವೀಸಾಗಳು ಮತ್ತು ಇನ್ನಿತರ ವಿಷಯಗಳಿಗಾಗಿ ನಿಮಗೆ ಸಹಾಯ ಮಾಡಲು ನಮ್ಮ ಟೀಮ್ ಸಿದ್ಧವಿದೆ.

ಯೂರೊ ಮೇಲೇರುತ್ತಿದೆ, ಟೂರ್ ಬೆಲೆಗಳು ಬದಲಾಗುತ್ತಿವೆ. ಈಗಲೇ ಸಕಾಲ! ಇಂದೇ ಬುಕ್ ಮಾಡಿ, ಭಾರತೀಯ ₹ಯಲ್ಲಿ ಹಣ ಪಾವತಿಸಿ, ನಿಮ್ಮ ಟೂರ್ ಪ್ರೈಸ್‌ಅನ್ನು ಲಾಕ್‌ಮಾಡಿ

ವೆಸ್ಟರ್ನ್ ಯುರೋಪ್ – ಇಂಗ್ಲೆಂಡ್‌ನಿಂದ ಇಟಲಿ

Tour Name	Ex-Mumbai	J&L
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ ಜರ್ಮನಿ (6D)	175K-190K	110K-125K
ಯುರೋಪಿಯನ್ ಪನೋರಮ (8D)	250K-260K	180K-190K
ಯುರೋಪಿಯನ್ ಸ್ಪ್ಲೆಂಡರ್ಸ್ (10D)	275K-285K	205K-215K
ಲಂಡನ್ ಪ್ಯಾರಿಸ್ ಸ್ವಿಸ್ ಇಟಲಿ (9D)	285K-295K	205K-215K
ಯುರೋಪಿಯನ್ ಹೈಲೈಟ್ಸ್ (11D)	305K-320K	225K-240K
ಯುರೋಪಿಯನ್ ಡಿಲೈಟ್ (13D)	370K-385K	290K-305K
ಯುರೋಪಿಯನ್ ಜ್ಯುವೆಲ್ಸ್ (15D)	410K-425K	330K-345K
ಯುರೋಪಿಯನ್ ಎಸೆನ್ಸ್ (15D)	400K-425K	330K-355K
ಮಲ್ಟಿ-ಕಂಟ್ರಿ ಯುರೋಪ್ (17D-27D)	465K-695K	385K-615K
ಆ್ಯಮ್‌ಸ್ಟರ್‌ಡ್ಯಾಮ್ ಬ್ರಸೆಲ್ಸ್/ಸ್ವಿಸ್ ಪ್ಯಾರಿಸ್ (7/11)	230K-345K	160K-275K
ಇಂಗ್ಲೆಂಡ್ ಸ್ಕಾಟ್‌ಲ್ಯಾಂಡ್/ಐರ್‌ಲ್ಯಾಂಡ್ (10/15D)	315K-440K	245K-370K
ಸ್ವಿಸ್ ಪ್ಯಾರಿಸ್/ಫ್ರೆಂಚ್ ರಿವಿಯೇರಾ (8D/10D)	285K-310K	210K-240K
ಸ್ವಿಸ್ ಪ್ಯಾರಿಸ್ ಲಂಡನ್ (11D)	375K-400K	290K-315K
ಸ್ವಿಸ್ ಪ್ಯಾರಿಸ್ ಇಟಲಿ (11D)	320K-335K	250K-265K
ಸ್ವಿಸ್ ಆಸ್ಟ್ರಿಯಾ/ಇಟಲಿ (8D/11D)	275K-335K	205K-265K
ಸ್ವಿಸ್ ಪ್ಯಾರಿಸ್ ಆಸ್ಟ್ರಿಯಾ (11D)	330K-340K	260K-270K
ಇಟಲಿ (8D/15D)	295K-465K	230K-395K
ಸ್ವಿಟ್ಜರ್‌ಲ್ಯಾಂಡ್ (7D/10D)	275K-360K	210K-290K
ಬೆಸ್ಟ್ ಆಫ್ ಆಸ್ಟ್ರಿಯಾ (8D)	275K-290K	205K-220K
ಬೆಸ್ಟ್ ಆಫ್ ಫ್ರಾನ್ಸ್ (11D)	325K-340K	255K-270K

ನಾರ್ದರ್ನ್ ಸ್ಕ್ಯಾಂಡಿನೇವಿಯನ್ ಯುರೋಪ್

Tour Name	Ex-Mumbai	J&L
ಹೈಲೈಟ್ಸ್ ಆಫ್ ಸ್ಕ್ಯಾಂಡಿನೇವಿಯಾ (7D)	250K-275K	175K-200K
ಬೆಸ್ಟ್ ಆಫ್ ಸ್ಕ್ಯಾಂಡಿನೇವಿಯಾ (10D)	335K-360K	250K-275K
ಆಲ್ ಆಫ್ ಸ್ಕ್ಯಾಂಡಿನೇವಿಯಾ (15D)	475K-500K	385K-400K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ (15D)	565K-590K	475K-500K
ಸ್ಕ್ಯಾಂಡಿನೇವಿಯಾ ಈಸ್ಟರ್ನ್ ಯುರೋಪ್ (17)	525K-550K	440K-465K
ಸ್ಕ್ಯಾಂಡಿನೇವಿಯಾ ರಷ್ಯಾ (17D)	435K-460K	365K-390K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (16)	535K-550K	455K-470K
ಸ್ಕ್ಯಾಂಡಿನೇವಿಯಾ ಮಿಡ್‌ನೈಟ್ ಸನ್ (9)	375K-400K	295K-420K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ಮಿಡ್‌ನೈಟ್ ಸನ್ (14D)	625K-650K	545K-570K
ಸ್ಕ್ಯಾಂಡಿನೇವಿಯಾ ನಾರ್ದರ್ನ್ ಲೈಟ್ಸ್ (9D)	400K-425K	310K-335K
ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (10D) Mar 12	515K-545K	440K-465K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ (14D) Mar 4	520K-545K	430K-455K
ಸ್ಕ್ಯಾಂಡಿನೇವಿಯಾ ಐಸ್‌ಲ್ಯಾಂಡ್ ನಾರ್ದರ್ನ್ ಲೈಟ್ಸ್ + ಐಸ್‌ಬ್ರೇಕರ್ ಕ್ರೂಜ್ (15D)	575K-600K	480K-505K
ಬೆಸ್ಟ್ ಆಫ್ ಗ್ರೀನ್‌ಲ್ಯಾಂಡ್ (9D)Aug 31	675K-700K	585K-610K
ಬೆಸ್ಟ್ ಆಫ್ ರಷ್ಯಾ (7D)	175K-200K	115K-140K

ಸದರ್ನ್ ಯುರೋಪ್, ಮೆಡಿಟರೇನಿಯನ್ ಯುರೋಪ್, ಸೆಂಟ್ರಲ್, ಈಸ್ಟರ್ನ್ ಯುರೋಪ್

Tour Name	Ex-Mumbai	J&L
ಹೈಲೈಟ್ಸ್ ಆಫ್ ಸ್ಪೇನ್ (7D)	200K-225K	130K-155K
ಬೆಸ್ಟ್ ಆಫ್ ಸ್ಪೇನ್ (10D/11D)	265K-280K	195K-210K
ಆಲ್ ಆಫ್ ಸ್ಪೇನ್ (15D)	375K-400K	305K-330K
ಸ್ಪೇನ್ ಪೋರ್ಚುಗಲ್ (13D)	335K-360K	260K-285K
ಸ್ಪೇನ್ ಪೋರ್ಚುಗಲ್ ಮೊರಕ್ಕೊ (16D)	375K-400K	295K-320K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ (5D)	200K-225K	135K-160K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ಮೈಕೋನೋಸ್ (7D)	250K-275K	185K-205K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ರೋಡ್ಸ್ (9D)	300K-315K	235K-250K
ಗ್ರೀಸ್ ಅಥೆನ್ಸ್ ಸ್ಯಾಂಟೊರಿನಿ ರೋಡ್ಸ್ ಮೈಕೋನೋಸ್ (10D)	325K-350K	260K-285K
ಆಲ್ ಆಫ್ ಗ್ರೀಸ್ (14D)	425K-450K	360K-385K
ಈಜಿಪ್ಟ್ ಗ್ರೀಸ್ ಟರ್ಕಿ (15D)	425K-450K	--
ಗ್ರೀಸ್ ಟರ್ಕಿ (12D)	350K-375K	270K-295K
ಟರ್ಕಿ (10D/15D)	225K-350K	155K-180K
ಬೆಸ್ಟ್ ಆಫ್ ಈಜಿಪ್ಟ್ (9D)	175K-200K	115K-140K
ಈಜಿಪ್ಟ್ ಗ್ರೀಸ್ ಸೈಪ್ರಸ್ (12D)	390K-415K	310K-330K
ಗ್ರೀಸ್ ಸೈಪ್ರಸ್ (9D)	325K-350K	245K-270K
ಈಜಿಪ್ಟ್ ಮೊರಕ್ಕೊ (8D)	240K-265K	170K-195K
ಈಜಿಪ್ಟ್ ಜೋರ್ಡಾನ್ (10D)	295K-320K	230K-255K
ಬೆಸ್ಟ್ ಆಫ್ ಜೋರ್ಡಾನ್ (7D) Mar 22	200K-225K	135K-160K

Tour Name	Ex-Mumbai	J&L
ವಿಯೆನ್ನಾ ಪ್ರಾಗ್ ಬುಡಾಪೆಸ್ಟ್ (8D)	250K-275K	175K-200K
ಬರ್ಲಿನ್ ವಾರ್ಸಾ ಕ್ರಾಕೋವ್ (8D)	240K-265K	170K-195K
ಕ್ರೊಯೇಷಿಯಾ ಸ್ಲೊವೇನಿಯಾ ಸ್ಲೋವಾಕಿಯಾ ಹಂಗೇರಿ (12D)	330K-345K	255K-270K
ಸೆಂಟ್ರಲ್ ಆ್ಯಂಡ್ ಈಸ್ಟರ್ನ್ ಯುರೋಪ್ (17D)	400K-425K	325K-350K
ಉಜ್ಬೆಕಿಸ್ತಾನ್ ಕಝಾಕಿಸ್ತಾನ್ ಕಿರ್ಗಿಜ್‌ಸ್ತಾನ್ (9D)	215K-230K	160K-175K
ತಾಷ್ಕೆಂಟ್ ಸಮರ್‌ಕಂಡ್ (5D) Mar 17, 24	81K-85K	61K-65K
ಜಾರ್ಜಿಯಾ ಆರ್ಮೇನಿಯಾ ಬಾಕು (10D)	225K-250K	175K-200K
ಜಾರ್ಜಿಯಾ ಆರ್ಮೇನಿಯಾ (8D)	175K-200K	125K-150K
ಜಾರ್ಜಿಯಾ (5D/8D) Mar 17	99K-175K	49K-130K
ಬಾಕು (5D/8D)	99K-150K	64K-110K
ಬಾಲ್ಟಿಕ್ ಯುರೋಪ್ ಎಸ್ಟೋನಿಯಾ ಲಾಟ್ವಿಯಾ ಲಿಥುವೇನಿಯಾ (8D)	250K-275K	180K-205K
ಬಾಲ್ಟಿಕ್ ಯುರೋಪ್ + ಸ್ಕ್ಯಾಂಡಿನೇವಿಯಾ (15D)	500K-525K	420K-445K
ಬಾಲ್ಟಿಕ್ ಬರ್ಲಿನ್ ವಾರ್ಸಾ ಕ್ರಾಕೋವ್ (15)	390K-415K	330K-355K
ಬಾಲ್ಕನ್ ರೊಮೇನಿಯಾ ಬಲ್ಗೇರಿಯಾ ಸರ್ಬಿಯಾ ನಾರ್ಥ್ ಮ್ಯಾಸಿಡೋನಿಯಾ (15D)	405K-430K	335K-360K
ಬೆಸ್ಟ್ ಆಫ್ ಮೊರಕ್ಕೊ (8D)	225K-250K	155K-180K
ಟ್ಯುನಿಸಿಯಾ ಮಾಲ್ಟಾ ಸಿಸಿಲಿ (10D)	375K-400K	295K-320K

ಯೂನಿಕ್ ಸ್ವಿಟ್ಜರ್‌ಲ್ಯಾಂಡ್ ಗ್ರೂಪ್ ಟೂರ್ಸ್
YOLO, ಸ್ವಿಸ್ ಬಾಯ್ ರೈಲ್, ಸ್ವಿಸ್ ಬಾಯ್ ಸೆಲ್ಫ್-ಡ್ರೈವ್ ಕಾರ್ಸ್, ಸ್ವಿಸ್ ಫಾರ್ ಸ್ಟೂಡೆಂಟ್ಸ್ ಆ್ಯಂಡ್ ಪೇರೆಂಟ್ಸ್, ಸ್ವಿಸ್ 5 ಸ್ಟಾರ್ ವಿಥ್ ಮರ್ಸಿಡೀಸ್ ವ್ಯಾನ್, ಹನಿಮೂನ್ ಸ್ಪೆಷಲ್ ಸ್ವಿಟ್ಜರ್‌ಲ್ಯಾಂಡ್

ದಿ ಅಮೆರಿಕಾಸ್

ಟೂರ್ ಪ್ರೈಸ್ 2,00,000ದಿಂದ 13,95,000
ಸೌಥ್ ಅಮೆರಿಕಾ (21D) 13,95,000 (J&L) 10,90,000
ಅಂಟಾರ್ಕ್ಟಿಕಾ ದಿ 7th ಕಾಂಟಿನೆಂಟ್ (13D) 13,35,000 (J&L) 11,35,000
USA ಈಸ್ಟ್ ಕೋಸ್ಟ್ (6D/7D/9D)
USA ವೆಸ್ಟ್ ಕೋಸ್ಟ್ (7D)
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ + ಚಿಕಾಗೊ (13D)
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್+ ಒರ್ಲ್ಯಾಂಡೊ ಡಿಸ್ನಿಲ್ಯಾಂಡ್ ಆ್ಯಂಡ್ ನಾಸಾ (15D)
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಚಿಕಾಗೊ ಆ್ಯಂಡ್ ಡೆತ್ ವ್ಯಾಲಿ ಯೋಸೆಮಿಟಿ (18 Days)
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್+ಒರ್ಲ್ಯಾಂಡೊ ಆ್ಯಂಡ್ ಬಹಾಮಾಸ್ ಕ್ರೂಜ್ (19 Days)
USA ಈಸ್ಟ್ ಆ್ಯಂಡ್ ವೆಸ್ಟ್ ಕೋಸ್ಟ್ ವಿಥ್ ಚಿಕಾಗೊ ಆ್ಯಂಡ್ ನ್ಯಾಶನಲ್ ಪಾರ್ಕ್ಸ್ (22 Days)
USA ಕ್ಯಾಲಿಫೋರ್ನಿಯಾ ಕಾರ್ನಿವಲ್ ವಿಥ್ ಡೆತ್ ವ್ಯಾಲಿ ಆ್ಯಂಡ್ ಯೋಸೆಮಿಟಿ (10 Days)
ಅಲಾಸ್ಕಾ ಕೆನಡಾ (18D) | ಬೆಸ್ಟ್ ಆಫ್ ಅಲಾಸ್ಕಾ (9D)
ಬೆಸ್ಟ್ ಆಫ್ ಕೆನಡಾ (11D) | ಹವಾಯಿ, ಮೆಕ್ಸಿಕೊ (11D)
ಬೆಸ್ಟ್ ಆಫ್ ಮೆಕ್ಸಿಕೊ (7D)

ಮೈ ಹೂಂ ನ!

ಯುರೋಪಿನ ವ್ಯಾಪಕ ಸೌಂದರ್ಯವನ್ನು ತಾವಾಗಿಯೆ ನೋಡುವುದೆಂದರೆ ಅಧೀರತೆ ಉಂಟಾಗಬಹುದು; ಆದರೆ ನಿಮ್ಮೊಂದಿಗೆ ಡೆಡಿಕೇಟೆಡ್ ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್ ಇರುವಾಗ, ನಿಮ್ಮ ಯುರೋಪ್ ಅಡ್ವೆಂಚರ್ ಹೆಜ್ಜೆಹೆಜ್ಜೆಗೂ ಸುಲಭವಾಗುತ್ತದೆ, ನಿರಾಳ ಹಾಗೂ ಆನಂದದಾಯಕವಾಗುತ್ತದೆ.

ವರ್ಚುವಲ್ ಟ್ರಾವೆಲ್ ಕಾನ್ಫರೆನ್ಸ್
ಎಕ್ಸ್‌ಪರ್ಟ್-ಲೆಡ್ ಶಾರ್ಟ್ ಸೆಶನ್ಸ್ ಉತ್ತಮ ರೀತಿಯಲ್ಲಿ ನಿರ್ಧರಿಸಲು ನಿಮ್ಮ ಸಹಾಯಕ್ಕಾಗಿ. ಕರೆ ಮಾಡಿ: 887 997 2223

Group tour price includes return airfare (Ex-Bengaluru/Mumbai), transport, accommodation, all meals: breakfast, lunch, dinner, sightseeing with entrance fees, driver-guide tips, services of a Tour Manager, VISA fee (except for Free Visa Countries & USA) and travel insurance*. J&L tours exclude airfare, visa & insurance. USA tours are for valid USA visa holders. The full payment benefit is valid only for a limited period* and does not apply to promotional tours EUGP, EUGV, EUHJ, EUGD, AMGP, ASPJ, ASZL... or their speciality tours.

Jayanagar: Sharada Plaza, 9th Main Rd, 3rd block, Jayanagar, Opp. SBI, Bengaluru 560011, Call: 887 997 2217
Indiranagar: 2005, 100 feet Road, HAL 2nd Stage, Indiranagar, Bengaluru 560038, Call: 887 997 9500

Monday-Sunday 10 to 7

Veena World Sales Partners: Karnataka: Belgaum-College Road 9980428880 • Malleshwaram 9663920469 Belgaum-Goaves Circle 7338685500 • Bengaluru-Vijayanagar 9036610005 • Bijapur 9980857595 Dharwad 9036715969 • Hubli 7204411007 • Chikodi 9448627771 • **Tamil Nadu**: Coimbatore 9994666522

Mysore, Udupi, Mangaluru • Call: 865 575 5281

Book Online 24x7 from anywhere on veenaworld.com
Call: 1800 313 5555

Applications invited for Sales Partners/ Agents across Southern India WhatsApp on 887 997 9733

Mumbai Online 887 997 2221 • New Delhi 887 997 2700 • Noida 887 997 4100 • Gurugram 8879 974 300 • Hyderabad 887 997 9700 • Kolkata 887 997 2288
Bengaluru Jayanagar 887 997 2217 • Bengaluru Indiranagar 887 997 9500 • Chennai 887 997 3500 • Ahmedabad 887 997 7200 • Indore 887 997 9800

VEENA WORLD
Travel. Explore. Celebrate Life.

Tour price is per person and on twin sharing basis. These tour prices are nett and no discount is applicable. At the time of booking, tour price to be paid in full INR by UPI/NEFT/RTGS/Cheque, in the name of '**Veena Patil Hospitality Pvt. Ltd.**' No cash transactions at Veena World. Government taxes apply. Any increase in YQ taxes, airport taxes, VISA fees, surcharges (if any) will have to be borne by the travellers. T&C apply.

ಕಿನ್ನಾಳ ಕಲೆಗೀಗ ಯುವೋತ್ಸಾಹ

ಗುರುಮುಖ

ಒಂದನೇ ಪುಟದಿಂದ...

ಕಿನ್ನಾಳದ ಹಿಂದಿನ ತಲೆಮಾರಿನವರು ಕಲೆಯನ್ನು ದೇವರ ಮೂರ್ತಿ, ಪಲ್ಲಕ್ಕಿ ತಯಾರಿಸಲು ಸೀಮಿತ ಮಾಡಿದ್ದರು. ಸಂತೋಷಕುಮಾರ್ ಗ್ರಾಹಕರ ಬೇಡಿಕೆಗೆ ತಕ್ಕಂತೆ ಗೃಹಬಳಕೆಯ ಅಲಂಕೃತ ವಸ್ತುಗಳನ್ನು ತಯಾರಿಸಿದರು. ಹೊಸತನದ ಆಸೆ ಇಟ್ಟುಕೊಂಡು ಊರಿಗೆ ಬಂದಾಗ ಅವರಿಗೆ ಎದುರಾಗಿದ್ದು ಮುಳ್ಳಿನ ಹಾದಿ. ತಯಾರಿಸಿದ ಒಂದು ಕಲಾಕೃತಿ ಮಾರಾಟವಾದ ಬಳಿಕವೇ ಮತ್ತೊಂದು ಕಲಾಕೃತಿ ತಯಾರಿಸಬೇಕಾದ ಅಸಹಾಯಕತೆ, ಆರ್ಥಿಕ ಅನನುಕೂಲತೆ ಇತ್ತು. ಆದ್ದರಿಂದ ಗ್ರಾಹಕರನ್ನು ಕಾಯಬೇಕಾದ ಅನಿವಾರ್ಯತೆಯಿತ್ತು. ನೂರಾರು ವರ್ಷಗಳ ಇತಿಹಾಸವಿದ್ದರೂ ಕಾಲಕ್ಕೆ ತಕ್ಕಂತೆ ಮಾರುಕಟ್ಟೆಯ ಕೊರತೆ ಹಾಗೂ ಚಿತ್ರಗಾರ ಸಮುದಾಯದ ಯುವಕರ ನಿರಾಸಕ್ತಿಯಿಂದ ಈ ಕಲೆಯ ಕಥೆ ಮುಗಿದೇ ಹೋಯಿತು ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು.

ಲಲಿತ ಕಲೆಯಲ್ಲಿ ಪದವಿ ಮತ್ತು ದೃಶ್ಯಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸಂತೋಷಕುಮಾರ್ ಕಿನ್ನಾಳ ಕಲಾಕೃತಿಗಳಿಗೆ ಮಾರುಕಟ್ಟೆ ಗಳಿಸಿಕೊಳ್ಳಲು ಸಾಮಾಜಿಕ ಜಾಲತಾಣಗಳಲ್ಲಿ ಕಲೆಯ ಮಹತ್ವ, ಗುಣಮಟ್ಟ, ತಯಾರಿಕೆಯ ವಿಧಾನ, ಬಾಳಿಕೆ ಬರುವ ಅವಧಿ ಹೀಗೆ ಇಂಚಿಂಚೂ ಮಾಹಿತಿ ಹಂಚಿಕೊಂಡು 'ಕಿನ್ನಾಳ ಕಲೆಕ್ಷನ್ಸ್' ವೆಬ್‌ಸೈಟ್ ರೂಪಿಸಿ 'ಮನೆಬಾಗಿಲಿಗೆ ಕಲಾಕೃತಿ ತಲುಪಿಸುತ್ತೇವೆ' ಎಂದು ಪ್ರಚಾರ ಮಾಡಿದರು. ಕಿನ್ನಾಳಕ್ಕೆ ಮರಳಿ ಸಮಾನ ಮನಸ್ಕ ಸ್ನೇಹಿತರನ್ನು ಒಳಗೊಂಡ ತಂಡವನ್ನು ಕಟ್ಟಿದರು. ಚಿತ್ರಗಾರ ಕುಟುಂಬದ ಬಹುತೇಕರು ದೇವರ ವಿಗ್ರಹ, ಪಲ್ಲಕ್ಕಿ ತಯಾರಿಸಲು ಸೀಮಿತರಾಗಿದ್ದರು. ಇದಕ್ಕೆ ಭಿನ್ನವಾಗಿ ಕೆಲಸ ಮಾಡಿದ ಸಂತೋಷಕುಮಾರ ಗ್ರಾಹಕರ ಬೇಡಿಕೆಯ ನಾಡಿಮಿಡಿತ ಅರಿತು ಗೃಹಾಲಂಕಾರ ವಸ್ತುಗಳು, ಮಕ್ಕಳ ಆಟಿಕೆ ತಯಾರಿಕೆಗೆ ಒತ್ತು ನೀಡಿದ್ದರಿಂದ ಜನರಿಂದ ವ್ಯಾಪಕ ಬೇಡಿಕೆ ವ್ಯಕ್ತವಾಯಿತು.

'ಸಕ್ರಿಯವಾಗಿ ಕೆಲಸ ಮಾಡುವ ಕುಟುಂಬದವರು ಮನೆಯಿಂದಲೇ ವಾರ್ಷಿಕ ₹6 ಲಕ್ಷದಿಂದ ₹7 ಲಕ್ಷ ಆದಾಯ ಗಳಿಸುತ್ತಿದ್ದಾರೆ. ಬುಕ್ಕಿಂಗ್ ಮಾಡಿದ ಬಳಿಕ ಗ್ರಾಹಕರಿಗೆ ಬೇಕಾದ ಅಳತೆಗೆ ತಕ್ಕಂತೆ ಕಲಾಕೃತಿಗಳನ್ನು ತಯಾರಿಸಲಾಗುತ್ತದೆ. ಹೀಗಾಗಿ ಎಲ್ಲ ಕಲಾವಿದರಿಗೂ ಕೈತುಂಬಾ ಕೆಲಸ ಹಾಗೂ ಹಣ ಲಭಿಸುತ್ತಿದೆ' ಎಂದು ಸಂತೋಷಕುಮಾರ್ ಖುಷಿಯಿಂದ ಹೇಳುತ್ತಾರೆ. ಕೆಲವು ತಿಂಗಳುಗಳ ಹಿಂದೆ ಕೇಂದ್ರ ಸರ್ಕಾರ ಈ ಕಲಾಕೃತಿಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಯನ್ನು ಶೇ 12ರಿಂದ ಶೇ 5ಕ್ಕೆ ಇಳಿಸಿದ ಬಳಿಕ ಕಲಾವಿದರು ಹಾಗೂ ಗ್ರಾಹಕರಿಗೂ ಲಾಭವಾಗುತ್ತಿದೆ. ಸಣ್ಣ ಊರಿನಲ್ಲಿ ಕಿನ್ನಾಳದ ಕಲಾವಿದರ ವಾರ್ಷಿಕ ಗಳಿಕೆಯೇ ₹1 ಕೋಟಿಯಿಂದ ₹1.5 ಕೋಟಿಯಷ್ಟಿದೆ.

ಜೊತೆಯಾದ ಸ್ನೇಹಿತರು

ಸಂತೋಷಕುಮಾರ್ ಅವರ ಕಾರ್ಯಕ್ಕೆ ಊರಿನಲ್ಲಿ ಜೊತೆಯಾಗಿದ್ದು, 24 ವರ್ಷದ ಭರತ್ ಚಿತ್ರಗಾರ. ಭರತ್ ಅವರ ತಂದೆ ಹತ್ತು ವರ್ಷಗಳ ಹಿಂದೆ ಮೃತಪಟ್ಟಿದ್ದರು. ಓದಬೇಕಾದ ವಯಸ್ಸಿನಲ್ಲಿ ಕುಟುಂಬದ ಜವಾಬ್ದಾರಿ ಹೊತ್ತುಕೊಳ್ಳಬೇಕಾದ ಅನಿವಾರ್ಯತೆಯಿಂದಾಗಿ ಭರತ್ ಓದುತ್ತಲೇ, ಕುಟುಂಬದ ಸಾಂಪ್ರದಾಯಿಕ ಕಿನ್ನಾಳ ಕಲೆಯಲ್ಲಿ ಕಲಾಕೃತಿ ತಯಾರಿಸುವುದನ್ನು ಕಲಿತುಕೊಂಡರು. ಡಿಪ್ಲೊಮಾ ಪೂರ್ಣಗೊಳಿಸಿ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ 31 ವರ್ಷದ ಶ್ರೀನಿವಾಸ್ ಚಿತ್ರಗಾರ ಕೂಡ ತಮ್ಮ ತಂದೆಗೆ ಅನಾರೋಗ್ಯ ಕಾಡಿದ್ದರಿಂದ ಅವರ ಆರೈಕೆಗಾಗಿ ಮರಳಿ ಗೂಡು ಸೇರಿದರು. ಊರಿನ ಯುವಕರ ಜೊತೆಗೂಡಿ ಕಲಾಕೃತಿಗಳ ತಯಾರಿ ರೂಢಿಸಿಕೊಂಡರು. ಹೀಗೆ ಅನಿರೀಕ್ಷಿತವಾಗಿ ಹಾಗೂ ಅನಿವಾರ್ಯವಾಗಿ ಹುಟ್ಟೂರಿಗೆ ವಾಪಸ್ ಬಂದವರು ಬೆಳೆಸಿದ 'ಕಿನ್ನಾಳ ಕಲಾಲೋಕ' ಎಲ್ಲರ ಗಮನ ಸೆಳೆಯುತ್ತಿದೆ.



ಇವು ಕೆಲವು ಉದಾಹರಣೆಗಳಷ್ಟೇ. 'ಕರಕುಶಲ ಕಲೆಗಳ ತವರೂರು' ಎನ್ನುವ ಫಲಕದಿಂದ ತಮ್ಮೂರಿಗೆ ಸ್ವಾಗತಿಸುವ, ಕೊಪ್ಪಳದಿಂದ 10 ಕಿ.ಮೀ ದೂರದಲ್ಲಿರುವ ಕಿನ್ನಾಳ ಎನ್ನುವ ಪುಟ್ಟಗ್ರಾಮ ಕಲೆಯ ಸೊಬಗು, ಆಕರ್ಷಣೆ ಮತ್ತು ಸೌಂದರ್ಯದಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ. ಈ ಗ್ರಾಮದಲ್ಲೊಂದು ಸುತ್ತು ಹಾಕಿ ಬಂದರೆ ಮನೆಯಲ್ಲಿದ್ದುಕೊಂಡೇ ವಾರ್ಷಿಕ ಲಕ್ಷಾಂತರ ರೂಪಾಯಿ ದುಡಿಯುವ ಯುವಕರ ಸಾಹಸದ ಕಥನ ಅನಾವರಣಗೊಳ್ಳುತ್ತದೆ.

ವಿಜಯನಗರ ಸಾಮ್ರಾಜ್ಯದ ಕಾಲದ ಕಿನ್ನಾಳದ ಕಲಾಕೃತಿಗಳು ಹಂಪಿಯ ಪಂಪಾ ವಿರೂಪಾಕ್ಷೇಶ್ವರ, ವಿಜಯವಿಠ್ಠಲ ದೇವಾಲಯ, ಕೊಪ್ಪಳ ಜಿಲ್ಲೆಯ ಕನಕಗಿರಿಯ ಕನಕಾಚಲಪತಿ ಹೀಗೆ ಬಹಳಷ್ಟು ದೇವಸ್ಥಾನಗಳಲ್ಲಿ ಈ ಕಲಾಕೃತಿಗಳಿವೆ. ವಿಜಯನಗರ ಅರಸರು ತಾವು ಕುಳಿತುಕೊಳ್ಳುವ ಸಿಂಹಾಸನಕ್ಕೆ ಕಿನ್ನಾಳ ಕಲಾಕೃತಿ ಬಳಸಿಕೊಂಡಿದ್ದರು ಎನ್ನುವ ಐತಿಹ್ಯವಿದೆ. ಆ ಕಾಲದ ಚಿತ್ರಗಾರ ಕುಟುಂಬದವರು ಹಂಪಿ ಹಾಗೂ ಸುತ್ತಮುತ್ತಲಿನ ಪ್ರದೇಶದಿಂದ ಸಮೀಪದ ಕಿನ್ನಾಳ ಗ್ರಾಮಕ್ಕೆ ಬಂದು ನೆಲೆ ನಿಂತು ಈ ಕಲೆಯನ್ನು ಪೋಷಿಸಿದ್ದಾರೆ.

ಕಣ್ಣು ತುಂಬಾ ಹೊಳಪು, ಅಂದದ ಅಲಂಕಾರ, ಮೈಮೇಲೆ ಆಭರಣ, ಆಡಂಬರವಿಲ್ಲದ ಬಣ್ಣ, ಕೊರಳ ತುಂಬಾ ಸರಗಳು, ನವಿರಾದ ಹುಬ್ಬು ಇವೆಲ್ಲವೂ ಕಲಾಕೃತಿಗಳ ಜೀವಂತಿಕೆ ಹೆಚ್ಚಿಸುತ್ತವೆ. ಒಂದು ಬಾರಿ ತಯಾರಿಸಿದರೆ ಕನಿಷ್ಠ ನೂರು ವರ್ಷ ಬಾಳಿಕೆ ಬರುತ್ತವೆ ಎನ್ನುವ ಕಾರಣಕ್ಕೆ ಕಿನ್ನಾಳ ಕಲೆ ಈಗಲೂ ಪ್ರಾಮುಖ್ಯತೆ ಉಳಿಸಿಕೊಂಡಿವೆ. ಯುವಕರು ಶ್ರಮಪಟ್ಟು ನೀಡಿದ ಆಧುನಿಕ ಸ್ಪರ್ಶದಿಂದಾಗಿ ಅವರ ಬದುಕು ಕಿನ್ನಾಳ ಗೊಂಬೆಗಳ ಮೊಗದ ಮೇಲಿನ ನಗೆಯಂತೆಯೇ ಬೆಳಗುತ್ತಿದೆ. ಕಲಾಕೃತಿಗಳು ದೇಶ–ವಿದೇಶಗಳಲ್ಲಿ ಕಂಗೊಳಿಸುತ್ತಿವೆ.

ಯುವಕರ ಕರಾಮತ್ತು

ಹೊಸ ತಲೆಮಾರಿನ ಯುವಕರು ಇ–ಕಾಮರ್ಸ್ ಮಾರುಕಟ್ಟೆಯ ಮೊರೆ ಹೋಗದೆ ಕಿನ್ನಾಳ ಕಲೆಯ ಬಗ್ಗೆ ಪ್ರತ್ಯೇಕವಾಗಿ ಸಾಮಾಜಿಕ ತಾಣದಲ್ಲಿ ಮಾಹಿತಿ ಹಂಚಿಕೊಂಡು ಸಂಪರ್ಕದ ಮಾಹಿತಿ ನೀಡಿದ್ದರಿಂದ ಕಡಿಮೆ ಸಮಯದಲ್ಲಿ ಬೇಡಿಕೆ ಹೆಚ್ಚಾಯಿತು. ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್ ಮೂಲಕ ಕಲಾಕೃತಿಗಳನ್ನು ಖರೀದಿಸಲು ಮುಂಗಡ ಬುಕ್ಕಿಂಗ್ ಬರುತ್ತಿವೆ. ಸಾಮಾಜಿಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದರಿಂದ ಜರ್ಮನಿ, ಇಂಗ್ಲೆಂಡ್, ಮಲೇಷ್ಯಾ, ಸಿಂಗಪುರ, ಯುಎಇ, ಸ್ವಿಟ್ಜರ್ಲೆಂಡ್... ಹೀಗೆ ಅನೇಕ ರಾಷ್ಟ್ರಗಳಿಗೆ ಕಿನ್ನಾಳ ಕಲಾಕೃತಿಗಳು ರಫ್ತಾಗಿವೆ.

ಮನೆಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಿದ್ದರಿಂದ ಕಲಾವಿದರಿಗೆ ಈಗ ನಿರಂತರ ಕೆಲಸ. ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂತೋಷಕುಮಾರ್ ತಯಾರಿಸಿದ 'ಸಿಂಫನಿ ಆಫ್ ಎಮೋಷನ್ಸ್' ಮತ್ತು 'ಟಾಯ್ಸ್' ಶೀರ್ಷಿಕೆಯ ಕಲಾಕೃತಿಗಳನ್ನು ಅಳವಡಿಸಲಾಗಿದೆ. ಗೂಗಲ್‌ನಲ್ಲಿ ಸಿಗುವ 'ಕಿನ್ನಾಳ ಕಲೆಕ್ಷನ್ಸ್' ಮೇಲೆ ಲಿಂಕ್ ಕ್ಲಿಕ್ ಮಾಡಿದರೆ ನೇರವಾಗಿ ಕಲಾವಿದರ ಸಂಪರ್ಕ ಹಾಗೂ ಮುಂಗಡ ಬುಕ್ಕಿಂಗ್ ಮಾಡುವ ಸೌಲಭ್ಯಗಳು ಸಿಗುತ್ತವೆ.

ಸಾಮಾಜಿಕ ತಾಣಗಳಲ್ಲಿ ಪ್ರಚಾರದ ಜೊತೆಗೆ ದೇಶದ ವಿವಿಧೆಡೆ ನಡೆದ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟದಲ್ಲಿ ಕಿನ್ನಾಳ ಕಲಾಕೃತಿಗಳನ್ನು ತೆಗೆದುಕೊಂಡು ಹೋಗಲಾಯಿತು. ಮೊದಲು ಚಿತ್ರಗಾರ ಸಮುದಾಯದವರು ಮಾತ್ರ ಕಿನ್ನಾಳ ಕಲೆಯನ್ನು ತಯಾರಿಸುತ್ತಿದ್ದರು. ಬೇಡಿಕೆ ಹೆಚ್ಚಾಗಿದ್ದರಿಂದ ಸಂತೋಷ್, ಕಲಿಯುವ ಆಸಕ್ತಿಯುಳ್ಳ ಅನೇಕ ಯುವಕರಿಗೆ ತರಬೇತಿ ನೀಡಿದ್ದಾರೆ. ಎಂಟು ವರ್ಷಗಳ ಹಿಂದೆ ಅವರು ಮಾಡಿದ ಪ್ರಯೋಗಗಳು ಈಗ ಗ್ರಾಮದ ಯುವಕರನ್ನು ಆಕರ್ಷಿಸಿದ್ದು ಕಲಾಕೃತಿ ತಯಾರಿಸುವ ಮಧ್ಯವಯಸ್ಕರಿಗೂ ಕೈತುಂಬಾ ಕೆಲಸವಿದೆ. ಕಲಾಕೃತಿಗಳ ತಯಾರಿಕೆಗೆ ಮುಂಗಡ ಬುಕ್ಕಿಂಗ್ ಬರುತ್ತಿವೆ.

ಅವರ ಕೆಲಸಕ್ಕೆ ಕಲಾವಿದರಾದ ಸಮರ್ಥ ಚಿತ್ರಗಾರ, ಪ್ರದೀಪ್ ಮಾನಪ್ಪ, ರಾಮುಶಂಕರರಾವ್ ಚಿತ್ರಗಾರ, ಮಂಜುನಾಥ ಚಿತ್ರಗಾರ, ವೆಂಕಟೇಶ್ ಚಿತ್ರಗಾರ, ರಮೇಶ ಚಿತ್ರಗಾರ, ಪದ್ಮಾವತಿ ಚಿತ್ರಗಾರ, ನಾಗರಾಜ ಚಿತ್ರಗಾರ, ಲಕ್ಷ್ಮೀಕಾಂತ್ ದೇವಿ, ರಮೇಶ ಗಾರವಾರ ಹೀಗೆ ಅನೇಕರು ಕೈ ಜೋಡಿಸಿದ್ದಾರೆ. ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಗ್ರಾಹಕರೇ ಖರೀದಿಸಲು ಅವಕಾಶವಿದೆ. ಈಗ ದೇಶಿಯವಾಗಿಯೇ ಸಾಕಷ್ಟು ಬೇಡಿಕೆ ವ್ಯಕ್ತವಾಗುತ್ತಿದ್ದು, ವಿದೇಶದಿಂದ ಬರುವ ಬೇಡಿಕೆಗೆ ತಕ್ಕಷ್ಟು ಪೂರೈಸಲು ಅವರಿಗೆ ಸಮಯ ಸಿಗುತ್ತಿಲ್ಲ. ಹೊಸ ಪೀಳಿಗೆಯ ಕಲಾವಿದರಿಗೆ ತಮ್ಮ ಕುಟುಂಬದ ಹಿರಿಯರಿಂದ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳಡಿ ತರಬೇತಿ ದೊರಕಿದೆ.

'ಗೃಹಾಲಂಕಾರ ವಸ್ತುಗಳಿಗೆ ವ್ಯಾಪಕ ಬೇಡಿಕೆಯಿದ್ದರೂ ಈ ವರ್ಷ ದೇವರ ಮೂರ್ತಿ ಹಾಗೂ ಪಲ್ಲಕ್ಕಿಗಳನ್ನು ಮಾತ್ರ ತಯಾರಿಸುತ್ತಿದ್ದೇವೆ. ರಾಜ್ಯದ ಬಹಳಷ್ಟು ಊರುಗಳಲ್ಲಿ ಐದು ವರ್ಷಗಳಿಗೊಮ್ಮೆ ದೇವಿ ಜಾತ್ರೆ ನಡೆಯುತ್ತಿದ್ದು ಕೈತುಂಬಾ ಕೆಲಸವಿದೆ. ವರ್ಷಕ್ಕೂ ಮೊದಲೇ ಇವುಗಳ ಆರ್ಡರ್ ಬಂದಿರುತ್ತದೆ. ಮೊದಲು ಈ ಕೆಲಸ ಮುಗಿಸಿಯೇ ಗೃಹಾಲಂಕಾರ ವಸ್ತುಗಳನ್ನು ತಯಾರಿಸಲಾಗುವುದು. ಇನ್ನಷ್ಟು ಯುವಕರಿಗೆ ಸರ್ಕಾರ ತರಬೇತಿ ಕೊಟ್ಟರೆ ಗ್ರಾಹಕರ ಬೇಡಿಕೆಗೆ ತಕ್ಕಷ್ಟು ಕಲಾಕೃತಿ ಪೂರೈಸಲು ಸಾಧ್ಯವಾಗುತ್ತದೆ' ಎಂದು 46 ವರ್ಷದ ಮಂಜುನಾಥ್ ಚಿತ್ರಗಾರ ಹೇಳುತ್ತಾರೆ.

ಅಳಿವಿನಿಂದ ಉಳಿವಿನೆಡೆಗೆ

ಕಿನ್ನಾಳ ಗ್ರಾಮದಲ್ಲಿ ಎರಡ್ಮೂರು ದಶಕಗಳ ಹಿಂದೆ ಕಲಾಕೃತಿಗಳನ್ನು ತಯಾರಿಸುವ ನೂರಾರು ಕುಟುಂಬಗಳಿದ್ದವು. ಕಾಲದ ಹೊಡೆತಕ್ಕೆ ಸಿಲುಕಿ ಈ ಕಲೆ ಅವಸಾನದತ್ತ ಸಾಗಿದ್ದರಿಂದ ಪ್ರಸ್ತುತ ಗ್ರಾಮದಲ್ಲಿರುವ 67 ಚಿತ್ರಗಾರ ಕುಟುಂಬಗಳಲ್ಲಿ 35 ಕುಟುಂಬಗಳಷ್ಟೇ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಹತ್ತು ಕುಟುಂಬಗಳ ಸದಸ್ಯರು ದೇವರ ವಿಗ್ರಹ, ಚೌಕಿ, ಗೊಂಬೆ, ವಾಲ್‌ಪ್ಲೇಟ್‌ಗಳು ಹೀಗೆ ನಿರ್ದಿಷ್ಟ ಕಲಾಕೃತಿಗಳನ್ನು ತಯಾರಿಸುತ್ತಾರೆ.

ಉಳಿದ 25 ಕುಟುಂಬಗಳು ಮಾತ್ರ ಕಿನ್ನಾಳಕಲೆಯ ವೈಶಿಷ್ಟಗಳಾದ ದುರ್ಗಾದೇವಿ, ಕೀಲುಗೌರಿ, ಕೀಲುಗೊಂಬೆ, ಅಲಂಕಾರಿಕ ಸಾಮಗ್ರಿಗಳು, ಆಕಳು, ಆನೆ, ಲಕ್ಷ್ಮಿ, ಸರಸ್ವತಿ, ಗಣೇಶ, ಮತ್ಸ್ಯ, ದ್ವಾರಪಾಲಕರು, ಆಂಜನೇಯ, ಪಲ್ಲಕ್ಕಿ, ಜಾತ್ರೆಯ ಸಾಮಗ್ರಿ, ಟೀಪಾಯಿ, ಗರುಡ, ಆಂಜನೇಯ, ರತಿ–ಮನ್ಮಥ, ಕೂರ್ಮಾವತಾರ, ವರಾಹ, ನರಸಿಂಹ, ವಾಮನ, ಕೊಂತಿ ಪಟ್ಟಿ ಹೀಗೆ ಅನೇಕ ಕಲಾಕೃತಿಗಳನ್ನು ತಯಾರಿಸುತ್ತಿದ್ದಾರೆ. ಈಗ ಕೆಲಸ ಮಾಡುತ್ತಿರುವವರಲ್ಲಿ ಬಹುತೇಕರು ಯುವಕರು ಮತ್ತು ಮಧ್ಯವಯಸ್ಕರು. ಜನರ ಅಭಿರುಚಿ, ಆಸಕ್ತಿ ಹಾಗೂ ಮಾರುಕಟ್ಟೆಗೆ ತಕ್ಕಂತೆ ಕಲಾಕೃತಿಗಳನ್ನು ತಯಾರಿಸುತ್ತಿರುವುದರಿಂದ ಬೇಡಿಕೆ ವ್ಯಾಪಕವಾಗಿದೆ.

ಕಲೆ ಉಳಿಸಿದ ಹಿರಿಯರು

ಹೊಸತಲೆಮಾರಿನ ಯುವಕರು ಕಿನ್ನಾಳ ಕಲೆಗೆ ಆಧುನಿಕ ಸ್ಪರ್ಶ ನೀಡಿ ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಸಿದ್ದು ಸಾಧನೆಯೇ. ಆದರೆ, ಈ ಕಲೆಯ ಉಳಿವಿಗೆ ವಿಜಯನಗರ ಕಾಲದಿಂದ ಈಗಿನ ತನಕ ಗ್ರಾಮದ ಹಿರಿಯರು ಕೂಡ ಸಾಕಷ್ಟು ಶ್ರಮಿಸಿದ್ದಾರೆ.

ಕಲಾಕೃತಿಗಳನ್ನು ತಯಾರಿಸುವ ಪರಿಣತಿ ಹೊಂದಿರುವ ಚಿತ್ರಗಾರ ಸಮುದಾಯದ ಹಿರಿಯರಾದ ಸೀತಮ್ಮ, ಭಾಗ್ಯಮ್ಮ ಮತ್ತು ಲಕ್ಷ್ಮಮ್ಮ ಅವರಂತಹ ಅನೇಕರು ಸಂಕಷ್ಟದ ಸಮಯದಲ್ಲಿ ಕಲೆಗೆ ಜೀವ ತುಂಬಿದ್ದಾರೆ. ಮದುವೆಯಾಗಿ ಕಿನ್ನಾಳ ಗ್ರಾಮಕ್ಕೆ ಬಂದ ಸೀತಮ್ಮ ತಾವೂ ಕಲಾಕೃತಿ ರಚನೆ ಕಲಿತು, ತಮ್ಮ ಮಗ ಹಾಗೂ ಸೊಸೆಗೂ ಕಲಿಸಿದ್ದಾರೆ. ಕಿನ್ನಾಳ ಕಲೆಯಲ್ಲಿ ತಯಾರಿಸಿದ ದೇವಿಯರ ಮೂರ್ತಿಗಳ ಕೆತ್ತನೆ ಮಾಡಿ ಏಳು ದಶಕಗಳ ಹಿಂದೆ ಊರೂರು ಅಲೆದಾಡಿದ ಸಣ್ಣರಂಗಪ್ಪ ಚಿತ್ರಗಾರ ಯುವ ಸಮುದಾಯಕ್ಕೆ ಮಾದರಿಯಂತಿದ್ದಾರೆ. ಹಲವು ದಶಕಗಳ ಹಿಂದೆ ಕೆಲ ಊರುಗಳಿಗೆ ಸೀಮಿತವಾಗಿದ್ದ ಕಿನ್ನಾಳ ಕಲೆ ಹೊಸತಲೆಮಾರಿನ ಯುವಕರ ಶ್ರಮದಿಂದಾಗಿ ವಿದೇಶಗಳಲ್ಲಿ ವಿಜೃಂಭಿಸುತ್ತಿವೆ.

ದೇಶ, ವಿದೇಶಗಳಿಗೆ ಹೋದಾಗ ಕಿನ್ನಾಳ ಕಲೆ ಹೆಸರು ಹೇಳಿದರೆ ಕೊಪ್ಪಳ ಜಿಲ್ಲೆಯನ್ನು ಹಾಗೂ ಕರ್ನಾಟಕವನ್ನು ಗುರುತಿಸುವಷ್ಟು ಭೌಗೋಳಿಕ ಸೂಚನೆ (ಜಿಐ) ಟ್ಯಾಗ್ ಹೊಂದಿರುವ ಕಲಾಕೃತಿಗಳು ಖ್ಯಾತಿ ಪಡೆದಿವೆ. ಈ ಕಲೆಗಳನ್ನು ತಯಾರಿಸುವ ಕಲಾವಿದರು ದೇಶ ಹಾಗೂ ವಿದೇಶಗಳನ್ನು ಸುತ್ತಾಡದಿದ್ದರೂ ತಾವು ತಯಾರಿಸಿದ ಕಲಾಕೃತಿಗಳು ಮಾತ್ರ ಎಲ್ಲೆಡೆಯೂ ಕಂಗೊಳಿಸುತ್ತಿರುವುದು ಅವರಲ್ಲಿಯೂ ಹೆಮ್ಮೆಯ ಭಾವ ಮೂಡಿಸಿವೆ.

ಪ್ರಸ್ತುತ ಮುಂಗಡ ಬುಕ್ಕಿಂಗ್ ಮಾಡಿ ಕೆಲವು ದಿನ ಕಾದರಷ್ಟೇ ಕಲಾಕೃತಿಗಳು ಸಿಗುತ್ತಿದ್ದು, ದೂರದ ಊರುಗಳಿಂದ ಬಂದು ಖರೀದಿಸುವ ಆಸಕ್ತರಿಗೆ ನಿರಾಸೆಯಾಗುತ್ತಿದೆ. ಆದ್ದರಿಂದ ಸರ್ಕಾರ ಜಿಲ್ಲಾ ಕೇಂದ್ರ ಕೊಪ್ಪಳ ಅಥವಾ ಕಿನ್ನಾಳದಲ್ಲಿ ಆಫ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು ಎನ್ನುವುದು ಕಲಾವಿದರ ಆಗ್ರಹವಾಗಿದೆ.

ಕಿನ್ನಾಳದಲ್ಲಿ ಮೊದಲು ಸರ್ಕಾರದಿಂದ ಇದ್ದ ಕಲಾಕೃತಿಗಳ ತರಬೇತಿ ಹಾಗೂ ಕರಕುಶಲ ತರಬೇತಿ ಕೇಂದ್ರ ಒಂದೂವರೆ ದಶಕದ ಹಿಂದೆಯೇ ಮುಚ್ಚಿಹೋಗಿವೆ. ಕಾವೇರಿ ಹ್ಯಾಂಡಿಕ್ರಾಫ್ಟ್ ಎಂಪೋರಿಯಂ ಅಧೀನದಲ್ಲಿದ್ದ ತರಬೇತಿ ಕೇಂದ್ರದ ನಿರ್ವಹಣೆ ಹಾಗೂ ಸಿಬ್ಬಂದಿ ಸಮಸ್ಯೆ ಕಾಡಿದ್ದರಿಂದ ಮುಚ್ಚಲಾಗಿದೆ ಎಂದು ಕಲಾವಿದರು ಹೇಳುತ್ತಾರೆ.

ಎಂಪೋರಿಯಂ ವತಿಯಿಂದಲೇ ಕಿನ್ನಾಳದ ಕಲಾವಿದರಿಗೆ ಏಳು ಎಕರೆ ಜಾಗದಲ್ಲಿ ಮನೆಕಟ್ಟಿಕೊಳ್ಳಲು ನಿವೇಶನ ಹಾಗೂ ಕಲಾಕೃತಿ ತಯಾರಿಸಲು ಮನೆಮುಂದೆಯೇ ಜಾಗದ ಸೌಲಭ್ಯ ಕಲ್ಪಿಸಲಾಗಿದೆ. ಹತ್ತು ಗುಂಟೆಯಲ್ಲಿ ಕಲಾಕೃತಿಗಳ ಮಾರಾಟ ಸೇವಾ ಕೇಂದ್ರವಿತ್ತು. ಕೇಂದ್ರವನ್ನು ಮರಳಿ ಆರಂಭಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಕಾವೇರಿ ಎಂಪೋರಿಯಂನ ಹುಬ್ಬಳ್ಳಿಯ ಪ್ರಾಜೆಕ್ಟ್ ಅಧಿಕಾರಿ ರಮೇಶ್ ತಿಳಿಸಿದರು. ಈ ಕೆಲಸ ತ್ವರಿತವಾಗಿ ಆರಂಭವಾದರೆ ಮತ್ತಷ್ಟು ಕಲಾವಿದರಿಗೆ ಬದುಕು ಕಟ್ಟಿಕೊಳ್ಳಲು ಹಾಗೂ ಬೇಡಿಕೆಗೆ ತಕ್ಕಷ್ಟು ಕಲಾಕೃತಿಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ❖

ಕಿನ್ನಾಳ ಕಲಾಕೃತಿ ತಯಾರಿಕೆಯಲ್ಲಿ ಪ್ರದೀಪ್ ಆರೇರ

ಪ್ರಜಾವಾಣಿ ಚಿತ್ರಗಳು: ಭರತ್ ಕಂದಕೂರ

> ದೇವರ ವಿಗ್ರಹ ಹಾಗೂ ಅಲಂಕಾರಿಕ ವಸ್ತುಗಳು ಎರಡನ್ನೂ ತಯಾರಿಸುವುದರಿಂದ ಬೇಡಿಕೆ ಹೆಚ್ಚಾಗಿದೆ. ಕೆಲಸ ಮಾಡಲು ಸಮಯ ಸಾಕಾಗುತ್ತಿಲ್ಲ. ಮತ್ತಷ್ಟು ಹೊಸಬರು ಬರುವ ಅಗತ್ಯವಿದೆ.
> **ಶಂಕರಪ್ಪ ಚಿತ್ರಗಾರ,** ಕಲಾವಿದ

> ಗಮನವಿಟ್ಟು ಕೆಲಸ ಮಾಡಿದರೆ ನಮ್ಮೂರಿನಿಂದಲೇ ಕೆಲಸ ಮಾಡಿ ಉತ್ತಮ ಆದಾಯ ಗಳಿಸಬಹುದು. ಯುವಜನತೆಗೆ ಬದುಕು ಕಟ್ಟಿಕೊಳ್ಳಲು ಕಿನ್ನಾಳ ಕಲೆ ದೊಡ್ಡ ವೇದಿಕೆಯಾಗಿದೆ.
> **ನಾಗರಾಜ ಚಿತ್ರಗಾರ,** ಯುವಕಲಾವಿದ

> ಕಿನ್ನಾಳ ಕಲೆಗೆ ಉತ್ತಮ ಮಾರುಕಟ್ಟೆಯಿದ್ದು, ಜನರ ಬೇಡಿಕೆಗೆ ತಕ್ಕಂತೆ ಕಲಾಕೃತಿಗಳನ್ನು ತಯಾರಿಸಬೇಕಾಗಿದೆ. ಇನ್ನಷ್ಟು ಯುವಕರಿಗೆ ತರಬೇತಿ ಅಗತ್ಯವಿದೆ.
> **ರಮೇಶ ಜಿ.,** ಕಲಾವಿದ

'ತರಬೇತಿ ಅವಧಿ ಹೆಚ್ಚಲಿ'

ಕಿನ್ನಾಳ ಕಲಾವಿದರಿಗೆ ಸರ್ಕಾರ ವರ್ಷಕ್ಕೆ 25 ದಿನಗಳ ತರಬೇತಿ ಮಾತ್ರ ನೀಡುತ್ತಿದೆ. ಕಿರು ಅವಧಿಯ ಈ ತರಬೇತಿಯಿಂದ ಕಲಾವಿದರಿಗೆ ಏನನ್ನೂ ಕಲಿಯಲು ಸಾಧ್ಯವಾಗುತ್ತಿಲ್ಲ.

'ಕಿನ್ನಾಳ ಕಲಾಕೃತಿಗಳನ್ನು ತಯಾರಿಸಲು ಸಾಕಷ್ಟು ತಾಳ್ಮೆ ಹಾಗೂ ಶ್ರಮ ಬೇಕಾಗುತ್ತದೆ. ಎಷ್ಟು ನಿಧಾನವಾಗಿ ಮಾಡುತ್ತವೆಯೋ ಅಷ್ಟೇ ಒಳ್ಳೆಯ ಗುಣಮಟ್ಟದ ಕಲಾಕೃತಿಗಳು ತಯಾರಾಗುತ್ತವೆ. ಸರ್ಕಾರ ಕನಿಷ್ಠ ಆರು ತಿಂಗಳಾದರೂ ತರಬೇತಿ ಕೊಟ್ಟರೆ ಅನುಭವ ಹೆಚ್ಚಿಸಿಕೊಳ್ಳಲು ಸಾಧ್ಯ' ಎಂದು ಕಲಾವಿದ ಭರತ್ ಚಿತ್ರಗಾರ ಹೇಳುತ್ತಾರೆ.

ಕಿನ್ನಾಳ ಕಲೆಗಳನ್ನು ಅರಳಿಸುತ್ತಿರುವ ರಮೇಶ ಹಾಗೂ ಪದ್ಮಾವತಿ ಚಿತ್ರಗಾರ ದಂಪತಿ

ಕಾಡುತ್ತಿದೆ ಮರಗಳ ಕೊರತೆ

ಸೆಣಬು ನೆನೆಸಿ ತುಂಡುಗಳಾಗಿ ಕತ್ತರಿಸಿ ಒಣಗಿಸಿ ಪುಡಿ ಮಾಡಲಾಗುತ್ತದೆ. ಕಟ್ಟಿಗೆಯ ಪುಡಿ ಮತ್ತು ಹುಣಸೆ ಬೀಜದ ಪೇಸ್ಟಿನೊಂದಿಗೆ ಬೆರೆಸಿ ಕಿಟ್ಟಾ ತಯಾರಿಸಿ ಕಟ್ಟಿಗೆಯ ಪುಡಿಯನ್ನು ನೀರಿನಲ್ಲಿ ಮಿಶ್ರಣ ಮಾಡಿ ಹದಗೊಳಿಸಿ ಉಂಡೆಗಳಾಗಿ ಮಾಡಿ ಒಣಗಿಸುತ್ತಾರೆ. ಆಕೃತಿಗಳನ್ನು ಜೋಡಿಸಿದ ನಂತರ ಕಿಟ್ಟಾ ಹಚ್ಚಲಾಗುತ್ತದೆ.

ಕಲಾಕೃತಿಗಳ ಅಂದ ಹೆಚ್ಚಿಸಲು ಬಳಸುವ ಬಣ್ಣದಲ್ಲಿ ಹಾಕುವ ಚಮಟಗಿ ತಯಾರಿಸಲು ಸುಮಾರು ಒಂದು ತಾಸು ಕಲ್ಲಿನಿಂದ ಕುಟ್ಟಿದರೆ 100 ಗ್ರಾಂ ಮಾತ್ರ ಚಮಟಗಿ ತಯಾರಾಗುತ್ತದೆ. ಹೀಗೆ ತಯಾರಿಸುವ ಬಣ್ಣ ಕನಿಷ್ಠ 100 ವರ್ಷ ಬಾಳಿಕೆ ಬರುತ್ತದೆ. ಕಿನ್ನಾಳ ಕಲೆಗೆ ಕಸುಬುದಾರಿಕೆ ಪ್ರಮುಖವಾಗಿದ್ದರಿಂದ ಪೂರ್ವಸಿದ್ಧತೆಗೆ ಹೆಚ್ಚು ಸಮಯ ಬೇಕು. ನೂರಾರು ವರ್ಷ ಬಾಳಿಕೆ ಬರುವಂತೆ ಮಾಡಲು ಮೂಲವಾಗಿ ಪೊಳಕಿಮರ ಹಾಗೂ ಟಣಕಿನ ಮರದ ಹಗುರವಾದ ಕಟ್ಟಿಗೆಗಳು ಇರಬೇಕು. ಈಗ ಮರಗಳ ಕೊರತೆ ಕಾಡುತ್ತಿರುವುದು ಕಲಾವಿದರ ಚಿಂತೆಗೆ ಕಾರಣವಾಗಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 15-2-2001

- **ಭೀಮಾ ನೀರು ಇಂದು ರಾಜ್ಯಕ್ಕೆ: ಕೃಷ್ಣ**
  ಬೆಂಗಳೂರು, ಫೆ.14– ಉಜನಿ ಅಣೆಕಟ್ಟೆಯಿಂದ ಮಹಾರಾಷ್ಟ್ರ ಸರ್ಕಾರವು ಬಿಟ್ಟಿರುವ 1.5 ಟಿಎಂಸಿ ನೀರು ನಾಳೆ ಕರ್ನಾಟಕವನ್ನು ತಲುಪಲಿದೆ ಎಂದು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಇಲ್ಲಿ ತಿಳಿಸಿದರು. ತಮ್ಮ ಬೆಳಗಿನ ಸಾರ್ವಜನಿಕ ಭೇಟಿ ಕಾರ್ಯಕ್ರಮದ ನಂತರ ವರದಿಗಾರರ ಜತೆಗೆ ಮಾತನಾಡಿದ ಅವರು, ನದಿಯಲ್ಲಿ ನೀರು ನಿಧಾನವಾಗಿ ಬರುತ್ತಿದೆ ಎಂದರು. ಭೀಮಾ ನದಿ ನೀರಿಗೆ ಒತ್ತಾಯಿಸಿ ನಿರಶನ ನಡೆಸುತ್ತಿರುವ ರೈತರೊಂದಿಗೆ ವಿಜಾಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಆರ್.ಕಾಶಪ್ಪನವರ್ ಸಂಧಾನ ನಡೆಸುತ್ತಿದ್ದಾರೆ ಎಂದರು.

75 ವರ್ಷಗಳ ಹಿಂದೆ

ಗುರುವಾರ, 15-02-1951

- **ಹಿಂದೂ ಮಹಾಸಭೆಯ ಅಧಿವೇಶನ**
  ನವದೆಹಲಿ, ಫೆ–15– ಫೆಬ್ರವರಿ 18ರಂದು ಇಲ್ಲಿ ಸೇರಲಿರುವ ಅಖಿಲ ಭಾರತ ಹಿಂದೂ ಮಹಾಸಭೆಯ ಸಭೆಯಲ್ಲಿ ಮುಂದೆ ಬರುವ ಚುನಾವಣೆಗೆ ಮಹಾಸಭೆಯ ಘೋಷಣಾ ಪತ್ರದ ರಚನೆ ವಿಷಯ ಚರ್ಚಿಸಲಿಯೆಂದೂ, ಅಲ್ಲದೆ ಮಹಾಸಭೆಗೆ ಹಿಂದೂಗಳಲ್ಲದವರನ್ನು ಸೇರಿಸಿಕೊಳ್ಳುವ ಮುರಾದಾಬಾದಿನ ನಿರ್ಣಯದ ಬಗ್ಗೆ ಚರ್ಚೆ ನಡೆಯಿಸಲು ದಿನ ಮತ್ತು ಜಾಗವೂ ಸಹ ತೀರ್ಮಾನವಾಗಲಿದೆಯೆಂದೂ ಗೊತ್ತಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

15 ಫೆಬ್ರವರಿ 2026 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣತ್ರಯೋದಶಿ ಗಂ 17-05 ನಕ್ಷತ್ರ: ಉತ್ತರಾಷಾಢ ಗಂ. 19-48 ಯೋಗ: ವ್ಯತೀಪಾತ ಗಂ. 26-47 ಕರಣ: ವಣಿಜ ಗಂ 17-05 ಕುಂಭ ಮಾಸದ 03 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 3 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00 ಸೂರ್ಯೋದಯ : 06-57 ಸೂರ್ಯಾಸ್ತ : 06-32 ಮುಸ್ಲಿಂ ದಿನಾಂಕ : 26 ಶಬನ್ದಿನ ವಿಶೇಷ : ಮಹಾಶಿವರಾತ್ರಿ ಅದೃಷ್ಟ ಸಂಖ್ಯೆ : 2, 3

ಮೇಷ: ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಎಲ್ಲಾ ಕಾರ್ಯಗಳು ಸರಾಗವಾಗುವವು. ಸುತ್ತಲಿನ ಜನರೊಂದಿಗೆ ಬೆರೆಯುವುದರ ಪ್ರಯೋಜನ ಅನುಭವಕ್ಕೆ ಬರಲಿದೆ. ವಿಲಾಸೀ ಜೀವನ ಶೈಲಿಯ ಆಸೆ ಈಡೇರುವುದು.

ವೃಷಭ: ಚಿನ್ನ ಬೆಳ್ಳಿ ವ್ಯಾಪಾರಿಗಳಿಗಿಂದು ಹೆಚ್ಚು ವ್ಯಾಪಾರದ ಜೊತೆಗೆ ಅಂಗಡಿಯಲ್ಲಿ ಬೆಲೆ ಬಾಳುವ ವಸ್ತುಗಳು ಕಾಣೆಯಾಗಬಹುದು. ಮುಂಬರುವ ಶುಭ ಕಾರ್ಯಕ್ಕೆ ಹೆಚ್ಚಿನ ತಯಾರಿಯನ್ನು ನಡೆಸಿಕೊಳ್ಳಬೇಕಾಗಬಹುದು.

ಮಿಥುನ: ಆದಾಯಕ್ಕೇನೂ ಕೊರತೆಯಿರದು. ಆದರೂ ಖರ್ಚು- ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ವೈದ್ಯರ ತಪಾಸಣೆಯಿಂದ ಬಂದ ಫಲಿತಾಂಶ ನಿಮಗೆ ಹಾಗು ನಿಮ್ಮ ಕುಟುಂಬದವರಿಗೆ ಆತಂಕವನ್ನು ಸೃಷ್ಟಿ ಮಾಡಲಿದೆ.

ಕರ್ಕಾಟಕ: ಉಳಿದವರಿಗಿಂತ ಎಲ್ಲ ಕೆಲಸವನ್ನು ಏಕಾಗ್ರತೆಯಿಂದ ಸಾಧಿಸಲು ಯತ್ನಿಸುವಿರಿ. ಅದರ ಫಲವಾಗಿ ಯಶಸ್ಸು ಸಿಗುವುದು. ಮನೆ ಕಟ್ಟಲು ಅಥವಾ ಮನೆಯನ್ನು ನವೀಕರಿಸಲು ಹಣದ ವ್ಯವಸ್ಥೆ ಸಹೋದರರಿಂದ ಆಗಲಿದೆ.

ಸಿಂಹ: ಗಿಡ ಮೂಲಿಕೆಯಂತಹ ಔಷಧದ ಬಳಕೆಯಿಂದ ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣುವುದು. ಸಂಪೂರ್ಣವಾಗಿ ನಿಮದೇ ಜವಬ್ದಾರಿಯಲ್ಲಿ ಇರುವ ತಮ್ಮಂದಿರ ಓದಿನಲ್ಲಿ ಉತ್ತಮ ಪ್ರಗತಿಕಾಣುವಿರಿ.

ಕನ್ಯಾ: ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ನಿಮ್ಮ ಹಟದಿಂದಾಗಿ ಕೆಲ ಸವಾಲುಗಳನ್ನು ಎದುರಿಸುವ ಪರಿಸ್ಥಿತಿ ಎದುರಾಗಬಹುದು. ಮನೆಯಲ್ಲಿ ಸಮಾರಂಭ ನಡೆಸಲು ದಿನ ಗೊತ್ತು ಮಾಡುವಿರಿ.

ತುಲಾ: ಇಂದಿನ ದಿನಚರಿಯ ಹೊರತು ಪಡಿಸಿದ ಕೆಲಸಕ್ಕೆ ನಿಮ್ಮ ಸುಪ್ತ ಮನಸ್ಸು ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸುತ್ತಿದೆ. ಈ ದಿನ ವೈದ್ಯರನ್ನು ಭೇಟಿ ಮಾಡಬೇಕಾದ ಸ್ಥಿತಿಯು ಎದುರಾಗಬಹುದು.

ವೃಶ್ಚಿಕ: ಸಂಗೀತ, ಸಾಹಿತ್ಯ, ಚಿತ್ರರಂಗದ ಕಲಾವಿದರಿಗೆ ಕೈತುಂಬಾ ಕೆಲಸ ಇದ್ದರೂ ಆರ್ಥಿಕವಾಗಿ ಶ್ರಮಕ್ಕೆ ತಕ್ಕಂತಹ ಫಲ ಸಿಗಲಾರದು. ಚಿತ್ರರಂಗದವರಿಗೆ ಖ್ಯಾತಿ, ಹೊಸ ಹೊಸ ಗೌರವಾನ್ವಿತ ಅವಕಾಶ ದೊರೆಯುವುದು.

ಧನು: ಚಾಲಕ ವೃತ್ತಿಯವರು ನಿಯಮ ಬದ್ಧವಾಗಿ ವಾಹನ ಚಾಲನೆ ಮಾಡುವುದು ಒಳ್ಳೆಯದು. ನಡೆದ ಒಂದು ಘಟನೆಯಿಂದಾಗಿ ಯಾವುದಕ್ಕೆ ಹಾಗು ಯಾರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯಲಿದೆ.

ಮಕರ: ಬದಲಾಗುವ ಬದುಕಿನ ಗತಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ. ಹಾಲು ಅಥವಾ ಹಾಲಿನ ಪದಾರ್ಥ ಮಾರಾಟಗಾರರಿಗೆ ಲಾಭ. ಆಲೋಚನೆಗಳನ್ನು ಕಾರ್ಯ ರೂಪಕ್ಕೆ ಇಳಿಸಲು ಸೂಕ್ತ ಸಮಯವಲ್ಲ.

ಕುಂಭ: ಸಿದ್ಧ ಉಡುಪು ಮಾರಾಟಗಾರರಿಗೆ ದೊಡ್ಡ ಪ್ರಮಾಣದಲ್ಲಿ ಸಂಗ್ರಹಣೆ ಮಾಡಲು ಈ ದಿನ ಉತ್ತಮ. ನಿಮ್ಮ ಪ್ರಾಮಾಣಿಕತೆಗೆ ತಕ್ಕ ಪ್ರತಿಫಲ ಸಿಗುವ ಸಮಯ ಬರುವುದು. ವೈದ್ಯ ವೃತ್ತಿಯವರಿಗೆ ತೃಪ್ತಿಕರ ವರಮಾನ ಪ್ರಾಪ್ತಿ.

ಮೀನ: ಸ್ನೇಹಿತರ ಅನಿವಾರ್ಯ ಸ್ಥಿತಿಗಳಿಂದ ನೀವು ಅವರ ಜಮೀನಿನ ಕೆಲಸ ಗಳನ್ನು ನೋಡಿಕೊಳ್ಳಬೇಕಾಗುವುದು. ದಿನಸಿ ವ್ಯಾಪಾರ ವಹಿವಾಟುಗಳು ಹೆಚ್ಚಿನ ಲಾಭ ತರಲಿದೆ. ವಾಹನಗಳ ಚಾಲಕರಿಗೆ ಬಿಡುವಿಲ್ಲದ ಕೆಲಸ ಇರುತ್ತದೆ.

ಪದಬಂಧ 6316

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬರದಲ್ಲಿ ಹೊರದೂಡುವಿಕೆ (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡಿ ತೋರಿದ ಸಲಿಗೆ (3)
6.ಪರವಾಗಿ ಸರಿಸಿದ ಜವನಿಕೆ (3)
8.ಗುರುವಿನ ನಖ (3)
10.ಮರಳುವಾಗ ಕಾಣಿಸಿದ ಉಸುಕು (3)
11.ಗಣಿಯಲ್ಲಿ ಹುಟ್ಟುದುದು (3)
13.ಶಿವನ ಇನ್ನೊಂದು ಹೆಸರು (3)
15.ಹೊಗಳಿಕೆಯ ವಿರುದ್ಧ ಪದ (4)
16.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ

1.ಸ್ಲೇಟಿನ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
7.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
10.ಮಾತೆ ತೋರಿಸಿದ ಪ್ರೀತಿ (3)
12.ಜನರು ಗಲಿಬಿಲಿಯಿಂದ ಏರಿದ ವೇದಿಕೆ (3)
13.ಅಂಕೆಗೆ ಸಿಕ್ಕದಿರುವಾಗ ಬಂದಿರುವ ಅನುಮಾನ (2)
14.ಕಾಮನ ಪತ್ನಿ (2)



6315ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾದ್ವಾ, 3. ಮಗಳು, 5.ನವದಂಪತಿ, 7.ನಮೂನೆ, 9.ಕಾಮನೆ, 11.ಕಲಹ, 13.ಮರಣಕಾಲ, 15.ಸರಿಗೆ, 16.ಮಿಲಾಕತ್ತು.

ಮೇಲಿಂದ ಕೆಳಕ್ಕೆ:
1.ಮತದಾನ, 2.ರಸನ, 4.ಗರತಿ, 6.ದಂಡನೆ, 8.ಮೂಸೆ, 9.ಕಾರಣ, 10ಜಾಲ, 12.ಹಕೀಕತ್ತು, 13.ಮಜೂರಿ, 14.ಲಕುಮಿ

ಸುಡೊಕು 6700

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2		9	6		1
		1		8		2	7	
	7		1		4			8
		4				1		2
2	8		6	9	1			
		7					6	5
	5			1				7
	1	6	8		2	5		
4	2			5				6

6699 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಬಿಎಂಟಿಸಿ ಬಸ್‌ನಲ್ಲಿ ನಡೆದ ಕವಿಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕದ ವತಿಯಿಂದ ಚಲಿಸುತ್ತಿರುವ ಬಿಎಂಟಿಸಿ ಬಸ್‌ನಲ್ಲಿಯೇ ಕವಿಗೋಷ್ಠಿಯನ್ನು ಶನಿವಾರ ನಡೆಸಲಾಯಿತು.

ಈ ಕಾರ್ಯಕ್ರಮ ಉದ್ಘಾಟಿಸಿದ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ‘ಕಸಾಪ ಇತಿಹಾಸದಲ್ಲೇ ಮೊದಲ ಬಾರಿಗೆ ಬಿಎಂಟಿಸಿ ಬಸ್‌ನಲ್ಲಿ ಸಾಹಿತ್ಯದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಲ್ಲಿ ಸಾಹಿತ್ಯದ ಅಭಿರುಚಿ ಹೆಚ್ಚಿಸಲು ಇಂತಹ ಕಾರ್ಯಕ್ರಮಗಳು ನಡೆಯಬೇಕು’ ಎಂದು ಹೇಳಿದರು.

ಚಿಕ್ಕಬಾಣಾವರದ ಸಂತೇಬೀದಿಯ ಬಸ್ ನಿಲ್ದಾಣದಲ್ಲಿ ಕವಿಗೋಷ್ಠಿ ನಡೆಯುವ ಬಸ್‌ಗೆ ಚಾಲನೆ ನೀಡಲಾಯಿತು. ಕಸಾಪ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಲಿಂಗರಾಜು ಎ. ಕಾಳೇನಹಳ್ಳಿ ಮೇಷ್ಟ್ರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಎಂಟನೇ ಮೈಲಿ, ಜಾಲಹಳ್ಳಿ ಕ್ರಾಸ್, ಯಶವಂತಪುರ, ಮಲ್ಲೇಶ್ವರ, ನವರಂಗ, ನಂದಿನಿ ಬಡಾವಣೆ, ಹೆಗ್ಗನಹಳ್ಳಿ ಕ್ರಾಸ್, ರಾಜಗೋಪಾಲನಗರದಲ್ಲಿ ಸಂಚರಿಸಿದ ಬಸ್, ಚಿಕ್ಕಬಾಣಾವರಕ್ಕೆ ಮರಳಿತು. ವಿ. ಟಿ.ರಾಮಕೃಷ್ಣಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ 25ಕ್ಕೂ ಹೆಚ್ಚು ಕವಿಗಳು ಕವನ ವಾಚಿಸಿದರು. ಪ್ರಯಾಣಿಕರು ಕವಿತೆಗಳನ್ನು ಆಲಿಸಿದರು.

ಕಾರ್ಯಕ್ರಮಕ್ಕೆ ಎಂ. ಪ್ರಕಾಶಮೂರ್ತಿ ಚಾಲನೆ ನೀಡಿದರು. ಲಿಂಗರಾಜು ಎ. ಕಾಳೇನಹಳ್ಳಿ ಮೇಷ್ಟ್ರು ಪಾಲ್ಗೊಂಡಿದ್ದರು

ಕ್ಯಾನ್ಸರ್: ಚೇತರಿಸಿಕೊಂಡವರಿಂದ ಭರವಸೆ-ಅನುಭವ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ಮಣಿಪಾಲ್ ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಜಯಿಸಿದವರು ಚಿಕಿತ್ಸೆ ಅವಧಿಯ ಅನುಭವ ಹಂಚಿಕೊಂಡರು.

ರೋಗದ ವಿರುದ್ಧ ಹೋರಾಟ ವಿವರಿಸಿದ 84 ವರ್ಷದ ಸೂರ್ಯಕಾಂತಂ, 28 ವರ್ಷದ ರಚಿತಾ, 34 ವರ್ಷದ ಶೈಲೇಶ್ ಪಾಂಡೆ, 30 ವರ್ಷದ ಶರಣ್ಯ ಹಾಗೂ 48 ವರ್ಷದ ಶ್ರೀಲಕ್ಷ್ಮಿ, ‘ಶೀಘ್ರ ಚೇತರಿಕೆಗೆ ವೈದ್ಯರು ನಿಗದಿಪಡಿಸಿದ ಚಿಕಿತ್ಸಾ ಕ್ರಮ, ಔಷಧಗಳ ಸೇವನೆ ಅಗತ್ಯ. ರೋಗದ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಗಾಗಬಾರದು. ಕ್ಯಾನ್ಸರ್ ಕಾಯಿಲೆಯನ್ನು ಎದುರಿಸಲು ಔಷಧ ಹಾಗೂ ಚಿಕಿತ್ಸೆಯ ಜತೆಗೆ ಮಾನಸಿಕ ಶಕ್ತಿ ಅಗತ್ಯ’ ಎಂದು ಅವರು ಹೇಳಿದರು.

ಕ್ಯಾನ್ಸರ್ ಚಿಕಿತ್ಸೆಯಲ್ಲಿನ ಪ್ರಗತಿ ಬಗ್ಗೆ ವಿವರಿಸಿದ ಆಸ್ಪತ್ರೆಯ ವೈದ್ಯಕೀಯ ತಜ್ಞರು, ‘ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಈ ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಗುಣಪಡಿಸಲು ಸಾಧ್ಯ. ಮೂರು ಮತ್ತು ನಾಲ್ಕನೇ ಹಂತದಲ್ಲಿ ಆಸ್ಪತ್ರೆಗಳಿಗೆ ಬಂದಲ್ಲಿ ರೋಗವನ್ನು ಗುಣಪಡಿಸುವುದು ಕಷ್ಟ. ಕ್ಯಾನ್ಸರ್ ತಡೆಗೆ ಜನರಲ್ಲಿ ರೋಗದ ಬಗ್ಗೆ ಅರಿವು ಮೂಡಿಸಬೇಕು. ರೋಗವನ್ನು ಶೀಘ್ರವಾಗಿ ಪತ್ತೆ ಮಾಡಿ, ಸಕಾಲದಲ್ಲಿ ಚಿಕಿತ್ಸೆ ಒದಗಿಸಬೇಕು’ ಎಂದು ಅಭಿಪ್ರಾಯಪಟ್ಟರು.

ಕೋಳಿ ಮಾಂಸ ಹೆಚ್ಚು ತಿಂದಿದ್ದಕ್ಕೆ ಜಗಳ: ಕೊಲೆ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ಹಳೆಕೆರೆ ಗಿರಿಜನರ ಹಾಡಿಯಲ್ಲಿ ಊಟ ಮಾಡುವಾಗ ಕೋಳಿ ಮಾಂಸವನ್ನು ಹೆಚ್ಚು ತಿಂದ ಎನ್ನುವ ವಿಚಾರಕ್ಕೆ ಇಬ್ಬರು ಬಾಲಕರ ನಡುವೆ ಜಗಳ ನಡೆದಿದೆ. ಈ ವೇಳೆ ಒಬ್ಬ ಮಚ್ಚಿನಿಂದ ಇನ್ನೊಬ್ಬನ ತಲೆಗೆ ಹೊಡೆದು ಹತ್ಯೆ ಮಾಡಿದ್ದಾನೆ.

ಹಳೆಕೆರೆ ಹಾಡಿಯ ನಿವಾಸಿ ದಿಲೀಪ ಮೃತ ಬಾಲಕ ಎಂದು ಗುರುತಿಸಲಾಗಿದೆ. ಈತ ಸುರೇಶ್ ಮತ್ತು ಸಂಗೀತಾ ಎಂಬುವವರ ಮಗ. ಈ ದಂಪತಿ ಕೊಡಗು ಹಾಗೂ ಸಕಲೇಶಪುರದ ತೋಟಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ. ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.





ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Basavanagudi

SALE FLAT (Resale) Furnished 4BHK Duplex 2nd Floor, 2 CarParks 900 SqFt, Terrace Rights Close To Gandhinagar: 9886019240/ 080-26623994

Bangalore North

Near Manyatha Tech Park
2 BHK For Sale
Near Manyatha Tech Park
Site No. 12-13, Defense Enclve Phase - II
(Near Kensri School)
H A Farm Post, Mariyannapalya, BENGALURU
98443 45334

Kanakapura Road

3BHK FLATS 2250sqft Sale Fully Teakwood & Fully Italian Marble Independent Floor Rs. 1.55Cr Near DoddKallasandr Metro Station Narayanngr: 9611144096

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

R T Nagar

2BHK SEMI-FURNISHED Flat Near White House Very Good Location, First Floor with Lift and Car parking For SALE. Price 60 Lakhs, Contact: 9845575731

House

Magadi Road

ANDHRAHALLI MAIN road Newly built house - 4bhk duplex+1bhk rent. Price-1.90cr, North facing, park view, BDA khata(loan title). Kaveri+borewell contact-9845039092, 9986401098

15X40 G+2 house East Door, South Road, Kaveripura, Kamakshipalya, Magadi Road, A/E Katha, Price 69L Fixed: 9739957911

Nagarabhavi

30X40 G+3 Triplex House and 30x40 G+3 Building for Sale. @ Nagarabhavi. 9342874483 9844333109

Yelahanka

HOUSE FOR SALE No 580, SMIG-B, G/F, Block 37, KHB Yelahanka New Town, 5th Phase (near last stop), Bangalore-64. Contact 94810 67944

Nagasandra

3 BHK NEW DUPLEX HOUSE 1342 Sqft North Facing E-Katha 1.10Cr. Chikkbidrakallu Near Tirumalapura Metro Station. 'Srivaari Properties' 9880443362

Industrial & Factory

Tumkur Road

SALE, INDUSTRIAL Warehouse, Agriculture Farm Land, 2/ 4/ 10/ 12/ 16/ 25/ 50 Acres. #9141326819

SALE SOMPURA Dobbaspet KIADB 3Acres. Corner property. Red'Zone. Clear'titles. with Sale deed. Call Arun 9845077299.

Residential/ Commercial

Devanahalli

GOLDENOPPORTUNITY 24360 Sq.ftPlot 21300 Sq.ftBuiltup Gated ConvertedEkhata 15Furnished ACRooms 15Cr NandiHills road Ph:9677002197

Villas/Bunglows

Kanakapura Road

4 BHK Villa with lift measuring 3150 Sq.ft in Unit No. 02, SWATAH Block, "AXIS TATVAM" at Kaggalipura Village, Uttarahalli Hobli, Bangalore South Taluk, Bangalore. Contact: 9902401486.

Commerical

Basaveshwaranagar

BASAVESHWAR NAGAR 100 Feet Road Commercial 40X60 BDA Property For Sale Call: 9341260828

J C Road

OFF J.C.ROAD (behind`SBI). South`facing 2,200sft G+4`(3 floors concrete and 4th floor`sheet) commercial building in`excellent condition having`1 passenger lift`and 2 goods`lift. Getting`rent of`Rs.2,30,000. Expecting 6.5CR (negotiable). Call-9844077067

Commercial Building

Ulsoor

BANK OCCUPIED 4000 square feet Ground floor @ ulsoor Good rental income buyers contact 6374573379

Agricultural Land

Mysore Road

"MADDUR 28`GUNTAS Coconut Trees Kestur Town Close To State Highway Purchased Land 48 Lakhs. 9845178335"

Out-Station

18 ACRES BEAUTIFUL AGRI LAND WITH ABUNDANT WATER IN KUDALUR, HANUR TALUK, CHAMRAJNAGAR DISTRICT PIN: 571444
Excellent Cash Crop Cultivation
Build Green Farm Houses
Build Schools and Resorts
Excellent Future Value
Long Term Investment
90470 75405

BBMP A-KATHA
Site FOR Sale
40x78 (3120 sft)
East Facing
Rajarajeshwari Nagar Extension
1 km from National Hill View Public School
1 km from Global Academy
Rs. 9,900/- per sft.
CALL FOR MORE DETAILS :
7022802259

COMMERCIAL BUILDING FOR IMMEDIATE SALE AT KORAMANGALA
Site Area 2900 sq ft, Built up 6350 sq ft, Near Sony World Junction, Behind Oasis Mall, having two side roads front and back, reasonable price
CONTACT: 9886060250

RUNNING SPECIALTY HOSPITAL FOR SALE - SOUTH BENGALURU (J.P.NAGAR)
Well-established, fully operational specialty hospital in South Bengaluru.
- 50+ beds, ICUs, modular OTs
- NABH/ISO compliant
- Excellent occupancy & reputation
- Ideal for hospital groups / investors
Serious buyers only.
Property Champions
CONTACT : 9845950996



VCNR VISTA ಮಾದಾವರ ಮೆಟ್ರೋ ನಿಲ್ದಾಣದಿಂದ 5 ನಿಮಿಷ
₹ 69 ಲಕ್ಷದಿಂದ
ಸೈಟ್ ವಿಸಿಟ್ ಬುಕ್ ಮಾಡಿ: 9535 040 504
30x40 | 30x50

S.S.B.E.T.®
GREEN VALLEY ENGLISH SCHOOL
spread your wings
Chunchaghatta Main Road, Konanakunte, Bengaluru: 560062.
Ph: 9743455551 / 080-26320293 Mail: admin@greenvalleyenglishschool.com
SAYONARA 2026

Class X Farewell Held on 7th February, 2026

Best wishes from the
Management, Staff, Parents and Students

THE HINDU GROUP

VAISHNAVI®
Presents
THE HINDU
Livingspaces 2026
Powered By
Bangalore Development Authority
ORCHIDS® The International School

PROPERTY SHOPPING SEASON IS HERE!

WALK IN TO BAG THE BEST PROPERTY DEALS IN TOWN.

The Hindu Livingspaces brings you an unmatched range of homes, apartments & commercial investments that best suit your tastes, budget, and dreams. The exhibition features reputed builders, trusted land developers, and leading financial institutions under one roof.

PARTICIPATE & WIN A FREE GOLD COIN* EVERY HOUR!
Join the contests at the venue and win prizes worth upto ₹10,000.*

FEBRUARY 21&22
CHANDRA SAGARA CONVENTION HALL, JAYANAGAR, NEAR ASHOKA PILLAR BENGALURU
200+ PRESTIGIOUS PROJECTS
*T&C apply

FREE ENTRY
FOR QUERIES, CONTACT +91 94483 64925
To find your dream property, register using the QR code or visit link: newsth.live/LSBL2026PA

Title Sponsor: VAISHNAVI
Powered By: Bangalore Development Authority, ORCHIDS The International School
In Association with: SBR GROUP, DS MAX
Gold Sponsors: Assetz, LivingWalls, KNS INFRA, SOWPARNIKA Delivering Happiness, SENTIENT DEVELOPERS, ABHEE VENTURES, AMBERSTONE, Sapthagiri Promoters & Developers
Gold Sponsors: RAJESHWARI AASHIRVAD, ELEGANT Builders & Developers, MOGG'S ESTATES, NISCHITHA PROPERTIES Pvt.Ltd., HABULUS, ALLIANCE SQUARE PROPERTIES, A A Realti
Banking Partners: Repco Home Finance, IDBI BANK Bank Aisa Dost Jaisa
Construction Partner: SUDARSHAN
Food Partner: EMPIRE
Jewellery Partner: Prathibha
Beverage Partner: Colhas

ನಗರದಲ್ಲಿ ಇಂದು



ಶಿವರಾತ್ರಿ ವಿಶೇಷ

'ಶಿವ'ನಿಗೆ ಪಂಚಾಮೃತ ರುದ್ರಾಭಿಷೇಕ: ಮಹಾ ಮಂಗಳಾರತಿ, ಅಹೋರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ ಮತ್ತು ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಮೂರನೇ ಹಂತ, ಜೆ.ಪಿ. ನಗರ, ಬೆಳಿಗ್ಗೆ 7ರಿಂದ

ಪ್ರಾಣ ಪ್ರತಿಷ್ಠಾಪನೆ, ವಿಶೇಷ ಪೂಜೆ, ಬೆಳಿಗ್ಗೆ 8ರಿಂದ ರುದ್ರಾಭಿಷೇಕ, ರುದ್ರಪಾರಾಯಣ, ಹೋಮ-ಹವನ ಹಾಗೂ ವಿಶೇಷ ಅಲಂಕಾರಗಳು, ಸಂಜೆ 5ಕ್ಕೆ ಮಹಾಲಿಂಗೇಶ್ವರ ಉತ್ಸವ ಬಲಿ, 6.30ಕ್ಕೆ ರಥೋತ್ಸವ, ಶಿವರಾತ್ರಿ ಜಾಗರಣೆಯ ಅಂಗವಾಗಿ ಸಂಜೆ 6ಕ್ಕೆ ಪ್ರಥಮ ಯಾಮ, ರಾತ್ರಿ 9ಕ್ಕೆ ದ್ವಿತೀಯ ಯಾಮ, 12 ಗಂಟೆಗೆ ತೃತೀಯ ಯಾಮ ಮತ್ತು ಬೆಳಗಿನ ಜಾವ 3ಕ್ಕೆ ಚತುರ್ಥ ಯಾಮ ಪೂಜೆ, ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ, ನೃತ್ಯಪದ ಜಾಗರಣೆ, ಗಾನಪದ ಜಾಗರಣೆ, ಜಾನಪದ ಜಾಗರಣೆ ಎಂಬ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ:ಮಹಾಲಿಂಗೇಶ್ವರ ಸೇವಾ ಟ್ರಸ್ಟ್, ಸ್ಥಳ:ಶಿಶುಗೃಹ ಆಟದ ಮೈದಾನ,ಮೂರನೇ ಹಂತ, ಎಚ್ಎಎಲ್.

ಗೌರೀಶ್ವ ಸ್ವಾಮಿಗೆ ವಿಶೇಷ ರುದ್ರಾಭಿಷೇಕ: ವಿಶೇಷ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಗೌರೀಶ್ವರ ದೇವಸ್ಥಾನ, ಶ್ರೀರಾಮ ಲೇಔಟ್, ಜ್ಞಾನಜ್ಯೋತಿನಗರ, ಮಲ್ಲತ್ತಹಳ್ಳಿ, ಬೆಳಿಗ್ಗೆ 9ರಿಂದ

'ನಾದ ನಾಟ್ಯಾಂಜಲಿ ಅಹೋರಾತ್ರಿ ಶಿವರಾತ್ರಿ' ಸಂಗೀತ ನೃತ್ಯೋತ್ಸವ: ಉಪಸ್ಥಿತಿ: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಉದಯ್ ಬಿ. ಗರುಡಾಚಾರ್, ಶಾಲಿನಿ ರಜನೀಶ್, ಬಿ.ಆರ್. ಶ್ರೀಧರ್, ಎ.ವಿ. ಸತ್ಯನಾರಾಯಣ, 'ಸೃಷ್ಟಿ ತಾಂಡಪ್ರಿಯ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ರಾಧಾ ಶ್ರೀಧರ್, ವೈಜಯಂತಿ ಕಾಶಿ, ಶುಭಾ ಧನಂಜಯ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಸಂಜೆ 5ರಿಂದ

ಶಿವರಾತ್ರಿ: ಗಣಹೋಮ, ನವಗ್ರಹ ಹೋಮ, ರುದ್ರಹೋಮ, ಶಾಂತಿ ಹೋಮ, ಸ್ವಾಮಿಗೆ ಪಂಚಾಮೃತ ಅಭಿಷೇಕ ಅಲಂಕಾರ, ತೀರ್ಥ ಪ್ರಸಾದ ವಿನಿಯೋಗ, ಭಜನೆ: ಸಾಯಿಚಂದ್ರ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀ ಜ್ಞಾನ ಮುನೇಶ್ವರ ಸ್ವಾಮಿ ದೇವಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 5ರಿಂದ

ಮಹಾಶಿವರಾತ್ರಿ ಪೂಜೆ: ನದೀಶ್ವರಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಆಯೋಜನೆ ಮತ್ತು ಸ್ಥಳ: ನಂದೀಶ್ವರಸ್ವಾಮಿ ದೇವಸ್ಥಾನ, ಕೆಂಚನಪುರ ಕ್ರಾಸ್, ಜಗಜ್ಯೋತಿ ಬಡಾವಣೆ, ಜ್ಞಾನಭಾರತಿ, ಸಂಜೆ 6ರಿಂದ

ಮಹಾಶಿವರಾತ್ರಿ ನಾಟ್ಯ ಸಂಗಮ: ನೃತ್ಯ, ಹಾಡು, ಸಂಗೀತ, ಸಿನಿಮಾ ವೀಕ್ಷಣೆಯೊಂದಿಗೆ, ಆಯೋಜನೆ: ಅರಳಿಕಟ್ಟೆ ಲಕ್ಷ್ಮೀಪುರ, ಸ್ಥಳ: ಎಚ್ಚಮನಾಯಕ ರಸ್ತೆ, ಲಕ್ಷ್ಮೀಪುರ, ಸಂಜೆ 6ರಿಂದ

ಶಿವರಾತ್ರಿ ರಂಗಸಂಗಮ: 'ಮಹಾಯುಗ' ನಾಟಕ ಪ್ರದರ್ಶನ, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6ರಿಂದ

ಮಹಾಶಿವರಾತ್ರಿ ಅಂಗವಾಗಿ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಸಂಜೆ 6ರಿಂದ

'ಕಾವ್ಯ ಶಿವರಾತ್ರಿ' ಅಹೋರಾತ್ರಿ ಕಾವ್ಯ ಗಾಯನ: ಕವಿಗೋಷ್ಠಿಗೆ ಚಾಲನೆ: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಅಧ್ಯಕ್ಷತೆ: ಚಲಂ ಹಾಡ್ಲಹಳ್ಳಿ, ಉದ್ಘಾಟನೆ: ಟಿ. ವೆಂಕಟೇಶಮೂರ್ತಿ, 'ಕಿರಂ ಕಾವ್ಯ ಶಿವರಾತ್ರಿ ಪುರಸ್ಕಾರ' ಪ್ರದಾನ: ಪ.ಸ. ಕುಮಾರ್, ಪುರಸ್ಕಾರ ಸ್ವೀಕರಿಸುವವರು: ಶೃತಿ ಶಿಲ್ಪಿ ಏಕತಾರಿ ರಾಮಯ್ಯ, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಶಾಂತಲಾ ಕೆ.ಟಿ., ಸಿ.ಎಸ್. ಕರಿಗಾರ್, ಕೆ. ಷರೀಫಾ, ಗಂಗರಾಜು, ಮಹದೇವ ನಾಯಕ್, ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ, ಕಾವ್ಯಮಂಡಲ, ಸ್ನಾತಕೋತ್ತರ ಕೇಂದ್ರ ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಸಂಜೆ 6ರಿಂದ

ದಾಸರ ಪದಗಳ ಗಾಯನ: ಕೆ.ಪಿ. ಶಿಶಿರ್, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ, ರಾಜಾಜಿನಗರ ಎರಡನೇ ಹಂತ, ಸುಬ್ರಹ್ಮಣ್ಯನಗರ, ಸಂಜೆ 6

ದಾಸವಾಣಿ: ಗಾಯನ: ಸಂಧ್ಯಾ ಶ್ರೀನಾಥ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ತ್ಯಾಗರಾಜನಗರ, ಸಂಜೆ 6

ಶ್ರೀಶ್ರೀ ರವಿಶಂಕರ್ ಗುರೂಜಿ ಅವರೊಂದಿಗೆ ಮಹಾಶಿವರಾತ್ರಿ ಮಹೋತ್ಸವ: ರುದ್ರ ಪೂಜೆ, ಉತ್ಸವ ಮತ್ತು ಮಧ್ಯರಾತ್ರಿಯ ಧ್ಯಾನ, ಭಜನೆ, ಮಹಾರುದ್ರ ಪೂಜೆ, ಭಜನೆ, ಗುರುದೇವರ ಪ್ರವಚನ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಸಂಜೆ 7.15ರಿಂದ

'ಬೇಡರ ಕಣ್ಣಪ್ಪ, ಶ್ವೇತಕುಮಾರ ಚರಿತ್ರೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಬ್ರಹ್ಮಶ್ರೀ ಕಲಾವೇದಿಕೆ, ಸ್ಥಳ: ಮುನೇಶ್ವರ ದೇವಸ್ಥಾನ, ಚನ್ನಸಂದ್ರ, ರಾತ್ರಿ 9ರಿಂದ

'ಶ್ರೀಕೃಷ್ಣಸಂಧಾನ' ನಾಟಕ ಪ್ರದರ್ಶನ: ಉದ್ಘಾಟನೆ: ಎಂ. ಆನಂದ್, ಅಧ್ಯಕ್ಷತೆ: ಎಲ್. ಜಯಸಿಂಹ, ಅತಿಥಿಗಳು: ಮುನಿ ಚನ್ನಪ್ಪ, ಕೃಷ್ಣಪ್ಪ, ಎಂ. ಶಿವಣ್ಣ, ಕಾಂತಮ್ಮ, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಈಶ್ವರ ದೇವಸ್ಥಾನದ ಹತ್ತಿರ, ನಾಗಶೆಟ್ಟಿಹಳ್ಳಿ, ರಾತ್ರಿ 9.30ರಿಂದ

ಭರತನಾಟ್ಯ ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

ಕರ್ತವ್ಯ ಪ್ರತಿಷ್ಠಾನದ ಉದ್ಘಾಟನೆ, ಕರ್ತವ್ಯ ಪಥ ಪುಸ್ತಕ ಬಿಡುಗಡೆ: ರಾಜೇಶ್ ಎಲ್.ವೈ., ಉದ್ಘಾಟನೆ: ಗಜೇಂದ್ರ, ಅಧ್ಯಕ್ಷತೆ: ಅಂಟೋನಿ ಸಜೀತ್, ಅತಿಥಿಗಳು: ರಾಜೇಶ್ ಕುಮಾರ್ ಕಲ್ಯಾ, ಶಂಕರ್ ನೆಥನ್, ಗಣೇಶ್ ರಾವ್, ಶ್ರೀನಿವಾಸನ್, ಕೆ.ಎಸ್. ಮಂಜು, ಪ್ರಶಾಂತ್ ವಿಟ್ಲ, ವಿಜಯ್ ವಿಕ್ರಂ ಅಡಿಗ, ವಿನೋದ್, ಜಯಶ್ರೀ ಮಾಧವ ರಟ್ಟಿಹಳ್ಳಿ, ಆಯೋಜನೆ: ಕರ್ತವ್ಯ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಇರ್ಷಾದ್ ಉಪ್ಪಿನಂಗಡಿ ಅವರ 'ಕರಾವಳಿಯ ರಕ್ತ-ಕಣ್ಣೀರು' ಪುಸ್ತಕ ಬಿಡುಗಡೆ: ಅತಿಥಿಗಳು: ಪ್ರಿಯಾಂಕ್ ಖರ್ಗೆ, ಕಿಶೋರ್ ಕುಮಾರ್, ದಿನೇಶ್ ಅಮೀನ್‌ಮಟ್ಟು, ಮುನೀರ್ ಕಾಟಿಪಳ್ಳ, ಉಪಸ್ಥಿತಿ: ಅಕ್ಷತಾ ಹುಂಚದಕಟ್ಟೆ, ಆಯೋಜನೆ: ಅಹರ್ನಿಶಿ ಪ್ರಕಾಶನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸಿರಿಮೂರ್ತಿ ಕಾಸರವಳ್ಳಿ (ಶ್ರೀಲಕ್ಷ್ಮೀ ಕೆ.) ಅವರ 'ಭಾವನೆಲೆ' ಪುಸ್ತಕ ಬಿಡುಗಡೆ: ಕೆ.ಎನ್. ಗಣೇಶಯ್ಯ, ಅತಿಥಿ: ಶಂಕರನಾರಾಯಣ ಕೊರ್ಗಿ, ಅಧ್ಯಕ್ಷತೆ: ಟಿ.ಎಸ್. ಸತ್ಯವತಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3ರಿಂದ

ಮಾಸ್ಟರ್ ಹಿರಣ್ಣಯ್ಯ ಅವರ ಜಯಂತಿ ಅಂಗವಾಗಿ 'ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಳದಿ' ಉಪನ್ಯಾಸ: ಎಸ್. ಸೂರ್ಯಪ್ರಕಾಶ್ ಪಂಡಿತ್, ಆಯೋಜನೆ: ಸುಚಿತ್ರ, ಸ್ಥಳ: ಸುಚಿತ್ರ ಸಭಾಂಗಣ, ಒಂಬತ್ತನೇ ಮುಖ್ಯರಸ್ತೆ, ಬನಶಂಕರಿ, ಬೆಳಿಗ್ಗೆ 10

ಮಾಸ್ಟರ್ ಹಿರಣ್ಣಯ್ಯ

ಸ್ವರ ಉತ್ಸವ: ಸಂತೂರ್ ವಾದನ: ಶಶಾಂಕ ಗೋಖಲೆ, ಗಾಯನ: ಸಂಜೀವ ಅಭ್ಯಂಕರ, ತಬಲಾ: ಅಜಿಂಕ್ಯಾ ಜೋಶಿ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ಸಪ್ತಕ, ಮಿತ್ರಾ ಫೌಂಡೇಷನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5ರಿಂದ

ಹನೂರು ಚನ್ನಪ್ಪ ಅವರ 'ಕಬ್ಬಿಣದ ಕುದುರೆಗಳು' ಪುಸ್ತಕ ಬಿಡುಗಡೆ: ಕೆ.ಎ. ದಯಾನಂದ, ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅತಿಥಿ: ನೆಲ್ಲುಕುಂಟೆ ವೆಂಕಟೇಶಯ್ಯ, ಪುಸ್ತಕದ ಕುರಿತು: ರಘುನಾಥ ಚ.ಹ., ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಆಯೋಜನೆ: ಜೋಳಿಗೆ ಪ್ರಕಾಶನ, ಸ್ಥಳ: ಡಾ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಅಭಿನಂದನಾ ಗ್ರಂಥದ ಲೋಕಾರ್ಪಣೆ, ಸಾವಯವ ಸಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನ, ಉಚಿತ ಆರೋಗ್ಯ ಶಿಬಿರ, ಸರ್ವ ಜನಾಂಗದ ವಧು-ವರರ ಮುಖಾ-ಮುಖಿ, ಮಲೆನಾಡು ಗಿಡ್ಡಗಳ ಉಚಿತ ವಿತರಣೆಯ ಸಮಾರೋಪ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಕೃಷ್ಣ ಯಾದವನಂದ ಸ್ವಾಮೀಜಿ, ಪುರುಷೋತ್ತಮನಂದನಾಥ ಸ್ವಾಮೀಜಿ, ನಾದನಂದನಾಥ ಸ್ವಾಮೀಜಿ, ರಂಗನಾಥ ಸ್ವಾಮೀಜಿ, ಉದ್ಘಾಟನೆ: ಆರ್. ಅಶೋಕ, ಶೋಭಾ ಕರಂದ್ಲಾಜೆ, 'ಕಂದಾಯ ಕಳಕಳಿ ಆವತ್ತಿ-2' ಬಿಡುಗಡೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಒಕ್ಕಲಿಗ ಯುವ ಬ್ರಿಗೇಡ್, ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣ, ಕೆಂಗೇರಿ, ಸಂಜೆ 5ರಿಂದ

ಸಂತ ಸೇವಾಲಾಲ್ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿಗಳು: ರುದ್ರಪ್ಪ ಲಮಾಣಿ, ಎನ್ ಜಯದೇವ ನಾಯಕ್, ಕಾಂತಾ ನಾಯಕ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6ರಿಂದ

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರೊ.ಎಂಪಿಎಲ್ ಶಾಸ್ತ್ರಿ ಸಂಗೀತೋತ್ಸವ: 'ಸಂಗೀತ ಕಲಾ ಭೂಷಣ' ಪ್ರಶಸ್ತಿ ಪ್ರದಾನ: ಟಿ.ಟಿ. ಶ್ರೀನಿವಾಸನ್, ಅತಿಥಿಗಳು: ವಿ. ಶ್ರೀಶಾನಂದ, ಅಧ್ಯಕ್ಷತೆ: ಮೈಸೂರು ನಾಗಮಣಿ ಶ್ರೀನಾಥ್, ಸಂಗೀತ ಕಛೇರಿ: ಗಾಯನ: ಎಸ್. ಶಂಕರ್, ಎಸ್. ರಮಣಿ, ಪಿಟೀಲು: ನಳಿನಾ ಮೋಹನ್, ಮೃದಂಗ: ಅರ್ಜುನ್ ಕುಮಾರ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜು, ಪ್ರೊ.ಎಂಪಿಎಲ್ ಶಾಸ್ತ್ರಿ ರಸ್ತೆ, ಮಲ್ಲೇಶ್ವರ, ಸಂಜೆ 6ರಿಂದ

ವಿದ್ಯಾರಣ್ಯಪುರದಲ್ಲಿ 'ಮಹಾಶಿವೋತ್ಸವ'

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ವಿದ್ಯಾರಣ್ಯಪುರದ ಎನ್‌ಟಿಐ ಮೈದಾನದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ 'ಮಹಾಶಿವೋತ್ಸವ' ಶೀರ್ಷಿಕೆಯಡಿ ಭಾನುವಾರ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಆಯೋಜಕಿ ಮೀನಾಕ್ಷಿ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಕೆಬಿಜಿ ಸ್ವಯಂಸೇವಕರ ಸಂಘದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಭಾನುವಾರ ಬೆಳಿಗ್ಗೆ 10 ಗಂಟೆಗೆ ಶಿವಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ದಿನವಿಡೀ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ. ಕರಕುಶಲ ವಸ್ತುಗಳೂ ಸೇರಿ 50ಕ್ಕೂ ಹೆಚ್ಚು ವಿವಿಧ ಮಳಿಗೆಗಳು ಇರಲಿವೆ. ಮಧ್ಯಾಹ್ನ 3 ಗಂಟೆಗೆ ಸ್ಥಳೀಯ ಕಲಾವಿದರಿಗಾಗಿ ಶಾಸ್ತ್ರೀಯ ನೃತ್ಯ ಸ್ಪರ್ಧೆ, ಸಂಜೆ 6 ಗಂಟೆಗೆ ರುದ್ರವೇದ ಪಾರಾಯಣ ಹಾಗೂ 6.30ಕ್ಕೆ ದೃಷ್ಟಿ ಆರ್ಟ್ಸ್ ಸೆಂಟರ್ ವತಿಯಿಂದ 'ಸತ್ಯಂ ಶಿವಂ ಸುಂದರಂ' ಎಂಬ ನೃತ್ಯರೂಪಕ ನಾಟಕ ಪ್ರದರ್ಶನ ನಡೆಯಲಿದೆ. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಕುವೆಂಪು ಮನೆ ದಕ್ಷಿಣ ಭಾರತದ ಶಾಂತಿನಿಕೇತನ: ಹಂ.ಪ. ನಾಗರಾಜಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಪ್ಪಳ್ಳಿಯಲ್ಲಿರುವ ಕುವೆಂಪು ಅವರ ಮನೆ ದಕ್ಷಿಣ ಭಾರತದ ಶಾಂತಿನಿಕೇತನವಾಗಿದೆ' ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಹೇಳಿದರು.

ಹಂ.ಪ. ನಾಗರಾಜಯ್ಯ

ಟೋಟಲ್ ಕನ್ನಡ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಮಪ್ರಸಾದ್ ಮಿಟ್ಟೂರು ಅವರ ರಸ ಋಷಿಗೆ ಕಾವ್ಯ ನಮನ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಪ್ರತಿವರ್ಷ ಕುಪ್ಪಳ್ಳಿಯ ಕವಿಶೈಲಕ್ಕೆ ಸುಮಾರು 2.35 ಲಕ್ಷ ಜನ ಭೇಟಿ ನೀಡುತ್ತಾರೆ. ಕುವೆಂಪು ಅವರ ಕುರಿತು ಹಲವಾರು ಲೇಖನಗಳು, ಬರಹಗಳು, ಸಂಶೋಧನಾ ಪ್ರಬಂಧಗಳು ಪ್ರಕಟವಾಗಿವೆ' ಎಂದು ತಿಳಿಸಿದರು.

'ಕುವೆಂಪು ಅವರು ಮಹಾತ್ಮ ಗಾಂಧೀಜಿ ಅವರನ್ನು ಸುಂದರ ಕವಿತೆಗಳ ಮೂಲಕ ಸಾಕ್ಷಾತ್ಕಾರ ಮಾಡಿದ್ದಾರೆ. ರಾಮಪ್ರಸಾದ್ ಅವರು ಕುವೆಂಪು ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡಿ, ಅದಕ್ಕೆ ಕವಿತೆಗಳ ರೂಪ ನೀಡಿದ್ದಾರೆ' ಎಂದು ಹೇಳಿದರು.

ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, 'ಕುವೆಂಪು ಅವರಂತೆ ನಿಷ್ಠುರವಾಗಿ ಮಾತನಾಡುವ ಲೇಖಕರ ಸಂಖ್ಯೆ ಕಡಿಮೆ ಆಗಿದೆ. ಅವರ ವೈಜ್ಞಾನಿಕ ಚಿಂತನೆ, ವೈಚಾರಿಕ ದೃಷ್ಟಿಕೋನದ ಕಾರಣ ಅವರು ನಮಗೆ ಆಕರ್ಷಣೆ ಆಗಿದ್ದರು. ರಾಮಪ್ರಸಾದ್ ಅವರು ರಸಋಷಿಗೆ ಕಾವ್ಯ ನಮನ ಸಲ್ಲಿಸಿರುವುದು ಶ್ಲಾಘನೀಯ' ಎಂದು ತಿಳಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಗಾಯಕಿ ಎಚ್.ಆರ್. ಲೀಲಾವತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.

ಭದ್ರತಾ ಸಿಬ್ಬಂದಿ ಮನೆಯಲ್ಲಿ ಕಳ್ಳತನ

ಬೆಂಗಳೂರು: ನಕಲಿ ಆಭರಣ ಮಾರಾಟ ಮಾಡುವ ನೆಪದಲ್ಲಿ ಆರು ಮಹಿಳೆಯರ ತಂಡವು ಯಶವಂತಪುರದ ವಸತಿ ಸಮುಚ್ಚಯದಲ್ಲಿ ನೇಪಾಳದ ಭದ್ರತಾ ಸಿಬ್ಬಂದಿ ಮನೆಯಲ್ಲಿ ₹20 ಸಾವಿರ ನಗದು ಹಾಗೂ ಚಿನ್ನಾಭರಣ ಕಳವು ಮಾಡಿ, ಪರಾರಿಯಾಗಿದೆ.

ಯಶವಂತಪುರ ಪ್ರದೇಶದ ಗೋಲ್ಡನ್ ಅಪಾರ್ಟ್‌ಮೆಂಟ್‌ನಲ್ಲಿ ಈ ಘಟನೆ ನಡೆದಿದೆ. ನೆಲ ಮಹಡಿಯಲ್ಲಿರುವ ಭದ್ರತಾ ಸಿಬ್ಬಂದಿ ಮನೆಗೆ ನುಗ್ಗಿ ನಗದು, ಚಿನ್ನಾಭರಣಗಳನ್ನು ಕಳವು ಮಾಡಲಾಗಿದೆ. ಈ ಘಟನೆಯ ದೃಶ್ಯಾವಳಿಗಳು ಅಪಾರ್ಟ್‌ಮೆಂಟ್‌ನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಇದರ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಬಂಧನಕ್ಕಾಗಿ ಶೋಧ ಆರಂಭಿಸಿದ್ದಾರೆ.

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ, ಎ.ಎಸ್.ಸಿ. ಕೇಂದ್ರ (ದಕ್ಷಿಣ), ಬೆಂಗಳೂರು

PM SHRI

ಒಪ್ಪಂದ ಆಧಾರಿತ ಶಿಕ್ಷಕರಿಗಾಗಿ ವಾಕ್-ಇನ್ ಸಂದರ್ಶನ

ಕ್ರ.ಸಂ.	ಹುದ್ದೆ	ನೋಂದಣಿ ಸಮಯ
1	ಪಿಜಿಟಿ (PGT): ಇಂಗ್ಲಿಷ್, ಹಿಂದಿ, ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಭೂಗೋಳಶಾಸ್ತ್ರ, ರಾಜಕೀಯ ವಿಜ್ಞಾನ, ವಾಣಿಜ್ಯ, ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್	ಇನ್‌ಸ್ಟ್ರಕ್ಟರ್ 19/02/2026 (ಗುರುವಾರ) (ಬೆಳಿಗ್ಗೆ 09:30 ರಿಂದ ಮಧ್ಯಾಹ್ನ 12:30 ರವರೆಗೆ)
2	ಟಿಜಿಟಿ (TGT): ಇಂಗ್ಲಿಷ್, ಹಿಂದಿ, ಸಂಸ್ಕೃತ, ಗಣಿತ, ವಿಜ್ಞಾನ, ಸಾಮಾಜಿಕ ವಿಜ್ಞಾನ, ಎಐ (AI) ಮತ್ತು ಪಿಆರ್‌ಟಿ (PRT)	19/02/2026 (ಗುರುವಾರ) (ಬೆಳಿಗ್ಗೆ 09:30 ರಿಂದ ಮಧ್ಯಾಹ್ನ 12:30 ರವರೆಗೆ)
3	ವಿವಿಧ ಹುದ್ದೆಗಳು: ಯೋಗಾ ಇನ್‌ಸ್ಟ್ರಕ್ಟರ್, ಕ್ರೀಡಾ ಕೋಚ್, ನೃತ್ಯ/ಸಂಗೀತ ಶಿಕ್ಷಕ, ವಿಶೇಷ ಶಿಕ್ಷಣ ಶಿಕ್ಷಕ, ಕಲೆ ಮತ್ತು ಕರಕುಶಲ ಶಿಕ್ಷಕ, ಕಂಪ್ಯೂಟರ್ ಇನ್‌ಸ್ಟ್ರಕ್ಟರ್, ಕೌನ್ಸೆಲರ್, ಕನ್ನಡ ಶಿಕ್ಷಕ, ನರ್ಸ್ ಮತ್ತು ಬಾಲವಾಟಿಕ	23/02/2026 (ಸೋಮವಾರ) (ಬೆಳಿಗ್ಗೆ 09:30 ರಿಂದ ಮಧ್ಯಾಹ್ನ 12:30 ರವರೆಗೆ)

ಸೂಚನೆ: ಅರ್ಹತೆಗಳು ಮತ್ತು ಇತರೆ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್‌ನ್ನು ನೋಡಿ: https//:ascbangalore.kvs.ac.in

ಪ್ರಾಂಶುಪಾಲರು

ಈಶಾನ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂ. ಎನ್-235-62
ಟೆಲೆ ಟೆಂಡರ್ 01-2026

ಭಾರತದ ರಾಷ್ಟ್ರಪತಿಗಳ ಪರವಾಗಿ ಚೀಫ್ ಕಮ್ಯುನಿಕೇಶನ್ ಇಂಜಿನಿಯರ್, ಈಶಾನ್ಯ ರೈಲ್ವೆ, ಗೋರಖಪುರ ಇವರು ಕೆಳಕಂಡ ಕಾಮಗಾರಿಗಳಿಗಾಗಿ, ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಲಾಗಿರುವ ಅರ್ಹತಾ ಮಾನದಂಡಗಳ ಮೇರೆಗಿನ ಸಾಕಷ್ಟು ಅನುಭವವುಳ್ಳ ಗುತ್ತಿಗೆದಾರರಿಂದ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ನಂ.:** ಎನ್-235-62 ಟೆಲೆ ಟೆಂಡರ್ 01-2026; **ಕಾಮಗಾರಿ ಹೆಸರು:** "ಈಶಾನ್ಯ ರೈಲ್ವೆಯಲ್ಲಿನ ಎಚ್ ಕಂಟ್ರೋಲ್ ರೂಮ್ ಮತ್ತು ಎಲ್‌ಜೆಎನ್, ಬಿಎಸ್‌ಬಿ, ಐಜೆಡ್‌ಎನ್ ಡಿವಿಜನ್‌ನ ವಿವಿಧ ನಿಲ್ದಾಣಗಳಾದ್ಯಂತ ಯುನಿಫೀಲ್ಡ್ ಕಮ್ಯುನಿಕೇಶನ್ ಬ್ಯಾಕ್‌ಬೋನ್‌ಗಾಗಿ, ಎಲ್‌ಎಎನ್ ಇನ್ಫ್ರಾಸ್ಟ್ರಕ್ಚರ್ ಹೊಂದಿರುವ ಐಪಿ-ಎಂಪಿಎಲ್‌ಎಸ್ ಆಧಾರಿತ ನೆಟ್‌ವರ್ಕ್ ಮತ್ತು ವಿಒಐಪಿ ಆಧಾರಿತ ಆಧಾರಿತ ಕಂಟ್ರೋಲ್ ಕಮ್ಯುನಿಕೇಶನ್ ಸಿಸ್ಟಮ್ ಪೂರೈಕೆ ಹಾಗೂ ಡಿವಿಜನಲ್ ಕಂಟ್ರೋಲ್ ಟೆಸ್ಟ್ ರೂಮ್ ಮತ್ತು ಎಚ್‌ಕ್ಯೂ ಕಂಟ್ರೋಲ್ ರೂಮ್‌ನಲ್ಲಿ ಟಿಸಿಪಿ-ಐಪಿ ಆಧಾರಿತ ಫೈರ್ ಫೈಟಿಂಗ್ ಸಿಸ್ಟಮ್ ಪೂರೈಕೆ. ಎಚ್‌ಕ್ಯೂ ಗೋರಖ್‌ಪುರದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಎಸ್‌ಐಪಿ ಆಧಾರಿತ ಐಪಿ ಎಕ್ಸ್‌ಚೇಂಜ್‌ಗೆ ಎಲ್‌ಎಎನ್ ಮತ್ತು ಒಎಫ್‌ಸಿ ಇನ್ಫ್ರಾಸ್ಟ್ರಕ್ಚರ್ ಹೊಂದಿರುವ ಎಫ್‌ಎಕ್ಸ್‌ಎಸ್ ಮೀಡಿಯಾ ಗೇಟ್‌ವೇಸ್ ಪೂರೈಕೆ". **ಟೆಂಡರ್ ಮೌಲ್ಯ:** ರೂ. 71,99,98,327.89 (ರೂ. ಎಪ್ಪತ್ತೊಂದು ಕೋಟಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತೆಂಟು ಸಾವಿರದ ಮೂರು ನೂರ ಇಪ್ಪತ್ತೇಳು ಮತ್ತು ಎಂಬತ್ತೊಂಬತ್ತು ಪೈಸೆ ಮಾತ್ರ); **ಬಿಡ್ ಸೆಕ್ಯೂರಿಟಿ:** ರೂ. 37,50,000/-; **ಆಫರ್ ವ್ಯಾಲಿಡಿಟಿ:** 90 ದಿನಗಳು; **ಟೆಂಡರ್ ಕ್ಲೋಸಿಂಗ್ ಮತ್ತು ಒಪನಿಂಗ್ ಸ್ಥಳ, ದಿನಾಂಕ ಮತ್ತು ಸ್ಥಳ:** ಡಿಎಸ್‌ಟಿಇ/ಟೆಲೆ'ರವರ ಕಚೇರಿ, ಈಶಾನ್ಯ ರೈಲ್ವೆ, ಗೋರಖಪುರ. 02.04.2026 ರಂದು 15;00 ಗಂಟೆ; **ಪೂರ್ಣಗೊಳಿಸುವ ಅವಧಿ:** 12 (ಹನ್ನೆರಡು) ತಿಂಗಳು. ಟೆಂಡರ್‌ಗೆ ಸಂಬಂಧಿತ ಯಾವುದೇ ಬದಲಾವಣೆಗಳಿಗಾಗಿ, ಅಂತರ್ಜಾಲ ತಾಣದಲ್ಲಿ ಮೂಲ ಟೆಂಡರ್ ಪ್ರಕಟಣೆಗೆ ಹೊರಡಿಸಿರುವ ತಿದ್ದುಪಡಿ ಪರಿಶೀಲಿಸಿರಿ. ವಿವರವಾದ ಟೆಂಡರ್ ಪ್ರಕಟಣೆ, ದಸ್ತಾವೇಜುಗಳು, ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು http://www.ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಸೂಚನೆ: ಟೆಂಡರ್‌ದಾರರು/ ಬಿಡ್‌ದಾರರು, ತಮ್ಮ ಬಿಡ್ ಜೊತೆಗೆ ಸಂಬಂಧಿತ ಅಟ್ಯಾಚ್‌ಮೆಂಟ್‌ಗಳನ್ನು / ನಮೂನೆಗಳನ್ನು / ಅನುಬಂಧಗಳನ್ನು ಲಗತ್ತಿಸುವುದು ಕಡ್ಡಾಯ.

ಡೆ. ಚೀಫ್ ಸಿಗ್ನಲ್ & ಟೆಲೆಕಾಂ ಇಂಜಿನಿಯರ್/ ಸಿಪಿಆರ್‌ಒ/ಸಿಗ್ನಲ್-104 ಎಚ್‌ಕ್ಯೂ, ಗೋರಖಪುರ

ರೈಲುಗಳಲ್ಲಿ ಬೀಡಿ/ಸಿಗರೆಟ್ ಸೇದಬಾರದು

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ -2, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ , ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್

ಆರ್‌ಸಿ ನಂ. **380/2023** ಒ. ನಂ. 628/2018

ಯೂಕೊ ಬ್ಯಾಂಕ್ V/s ಶ್ರೀ ಶ್ರೀನಿವಾಸ ಎನ್. ಮತ್ತು ಇನ್ನೊಬ್ಬರು

ಇವರ ವಿಷಯದಲ್ಲಿ : (ಸಿಹೆಚ್) **ಯೂಕೊ ಬ್ಯಾಂಕ್,** ಬನ್ನೇರುಘಟ್ಟ ರಸ್ತೆ ಶಾಖೆ, 55/56/3, ಹಳೆ ಗುರಪ್ಪನಪಾಳ್ಯ, 8ನೇ ಮುಖ್ಯ ರಸ್ತೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಕರ್ನಾಟಕ - 560 029. ......ಸರ್ಟಿಫಿಕೇಟ್ ಹೋಲ್ಡರ್

Vs

(ಸಿಡಿ 1) **ಶ್ರೀ ಶ್ರೀನಿವಾಸ ಎನ್. ಮತ್ತು ಇನ್ನೊಬ್ಬರು,** ಬಿನ್ ಶ್ರೀ ನಾರಾಯಣಪ್ಪ ವಾಸ : 4372 1ಎ, 2ನೇ ಮಹಡಿ, 6ನೇ ಅಡ್ಡ ರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು-560 078, ಕರ್ನಾಟಕ
(ಸಿಡಿ 2) **ಶ್ರೀಮತಿ ಪೂಜಾ ಗೋಪಾಲ ಭಟ್** ಕೋಂ ಶ್ರೀ ಶ್ರೀನಿವಾಸ ಎನ್., ವಾಸ : 4372 1ಎ, 2ನೇ ಮಹಡಿ, 6ನೇ ಅಡ್ಡ ರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು-560 078, ಕರ್ನಾಟಕ ......ಸರ್ಟಿಫಿಕೇಟ್ ಡೆಟರ್

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ-2) ಇವರು, ಒ.ಎ. ನಂ./628/2018 ಸರ್ಟಿಫಿಕೇಟ್‌ನಂತೆ **ರೂ.10184685/-** (ರೂಪಾಯಿ ಒಂದು ಕೋಟಿ ಒಂದು ಲಕ್ಷ ಎಂಬತ್ತನಾಲ್ಕು ಸಾವಿರದ ಆರು ನೂರ ಎಂಬತ್ತೈದು ಮಾತ್ರ) ಜೊತೆಗೆ ದಿನಾಂಕ 31.03.2018 ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ವಾರ್ಷಿಕ ಶೇ. 9.60 % ಬಡ್ಡಿ, ಮಾಸಿಕ ಚಕ್ರಬಡ್ಡಿ ಮತ್ತು ವೆಚ್ಚ **ರೂ.103000/-** (ರೂಪಾಯಿ ಒಂದು ಲಕ್ಷ ಮೂರು ಸಾವಿರ ಮಾತ್ರ) ಸರ್ಟಿಫಿಕೇಟ್ ಡೆಟರ್‌ರವರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ ಡ್ಯೂ ಬ್ಯಾಂಕ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ಪ್ರಕಟಣೆಯಾದ ದಿನಾಂಕದಿಂದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತದೆ. (ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು [illegible]

[illegible]

ಸಹಿ/-ವಸೂಲಾತಿ ಅಧಿಕಾರಿ
ಸಾಲವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)

ಗಮನಿಸಿ: [illegible]

ಭಾರತ ಸರಕಾರ
ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ
ಸಾಲ ವಸೂಲಾತಿ ನ್ಯಾಯಾಧಿಕರಣ -2, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ನೋಡಿ ರೆಗ್ಯುಲೇಶನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸ್

ಆರ್‌ಸಿ ನಂ. **506/2023** ಒ. ನಂ. 1799/2019

ಯೂಕೊ ಬ್ಯಾಂಕ್ V/s ಶ್ರೀ ರಮೇಶ್ ಜಿ. ಮತ್ತು ಇತರರು

ಇವರ ವಿಷಯದಲ್ಲಿ : (ಸಿಹೆಚ್) **ಯೂಕೊ ಬ್ಯಾಂಕ್,** ನಂ. 238/35, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್ , ಜಯನಗರ, ಬೆಂಗಳೂರು - 560 011. ......ಅರ್ಜಿದಾರರು

Vs

(ಸಿಡಿ 1) **ಶ್ರೀ ರಮೇಶ್ ಜಿ.** ಬಿನ್ ಲೇಟ್ ಗಿರಿಯಪ್ಪ ಎಸ್. ಜಿ. , ವಾಸ : ನಂ 63, 6ನೇ ಅಡ್ಡ ರಸ್ತೆ, ಎಸ್‌ಬಿಐ ಆಫೀಸರ್ಸ್ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560 079.
(ಸಿಡಿ 2) **ಶ್ರೀಮತಿ ವಸಂತ** ಕೋಂ. ಲೇಟ್ ಗಿರಿಯಪ್ಪ ಎಸ್. ಜಿ. , ವಾಸ : ನಂ 63, 6ನೇ ಅಡ್ಡ ರಸ್ತೆ, ಎಸ್‌ಬಿಐ ಆಫೀಸರ್ಸ್ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-560 079.
(ಸಿಡಿ3) **ಮೆ. ರಾಯಲ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್,** (ಒಂದು ಪಾಲುದಾರಿಕಾ ಸಂಸ್ಥೆ) ಪ್ರತಿನಿಧಿ ಇದರ ನಿರ್ವಾಹಕ ಪಾಲುದಾರರಾದ ಶ್ರೀ ಕೆ. ಹೆಚ್. ಮಲ್ಲಿಕಾರ್ಜುನ, ನಂ. 001, ನೆಲ ಮಹಡಿ, ರಾಯಲ್ ವುಡ್ಸ್, ಗೌರವನಗರ, ಜೆ. ಪಿ. ನಗರ, ಬೆಂಗಳೂರು, ಕರ್ನಾಟಕ ......ಪ್ರತಿವಾದಿಗಳು

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕರಣ ಬೆಂಗಳೂರು (ಡಿಆರ್‌ಟಿ-2) ಇವರು, ಒ.ಎ. ನಂ./1799/2019 ಸರ್ಟಿಫಿಕೇಟ್‌ನಂತೆ **ರೂ.56,28,455/-** (ರೂಪಾಯಿ ಐವತ್ತಾರು ಲಕ್ಷ ಇಪ್ಪತ್ತೆಂಟು ಸಾವಿರದ ನಾಲ್ಕು ನೂರ ಐವತ್ತೈದು ಮಾತ್ರ) ಜೊತೆಗೆ ದಿನಾಂಕ 18.11.2019ರಿಂದ ಪೂರ್ತಿ ಪಾವತಿಯ ದಿನಾಂಕದ ವರೆಗೆ ವಾರ್ಷಿಕ ಶೇ. 8.55% ಬಡ್ಡಿ, ಮಾಸಿಕ ಚಕ್ರಬಡ್ಡಿ ಮತ್ತು ವೆಚ್ಚ **ರೂ.59255/-** (ರೂಪಾಯಿ ಐವತ್ತೊಂಬತ್ತು ಸಾವಿರದ ಇನ್ನೂರ ಐವತ್ತೈದು ಮಾತ್ರ) ಸರ್ಟಿಫಿಕೇಟ್ ಡೆಟರ್‌ರವರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಇರುತ್ತದೆ. ಮತ್ತು ವಾರ್ಷಿಕ ಶೇ 2% ದಂಡ ಬಡ್ಡಿ ಮತ್ತು ಖರ್ಚು ಬಾಕಿ ಇರುತ್ತದೆ.(2) ನೀವು ಸದರಿ ಮೊತ್ತವನ್ನು ಈ ನೋಟಿಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ ಆಕ್ಟ್ 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3. ಮುಂದಿನ ವಿಚಾರಣೆಯ ದಿನಾಂಕ ಅಥವಾ ಮೊದಲು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಈ ಮೂಲಕ ಆದೇಶಿಸಲಾಗಿದೆ. 4. ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸು ಪ್ರಕಟಣೆಯಾದ ದಿನಾಂಕದಿಂದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5. ಮೇಲೆ ಹೇಳಿದ ಮೊತ್ತಕ್ಕೆ ಹೆಚ್ಚುವರಿಯಾಗಿ ನೀವು ಪಾವತಿಸಬೇಕಾಗುತ್ತದೆ. (ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ [illegible] ದಿನಾಂಕ 04.09.2024 ರಂದು ಕೊಡಲಾಗಿದೆ.

ಸಹಿ/-ವಸೂಲಾತಿ ಅಧಿಕಾರಿ
ಸಾಲವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು (ಡಿಆರ್‌ಟಿ-2)

ಗಮನಿಸಿ: [illegible]

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869
ನೋಂದಾಯಿತ ಕಚೇರಿ: ನಂ.44, ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು 560 064. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com
ವೆಬ್‌ಸೈಟ್: www.centumelectronics.com

ಕಂಪನಿಯ ಷೇರುದಾರರಿಗೆ ಪೋಸ್ಟಲ್ ಬ್ಯಾಲೆಟ್‌ನ ಸೂಚನೆ

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಷೇರುದಾರರಿಗೆ,

ಆತ್ಮೀಯ ಸದಸ್ಯರೇ,

ಕಂಪನಿ ಕಾಯ್ದೆ, 2013 ರ (**"ಕಾಯ್ದೆ"**) ಸೆಕ್ಷನ್ 108 ರ ಜೊತೆಗೆ ಓದಿಕೊಳ್ಳಲಾದ ಸೆಕ್ಷನ್ 110 ಮತ್ತು ಅನ್ವಯವಾಗುವ ಇತರೆ ನಿಬಂಧನೆಗಳ ಅನ್ವಯ (ಒಂದು ವೇಳೆ ಇದ್ದಲ್ಲಿ), ಅದರ ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ) ಹಾಗೂ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು-ಜಾರಿಗಳನ್ನು ಒಳಗೊಂಡಂತೆ, ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 44 (**"SEBI LODR"**) ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ ಸಾಮಾನ್ಯ ಸಭೆಗಳ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ (**"SS-2"**) ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ವಿನಾಯಿತಿಗಳು ಮತ್ತು ಸ್ಪಷ್ಟೀಕರಣಗಳಾದ ಸಾಮಾನ್ಯ ಸುತ್ತೋಲೆ ಸಂಖ್ಯೆಗಳು: 14/2020 (ಏಪ್ರಿಲ್ 8, 2020), 17/2020 (ಏಪ್ರಿಲ್ 13, 2020), 22/2020 (ಜೂನ್ 15, 2020), 33/2020 (ಸೆಪ್ಟೆಂಬರ್ 28, 2020), 39/2020 (ಡಿಸೆಂಬರ್ 31, 2020), 10/2021 (ಜೂನ್ 23, 2021), 20/2021 (ಡಿಸೆಂಬರ್ 8, 2021), 3/2022 (ಮೇ 5, 2022), 11/2022 (ಡಿಸೆಂಬರ್ 28, 2022), 9/2023 (ಸೆಪ್ಟೆಂಬರ್ 25, 2023), 09/2024 (ಸೆಪ್ಟೆಂಬರ್ 19, 2024), 03/2025 (ಸೆಪ್ಟೆಂಬರ್ 22, 2025) ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ (ಒಟ್ಟಾರೆಯಾಗಿ **"MCA ಸುತ್ತೋಲೆಗಳು"**) ಹಾಗೂ ಯಾವುದೇ ಇತರೆ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳ ಅಡಿಯಲ್ಲಿ, ಈ ಮೂಲಕ ಸೂಚನೆ ನೀಡಲಾಗಿದೆ. ಕೆಳಗೆ ಲಗತ್ತಿಸಲಾದ ಪ್ರಸ್ತಾವಿತ ವಿಶೇಷ ನಿರ್ಣಯಗಳಿಗೆ (Special Resolution), ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (**"ಕಂಪನಿ"**) ಸದಸ್ಯರ ಅನುಮೋದನೆಯನ್ನು ಅಂಚೆ ಮತದಾನದ (Postal Ballot) ಮೂಲಕ, ಅಂದರೆ **'ರಿಮೋಟ್ ಇ-ವೋಟಿಂಗ್'** ಪ್ರಕ್ರಿಯೆಯ ಮೂಲಕ ಕೋರಲಾಗಿದೆ.

ಐಟಂ ಸಂಖ್ಯೆ 1 : ಶ್ರೀ ಅಪೂರ್ವ ಚಂದ್ರ (DIN: 02531655) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ (Independent Director) ನೇಮಕ ಮಾಡುವುದು.

ಐಟಂ ಸಂಖ್ಯೆ 2 : ಶ್ರೀ ರಮೇಶ್ ರಾಮದುರ್ಗೈ (DIN: 07109252) ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ (Independent Director) ನೇಮಕ ಮಾಡುವುದು.

ಐಟಂ ಸಂಖ್ಯೆ 3 : ಸೆಂಟಮ್ ಎಲೆಕ್ಟ್ರಾನಿಕ್ಸ್ ಯುಕೆ ಲಿಮಿಟೆಡ್ (Centum Electronics UK Limited) ಮತ್ತು ಸೆಂಟಮ್ ಟಿ & ಎಸ್ ಗ್ರೂಪ್ ಸೊಸೈಟಿ ಅನಾನಿಮ್ (S.A.), ಫ್ರಾನ್ಸ್ ಮತ್ತು ಅದರ ಅಂಗಸಂಸ್ಥೆಗಳಲ್ಲಿನ ಹೂಡಿಕೆಗಳು/ಆಸ್ತಿಗಳ ಮಾರಾಟ, ಬಂಡವಾಳ ಹಿಂತೆಗೆತ (Divestment), ವಿಲೇವಾರಿ (Disposal) ಮತ್ತು / ಅಥವಾ ಸದರಿ ಸಂಸ್ಥೆಗಳ ಮೇಲಿನ ಕಂಪನಿಯ ನಿಯಂತ್ರಣವನ್ನು ಅಂತ್ಯಗೊಳಿಸುವ ಮೂಲಕ ಸೆಂಟಮ್ ಎಲೆಕ್ಟ್ರಾನಿಕ್ಸ್ ಯುಕೆ ಲಿಮಿಟೆಡ್ ಮತ್ತು ಸೆಂಟಮ್ ಟಿ & ಎಸ್ ಗ್ರೂಪ್ ಸೊಸೈಟಿ ಅನಾನಿಮ್ (S.A.), ಫ್ರಾನ್ಸ್ (ಅದರ ಅಂಗಸಂಸ್ಥೆಗಳೊಂದಿಗೆ) ಸಂಸ್ಥೆಗಳ ಪುನರ್ರಚನೆಗೆ (Restructuring) ಅನುಮೋದನೆ ನೀಡುವುದು.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ (MCA) ಸುತ್ತೋಲೆಗಳ ಪ್ರಕಾರ, ಫೆಬ್ರವರಿ 14, 2026 ರ ದಿನಾಂಕದ ಅಂಚೆ ಮತದಾನದ ನೋಟಿಸ್ ಅನ್ನು (**"ನೋಟಿಸ್"**), ಕಂಪನಿಯ ಯಾವ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ (Depository Participants)/ ಕಂಪನಿ/ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್‌ಗಳಾದ (**"RTA"**) ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (KFIN Technologies Limited) ನಲ್ಲಿ ನೋಂದಾಯಿಸಿದ್ದಾರೋ ಅಂತಹ ಸದಸ್ಯರಿಗೆ ವಿದ್ಯುನ್ಮಾನ (Electronic) ಮಾದರಿಯ ಮೂಲಕ ಕಳುಹಿಸಲಾಗಿದೆ. ನೋಟಿಸ್ ಅನ್ನು ವಿದ್ಯುನ್ಮಾನವಾಗಿ ಕಳುಹಿಸುವ ಪ್ರಕ್ರಿಯೆಯು ಫೆಬ್ರವರಿ 14, 2026 ರಂದು ಪೂರ್ಣಗೊಂಡಿದೆ. ಅಂಚೆ ಮತದಾನದ ನೋಟಿಸ್ ಹಾಗೂ ಅದರಲ್ಲಿ ಒಳಗೊಂಡಿರುವ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ವಿವರಗಳು ಕಂಪನಿಯ ವೆಬ್‌ಸೈಟ್ www.centumelectronics.com, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ (BSE Limited) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ವೆಬ್‌ಸೈಟ್‌ಗಳಲ್ಲಿ ಹಾಗೂ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ **(https://evoting.kfintech.com)** ವೆಬ್‌ಸೈಟ್‌ನಲ್ಲಿಯೂ ಲಭ್ಯವಿರುತ್ತದೆ.

ಈ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಸಂಬಂಧಿತ ದಾಖಲೆಗಳ ಅಥವಾ ಕಾಯ್ದೆಯ ಸೆಕ್ಷನ್ 102 ರ ಅಡಿಯಲ್ಲಿನ ವಿವರಣಾತ್ಮಕ ಹೇಳಿಕೆಯ (Explanatory Statement) ಪರಿಶೀಲನೆಯನ್ನು ಬಯಸುವ ಸದಸ್ಯರು, ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ investors@centumelectronics.com ಗೆ ಇಮೇಲ್ ಕಳುಹಿಸಬಹುದು. ರಿಮೋಟ್ ಇ-ವೋಟಿಂಗ್‌ನ ಕೊನೆಯ ದಿನಾಂಕವಾದ ಸೋಮವಾರ, ಮಾರ್ಚ್ 16, 2026 ರವರೆಗೆ ಈ ಅವಕಾಶವಿರುತ್ತದೆ. ಇಮೇಲ್‌ನಲ್ಲಿ ಸದಸ್ಯರು ತಮ್ಮ ಹೆಸರು, ಫೋಲಿಯೋ ಸಂಖ್ಯೆ (Folio no.) / ಕ್ಲೈಂಟ್ ಐಡಿ (Client ID) ಮತ್ತು ಡಿಪಿ ಐಡಿ (DP ID) ಹಾಗೂ ತಾವು ಪರಿಶೀಲಿಸಲು ಬಯಸುವ ದಾಖಲೆಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕು.

ಕಂಪನಿ ಕಾಯ್ದೆಯ ಸೆಕ್ಷನ್ 108 ರ ನಿಬಂಧನೆಗಳು ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20, ಲಿಸ್ಟಿಂಗ್ ರೆಗ್ಯುಲೇಷನ್ಸ್‌ನ ನಿಯಮ 44 ಮತ್ತು ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ SS-2 ರ ಅನ್ವಯ, ಕಂಪನಿಯು ಪ್ರಸ್ತಾವಿತ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸದಸ್ಯರು ವಿದ್ಯುನ್ಮಾನ ಮೂಲಕ ಮತ ಚಲಾಯಿಸಲು ಅನುಕೂಲವಾಗುವಂತೆ ಕೆಫಿನ್ ಟೆಕ್ (KFintech) ಮೂಲಕ https://evoting.kfintech.com/ ನಲ್ಲಿ ವಿದ್ಯುನ್ಮಾನ ಮತದಾನದ (Electronic Voting) ಸೌಲಭ್ಯವನ್ನು ಒದಗಿಸುತ್ತಿದೆ.

ಕಂಪನಿ ಕಾಯ್ದೆ, ಅದರ ನಿಯಮಗಳು (Rules), ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ (SS-2) ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ (MCA) ಸುತ್ತೋಲೆಗಳ ಅನ್ವಯವಿರುವ ವಿವರಗಳು ಈ ಕೆಳಗಿನಂತಿವೆ:

a. ಶುಕ್ರವಾರ, ಫೆಬ್ರವರಿ 06, 2026 ರಂದು ("ಕಟ್-ಆಫ್ ದಿನಾಂಕ" / Cut-off Date) ಭೌತಿಕ ರೂಪದಲ್ಲಿ (Physical form) ಅಥವಾ ಡಿಮೆಟಿರಿಯಲೈಸ್ಡ್ ರೂಪದಲ್ಲಿ (Dematerialised form) ಷೇರುಗಳನ್ನು ಹೊಂದಿರುವ ಸದಸ್ಯರು ಮಾತ್ರ ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಗಳು ಈ ಅಂಚೆ ಮತದಾನದ ನೋಟಿಸ್ ಅನ್ನು ಕೇವಲ ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸತಕ್ಕದ್ದು.

b. ಇಮೇಲ್ ವಿಳಾಸಗಳನ್ನು ನೋಂದಾಯಿಸುವ/ನವೀಕರಿಸುವ ವಿಧಾನ: ಯಾವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಿಲ್ಲವೋ, ಅವರು ಈ ಕೆಳಗಿನ ಪ್ರಕ್ರಿಯೆಯ ಮೂಲಕ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಲು ಅಥವಾ ನವೀಕರಿಸಲು (Update) ವಿನಂತಿಸಲಾಗಿದೆ.

i) ಡಿಮೆಟಿರಿಯಲೈಸ್ಡ್ (Dematerialized) ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು: ತಮ್ಮ ಇಮೇಲ್ ವಿಳಾಸವನ್ನು ತಮ್ಮ ಸಂಬಂಧಿತ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ (DP's) ಮೂಲಕ ನೋಂದಾಯಿಸಲು ಅಥವಾ ನವೀಕರಿಸಲು ವಿನಂತಿಸಲಾಗಿದೆ.

ii) ಭೌತಿಕ (Physical) ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು: ಇಮೇಲ್ ವಿಳಾಸವನ್ನು ನೋಂದಾಯಿಸಲು ಅಥವಾ ನವೀಕರಿಸಲು, ಸರಿಯಾಗಿ ಸಹಿ ಮಾಡಿದ ISR – 1 ಅರ್ಜಿಯೊಂದಿಗೆ (Form ISR-1) ಕೆಫಿನ್ ಟೆಕ್ (KFintech) ಸಂಸ್ಥೆಯ ಇಮೇಲ್ ವಿಳಾಸ einward.ris@kfintech.com ಗೆ ಇಮೇಲ್ ವಿನಂತಿಯನ್ನು ಕಳುಹಿಸಲು ವಿನಂತಿಸಲಾಗಿದೆ.

c. ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನ: ಅಂಚೆ ಮತದಾನದ ನೋಟಿಸ್‌ನಲ್ಲಿ ಸೂಚಿಸಲಾದ ವ್ಯವಹಾರಗಳ (ನಿರ್ಣಯಗಳ) ಮೇಲೆ ಸದಸ್ಯರು ಇ-ವೋಟಿಂಗ್ ವ್ಯವಸ್ಥೆಯ ಮೂಲಕ ದೂರಸ್ಥವಾಗಿ (Remotely) ತಮ್ಮ ಮತಗಳನ್ನು ಚಲಾಯಿಸಲು ಅವಕಾಶವಿರುತ್ತದೆ. ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿವರವಾದ ಕಾರ್ಯವಿಧಾನವನ್ನು ಅಂಚೆ ಮತದಾನದ ನೋಟಿಸ್‌ನಲ್ಲಿ ನೀಡಲಾಗಿದೆ. ಈ ವಿವರಗಳು ಕಂಪನಿಯ ವೆಬ್‌ಸೈಟ್‌ನಲ್ಲಿಯೂ ಸಹ ಲಭ್ಯವಿವೆ.

d. ರಿಮೋಟ್ ಇ-ವೋಟಿಂಗ್ ಅವಧಿಯು ಫೆಬ್ರವರಿ 15, 2026, ಭಾನುವಾರದಂದು ಬೆಳಿಗ್ಗೆ 9:00 ಗಂಟೆಗೆ (IST) ಪ್ರಾರಂಭವಾಗಿ, ಮಾರ್ಚ್ 16, 2026, ಸೋಮವಾರದಂದು ಸಂಜೆ 5:00 ಗಂಟೆಗೆ (IST) ಮುಕ್ತಾಯಗೊಳ್ಳುತ್ತದೆ. ಈ ಸಮಯದ ನಂತರ ಕೆಫಿನ್ ಟೆಕ್ (KFintech) ಸಂಸ್ಥೆಯು ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ ಮತ್ತು ತದನಂತರ ಮತದಾನ ಮಾಡಲು ಅವಕಾಶವಿರುವುದಿಲ್ಲ.

e. ಒಮ್ಮೆ ನಿರ್ಣಯದ ಮೇಲೆ ಮತವನ್ನು ಚಲಾಯಿಸಿದ ನಂತರ, ಸದಸ್ಯರು ಅದನ್ನು ತದನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.

f. ಕಟ್-ಆಫ್ ದಿನಾಂಕದಂದು (Cut-off Date) ಕಂಪನಿಯ ಸದಸ್ಯರಾಗಿರುವವರೆಲ್ಲರೂ (ಕಂಪನಿ/RTA/ಡಿಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಕಾರಣದಿಂದ ನೋಟಿಸ್ ಸ್ವೀಕರಿಸದ ಸದಸ್ಯರನ್ನು ಒಳಗೊಂಡಂತೆ), ಅಂಚೆ ಮತದಾನದ ನೋಟಿಸ್‌ನಲ್ಲಿ ಸೂಚಿಸಲಾದ ಪ್ರಕ್ರಿಯೆಯ ಪ್ರಕಾರ ಪ್ರಸ್ತಾವಿತ ವ್ಯವಹಾರಕ್ಕೆ ಸಂಬಂಧಿಸಿದಂತೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

g. ಅಂಚೆ ಮತದಾನದ (Postal Ballot) ಅವಧಿಯಲ್ಲಿ ನಡೆಯುವ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಸಮ್ಮತವಾಗಿ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು, ವೃತ್ತಿನಿರತ ಕಂಪನಿ ಸೆಕ್ರೆಟರಿ (Practicing Company Secretary) ಆಗಿರುವ ಶ್ರೀ ಎಸ್.ಪಿ. ನಾಗರಾಜನ್ (CP No. 4738) ಅವರನ್ನು ಪರಿಶೀಲಕ (Scrutinizer) ಆಗಿ ನೇಮಿಸಲಾಗಿದೆ.

h. ಮತದಾನದ ಫಲಿತಾಂಶಗಳನ್ನು ಬಿಎಸ್‌ಇ ಲಿಮಿಟೆಡ್ (BSE Limited), ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ (NSE) ಮತ್ತು ಕೆಫಿನ್ ಟೆಕ್ (KFintech) ಸಂಸ್ಥೆಗಳಿಗೆ ತಿಳಿಸಲಾಗುವುದು ಹಾಗೂ ಈ ಫಲಿತಾಂಶಗಳು ಅವುಗಳ ಸಂಬಂಧಿತ ವೆಬ್‌ಸೈಟ್‌ಗಳಲ್ಲಿ ಮಾರ್ಚ್ 18, 2026, ಬುಧವಾರದಂದು ಅಥವಾ ಅದಕ್ಕಿಂತ ಮೊದಲು ಲಭ್ಯವಿರುತ್ತವೆ.

i. ಇ-ವೋಟಿಂಗ್‌ಗೆ ಸಂಬಂಧಿಸಿದ ವಿವರವಾದ ಸೂಚನೆಗಳಿಗಾಗಿ ಸದಸ್ಯರು ಅಂಚೆ ಮತದಾನದ ನೋಟಿಸ್ ಅನ್ನು (Postal Ballot Notice) ನೋಡಬಹುದು.

ದಯವಿಟ್ಟು ಸದಸ್ಯರಿಗಾಗಿ ಇರುವ 'ಇ-ವೋಟಿಂಗ್ ಬಳಕೆದಾರರ ಕೈಪಿಡಿ'ಯನ್ನು (e-voting user manual) https://evoting.kfintech.com/ನ ಡೌನ್‌ಲೋಡ್ ವಿಭಾಗದಲ್ಲಿ ವೀಕ್ಷಿಸಬಹುದು. ಇ-ವೋಟಿಂಗ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳು/ದೂರುಗಳು ಅಥವಾ ಯಾವುದೇ ಸಹಾಯದ ಅಗತ್ಯವಿದ್ದಲ್ಲಿ, ನೀವು ಈ ಕೆಳಗಿನವರನ್ನು ಸಂಪರ್ಕಿಸಬಹುದು:

ಎನ್.ಎಸ್.ಡಿ.ಎಲ್ (NSDL) ವೆಬ್‌ಸೈಟ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಇದ್ದಲ್ಲಿ ಸಂಪರ್ಕ ವಿವರಗಳು	ಸಿ.ಡಿ.ಎಸ್.ಎಲ್ (CDSL) ವೆಬ್‌ಸೈಟ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಇದ್ದಲ್ಲಿ ಸಂಪರ್ಕ ವಿವರಗಳು
ಲಾಗಿನ್ ಸಮಯದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು **evoting@nsdl.co.in** ಗೆ ವಿನಂತಿಯನ್ನು ಕಳುಹಿಸುವ ಮೂಲಕ ಅಥವಾ **022-4886 7000 / 1800 102 0990**ಗೆ ಕರೆ ಮಾಡುವ ಮೂಲಕ NSDL ಸಹಾಯವಾಣಿಯನ್ನು ಸಂಪರ್ಕಿಸಬಹುದು.	ಲಾಗಿನ್ ಸಮಯದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು **helpdesk.evoting@cdslindia.com** ಗೆ ವಿನಂತಿಯನ್ನು ಕಳುಹಿಸುವ ಮೂಲಕ ಅಥವಾ **1800 210 9911**ಗೆ ಕರೆ ಮಾಡುವ ಮೂಲಕ CDSL ಸಹಾಯವಾಣಿಯನ್ನು ಸಂಪರ್ಕಿಸಬಹುದು.

ಸದಸ್ಯರು ಕಂಪನಿಯ ನೋಂದಾಯಿತ ಕಚೇರಿಯಲ್ಲಿರುವ ಕಂಪನಿ ಕಾರ್ಯದರ್ಶಿಯವರಿಗೆ (Company Secretary) ಪತ್ರ ಬರೆಯಬಹುದು ಅಥವಾ investors@centumelectronics.com ಗೆ ಇಮೇಲ್ ಕಳುಹಿಸಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ಇಂದು ಎಚ್ ಎಸ್
ಕಂಪನಿ ಸೆಕ್ರೆಟರಿ
ಸದಸ್ಯತ್ವ ಸಂಖ್ಯೆ: F12285

ಸ್ಥಳ : ಬೆಂಗಳೂರು
ದಿನಾಂಕ : 14ನೇ ಫೆಬ್ರುವರಿ, 2026

ಮೂಲಸೌಕರ್ಯ ವೃದ್ಧಿಗೆ ನಗರ ಸವಾಲು ನಿಧಿ

₹1.6 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ಅಸ್ತು ಸೌತ್ ಬ್ಲಾಕ್‌ನಲ್ಲಿ ನಡೆದ ಕೊನೆಯ ಸಂಪುಟ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂಲಸೌಕರ್ಯ, ನಗರಾಭಿವೃದ್ಧಿ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ₹1.6 ಲಕ್ಷ ಕೋಟಿ ಮೊತ್ತದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸೌತ್ ಬ್ಲಾಕ್‌ನಲ್ಲಿ ನಡೆದ ಕೊನೆಯ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ನಗರಗಳ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಉತ್ತೇಜನ ನೀಡಲು ಕೇಂದ್ರದ ₹1 ಲಕ್ಷ ಕೋಟಿ ನೆರವಿನಿಂದ 'ನಗರ ಸವಾಲು ನಿಧಿ (ಯುಸಿಎಫ್)' ಆರಂಭಿಸಲು ಸಂಪುಟ ಅನುಮೋದನೆ ನೀಡಿದೆ. ನವೋದ್ಯಮಕ್ಕೆ ಉತ್ತೇಜನ ನೀಡಲು 'ಸ್ಟಾರ್ಟ್ ಅಪ್ ಇಂಡಿಯಾ ಫಂಡ್ ಆಫ್ ಫಂಡ್ಸ್ 2.0' ಕ್ಕೆ ಒಪ್ಪಿಗೆ ಕೊಡಲಾಗಿದೆ. ಡೀಪ್ ಟೆಕ್, ತಂತ್ರಜ್ಞಾನ ಆಧಾರಿತ ನವೀನ ಉತ್ಪಾದನಾ ಸ್ಟಾರ್ಟ್ ಅಪ್‌ಗಳು ಮತ್ತು ಆರಂಭಿಕ ಬೆಳವಣಿಗೆಯ ಹಂತದ ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸಲು ₹10,000 ಕೋಟಿ ನಿಧಿ ಬಳಕೆ ಮಾಡಲಾಗುತ್ತದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, 'ನಗರ ಸವಾಲು ನಿಧಿ ಯೋಜನೆಯಡಿ ಕೇಂದ್ರ ಸರ್ಕಾರವು ಯೋಜನಾ ವೆಚ್ಚದ ಶೇ 25 ಭರಿಸಲಿದೆ. ಈ ನಿಧಿಗೆ ಮಾರುಕಟ್ಟೆಯಿಂದ ಯೋಜನಾ ವೆಚ್ಚದ ಕನಿಷ್ಠ ಶೇಕಡಾ 50 ರಷ್ಟನ್ನು ಸಂಗ್ರಹಿಸುವುದು ಕಡ್ಡಾಯ. ಈ ಉಪ ಕ್ರಮವು ಮುಂದಿನ ಐದು ವರ್ಷಗಳಲ್ಲಿ ನಗರ ವಲಯದಲ್ಲಿ ಒಟ್ಟು ₹4 ಲಕ್ಷ ಕೋಟಿ ಹೂಡಿಕೆಗೆ ಕಾರಣವಾಗುತ್ತದೆ' ಎಂದರು.

ಈ ನಿಧಿಯು ದೇಶದ ನಗರ ಅಭಿವೃದ್ಧಿ ವಿಧಾನವನ್ನು ಅನುದಾನ ಆಧಾರಿತ ಹಣಕಾಸು ವ್ಯವಸ್ಥೆಯಿಂದ ಮಾರುಕಟ್ಟೆ ಸಂಯೋಜಿತ, ಸುಧಾರಣಾ ಪ್ರೇರಿತ ಮತ್ತು ಫಲಿತಾಂಶ ಆಧಾರಿತ ಮೂಲಸೌಕರ್ಯ ಸೃಷ್ಟಿಯತ್ತ ಕೊಂಡೊಯ್ಯಲಿದೆ. ಈ ನಿಧಿಯು 2025-26 ರಿಂದ 2030-31ರ ಆರ್ಥಿಕ ವರ್ಷದ ವರೆಗೆ ಕಾರ್ಯನಿರ್ವಹಿಸಲಿದ್ದು, ಇದರ ಅನುಷ್ಠಾನದ ಅವಧಿಯನ್ನು 2033-34ರ ಆರ್ಥಿಕ ವರ್ಷದವರೆಗೆ ವಿಸ್ತರಿಸಬಹುದು ಅವರು ಹೇಳಿದರು.

ಈ ನಿಧಿಯ ವ್ಯಾಪ್ತಿ:

- 10 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎಲ್ಲ ನಗರಗಳು
- ಮೇಲೆ ಉಲ್ಲೇಖಿಸದ ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ರಾಜಧಾನಿಗಳು
- 1 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಪ್ರಮುಖ ಕೈಗಾರಿಕಾ ನಗರಗಳು.
- ಹೆಚ್ಚುವರಿಯಾಗಿ, ಗುಡ್ಡಗಾಡು ರಾಜ್ಯಗಳು, ಈಶಾನ್ಯ ರಾಜ್ಯಗಳ ಎಲ್ಲ ನಗರ ಸ್ಥಳೀಯ ಸಂಸ್ಥೆಗಳು ಮತ್ತು 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಸಣ್ಣ ನಗರ ಸ್ಥಳೀಯ ಸಂಸ್ಥೆಗಳು 'ಕ್ರೆಡಿಟ್ ಮರುಪಾವತಿ ಖಾತರಿ ಯೋಜನೆ'ಯ ಅಡಿಯಲ್ಲಿ ಬೆಂಬಲ ಪಡೆಯಲು ಅರ್ಹವಾಗಿರುತ್ತವೆ.

ನಿಧಿಯ ಪ್ರಮುಖ ಲಕ್ಷಣಗಳು

- ಯೋಜನಾ ವೆಚ್ಚದ ಶೇ 50 ಮೊತ್ತವನ್ನು ಮುನ್ಸಿಪಲ್ ಬಾಂಡ್‌ಗಳು, ಬ್ಯಾಂಕ್ ಸಾಲಗಳು ಮತ್ತು ಖಾಸಗಿ ಸಹಭಾಗಿತ್ವದ ಮೂಲಕ ಮಾರುಕಟ್ಟೆ ಮೂಲಗಳಿಂದ ಸಂಗ್ರಹಿಸಬೇಕಾಗುತ್ತದೆ. ಶೇ 25 ಭಾಗವನ್ನು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ನಗರ ಸ್ಥಳೀಯ ಸಂಸ್ಥೆಗಳು ಅಥವಾ ಇತರ ಮೂಲಗಳಿಂದ ಭರಿಸಬಹುದು.
- ಪಾರದರ್ಶಕ, ಸ್ಪರ್ಧಾತ್ಮಕ 'ಚಾಲೆಂಜ್ ಮೋಡ್' ಮೂಲಕ ಯೋಜನೆಗಳನ್ನು ಆಯ್ಕೆ ಮಾಡಲಾಗುತ್ತದೆ.
- ನಗರ ಆಡಳಿತ, ಮಾರುಕಟ್ಟೆ ಮತ್ತು ಹಣಕಾಸು ವ್ಯವಸ್ಥೆಗಳು, ಕಾರ್ಯಾಚರಣೆಯ ದಕ್ಷತೆ ಮತ್ತು ನಗರ ಯೋಜನೆ ವಲಯಗಳಲ್ಲಿನ ಸುಧಾರಣೆಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು.
- 2ನೇ ಹಾಗೂ 3ನೇ ಹಂತದ ನಗರಗಳು ಮೊದಲ ಬಾರಿಗೆ ಮಾರುಕಟ್ಟೆ ಸಾಲ ಪಡೆಯಲು ಅನುಕೂಲವಾಗುವಂತೆ ₹5,000 ಕೋಟಿಗಳ 'ಸಾಲ ಮರುಪಾವತಿ ಖಾತರಿ ಯೋಜನೆ'ಗೆ ಅನುಮೋದನೆ ನೀಡಲಾಗಿದೆ.

ಮೊದಲ ರಸ್ತೆ–ರೈಲು ಸುರಂಗ ಮಾರ್ಗಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಅಸ್ಸಾಂನಲ್ಲಿ ಬ್ರಹ್ಮಪುತ್ರ ನದಿ ಮೂಲಕ ಹಾಯ್ದುಹೋಗುವ ದೇಶದ ಮೊದಲ ರಸ್ತೆ ಮತ್ತು ರೈಲು ಮಾರ್ಗ ಒಳಗೊಂಡ 'ಟ್ವಿನ್ ಟ್ಯೂಬ್ ಸುರಂಗ' ನಿರ್ಮಾಣಕ್ಕೆ ಆರ್ಥಿಕ ವ್ಯವಹಾರಗಳ ಕುರಿತ ಸಂಪುಟ ಸಮಿತಿ ಶನಿವಾರ ಅನುಮೋದನೆ ನೀಡಿದೆ.



ನರೇಂದ್ರ ಮೋದಿ

ಉದ್ದೇಶಿತ ಈ ಸುರಂಗ ಮಾರ್ಗವು ಗೋಹಪುರ ಹಾಗೂ ನುಮಾಲಿಗಢ ನಡುವೆ ಸಂಪರ್ಕ ಕಲ್ಪಿಸಲಿದೆ. 34 ಕಿ.ಮೀ. ಉದ್ದದ ಈ ಮಾರ್ಗವನ್ನು ₹18,662 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯು ಒಪ್ಪಿಗೆ ನೀಡಿದೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 'ಹೂಗ್ಲಿ ನದಿ ಮೂಲಕ ಹಾಯ್ದು ಹೋಗುವ ದೇಶದ ಮೊದಲ ಸುರಂಗ ಮಾರ್ಗವನ್ನು ಕೋಲ್ಕತ್ತದಲ್ಲಿ ನಿರ್ಮಿಸಲಾಗಿದೆ. ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚರಿಸುತ್ತವೆ' ಎಂದು ಹೇಳಿದರು.

'ಅಹಮದಾಬಾದ್–ಮುಂಬೈ ನಡುವಿನ ಬುಲೆಟ್ ರೈಲು ಮಾರ್ಗವು ಸಮುದ್ರದ ಮೂಲಕ ಹಾಯ್ದು ಹೋಗಲಿದ್ದು, ಈ ಸುರಂಗಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಇದು ಸಮುದ್ರಗೊಳಗೆ ನಿರ್ಮಿಸಲಾಗುತ್ತಿರುವ ದೇಶದ ಮೊದಲ ಸುರಂಗವಾಗಿದೆ' ಎಂದು ಹೇಳಿದರು.

'ರಸ್ತೆ, ರೈಲು ಮಾರ್ಗ ಅಕ್ಕಪಕ್ಕ': ಉದ್ದೇಶಿತ ಗೋಹಪುರ–ನುಮಾಲಿಗಢ ನಡುವಿನ ಟ್ವಿನ್ ಟ್ಯೂಬ್ ಸುರಂಗದಲ್ಲಿ ರಸ್ತೆ ಹಾಗೂ ರೈಲು ಮಾರ್ಗ ಅಕ್ಕಪಕ್ಕವೇ ಇರಲಿವೆ. ಇಂತಹ ಸೌಕರ್ಯವುಳ್ಳ ದೇಶದ ಮೊದಲ ಸುರಂಗ ಮಾರ್ಗ ಇದಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾ.ಹೆ–715ರಲ್ಲಿರುವ ನುಮಾಲಿಗಢ ಹಾಗೂ ರಾ.ಹೆ–15ರ ಮೇಲಿರುವ ಗೋಹಪುರ ನಡುವಿನ ಅಂತರ 240 ಕಿ.ಮೀ. ಇದ್ದು, ಪ್ರಯಾಣಕ್ಕೆ 6 ಗಂಟೆ ಬೇಕಾಗುತ್ತದೆ. ಬ್ರಹ್ಮಪುತ್ರ ನದಿಯೊಳಗಿನಿಂದ 34 ಕಿ.ಮೀ. ಉದ್ದದ ಟ್ವಿನ್ ಟ್ಯೂಬ್ ಸುರಂಗ ಮಾರ್ಗ ನಿರ್ಮಿಸಿದಲ್ಲಿ ಪ್ರಯಾಣಕ್ಕೆ ತಗಲುವ ಅವಧಿ 30 ನಿಮಿಷಕ್ಕೆ ಇಳಿಯಲಿದೆ' ಎಂದು ತಿಳಿಸಿದ್ದಾರೆ.

'ಈ ಸುರಂಗ ಮಾರ್ಗದಿಂದ ಅಸ್ಸಾಂ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಹಾಗೂ ಈಶಾನ್ಯ ರಾಜ್ಯಗಳ ಇತರ ಪ್ರದೇಶಗಳಿಗೆ ಹೆಚ್ಚು ಪ್ರಯೋಜನವಾಗಲಿದೆ' ಎಂದಿದ್ದಾರೆ.

ಪ್ರಮುಖ ಅಂಶಗಳು

- ಇದು, ರಸ್ತೆ ಹಾಗೂ ರೈಲು ಮಾರ್ಗ ಒಳಗೊಂಡ ಭಾರತದ ಮೊದಲ ಹಾಗೂ ವಿಶ್ವದ ಎರಡನೇ 'ಟ್ವಿನ್ ಟ್ಯೂಬ್ ಸುರಂಗ'
- ಸರಕು ಸಾಗಣೆ ಸುಲಲಿತವಾಗಲಿದ್ದು, ವೆಚ್ಚವೂ ಕಡಿಮೆಯಾಗಲಿದೆ
- ಎರಡು ರಾಷ್ಟ್ರೀಯ ಹೆದ್ದಾರಿಗಳು (ರಾ.ಹೆ–15 ಹಾಗೂ ರಾ.ಹೆ–75) ಹಾಗೂ ಎರಡು ರೈಲು ಮಾರ್ಗ ಜೋಡಿಸಲಿದೆ. ನಾರ್ತ್ ಫ್ರಂಟಿಯರ್ ರೈಲ್ವೆಯ ರಂಗಿಯಾ ವಿಭಾಗದ ರಂಗಿಯಾ–ಮುಕೊಂಗ್‌ಸೆಲೆಕ್ ರೈಲ್ವೆ ಸೆಕ್ಷನ್ (ಗೋಹಪುರ ಕಡೆ) ಹಾಗೂ ತೀನ್‌ಸುಕಿಯಾ ವಿಭಾಗದ ಫುರ್‌ಕಟಿಂಗ್–ಮರಿಯಾನಿ ಸೆಕ್ಷನ್ ನಡುವೆ ಸಂಪರ್ಕ ಕಲ್ಪಿಸುತ್ತದೆ
- ನಾಲ್ಕು ಪ್ರಮುಖ ರೈಲು ನಿಲ್ದಾಣಗಳು, ಎರಡು ವಿಮಾನ ನಿಲ್ದಾಣಗಳು ಹಾಗೂ ಎರಡು ಒಳನಾಡು ಜಲಮಾರ್ಗಗಳಿಗೆ ಸಂಪರ್ಕ ಕಲ್ಪಿಸಿ ಪ್ರಯಾಣಿಕರ ಸಂಚಾರ, ಸರಕುಗಳ ಸಾಗಣೆಗೆ ಹಾಗೂ ಪ್ರವಾಸೋದ್ಯಮಕ್ಕೆ ನೆರವಾಗಲಿದೆ
- ಈ ಯೋಜನೆಯಿಂದ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 80 ಲಕ್ಷ ಮಾನವ ದಿನಗಳಷ್ಟು ಉದ್ಯೋಗ ಸೃಷ್ಟಿಯಾಗಲಿದೆ

ಸುದ್ದಿ 2 ನಿಮಿಷ

'ಕಾಂಗ್ರೆಸ್ ಹೆಚ್ಚು ವಿಷಪೂರಿತ'

ಗುವಾಹಟಿ (ಪಿಟಿಐ): 'ಕಳೆದ 10 ವರ್ಷಗಳಿಂದ ಕಾಂಗ್ರೆಸ್ ಪಕ್ಷವು ಅಸ್ಸಾಂನಲ್ಲಿ ಅಧಿಕಾರದಿಂದ ದೂರವುಳಿದಿದೆ. ಅಧಿಕಾರದಲ್ಲಿ ಇದ್ದ ಅವಧಿಗಿಂತಲೂ ಈಗ ಹೆಚ್ಚು ವಿಷಪೂರಿತವಾಗಿದೆ. ಆ ಪಕ್ಷದ ನಾಯಕರು ನೀಡಿದ ಅಪಾಯಕಾರಿ ಹೇಳಿಕೆಗಳಿಂದ ಇದು ಸ್ಪಷ್ಟವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿನ ಖಾನಾಪಾರಾದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕಾಂಗ್ರೆಸ್ ಯಾವಾಗಲೂ ದೇಶದ ಭದ್ರತೆಗೆ ಅಪಾಯ ಉಂಟು ಮಾಡಿದೆ. ಅಸ್ಸಾಂನಲ್ಲಿಯೂ ಕೂಡ ತನ್ನ ಅಧಿಕಾರದ ಅವಧಿಯಲ್ಲಿ ಅಭದ್ರತೆ ಹಾಗೂ ಭಯವನ್ನು ಸೃಷ್ಟಿಸಿತ್ತು' ಎಂದು ಆರೋಪಿಸಿದ್ದಾರೆ.

'ಕಾಂಗ್ರೆಸ್ ಆಡಳಿತದಲ್ಲಿ ಅಸ್ಸಾಂ ರಾಜ್ಯವನ್ನು ಬಂದ್, ಹಿಂಸಾಚಾರ ಹಾಗೂ ಸಂಘರ್ಷಕ್ಕೆ ತಳ್ಳಿತ್ತು. ಪ್ರತಿ ವರ್ಷ ಇದರಿಂದ 1 ಸಾವಿರ ಮಂದಿ ಮೃತಪಟ್ಟಿದ್ದು, ಇದರ ಹೊಣೆಯನ್ನು ಕಾಂಗ್ರೆಸ್ ಪಕ್ಷ ಹೊರಬೇಕು. ಈಗ ಹಲವಾರು ಯುವಕರು ಶಸ್ತ್ರಾಸ್ತ್ರ ತ್ಯಜಿಸಿ, ಸಂವಿಧಾನದ ಮಾರ್ಗ ಅನುಸರಿಸಿದ್ದು, ಅಭಿವೃದ್ಧಿ ಹಾಗೂ ಶಾಂತಿಯ ಮಾರ್ಗದಲ್ಲಿ ಮುನ್ನಡೆಯುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಮತ ಬ್ಯಾಂಕ್ ರಾಜಕಾರಣದಲ್ಲಿ ತೊಡಗಿದ್ದ ಕಾಂಗ್ರೆಸ್ ಧ್ರುವೀಕರಣಕ್ಕೆ ಮುಂದಾಗಿತ್ತು, ಇವುಗಳನ್ನು ಉತ್ತೇಜಿಸುವ ನಿರ್ಧಾರವನ್ನು ತೆಗೆದುಕೊಂಡಿತ್ತು' ಎಂದು ಆರೋಪಿಸಿದ್ದಾರೆ.

'ಮುಸ್ಲಿಂ ಲೀಗ್‌ನಿಂದ ದೇಶ ವಿಭಜನೆಯಾಯಿತು. ಈಗ ಮಾವೋವಾದಿ, ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸ್ (ಎಂಎಂಸಿ) ಕುರಿತು ಜನರು ಎಚ್ಚರಿಕೆಯಿಂದ ಇರಬೇಕು' ಎಂದು ಮೋದಿ ಕರೆ ನೀಡಿದ್ದಾರೆ.

'ನುಸುಳುಕೋರರಿಗೆ ಕಾಂಗ್ರೆಸ್ ಪಕ್ಷವು ನೆರವು ನೀಡುತ್ತಿದ್ದು, ಅಕ್ರಮ ನುಸುಳುಕೋರರನ್ನು ಬಿಜೆಪಿಯು ಮಟ್ಟ ಹಾಕಲಿದೆ. ಹೀಗಾಗಿ, ಮುಂದಿನ ಐದು ವರ್ಷ ರಾಜ್ಯದ ಪಾಲಿಗೆ ನಿರ್ಣಾಯಕವಾಗಿದೆ' ಎಂದು ಹೇಳಿದ್ದಾರೆ.

ಬ್ರಹ್ಮಪುತ್ರ: ಸೇತುವೆ ಉದ್ಘಾಟನೆ

ಗುವಾಹಟಿ (ಪಿಟಿಐ): ಅಸ್ಸಾಂ ರಾಜಧಾನಿ ಗುವಾಹಟಿಯಲ್ಲಿ ಬ್ರಹ್ಮಪುತ್ರ ನದಿಗೆ ನಿರ್ಮಿಸಿರುವ 6 ಪಥಗಳ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಉದ್ಘಾಟಿಸಿದರು.

'ಕುಮಾರ ಭಾಸ್ಕರ ವರ್ಮ ಸೇತು' ಎಂದು ಕರೆಯಲಾಗುವ ಈ ಸೇತುವೆಯನ್ನು ₹3,030 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಇದು ಗುವಾಹಟಿ ಹಾಗೂ ಉತ್ತರ ಗುವಾಹಟಿ ಸಂಪರ್ಕಿಸುತ್ತದೆ. ಪ್ರಸ್ತುತ, ಸರೈಘಾಟ್ ಸೇತುವೆ ಮೂಲಕ ಸಂಪರ್ಕ ಇದ್ದು, ಪ್ರಯಾಣಕ್ಕೆ ಅಂದಾಜು 30 ನಿಮಿಷ ತೆಗೆದುಕೊಳ್ಳುತ್ತದೆ. ನೂತನ ಸೇತುವೆಯಿಂದಾಗಿ ಪ್ರಯಾಣದ ಅವಧಿ 7 ನಿಮಿಷಕ್ಕೆ ಇಳಿಯಲಿದೆ.

ನಂತರ, ಲಾಚಿತ್ ಘಾಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಐಐಎಂ–ಗುವಾಹಟಿಯ ತಾತ್ಕಾಲಿಕ ಕ್ಯಾಂಪಸ್, ನ್ಯಾಷನಲ್ ಡೇಟಾ ಸೆಂಟರ್ ಅನ್ನು ಮೋದಿ ಅವರು ವರ್ಚುವಲ್ ಆಗಿ ಉದ್ಘಾಟಿಸಿದರು.

ಗುವಾಹಟಿ ಸೇರಿ ದೇಶದ ನಾಲ್ಕು ನಗರಗಳಿಗೆ 225 ಎಲೆಕ್ಟ್ರಿಕ್ ಬಸ್‌ಗಳ ಸಂಚಾರಕ್ಕೆ ಕೂಡ ಇದೇ ವೇಳೆ ಹಸಿರು ನಿಶಾನೆ ತೋರಿದರು.

ಒಂದು ಬಕೆಟ್ ನೀರಿಗೆ 1 ಲೀಟರ್ ಹಾಲು: 50 ಮಕ್ಕಳಿಗೆ ವಿತರಣೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದ ಶಾಲೆಯೊಂದರಲ್ಲಿ, ಅಡುಗೆ ಸಿಬ್ಬಂದಿ 1 ಲೀಟರ್ ಹಾಲನ್ನು ಒಂದು ಬಕೆಟ್ ನೀರಿಗೆ ಬೆರೆಸಿ, ಅದನ್ನು 50 ಮಕ್ಕಳಿಗೆ ವಿತರಿಸಿದ್ದಾರೆ.

ನೀರು ತುಂಬಿದ್ದ ಬಕೆಟ್‌ಗೆ ಅರ್ಧ ಲೀಟರ್‌ನ ಎರಡು ಪ್ಯಾಕೆಟ್ ಹಾಲನ್ನು ಸುರಿದು, ಅದನ್ನು ಕದಡಿ ಮಕ್ಕಳಿಗೆ ಕುಡಿಯಲು ವಿತರಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಘಟನೆ ನಡೆದಿರುವುದು ಉತ್ತರ ಪ್ರದೇಶದ ಮಹೋಬಾ ಜಿಲ್ಲೆಯ, ಕಬ್ರೈ ಬ್ಲಾಕ್‌ನ ಧಿಕ್ವಾಹ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ.

'ಮಧ್ಯಾಹ್ನದ ಬಿಸಿಯೂಟದ ವೇಳೆ, ಶಾಲೆಯ ಪ್ರಾಂಶುಪಾಲರೇ 'ಮಕ್ಕಳೇ ಹಾಲು ಕುಡಿಯಲು ಬನ್ನಿ' ಎಂದು ಕೂಗುತ್ತಿರುವುದು, ಅಡುಗೆ ಸಿಬ್ಬಂದಿ ಹಾಲನ್ನು ನೀರಿನಲ್ಲಿ ಬೆರೆಸಿ ಮಕ್ಕಳಿಗೆ ಕುಡಿಯಲು ವಿತರಿಸುತ್ತಿರುವುದು ವಿಡಿಯೊದಲ್ಲಿದೆ.

ಘಟನೆಯ ಬೆನ್ನಲ್ಲೇ, ಮಹೋಬಾ ಜಿಲ್ಲಾ ಶಿಕ್ಷಣ ಇಲಾಖೆ ಅಧಿಕಾರಿಗಳು, ಪ್ರಾಂಶುಪಾಲರಾದ ಮೋನಿಕಾ ಸೋನಿ ಅವರಿಗೆ ವಿವರಣೆ ಕೇಳಿ ನೋಟಿಸ್ ಜಾರಿಗೊಳಿಸಿದ್ದಾರೆ. ಪ್ರಾಂಶುಪಾಲರು ಈ ಆರೋಪ ನಿರಾಕರಿಸಿದ್ದಾರೆ.

ಕೇಂದ್ರದಿಂದ ₹2,372 ಕೋಟಿ ಮಂಜೂರು

ಬಳ್ಳಾರಿ– ಹೊಸಪೇಟೆ ನಡುವಿನ 3, 4ನೇ ಮಾರ್ಗ ನಿರ್ಮಾಣಕ್ಕೆ ಅನುದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಳ್ಳಾರಿ ಮತ್ತು ಹೊಸಪೇಟೆ ನಡುವೆ ಮೂರನೇ ಹಾಗೂ ನಾಲ್ಕನೇ ರೈಲ್ವೆ ಮಾರ್ಗಗಳ ನಿರ್ಮಾಣಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಮಾರ್ಗಗಳ ನಿರ್ಮಾಣಕ್ಕೆ ₹2,372 ಕೋಟಿ ವೆಚ್ಚವಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ₹18,509 ಕೋಟಿ ವೆಚ್ಚದಲ್ಲಿ ಮೂರು ರೈಲ್ವೆ ಮಾರ್ಗಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಯಿತು. ಬಳ್ಳಾರಿ–ಹೊಸಪೇಟೆ ನಡುವೆ ಈಗಾಗಲೇ ಜೋಡಿ ಹಳಿ ಮಾರ್ಗ ಇದೆ. ಶನಿವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, 'ಈ ಮಾರ್ಗಗಳ ನಿರ್ಮಾಣದಿಂದ ಇನ್ನಷ್ಟು ಪ್ರಯಾಣಿಕ ಹಾಗೂ ಸರಕು ಸಾಗಣೆ ರೈಲುಗಳ ಆರಂಭಕ್ಕೆ ಅನುಕೂಲವಾಗಲಿದೆ' ಎಂದರು.

ಮುಖ್ಯಾಂಶಗಳು

- 65 ಕಿ.ಮೀ. ಉದ್ದ
- 4 ವರ್ಷ ಗಡುವು
- 34 (ದೊಡ್ಡ) ಹಾಗೂ 220 (ಸಣ್ಣ) ಸೇತುವೆಗಳು

ಅನುಕೂಲಗಳು

- ಪ್ರಸ್ತಾವಿತ ಯೋಜನೆಯು ಹಂಪಿ, ಬಳ್ಳಾರಿ ಕೋಟೆ, ದರೋಜಿ ಕರಡಿ ಅಭಯಾರಣ್ಯ, ತುಂಗಭದ್ರಾ ಅಣೆಕಟ್ಟು, ಕೆಂಚನಗುಡ್ಡ ಮತ್ತು ವಿಜಯ ವಿಠಲ ದೇವಾಲಯ ಮತ್ತಿತರ ಪ್ರವಾಸಿ ತಾಣಗಳಿಗೆ ರೈಲು ಸಂಪರ್ಕ ಸುಧಾರಿಸಲಿದೆ.
- ಕಬ್ಬಿಣದ ಅದಿರು, ಸಿಮೆಂಟ್, ಸುಣ್ಣದ ಕಲ್ಲು/ಬಾಕ್ಸೈಟ್, ಆಹಾರ ಧಾನ್ಯ, ಸಕ್ಕರೆ, ರಸಗೊಬ್ಬರಗಳ ಸಾಗಣೆಗೆ ಅನುಕೂಲ.
- ವರ್ಷಕ್ಕೆ 25 ಮಿಲಿಯನ್ ಟನ್ ಹೆಚ್ಚುವರಿ ಸರಕು ಸಾಗಣೆಗೆ ಅನುಕೂಲ.
- ಲಾಜಿಸ್ಟಿಕ್ಸ್ ವೆಚ್ಚ ಉಳಿತಾಯ: ಪ್ರತಿವರ್ಷ ₹323 ಕೋಟಿ
- ಉದ್ಯೋಗ ಸೃಷ್ಟಿ: 44 ಲಕ್ಷ ಮಾನವ ದಿನಗಳು

ಮೌರಾನ ಬಳಿ ನಿರ್ಮಾಣ • ಈಶಾನ್ಯ ಭಾಗದ ಮೊದಲ 'ಇಎಲ್‌ಎಫ್'ನಲ್ಲಿ ಇಳಿದ ಮೋದಿ

ಯುದ್ಧವಿಮಾನದ 'ಎಮರ್ಜೆನ್ಸಿ ಲ್ಯಾಂಡಿಂಗ್'

ಗುವಾಹಟಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊತ್ತ ಯುದ್ಧವಿಮಾನವು, ಅಸ್ಸಾಂನ ದಿಬ್ರೂಗಢ ಜಿಲ್ಲೆಯ ಮೌರಾನ ಪಟ್ಟಣ ಬಳಿಯ ರಾಷ್ಟ್ರೀಯ ಹೆದ್ದಾರಿ–37ರಲ್ಲಿ ನಿರ್ಮಿಸಿರುವ 'ಎಮರ್ಜೆನ್ಸಿ ಲ್ಯಾಂಡಿಂಗ್ ಫೆಸಿಲಿಟಿ'ಯಲ್ಲಿ ಶನಿವಾರ ಇಳಿಯಿತು.

ಮೋದಿ ಅವರು ಇದ್ದ ವಿಮಾನವು (ಸಿ–130ಜೆ) ಅಸ್ಸಾಂನ ಚಬುವಾ ಏರ್‌ಫೀಲ್ಡ್‌ನಿಂದ ಹೊರಟು, ದಿಬ್ರೂಗಢ–ಮೌರಾನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ಮಿಸಿರುವ 'ಇಎಲ್‌ಎಫ್'ನಲ್ಲಿ ಇಳಿಯುವ ಮೂಲಕ ಇತಿಹಾಸ ಸೃಷ್ಟಿಸಿತು. ಇದು ಈಶಾನ್ಯ ರಾಜ್ಯವೊಂದರಲ್ಲಿ ನಿರ್ಮಿಸಲಾಗಿರುವ ಮೊದಲ 'ಎಮರ್ಜೆನ್ಸಿ ಲ್ಯಾಂಡಿಂಗ್ ಫೆಸಿಲಿಟಿ' (ಇಎಲ್‌ಎಫ್) ಆಗಿದೆ.

ಲ್ಯಾಂಡಿಂಗ್ ಬಳಿಕ ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ ಮೋದಿ, 'ರಕ್ಷಣಾ ಕಾರ್ಯತಂತ್ರ ಹಾಗೂ ನೈಸರ್ಗಿಕ ವಿಪತ್ತು ನಿರ್ವಹಣೆ ದೃಷ್ಟಿಯಿಂದ ಈ ಸೌಲಭ್ಯವು ಮಹತ್ವದ ಪಾತ್ರವಹಿಸುತ್ತದೆ' ಎಂದು ಹೇಳಿದ್ದಾರೆ.

'ಎಮರ್ಜೆನ್ಸಿ ಲ್ಯಾಂಡಿಂಗ್ ಫೆಸಿಲಿಟಿ'ಯಲ್ಲಿ ನಡೆದ ವೈಮಾನಿಕ ಪ್ರದರ್ಶನದ ದೃಶ್ಯ ಪಿಟಿಐ ಚಿತ್ರ

'ಈಶಾನ್ಯ ಭಾಗವು ಎಮರ್ಜೆನ್ಸಿ ಲ್ಯಾಂಡಿಂಗ್ ಫೆಸಿಲಿಟಿ ಹೊಂದುತ್ತಿರುವುದು ಕೂಡ ಹೆಮ್ಮೆಯ ಸಂಗತಿ' ಎಂದು ಹೇಳಿದ್ದಾರೆ.

ಯುದ್ಧವಿಮಾನ ಲ್ಯಾಂಡಿಂಗ್ ಆದ ಬಳಿಕ ಸಮೀಪದಲ್ಲಿಯೇ ಸಿದ್ಧಪಡಿಸಿದ್ದ ವೇದಿಕೆಗೆ ತೆರಳಿದ ಮೋದಿ, ವಾಯುಪಡೆಯ ಯುದ್ಧವಿಮಾನಗಳು, ಸರಕು ಸಾಗಣೆ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳು ನಡೆಸಿಕೊಟ್ಟ ವೈಮಾನಿಕ ಪ್ರದರ್ಶನ ವೀಕ್ಷಿಸಿದರು. ಯುದ್ಧ ವಿಮಾನ ಇಳಿಯುವುದು ಹಾಗು ವೈಮಾನಿಕ ಪ್ರದರ್ಶನ ವೀಕ್ಷಿಸಲು ಜಮಾಯಿಸಿದ್ದ ಜನರತ್ತ ಅವರು ಕೈಬೀಸಿದರು.

ಇದನ್ನೂ ಮುನ್ನ, ಇಎಲ್‌ಎಫ್‌ನಲ್ಲಿ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಮೋದಿ ಅವರನ್ನು ಸ್ವಾಗತಿಸಿದರು. ಕೇಂದ್ರ ಸಚಿವ ಸರ್ವಾನಂದ ಸೋನೊವಾಲ್, ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್, ಅಸ್ಸಾಂನ ಸಚಿವರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ವಸ್ತ್ರ 'ಮುಗಾ ಗಾಮೋಸಾ' (ಸ್ಕಾರ್ಫ್), ಅಸ್ಸಾಂ ಜನರು ಧರಿಸುವ ಟೊಪ್ಪಿಗೆ ನೀಡಿ ಮೋದಿ ಅವರನ್ನು ಮುಖ್ಯಮಂತ್ರಿ ಶರ್ಮಾ ಸನ್ಮಾನಿಸಿದರು. ಭುಟಿಯಾ ಸಾಮ್ರಾಜ್ಯದ ಕೊನೆಯ ರಾಣಿ ಸತಿ ಸಾಧಿನಿ ಅವರ ಭಾವಚಿತ್ರ ಹಾಗೂ ಸ್ಮರಣಿಕೆಯನ್ನು ಕೂಡ ಈ ವೇಳೆ ಶರ್ಮಾ ನೀಡಿದರು.

ವೈಶಿಷ್ಟ್ಯಗಳು

- ಮೌರಾನ ಪಟ್ಟಣ ಬಳಿಯ ಬೈಪಾಸ್‌ನಲ್ಲಿರುವ ಇಎಲ್‌ಎಫ್‌ನ ಉದ್ದ 4.2 ಕಿ.ಮೀ
- ₹100 ಕೋಟಿ ವೆಚ್ಚದಲ್ಲಿ ಈ ಸೌಲಭ್ಯ ನಿರ್ಮಾಣ
- ವಾಯುಪಡೆಯ ಯುದ್ಧವಿಮಾನಗಳು ಹಾಗೂ ಸರಕು ಸಾಗಣೆ ವಿಮಾನಗಳು ಇಳಿಯುವುದಕ್ಕೆ ಅನುಕೂಲ
- ನಾಗರಿಕ ವಿಮಾನಗಳು ಹಾಗೂ ಸೇನೆಯ ವಿಮಾನಗಳು ತುರ್ತು ಲ್ಯಾಂಡಿಂಗ್ ಮಾಡಲು ಸಾಧ್ಯವಾಗುವಂತೆ ಇಎಲ್‌ಎಫ್‌ನ ವಿನ್ಯಾಸ

> 1962ರ ಯುದ್ಧದ ನೆನಪುಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿರುವ ಈಶಾನ್ಯ ಭಾಗದಲ್ಲಿ ನಿರ್ಮಿಸಿರುವ ಇಎಲ್‌ಎಫ್‌ನಲ್ಲಿ ಪ್ರಧಾನಿ ಮೋದಿ ಇಳಿದಿರುವುದು ರಕ್ಷಣೆ ವಿಚಾರದಲ್ಲಿ ಭಾರತದ ಸ್ಥಿತ್ಯಂತರಕ್ಕೆ ನಿದರ್ಶನವಾಗಿದೆ
>
> **ಹಿಮಂತ ಬಿಸ್ವ ಶರ್ಮಾ,** ಅಸ್ಸಾಂ ಮುಖ್ಯಮಂತ್ರಿ

ರಸ್ತೆ ಗುಂಡಿ: 5 ವರ್ಷಗಳಲ್ಲಿ 9,438 ಮಂದಿ ಸಾವು

ನವದೆಹಲಿ (ಪಿಟಿಐ): ಕಳೆದ ಐದು ವರ್ಷಗಳಲ್ಲಿ ರಸ್ತೆ ಗುಂಡಿಗಳಿಂದಾಗಿ ಸಂಭವಿಸಿದ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಶೇ 53ರಷ್ಟು ಹೆಚ್ಚಾಗಿದೆ.

2020ರಿಂದ 2024ರ ನಡುವೆ ದೇಶದಾದ್ಯಂತ 9,438 ಜನರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರವು ಸಂಸತ್‌ಗೆ ತಿಳಿಸಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ನೀಡಿರುವ ಲಿಖಿತ ಉತ್ತರದ ಪ್ರಕಾರ, ಉತ್ತರ ಪ್ರದೇಶದಲ್ಲಿ ಶೇ 54ಕ್ಕಿಂತ ಹೆಚ್ಚು ಸಾವು (5,127 ಮಂದಿ) ಸಂಭವಿಸಿದ್ದು, ಮೊದಲ ಸ್ಥಾನದಲ್ಲಿದೆ.

ಎರಡನೇ ಸ್ಥಾನದಲ್ಲಿ ಮಧ್ಯಪ್ರದೇಶವಿದ್ದು, 969 ಮಂದಿ ಮೃತಪಟ್ಟಿದ್ದಾರೆ. ತಮಿಳುನಾಡಿನಲ್ಲಿ 612, ಪಂಜಾಬ್‌ನಲ್ಲಿ 414 ಮಂದಿ ಅಸುನೀಗಿದ್ದಾರೆ.

2021ರಲ್ಲಿ ಸಾವಿನ ಪ್ರಮಾಣ ಸ್ವಲ್ಪ ಕಡಿಮೆಯಾಗಿದ್ದರೂ, ನಂತರ ನಿರಂತರವಾಗಿ ಏರಿಕೆಯಾಗುತ್ತಿದೆ. 2024ರಲ್ಲಿ 2,385 ಸಾವು ಸಂಭವಿಸಿದೆ.



ಆಂಧ್ರಪ್ರದೇಶ, ಬಿಹಾರ, ಗೋವಾ ಸೇರಿದಂತೆ ಕೆಲ ರಾಜ್ಯಗಳಲ್ಲಿ ಐದು ವರ್ಷಗಳ ಅವಧಿಯಲ್ಲಿ, ಯಾವುದೇ ಗುಂಡಿಗಳಿಗೆ ಸಂಬಂಧಿಸಿದ ಅಪಘಾತಗಳು ಅಥವಾ ಸಾವು–ನೋವು ಕುರಿತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ವರದಿ ಮಾಡಿಲ್ಲ.

ಈ ಅವಧಿಯಲ್ಲಿ, ದೇಶದಾದ್ಯಂತ ರಸ್ತೆ ಗುಂಡಿಗಳಿಂದ 23,056 ಅಪಘಾತಗಳು ಸಂಭವಿಸಿದ್ದು, 19,956 ಮಂದಿ ಗಾಯಗೊಂಡಿದ್ದಾರೆ. ಇವುಗಳ ಪೈಕಿ 9,670 ಪ್ರಕರಣಗಳನ್ನು 'ತೀವ್ರ ಸ್ವರೂಪದ ಗಾಯಗಳು' ಎಂದು ವರ್ಗೀಕರಿಸಲಾಗಿದೆ.

ಪ್ರೇಮಿಗಳ ದಿನ ಶುಭ ಕೋರಿದ ಮಮತಾ

ಕೋಲ್ಕತ್ತ (ಪಿಟಿಐ): ಪ್ರೇಮಿಗಳ ದಿನಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶುಭಾಶಯ ಕೋರಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಾಗ, ಪ್ರೇಮಿಗಳ ದಿನಕ್ಕೆ ಮೊದಲ ಬಾರಿಗೆ ಶುಭಾಶಯ ಕೋರಿರುವುದು ಚರ್ಚೆಗೆ ಗ್ರಾಸವಾಗಿದೆ.

ಯುವ ಮತದಾರರನ್ನು ಸೆಳೆಯಲು ಮಮತಾ ಬ್ಯಾನರ್ಜಿ ಅವರು ಶುಭಾಶಯ ಕೋರಿದ್ದಾರೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ.

'ಜಾತಿ, ಮತ, ವರ್ಗ, ಧರ್ಮವನ್ನು ಮೀರಿದ್ದು ಪ್ರೀತಿ. ಈ ಪ್ರೀತಿಯ ಮನೋಭಾವವೇ ಸಾರ್ವಜನಿಕ ಸೇವೆಯಲ್ಲಿ ನನ್ನ ಪ್ರಯಾಣಕ್ಕೆ ಮಾರ್ಗದರ್ಶನ ನೀಡಿದೆ. ಜನರ ಮೇಲಿನ ಪ್ರೀತಿಯು, ಬಿರುಗಾಳಿಯನ್ನು ತಡೆದುಕೊಳ್ಳುವಷ್ಟು ಪ್ರಬಲವಾಗಿದೆ. ಆಲಿಸುವ ತಾಳ್ಮೆ ನೀಡಿದೆ. ನ್ಯಾಯ ಮತ್ತು ಗೌರವಕ್ಕಾಗಿ ಹೋರಾಡಲು ಶಕ್ತಿ ತುಂಬಿದೆ' ಎಂದು 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

ನಗರ ಪ್ರದೇಶಗಳಲ್ಲಿ ಕಾಮಗಾರಿ ವೇಳೆ ಮುನ್ನೆಚ್ಚರಿಕಾ ಕ್ರಮಗಳು ಇನ್ನಷ್ಟು ಬಿಗಿಯಾಗಬೇಕೇ?

ಬೇಕು ಬೇಡ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಚಿತ್ರೋತ್ಸವದಲ್ಲಿ ಭಾಗವಹಿಸಲ್ಲ: ಅರುಂಧತಿ ರಾಯ್

ನವದೆಹಲಿ (ಪಿಟಿಐ): ಗಾಜಾಪಟ್ಟಿಯಲ್ಲಿ ನಡೆದ ದಾಳಿಗೆ ಸಂಬಂಧಿಸಿದಂತೆ 'ಅವಿವೇಕದ ಹೇಳಿಕೆ' ನೀಡಿದ ಚಿತ್ರೋತ್ಸವದ ತೀರ್ಪುಗಾರರ ನಡೆ ಖಂಡಿಸಿ ಬರ್ಲಿನ್‌ನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಭಾಗವಹಿಸುವುದಿಲ್ಲ ಎಂದು ಕಾದಂಬರಿಕಾರ್ತಿ ಅರುಂಧತಿ ರಾಯ್ ಹೇಳಿದ್ದಾರೆ.

ರಾಯ್ ಅವರು, 1989ರಲ್ಲಿ ಬಿಡುಗಡೆಯಾದ 'ಇನ್ ವಿಚ್ ಆ್ಯನಿ ಗೀವ್ಸ್ ಇಟ್ ದೋಸ್ ಒನ್ಸ್' ಚಿತ್ರದ ಪ್ರದರ್ಶನದಲ್ಲಿ ಭಾಗವಹಿಸಲು ಚಿತ್ರೋತ್ಸವಕ್ಕೆ ಹಾಜರಾಗಬೇಕಿತ್ತು

ಎಸ್‌ಐಆರ್ ಪ್ರಮುಖ ಅಸ್ತ್ರ • ಭಿನ್ನಾಭಿಪ್ರಾಯ ಶಮನಕ್ಕೂ 'ಇಂಡಿಯಾ' ತಂತ್ರ

ಸಿಇಸಿ ಪದಚ್ಯುತಿ: ವಿಪಕ್ಷಗಳ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧದ ಹೋರಾಟವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲು ವಿರೋಧ ಪಕ್ಷಗಳು ಮುಂದಾಗಿವೆ.

ಜ್ಞಾನೇಶ ಕುಮಾರ್

ಎಸ್‌ಐಆರ್ ವಿಚಾರ ಮುಂದಿಟ್ಟುಕೊಂಡು, ಚುನಾವಣಾ ಆಯೋಗದ ಮುಖ್ಯ ಆಯುಕ್ತ (ಸಿಇಸಿ) ಜ್ಞಾನೇಶ ಕುಮಾರ್ ಅವರನ್ನು ಪದಚ್ಯುತಗೊಳಿಸುವ ಸಲುವಾಗಿ ನೋಟಿಸ್ ಸಲ್ಲಿಸುವ ಕುರಿತು ವಿರೋಧ ಪಕ್ಷಗಳು ಪರಿಶೀಲನೆ ನಡೆಸುತ್ತಿವೆ.

ಈ ಮೂಲಕ, ಏಪ್ರಿಲ್–ಮೇನಲ್ಲಿ ವಿವಿಧ ರಾಜ್ಯಗಳ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗೂ ಮುನ್ನ, ಕೇಂದ್ರದಲ್ಲಿ ಆಡಳಿತಾರೂಢ ಬಿಜೆಪಿ ಮೇಲೆ ಒತ್ತಡ ಹೆಚ್ಚಿಸುವುದು ಹಾಗೂ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ನಡುವಿನ ಭಿನ್ನಾಭಿಪ್ರಾಯ ತೊಡೆದು ಹಾಕುವ ಉದ್ದೇಶವು ವಿಪಕ್ಷ ಪಾಳಯದ ಈ ನಡೆ ಹಿಂದಿರುವ ಲೆಕ್ಕಾಚಾರ ಎಂದು ಮೂಲಗಳು ಹೇಳಿವೆ.

ಸಿಇಸಿ ಜ್ಞಾನೇಶ ಕುಮಾರ್ ವಿರುದ್ಧ ಕಳೆದ ವರ್ಷ ಸಂಸತ್‌ನ ಮುಂಗಾರು ಅಧಿವೇಶನದಲ್ಲಿಯೇ ನೋಟಿಸ್ ಸಲ್ಲಿಸುವುದಾಗಿ ಹೇಳಿದ್ದ ವಿರೋಧ ಪಕ್ಷಗಳು, ನಂತರ ಅಂಥ ಯಾವ ಕ್ರಮಕ್ಕೂ ಮುಂದಾಗಲಿಲ್ಲ.

ಇನ್ನೊಂದೆಡೆ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸರ್ಕಾರಕ್ಕೆ ಅಗತ್ಯ ಸಂಖ್ಯಾಬಲ ಇದೆ. ಹೀಗಾಗಿ, ವಿರೋಧ ಪಕ್ಷಗಳ ಯಾವುದೇ ನಡೆಯನ್ನು ವಿಫಲಗೊಳಿಸಲು ಸರ್ಕಾರಕ್ಕೆ ಕಷ್ಟವಾಗುವುದಿಲ್ಲ.

'ಚುನಾವಣೆಯೇ ಅಡ್ಡಿ': ಸಿಇಸಿ ವಿರುದ್ಧ ಒಂದು ವೇಳೆ ನೋಟಿಸ್ ಸಲ್ಲಿಸಿದರೂ, ಅದು ಮಾರ್ಚ್ 9ರಿಂದ ಆರಂಭವಾಗಲಿರುವ ಬಜೆಟ್ ಅಧಿವೇಶನದ ಎರಡನೇ ಹಂತದಲ್ಲಿಯೇ ಮಂಡನೆಯಾಗುವುದು. ಅಲ್ಲದೇ, 14 ದಿನಗಳ ಮುಂಚೆ ನೋಟಿಸ್ ಸಲ್ಲಿಸಬೇಕಾಗುತ್ತದೆ.

ಒಂದು ವೇಳೆ, ನೋಟಿಸ್ ಸಲ್ಲಿಸಿದರೂ, ಅದು ಚರ್ಚೆಗೆ ಬರುವ ಹೊತ್ತಿಗೆ ಕೆಲ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಘೋಷಣೆಯಾಗಿರುತ್ತದೆ. ಇಂತಹ ಸಂದರ್ಭದಲ್ಲಿ, ಸರ್ಕಾರವನ್ನು ಕಟ್ಟಿಹಾಕಲು ವಿಪಕ್ಷಗಳಿಗೆ ಕಷ್ಟವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಟಿಎಂಸಿ ಬೆಂಬಲಿಸುವುದೇ?'

ಸಿಇಸಿ ಪದಚ್ಯುತಿಗೆ ಸಂಬಂಧಿಸಿ ನೋಟಿಸ್ ಸಲ್ಲಿಸುವುದಕ್ಕೆ ಟಿಎಂಸಿಯಿಂದ ಬೆಂಬಲ ಸಿಗುವುದೇ? ಎಂಬ ಚರ್ಚೆಯೂ ನಡೆಯುತ್ತಿದೆ.

ಎಸ್‌ಐಆರ್ ವಿಚಾರವಾಗಿ ಸಿಇಸಿ ವಿರುದ್ಧ ಬಜೆಟ್ ಅಧಿವೇಶನದ ಮೊದಲ ಹಂತದಲ್ಲಿ ನೋಟಿಸ್ ಸಲ್ಲಿಸಲು ಟಿಎಂಸಿ ಮುಂದಾಗಿತ್ತು. ಇಂತಹ ನಡೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದರು.

ಇದರ ಬದಲಾಗಿ, ಕಾಂಗ್ರೆಸ್ ಹಾಗೂ ಇತರ ಪಕ್ಷಗಳು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪದಚ್ಯುತಿ ವಿಚಾರವಾಗಿ ನೋಟಿಸ್ ಸಲ್ಲಿಸಿದವು. ಈ ವಿಚಾರದಲ್ಲಿ ಭಿನ್ನ ನಿಲುವು ತಳೆದ ಟಿಎಂಸಿ, ಈ ನೋಟಿಸ್‌ಗೆ ಸಹಿ ಹಾಕಿಲ್ಲ. ಈಗ, ಸಿಇಸಿ ವಿರುದ್ಧದ ನೋಟಿಸ್ ಟಿಎಂಸಿ ಸಹಿ ಹಾಕುವುದೇ ಎಂಬ ಚರ್ಚೆ ನಡೆಯುತ್ತಿದೆ.

ಮತ್ತಷ್ಟು ಒತ್ತಡ ಹೆಚ್ಚಿಸುವ ತಂತ್ರ

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದ, ಎಪ್‌ಸ್ಟೈನ್ ಫೈಲ್‌ಗಳು ಹಾಗೂ ಸೇನೆ ಮಾಜಿ ಮುಖ್ಯಸ್ಥ ಎಂ.ಎಂ.ನರವಣೆ ಅವರ 'ಅಪ್ರಕಟಿತ ಪುಸ್ತಕ' ವಿಚಾರವಾಗಿ ಎದ್ದಿರುವ ವಿವಾದಗಳಿಂದ ಕೇಂದ್ರ ಸರ್ಕಾರ ಟೀಕೆ ಎದುರಿಸುತ್ತಿದೆ. ಇಂಥ ಹೊತ್ತಲ್ಲೇ, ಸಿಇಸಿ ವಿರುದ್ಧ ನೋಟಿಸ್ ಸಲ್ಲಿಸುವ ಮೂಲಕ ಬಿಜೆಪಿ ಮೇಲೆ ಒತ್ತಡ ಹೆಚ್ಚಿಸುವ ಲೆಕ್ಕಾಚಾರ ಕೂಡ ವಿಪಕ್ಷಗಳದ್ದು.

ಮುಂಬೈ ಮೆಟ್ರೊ ಗರ್ಡರ್‌ನ ಸ್ಲ್ಯಾಬ್ ಬಿದ್ದು ವ್ಯಕ್ತಿ ಸಾವು

ಮುಂಬೈ (ಪಿಟಿಐ): ಇಲ್ಲಿನ ಮುಲುಂಡ್ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿರುವ ಮೆಟ್ರೊ ರೈಲು ಮಾರ್ಗದ 4ರ ಗರ್ಡರ್‌ನ ಸ್ಲ್ಯಾಬ್ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ರಾಮಧಾನ್ ಯಾದವ್ ಮೃತರು. ರಾಜ್‌ಕುಮಾರ್ ಇಂದ್ರಜಿತ್ ಯಾದವ್ (45), ಮಹೇಂದ್ರ ಪ್ರತಾಪ್ ಯಾದವ್ (52) ಹಾಗೂ ದೀಪಾ ರುಹಿಯಾ (40) ಗಾಯಗೊಂಡವರು. ರಾಜ್‌ಕುಮಾರ್ ಅವರ ಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ಮಹೇಂದ್ರ ಹಾಗೂ ರುಹಿಯಾ ಅಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶನಿವಾರ ಮಧ್ಯಾಹ್ನ 12.15ರ ಸುಮಾರಿಗೆ ಮುಲುಂಡ್ ಅಗ್ನಿಶಾಮಕ ಠಾಣೆಯ ಸಮೀಪವಿರುವ ಮೆಟ್ರೊ ಮಾರ್ಗದ 196ನೇ ಕಂಬದ ಬಳಿ ಗರ್ಡರ್‌ನ ಒಂದು ಭಾಗವು ಆಟೊರಿಕ್ಷಾ ಹಾಗೂ ಕಾರಿನ ಮೇಲೆ ಬಿದ್ದಿದೆ ಎಂದು ಮುಂಬೈ ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ಯೋಜನಾ ತಂಡ, ಬಿಎಂಸಿ ಮತ್ತು ವಿಪತ್ತು ನಿರ್ವಹಣಾ ಅಧಿಕಾರಿಗಳು ಪರಿಹಾರ ಕಾರ್ಯಾಚರಣೆ ಕೈಗೊಂಡಿದ್ದಾರೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ಲೆಥ್ಪೋರದಲ್ಲಿ ನಿರ್ಮಿಸಿರುವ ಹುತಾತ್ಮರ ಸ್ಮಾರಕಕ್ಕೆ ಭದ್ರತಾ ಸಿಬ್ಬಂದಿ ಶನಿವಾರ ಪುಷ್ಪನಮನ ಸಲ್ಲಿಸಿದರು ಪಿಟಿಐ ಚಿತ್ರ

ಹುತಾತ್ಮರಿಗೆ ಗೌರವ ನಮನ

ನವದೆಹಲಿ (ಪಿಟಿಐ): ಪುಲ್ವಾಮಾದಲ್ಲಿ 2019ರ ಫೆ. 14ರಂದು ನಡೆದಿದ್ದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಸಿಆರ್‌ಪಿಎಫ್ ಸಿಬ್ಬಂದಿಗೆ ಶನಿವಾರ ಗೌರವ ನಮನ ಸಲ್ಲಿಸಲಾಯಿತು.

'ಪ್ರಾಣ ತ್ಯಾಗ ಮಾಡಿದ ಧೈರ್ಯಶಾಲಿಗಳನ್ನು ಸ್ಮರಿಸುವೆ. ನಿಮ್ಮಗಳ ತ್ಯಾಗದಿಂದಲೇ ಪ್ರತಿಯೊಬ್ಬ ಭಾರತೀಯನು ಧೈರ್ಯ ಪಡೆಯುತ್ತಿದ್ದಾನೆ' ಎಂದು ಪ್ರಧಾನಿ ನರೇಂದ್ರ ಮೋದಿ 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

'ಸಿಆರ್‌ಪಿಎಫ್ ಯೋಧರ ತ್ಯಾಗವು ದೇಶದ ಸ್ಮರಣೆಯಲ್ಲಿ ಶಾಶ್ವತವಾಗಿ ಉಳಿಯಲಿದೆ. ಸುರಕ್ಷಿತ ಭಾರತವನ್ನು ನಿರ್ಮಿಸಲು ನಮಗೆ ಸ್ಫೂರ್ತಿ ನೀಡಿದೆ' ಎಂದು ಉಪರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದ್ದಾರೆ.

'ಭಯೋತ್ಪಾದನೆ ನಿರ್ಮೂಲನೆಯೇ ನಮ್ಮ ಕರ್ತವ್ಯ'

ಪುಲ್ವಾಮಾ: 'ದೇಶದೊಳಗಿನ ಎಲ್ಲ ರೀತಿಯ ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಬದ್ಧತೆಯನ್ನು ಕೇಂದ್ರೀಯ ಮೀಸಲು ಪೊಲೀಸ್ ಪಡೆ ಹೊಂದಿದೆ' ಎಂದು ಸಿಆರ್‌ಪಿಎಫ್ ಮುಖ್ಯಸ್ಥ ಜ್ಞಾನೇಂದ್ರ ಪ್ರತಾಪ್ ಸಿಂಗ್ ಇಲ್ಲಿ ತಿಳಿಸಿದರು.

ಲೆಥ್ಪೋರದಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ 40 ಸಿಆರ್‌ಪಿಎಫ್ ಸಿಬ್ಬಂದಿಗೆ ಗೌರವ ನಮನ ಸಲ್ಲಿಸಿದ ನಂತರ ಮಾತನಾಡಿದ ಅವರು, 'ಇದು ನಮ್ಮ ಕರ್ತವ್ಯವಾಗಿದೆ' ಎಂದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿರ್ಗತಿಕ ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ

ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 30 ಹಾಸಿಗೆಗಳ ಆರೈಕೆ ಕೇಂದ್ರ ಆರಂಭಕ್ಕೆ ನಿರ್ಧಾರ

• ವರುಣ ಹೆಗಡೆ

ಬೆಂಗಳೂರು: ಬಸ್ ಹಾಗೂ ರೈಲು ನಿಲ್ದಾಣಗಳು, ಬೀದಿ ಬದಿ ಸೇರಿ ವಿವಿಧೆಡೆ ಅಲೆದಾಡುತ್ತಿರುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಅವರಿಗೆ ಚಿಕಿತ್ಸೆ ಸಹಿತ ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಈ ಸಂಬಂಧ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಅಗತ್ಯ ಸಿದ್ಧತೆಯನ್ನು ಇಲಾಖೆ ಮಾಡಿಕೊಳ್ಳುತ್ತಿದೆ. ಜಿಲ್ಲಾ ಆಸ್ಪತ್ರೆಗಳು ಹಾಗೂ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ ತುರ್ತು ಆರೈಕೆ ಮತ್ತು ಪುನರ್ವಸತಿ ಕೇಂದ್ರಗಳನ್ನು (ಇಸಿಆರ್‌ಸಿ) ಸ್ಥಾಪಿಸುತ್ತಿದೆ. ಈ ಕೇಂದ್ರಗಳು ಗರಿಷ್ಠ 30 ಹಾಸಿಗೆಗಳನ್ನು ಒಳಗೊಂಡಿರಲಿದೆ. ದಾಖಲಾದವರಿಗೆ ಚಿಕಿತ್ಸೆ ಜತೆಗೆ ಅಗತ್ಯ ವೈದ್ಯಕೀಯ ಹಾಗೂ ಸಾಮಾಜಿಕ ನೆರವಿನೊಂದಿಗೆ ಸಹಜ ಜೀವನಕ್ಕೆ ಮರಳಿಸಲು ಪ್ರಯತ್ನಿಸಲಾಗುತ್ತದೆ. ಬೆಂಗಳೂರು, ಉಡುಪಿ, ಗದಗ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಪರಿಚಯಿಸಲಾದ ಈ ಯೋಜನೆಯು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದ, ರಾಜ್ಯದಾದ್ಯಂತ ವಿಸ್ತರಿಸಲಾಗುತ್ತಿದೆ.

ಇಲಾಖೆಯು ಮಾನಸಿಕ ಆರೋಗ್ಯ ಕಾರ್ಯಕ್ರಮಗಳಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಅಲ್ಪ ಸಮಾಲೋಚನೆ ಹಾಗೂ ಚಿಕಿತ್ಸೆ ನೀಡುತ್ತಿದೆ. ಎಲ್ಲ ಜಿಲ್ಲಾ ಆಸ್ಪತ್ರೆಗಳು ಹಾಗೂ ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಮನೋವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ.

ತಾಲ್ಲೂಕು ಆಸ್ಪತ್ರೆಗಳಲ್ಲಿ 'ಮನೋಚೈತನ್ಯ' ಕಾರ್ಯಕ್ರಮದ ಮೂಲಕ ಆಯ್ದ ಮಂಗಳವಾರ ಹಾಗೂ ಶುಕ್ರವಾರ ತಜ್ಞ ಮನೋವೈದ್ಯರ ತಂಡವು ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತಿದೆ. ಇದಲ್ಲದೆ, 'ಕ್ಷೇಮ' ಸೇರಿದಂತೆ ವಿವಿಧ ಕಾರ್ಯಕ್ರಮಗಳಡಿ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆಯ ಜತೆಗೆ ಪುನರ್ವಸತಿ ಒದಗಿಸುತ್ತಿದೆ. ಈ ಯೋಜನೆಗಳ ಮುಂದುವರಿದ ಭಾಗವಾಗಿ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಕೇಂದ್ರಗಳಿಗೆ ಕರೆತರಲಾಗುತ್ತದೆ.

ಆಯ್ದ ತುರ್ತು ಆರೈಕೆ ಮತ್ತು ಪುನರ್ವಸತಿ ಕೇಂದ್ರಗಳಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರೋಗಿಗಳು ಹಾಗೂ ಅವರ ಕುಟುಂಬದವರನ್ನು ಒಟ್ಟುಗೂಡಿಸುವುದು ನಮ್ಮ ಗುರಿ
ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ರಾಜ್ಯದಾದ್ಯಂತ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ. ಆರು ವರ್ಷ ಮನೆಯಿಂದ ಹೊರ ಇದ್ದವರು ಕೇಂದ್ರದ ನೆರವಿನಿಂದ ಚೇತರಿಸಿಕೊಂಡು ಮರಳಿದ್ದಾರೆ
ಡಾ. ರಜನಿ ಪಿ., ಉಪ ನಿರ್ದೇಶಕಿ (ಮಾನಸಿಕ ಆರೋಗ್ಯ), ಆರೋಗ್ಯ ಇಲಾಖೆ

ಆಶ್ರಯ ವ್ಯವಸ್ಥೆ: ಈ ಕೇಂದ್ರಗಳ ನಿರ್ಮಾಣಕ್ಕೆ ಇಲಾಖೆ ₹6 ಕೋಟಿ ಅನುದಾನಕ್ಕೆ ಅನುಮೋದನೆ ನೀಡಿದೆ. ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಗುರುತಿಸಿ, ಕೇಂದ್ರಗಳಿಗೆ ಕರೆತರುತ್ತಾರೆ. ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಳ್ಳುವವರೆಗೆ ಅವರಿಗೆ ಅಗತ್ಯ ವೈದ್ಯಕೀಯ ನೆರವು ಒದಗಿಸಲಾಗುತ್ತದೆ. ಅಸ್ವಸ್ಥರಿಗೆ ಮಾನಸಿಕ ಸಮಸ್ಯೆಗಳ ಜತೆಗೆ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ಇದ್ದಲ್ಲಿ, ನಿಗದಿತ ಆಸ್ಪತ್ರೆಯ ವೈದ್ಯರೇ ಅಗತ್ಯ ಚಿಕಿತ್ಸೆ ನೀಡುತ್ತಾರೆ.

'ಕೇಂದ್ರದಲ್ಲಿ ಚಿಕಿತ್ಸೆ ಪಡೆದವರು ಚೇತರಿಸಿಕೊಂಡ ಬಳಿಕ, ಅವರ ಕೌಟುಂಬಿಕ ಹಿನ್ನೆಲೆ ವಿಚಾರಿಸಲಾಗುತ್ತದೆ. ಅಗತ್ಯ ವಿವರ ಲಭ್ಯವಾದಲ್ಲಿ ಕುಟುಂಬ ಸದಸ್ಯರನ್ನು ಸಂಪರ್ಕಿಸಿ, ಅವರನ್ನು ಸುರಕ್ಷಿತವಾಗಿ ನಿಗದಿತ ಸ್ಥಳಕ್ಕೆ ತಲುಪಿಸಲಾಗುತ್ತದೆ. ಸರ್ಕಾರೇತರ ಸಂಸ್ಥೆಗಳು ಕ್ರಮಿಸಲಿವೆ. ಸೂರು ಇಲ್ಲದಿದ್ದರೆ ನಿರಾಶ್ರಿತ ಕೇಂದ್ರಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗುತ್ತದೆ. ಈಗಾಗಲೇ ನೂರಕ್ಕೂ ಅಧಿಕ ಮಂದಿ ಈ ಕೇಂದ್ರದ ನೆರವಿನಿಂದ ಚೇತರಿಸಿಕೊಂಡಿದ್ದಾರೆ' ಎಂದು ಇಲಾಖೆ ಮಾನಸಿಕ ಆರೋಗ್ಯ ವಿಭಾಗದ ಉಪ ನಿರ್ದೇಶಕಿ ಡಾ. ರಜನಿ ಪಿ. ತಿಳಿಸಿದರು.

₹1 ಸಾವಿರ ಮೌಲ್ಯದ ಕಿಟ್

ತುರ್ತು ಆರೈಕೆ ಮತ್ತು ಪುನರ್ವಸತಿ ಕೇಂದ್ರಗಳಿಗೆ ದಾಖಲಾದವರಿಗೆ ₹1 ಸಾವಿರ ಮೌಲ್ಯದ ವೈಯಕ್ತಿಕ ಕಿಟ್‌ಗಳನ್ನು ಒದಗಿಸಲಾಗುತ್ತದೆ. ಈ ಕಿಟ್ ಸೋಪು, ಪೇಸ್ಟ್ ಸೇರಿ ಅಗತ್ಯ ದಿನಬಳಕೆ ವಸ್ತುಗಳನ್ನು ಒಳಗೊಂಡಿರಲಿದೆ. ಬಟ್ಟೆಯನ್ನು ಕೂಡ ನೀಡಲಾಗುತ್ತದೆ. ಚಿಕಿತ್ಸೆಯ ಅವಧಿಯಲ್ಲಿ ಔಷಧ, ಆಹಾರ ಸೇರಿ ಎಲ್ಲವನ್ನೂ ಉಚಿತವಾಗಿ ಒದಗಿಸಲಾಗುತ್ತದೆ. ನೆರವಿಗೆ ಸಿಬ್ಬಂದಿಯನ್ನೂ ಸರ್ಕಾರೇತರ ಸಂಸ್ಥೆ ವತಿಯಿಂದ ನಿಯೋಜಿಸಲಾಗುತ್ತದೆ.

ಈ ಯೋಜನೆ ಕಾರ್ಯಗತವಾಗುವಲ್ಲಿ ಪ್ರಮುಖವಾಗಿ ಇಲಾಖೆ ಜತೆಗೆ ಆಲದಮರ ಫೌಂಡೇಷನ್ ಕೈಜೋಡಿಸಿದೆ. ಈ ಫೌಂಡೇಷನ್ ನೆರವಿನಿಂದ ಬೆಂಗಳೂರಿನ ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ 25 ಹಾಸಿಗೆಗಳ ಕೇಂದ್ರವನ್ನು 2024ರಲ್ಲಿ ಪ್ರಾರಂಭಿಸಲಾಗಿತ್ತು. ಅದು ರಾಜ್ಯದ ಪ್ರಥಮ ಕೇಂದ್ರವೆಂಬ ಹಿರಿಮೆಗೆ ಭಾಜನವಾಗಿತ್ತು.

ನಕಲಿ ವರ್ಗಾವಣೆ ಟಿಪ್ಪಣಿ: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಹೆಸರಿನಲ್ಲಿ ನಕಲಿ ವರ್ಗಾವಣೆ ಟಿಪ್ಪಣಿ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟಿರುವ ಪ್ರಕರಣದಲ್ಲಿ ವಿಧಾನಸೌಧ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಮುಖ್ಯಮಂತ್ರಿ ಜಂಟಿ ಕಾರ್ಯದರ್ಶಿ (ಆಡಳಿತ) ಅರುಣ್ ಫುರ್ಟಾಡೊ ನೀಡಿರುವ ದೂರಿನ ಮೇಲೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಾಯ್ದೆಯ ವಿವಿಧ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಅಧಿಕೃತ ಸಂಖ್ಯೆ, ದಿನಾಂಕವಿಲ್ಲದ ಟಿಪ್ಪಣಿ ಜಾಲತಾಣದಲ್ಲಿ ಹರಿದಾಡಿದ್ದು, ಮುಖ್ಯಮಂತ್ರಿ ಸಚಿವಾಲಯದ ಇ-ತಂತ್ರಾಂಶದಲ್ಲಿ ನೋಂದಣಿಯಾಗಿಲ್ಲ. ಟಿಪ್ಪಣಿಯನ್ನು ಯಾವುದೇ ಇಲಾಖೆಗೆ ರವಾನಿಸಿಲ್ಲ. ಇದರ ಆಧಾರದಲ್ಲಿ ಯಾವುದೇ ವರ್ಗಾವಣೆ, ನಿಯೋಜನೆ ಆದೇಶ ಸಹ ಹೊರಡಿಸಿಲ್ಲ. ಆದರೂ ಮುಖ್ಯಮಂತ್ರಿ ಹಾಗೂ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಕೃತ್ಯವೆಸಗಲಾಗಿದೆ. ಆದ್ದರಿಂದ ನಕಲಿ ಟಿಪ್ಪಣಿ ಸೃಷ್ಟಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅರುಣ್ ಫುರ್ಟಾಡೊ ದೂರು ನೀಡಿದ್ದಾರೆ.

ಮಂಡ್ಯ ಜಿಲ್ಲೆ ಆರೋಗ್ಯ ಕಲ್ಯಾಣಾಧಿಕಾರಿಯಾದ ಡಾ.ಕೆ.ಮೋಹನ್ ಅವರನ್ನು ಮೈಸೂರು ಗ್ರಾಮಾಂತರದ ಅಬಕಾರಿ ಉಪ ಆಯುಕ್ತರಾಗಿ ವರ್ಗಾವಣೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ ಎನ್ನುವ ಟಿಪ್ಪಣಿ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡಲಾಗಿತ್ತು.

ಈ ವಿಚಾರವಾಗಿ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ಟೀಕೆ ಮಾಡಿದ್ದರು. ಮುಖ್ಯಮಂತ್ರಿ ಟಿಪ್ಪಣಿ ಎನ್ನಲಾದ ಪತ್ರವೊಂದನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಬಿಜೆಪಿ ಶಾಸಕ ವಿ. ಸುನಿಲ್ ಕುಮಾರ್, 'ಸಿದ್ದರಾಮಯ್ಯನವರೇ ಹಳೆ ಚಾಳಿ ಆರಂಭಿಸಿದ್ದೀರಾ?' ಎಂದು ಟೀಕಿಸಿದ್ದರು. ಮತ್ತೊರ್ವ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಇದೇ ಟಿಪ್ಪಣಿಯ ಪತ್ರವನ್ನು ಪೋಸ್ಟ್ ಮಾಡಿದ್ದರು.

'ನಕಲಿ ಸುದ್ದಿಗಳನ್ನು ನಂಬಿ ಶೇರ್ ಮಾಡುವ ಮುನ್ನ ಜಾಲತಾಣ ಬಳಕೆದಾರರು ಎಚ್ಚರಿಕೆ ವಹಿಸಬೇಕು. ಈಗಿನ ಫೋಟೊಶಾಪ್, ಎಐ ಯುಗದಲ್ಲಿ ವಾಟ್ಸ್‌ಆ್ಯಪ್ ಮಾಹಿತಿಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸದೆ ಇತರರ ಜೊತೆ ಹಂಚಿಕೊಳ್ಳುವುದು ಅಪರಾಧ. ಸಕಾರಾತ್ಮಕ ಟೀಕೆ ಸ್ವೀಕರಿಸಲು ಸಿದ್ಧ. ಸುಳ್ಳು ಸುದ್ದಿಗಳ ಅಪಪ್ರಚಾರ ಸಹಿಸುವುದಿಲ್ಲ ಎಂದು ಸಿದ್ದರಾಮಯ್ಯ 'ಎಕ್ಸ್' ಖಾತೆಯಲ್ಲಿ ಎಚ್ಚರಿಸಿದ್ದಾರೆ.

ಚಿಟಿಕೆ ಸುದ್ದಿ

'ಬಿಜೆಪಿ ಕಾರ್ಯಕಾರಿಣಿಗೆ ಭೂಪೇಂದ್ರ'

ಬೆಂಗಳೂರು: 'ಇದೇ 19ರಂದು ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಭಾಗವಹಿಸಲಿದ್ದಾರೆ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಗರದ ಅರಮನೆ ಮೈದಾನದಲ್ಲಿ ಕಾರ್ಯಕಾರಿಣಿ ನಡೆಯಲಿದೆ. ಅದರ ಉದ್ಘಾಟನಾ ಸಮಾರಂಭದಲ್ಲಿ ಭೂಪೇಂದ್ರ ಯಾದವ್ ಅವರು ಬರಲಿದ್ದು, ಸಮಾರೋಪ ಕಾರ್ಯಕ್ರಮದಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್ ಉಪಸ್ಥಿತರಿರುವರು' ಎಂದು ತಿಳಿಸಿದರು.

'ಪಕ್ಷ ಸಂಘಟನೆ, ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟ ಮತ್ತು ಅಭಿವೃದ್ಧಿ ಶೂನ್ಯ ಆಡಳಿತದ ವಿರುದ್ಧ ಹೋರಾಟ ಸಂಘಟಿಸುವ ಬಗ್ಗೆ ಚರ್ಚೆಗಳು ನಡೆಯಲಿವೆ' ಎಂದರು.

ಸ್ಪಾ ಹೆಸರಲ್ಲಿ ವೇಶ್ಯಾವಾಟಿಕೆ: ಐವರ ರಕ್ಷಣೆ; ಇಬ್ಬರ ಬಂಧನ

ಬೀದರ್: ಇಲ್ಲಿನ ಶಿವನಗರ ಸಿಗ್ನಲ್ ಸಮೀಪದ 'ಲೋಟಸ್ ಸ್ಪಾ' ಮೇಲೆ ಶನಿವಾರ ದಾಳಿ ನಡೆಸಿದ ಪೊಲೀಸರು, ವೇಶ್ಯಾವಾಟಿಕೆಗೆ ದೂಡಿದ್ದ ಐವರು ಯುವತಿಯರನ್ನು ರಕ್ಷಿಸಿ, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಪ್ರದೀಪ್ ಗುಂಟಿ

ಮಹಾರಾಷ್ಟ್ರದ ಇಬ್ಬರು, ಅಸ್ಸಾಂ, ಹರಿಯಾಣ ಹಾಗೂ ಮಧ್ಯಪ್ರದೇಶ ರಾಜ್ಯದ ತಲಾ ಒಬ್ಬ ಯುವತಿಯನ್ನು ರಕ್ಷಿಸಲಾಗಿದೆ. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಬೆಳಮಗಿಯ ಕರಣ್ ಹಾಗೂ ಕಲಬುರಗಿ ತಾಲ್ಲೂಕಿನ ಕಾಳಗಿಯ ಸಂದೀಪ್ ಬಂಧಿತರು.

ಕರಣ್ ಹೆಸರಿನಲ್ಲಿ ಸ್ಪಾ ನೋಂದಣಿ ಮಾಡಿಸಿ, ನಡೆಸಲಾಗುತ್ತಿತ್ತು. ಸ್ಪಾಗೆ ಅನ್ಯ ರಾಜ್ಯದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

'ನೀರಾವರಿ ಇಲಾಖೆ: ₹1,324 ಕೋಟಿ ದುರ್ಬಳಕೆ'

ಬೆಂಗಳೂರು: 'ರಾಜ್ಯದ ವಿವಿಧ ನೀರಾವರಿ ನಿಗಮಗಳಿಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ್ದ ₹1,324 ಕೋಟಿ ವಿಶೇಷ ಅನುದಾನದ ಬಳಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು, ನಕಲಿ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಅನುದಾನಗಳಿಗೆ ಸಂಬಂಧಿಸಿದಂತೆ ರಾಜ್ಯ ಸಣ್ಣ ನೀರಾವರಿ ಇಲಾಖೆಯು ಬಳಕೆ ಪ್ರಮಾಣ ಪತ್ರ ಸಲ್ಲಿಸಬೇಕಿತ್ತು. ಆದರೆ, ಕೃಷ್ಣ ಭಾಗ್ಯ ಜಲ ನಿಗಮದ ಮೂಲಕ ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ವಿಶ್ವೇಶ್ವರಯ್ಯ ಜಲ ನಿಗಮದ ಮೂಲಕ ಎತ್ತಿನಹೊಳೆ ಯೋಜನೆಯ ಕಾಮಗಾರಿಗಳಿಗೆ ಯಶಸ್ವಿಯಾಗಿ ಹಣ ವಿನಿಯೋಗ ಮಾಡಲಾಗಿದೆ ಎಂದು ಎರಡೂ ನಿಗಮಗಳ ಮೂಲಕ ಕಾನೂನು ಬಾಹಿರವಾಗಿ ಪ್ರಮಾಣಪತ್ರ ಕೊಡಿಸಲಾಗಿದೆ' ಎಂದು ಆಪಾದಿಸಿದರು.

'ಕೇಂದ್ರ ಸರ್ಕಾರವು ತಾನು ನೀಡಿದ ಅನುದಾನ, ವಿಶೇಷ ಅನುದಾನಗಳಿಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಎಂದು ಸೂಚಿಸುತ್ತದೆ. ರಾಜ್ಯ ಸರ್ಕಾರವು ಈ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿದೆ. ಕೇಂದ್ರವು ಒತ್ತಡ ಹೇರಿದ ಕಾರಣಕ್ಕೆ ನಕಲಿ ಪ್ರಮಾಣ ಪತ್ರಗಳನ್ನು ಸಲ್ಲಿಸಿದೆ. ಈ ಅನುದಾನ ಎಲ್ಲಿಗೆ ಹೋಯಿತು ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರಿಸಬೇಕು' ಎಂದು ಆಗ್ರಹಿಸಿದರು.

ಈಗಲೇ ಮೈತ್ರಿಯ ಮಾತೇಕೆ; ಎಚ್‌. ಡಿ. ಕುಮಾರಸ್ವಾಮಿ ಪ್ರಶ್ನೆ

'ಸಮಯ ಬಂದಾಗ ಮೈತ್ರಿ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ಚುನಾವಣೆಗೆ ಇನ್ನೂ 2 ವರ್ಷಗಳು ಇವೆ. ಈಗಲೇ ಮೈತ್ರಿಯ ಮಾತೇಕೆ? ಆ ಬಗ್ಗೆ ನಾವೂ ಮಾತನಾಡಿಲ್ಲ, ಅವರೂ (ಬಿಜೆಪಿ) ಮಾತನಾಡಿಲ್ಲ. ಮೈತ್ರಿ ಬಗ್ಗೆ ಚರ್ಚೆಯೇ ಆಗಿಲ್ಲ. ಸಮಯ ಬಂದಾಗ ಆ ಚರ್ಚೆ ಮಾಡುತ್ತೇವೆ' ಎಂದು ಕೇಂದ್ರ ಸಚಿವರೂ ಆಗಿರುವ ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ ಅತ್ಯಂತ ಕೆಟ್ಟ ಸರ್ಕಾರ ಇದೆ. ಅದನ್ನು ತೊಲಗಿಸಿ ಜನಪರ ಸರ್ಕಾರ ತರಬೇಕು ಎಂಬುದು ಜೆಡಿಎಸ್ ಮತ್ತು ಬಿಜೆಪಿಯ ಕಾರ್ಯಸೂಚಿ. ಎರಡೂ ಪಕ್ಷಗಳು ಸೇರಿ ಆ ಕೆಲಸ ಮಾಡುತ್ತವೆ. ಒಟ್ಟಾಗಿ ಮೈತ್ರಿಕೂಟವನ್ನು ಬಲಪಡಿಸುತ್ತೇವೆ, ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ' ಎಂದರು.

> **ಜಿಬಿಎ ಪಾಲಿಕೆಗಳ ಚುನಾವಣೆಗೆ ಮೈತ್ರಿ ಮಾಡಿಕೊಳ್ಳುವ ವಿಚಾರದಲ್ಲಿ ನಾವು ಮುಕ್ತರಾಗಿದ್ದೇವೆ. ಆ ಕಡೆಯಿಂದ (ಬಿಜೆಪಿ) ಯಾವ ಪ್ರತಿಕ್ರಿಯೆ ಬರುತ್ತದೆ ಎಂಬುದನ್ನು ನೋಡೋಣ**
> **ಎಚ್‌.ಡಿ.ಕುಮಾರಸ್ವಾಮಿ,** ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

113 ಸ್ಥಾನ ಬಂದವರು ಮುಖ್ಯಮಂತ್ರಿ ಆಗುತ್ತಾರೆ ಎಂದ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಹೇಳಿಕೆ ಬಗ್ಗೆ ಪ್ರಶ್ನಿಸಿದಾಗ, 'ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಈಗ ಚರ್ಚೆ ಏಕೆ? ಅದಕ್ಕೆಲ್ಲಾ ಬಹಳ ಸಮಯ ಇದೆ. ಯಾರೋ ನೀಡಿದ ಹೇಳಿಕೆಗಳಿಗೆಲ್ಲಾ ಪ್ರತಿಕ್ರಿಯೆ ನೀಡಿದರೆ, ನನಗೆ ಪ್ರಬುದ್ಧತೆ ಇಲ್ಲ ಎನ್ನುತ್ತಾರೆ. ಅಂತಹ ಹೇಳಿಕೆಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ಮತ್ತೆ ಮತ್ತೆ ಈ ಬಗ್ಗೆ ಪ್ರಶ್ನಿಸಿದಾಗ, 'ಈಗಲೇ ಮುಖ್ಯಮಂತ್ರಿ ಹುದ್ದೆ ಬಗ್ಗೆ ಮಾತನಾಡಿದರೆ, ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದಂತಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

'ಜಿಬಿಎಯ ಪಾಲಿಕೆಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಇನ್ನೇನು ಚುನಾವಣೆ ನಡೆಯಲಿವೆ. ಅದಕ್ಕೆ ಎಲ್ಲ ಪಕ್ಷಗಳೂ ಸಿದ್ಧತೆ ಮಾಡಿಕೊಂಡಿವೆ. ನಾವೂ ಸಿದ್ಧತೆ ಮಾಡಿಕೊಳ್ಳಬೇಕಿದೆ. ಅದಕ್ಕಾಗಿಯೇ ಇಂದು (ಶನಿವಾರ) ಸಭೆ ಕರೆಯಲಾಗಿತ್ತು. ಮತಗಟ್ಟೆ, ವಾರ್ಡ್ ಮತ್ತು ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಏನೆಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಿದ್ದೇವೆ' ಎಂದು ಮಾಹಿತಿ ನೀಡಿದರು.

'ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಸಂಬಂಧ ಎರಡೂ ಪಕ್ಷಗಳ ಮಧ್ಯೆ ಈವರೆಗೆ ಚರ್ಚೆ ಆಗಿಲ್ಲ. ಸಮಯ ಬಂದಾಗ ಚರ್ಚೆ ಮಾಡುತ್ತೇವೆ. ಆಗ ಪಕ್ಷದ ವೇದಿಕೆಯಲ್ಲೂ ಸಮಾಲೋಚನೆ ನಡೆಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಜೆಡಿಎಸ್ ಮತ್ತು ಬಿಜೆಪಿ ಒಟ್ಟಾಗಿ ಮೈತ್ರಿಕೂಟವನ್ನು ಬಲಪಡಿಸಲಿವೆ' ಎಂದರು.

ಇದಕ್ಕೂ ಮುನ್ನ ನಡೆದ ಸಭೆಯಲ್ಲಿ ಶಾಸಕ ಎಂ.ಟಿ.ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಟಿ.ಎನ್. ಜವರಾಯಿ ಗೌಡ, ಜೆಡಿಎಸ್ ಬೆಂಗಳೂರು ಘಟಕದ ಅಧ್ಯಕ್ಷ ಎಚ್‌. ಎಂ.ರಮೇಶ್‌ಗೌಡ, ಪಕ್ಷದ ನಾಯಕರಾದ ಕೆ.ಎ.ತಿಪ್ಪೇಸ್ವಾಮಿ, ಇ.ಕೃಷ್ಣಪ್ಪ, ನಿಸರ್ಗ ನಾರಾಯಣಸ್ವಾಮಿ, ಗೊಟ್ಟಿಗೆರೆ ಮಂಜುನಾಥ ಅವರು ಭಾಗಿಯಾಗಿದ್ದರು.

'ರಾಜ್ಯದ ಮುಂದಿನ ಸಿ.ಎಂ ದಲಿತರಾಗಲಿ'

ವಿಜಯಪುರ: 'ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ ದಲಿತರು ಮುಖ್ಯಮಂತ್ರಿಯಾಗಲಿ ಎಂಬುದು ನನ್ನ ಆಶಯ' ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

'ಬಿಜೆಪಿಯ ಮುಂದಿನ ಮುಖ್ಯಮಂತ್ರಿ ವಿಜಯೇಂದ್ರ ಆಗುತ್ತಾರೆ' ಎಂಬ ವಿಷಯದ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ವಿಜಯೇಂದ್ರ ಸೇರಿ ಯಾರೇ ಸಿಎಂ ಆದರೂ ನನಗೆ ಅಸಮಾಧಾನ ಇಲ್ಲ' ಎಂದರು.

'ರಾಜ್ಯದಲ್ಲಿ ದಲಿತ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಆಗಲಿ ಎಂದು ನಾನು ನನ್ನ ರಾಜಕೀಯ ಕೊನೆವರೆಗೂ ಬೇಡಿಕೆ ಇಡುತ್ತಲೇ ಇರುತ್ತೇನೆ. ಆದರೆ, ದಲಿತರನ್ನು ಮುಖ್ಯಮಂತ್ರಿ ಮಾಡುತ್ತಾರೋ, ಇಲ್ಲವೋ ಎಂಬುದು ಪಕ್ಷಕ್ಕೆ ಬಿಟ್ಟದ್ದು' ಎಂದರು.

'ನಾನು ವೈಯುಕ್ತಿಕವಾಗಿ ಏನು ಬೇಡಲ್ಲ, ಸಮಾಜಕ್ಕಾಗಿ ಕೇಳುತ್ತೇನೆ. ನಾನು ನನ್ನ ಅಭಿಪ್ರಾಯ ಮಾತ್ರ ಹೇಳುತ್ತೇನೆ' ಎಂದು ಹೇಳಿದರು.

ಚಿರತೆ ಮರಿ

ಪ್ರಜಾವಾಣಿ ಚಿತ್ರ:

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ತಾಲ್ಲೂಕಿನ ಅಂಬಿಕಾ ನಗರ ರಸ್ತೆಯ ಪಕ್ಕದ ಕಟ್ಟೆಯ ಮೇಲೆ ಶನಿವಾರ ಎರಡು ಚಿರತೆ ಮರಿಗಳು ಕೆಲ ಹೊತ್ತು ಕುಳಿತಿದ್ದವು.

ಬೈರತಿ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ತಜ್ಞ ವೈದ್ಯರ ತಂಡ ಆರೋಗ್ಯ ತಪಾಸಣೆ ನಡೆಸಿತು.

ನ್ಯಾಯಾಲಯದ ಸೂಚನೆಯಂತೆ ಶನಿವಾರ ಸಂಸ್ಥೆಯ ನಿರ್ದೇಶಕ ಡಾ.ದಿನೇಶ್ ನೇತೃತ್ವದ ತಂಡ ಬಸವರಾಜ ಅವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿತು. ಇಸಿಜಿ, ಆಂಜಿಯೋಗ್ರಾಮ್ ಸೇರಿ ಹೃದಯಕ್ಕೆ ಸಂಬಂಧಿಸಿದ ಕೆಲವು ಪರೀಕ್ಷೆಗಳನ್ನು ಮಾಡಲಾಯಿತು. ರಕ್ತದ ಮಾದರಿಯನ್ನು ಪಡೆದುಕೊಳ್ಳಲಾಯಿತು.

'ಬಸವರಾಜ ಅವರು ಹೃದಯ ಸಂಬಂಧಿ ಕಾಯಿಲೆಗೆ ಈಗಾಗಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರತಿ ನಾಲ್ಕು ತಾಸಿಗೊಮ್ಮೆ ಅವರ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ವೈದ್ಯರು ನೀಡುತ್ತಿದ್ದಾರೆ. ಸದ್ಯ ಅವರು ಆಸ್ಪತ್ರೆಯಲ್ಲಿ ಇದ್ದಾರೆ. ವೈದ್ಯರು ಇನ್ನೂ ವರದಿ ನೀಡಿಲ್ಲ. ವೈದ್ಯಕೀಯ ವರದಿಯೊಂದಿಗೆ ನ್ಯಾಯಾಧೀಶರ ಎದುರು ಬಸವರಾಜ ಅವರನ್ನು ಹಾಜರುಪಡಿಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ವೈದ್ಯಕೀಯ ವರದಿ ಆಧರಿಸಿ ನ್ಯಾಯಾಲಯ ಬಸವರಾಜ ಅವರನ್ನು ಪೊಲೀಸ್ ವಶಕ್ಕೆ ನೀಡಲಿದೆಯೇ ಅಥವಾ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಿದೆಯೇ ಎಂಬುದು ಗೊತ್ತಾಗಲಿದೆ' ಎಂದು ಮೂಲಗಳು ಹೇಳಿವೆ. ಸಿಐಡಿ ಅಧಿಕಾರಿಗಳು ಗುರುವಾರ ಬೈರತಿ ಬಸವರಾಜ ಅವರನ್ನು ವಶಕ್ಕೆ ಪಡೆದಿದ್ದರು. ಶುಕ್ರವಾರ ಮಧ್ಯಾಹ್ನ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರು.

ಹಕ್ಕುಪತ್ರ ಪಡೆದು ಹಿಗ್ಗಿದರು

ಒಂದನೇ ಪುಟದಿಂದ...

ಹಕ್ಕುಪತ್ರ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, 'ಮನೆ ಮನೆಗೆ ತೆರಳಿ ದಾಖಲೆ ರಹಿತರನ್ನು ಗುರುತಿಸಿ ದಾಖಲೆ ನೀಡಿ, ಅವರೆಲ್ಲರೂ ನೆಮ್ಮದಿಯಾಗಿ ಬದುಕುವ ಹಕ್ಕು ನೀಡುವಂತೆ ಮುಖ್ಯಮಂತ್ರಿ ಸೂಚಿಸಿದ್ದರು. ಅದರಂತೆ, ಫಲಾನುಭವಿಗಳನ್ನು ಗುರುತಿಸಿ ಹಕ್ಕುಪತ್ರ ನೀಡುತ್ತಿದ್ದೇವೆ. ಜನರಿಗೆ ಮಾಲೀಕತ್ವದ ಶಾಶ್ವತ ಪರಿಹಾರ ನೀಡಿದ್ದೇವೆ' ಎಂದರು.

'ನಮ್ಮ ಸರ್ಕಾರ ಸಾವಿರ ದಿನಗಳಲ್ಲಿ, ಹಿಂದಿನ ಸರ್ಕಾರಕ್ಕಿಂತಲೂ ಐದು ಪಟ್ಟು ಹೆಚ್ಚಿನ ಕೆಲಸ ಮಾಡಿದೆ. 2,492 ಕಂದಾಯ ಗ್ರಾಮ ಮಾಡಿ, 2.20 ಲಕ್ಷ ಕುಟುಂಬಕ್ಕೆ ಹಕ್ಕುಪತ್ರ ನೀಡಿದ್ದೇವೆ. ಭೂಮಿ ಮಾಲೀಕತ್ವಕ್ಕಾಗಿ ವಾಜ್ಯ ನಡೆದು, ಕಚೇರಿ, ಕೋರ್ಟ್‌ಗೆ ಅಲೆದಾಡುವಂತಾಗಿದೆ. ಹಣ ಖರ್ಚಾಗುತ್ತಿದೆ. ಅಂತಹ ಸಮಸ್ಯೆ ಆಗದಿರಲೆಂದೇ ಸಮಾವೇಶ ಮಾಡುತ್ತಿದ್ದೇವೆ' ಎಂದರು.

> **ಎರಡನೇ ಬಾರಿ ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ. ಈಗಾಗಲೇ 2.20 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಸಿಕ್ಕಿದೆ. ಮುಂಬರುವ ದಿನಗಳಲ್ಲಿ ಬಾಕಿ ಕುಟುಂಬಗಳಿಗೂ ಹಕ್ಕುಪತ್ರ ನೀಡಲಾಗುವುದು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಬಿಜೆಪಿಯವರು ಭಾವನೆ ಮೇಲೆ ರಾಜಕಾರಣ ಮಾಡುತ್ತಾರೆ. ನಾವು ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ. ರಾಮ, ಆಂಜನೇಯ ಹಾಗೂ ಇತರೆ ದೇವರು ಕೇವಲ ಬಿಜೆಪಿಯ ಆಸ್ತಿಯಲ್ಲ. ದೇಶದ ಎಲ್ಲ ವರ್ಗದವರ ಆಸ್ತಿ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಅಡವಿಟ್ಟ ಚಿನ್ನ ಕದ್ದ ಬ್ಯಾಂಕ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಗೇಮಿಂಗ್ ಹಾಗೂ ಕ್ಯಾಸಿನೊದಲ್ಲಿ ಜೂಜಾಡಲು ಮಾಡಿದ್ದ ಲಕ್ಷಾಂತರ ರೂಪಾಯಿ ಸಾಲ ತೀರಿಸಲು, ಗ್ರಾಹಕರು ಅಡಮಾನ ಇರಿಸಿದ್ದ ₹4 ಕೋಟಿ ಮೌಲ್ಯದ ಚಿನ್ನಾಭರಣ ಕಳವು ಮಾಡಿದ ಪ್ರಕರಣದಲ್ಲಿ ಗಿರಿನಗರದ ಇಂಡಿಯನ್ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕರೊಬ್ಬರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ದಿಲೀಪ್ ಕುಮಾರ್ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು, ಇ. ಕಿರಣ್ ಕುಮಾರ್ (35) ಅವರನ್ನು ಬಂಧಿಸಿ, 700 ಗ್ರಾಂ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಬ್ಯಾಂಕ್‌ನ ಲಾಕರ್‌ನಲ್ಲಿ ಇರಿಸಿದ್ದ 2 ಕೆ.ಜಿ. 780 ಗ್ರಾಂ ಚಿನ್ನಾಭರಣ ವನ್ನು ಆರೋಪಿ ಕಳ್ಳತನ ಮಾಡಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

'ಆಂಧ್ರಪ್ರದೇಶದ ಚಿತ್ತೂರಿನ ಕಿರಣ್ ಕುಮಾರ್, ವಿದ್ಯಾರಣ್ಯಪುರದಲ್ಲಿ ವಾಸವಾಗಿದ್ದು, ಗಿರಿನಗರದ ಇಂಡಿಯನ್ ಬ್ಯಾಂಕ್‌ನಲ್ಲಿ ಸಹಾಯಕ ವ್ಯವಸ್ಥಾಪಕ. ಆನ್‌ಲೈನ್ ಗೇಮಿಂಗ್ ಹಾಗೂ ಕ್ಯಾಸಿನೊದಲ್ಲಿ ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿ ಕಳೆದುಕೊಂಡಿದ್ದು, ಸುಮಾರು ₹60 ಲಕ್ಷಕ್ಕೂ ಹೆಚ್ಚು ಸಾಲ ಮಾಡಿಕೊಂಡಿದ್ದಾರೆ. ಅದನ್ನು ತೀರಿಸುವ ಸಲುವಾಗಿ ಬ್ಯಾಂಕ್‌ನಲ್ಲಿ ಗ್ರಾಹಕರು ಅಡಮಾನ ಇರಿಸಿದ್ದ ಚಿನ್ನಾ-ಭರಣಗಳನ್ನು ಆರು ತಿಂಗಳಿಂದ ಹಂತ, ಹಂತವಾಗಿ ಕಳವು ಮಾಡಿ ಫೈನಾನ್ಸ್‌ನಲ್ಲಿ ಅಡಮಾನ ಇರಿಸಿ, ಹಣ ಪಡೆದು ಸ್ವಲ್ಪ ಸಾಲ ತೀರಿಸಿದ್ದರು' ಎಂದು ಪೊಲೀಸರು ಹೇಳಿದರು.

ಆಂತರಿಕ ವಿಚಾರಣೆಯಲ್ಲಿ ಆರೋಪಿ ಕಿರಣ್, ಬ್ಯಾಂಕ್‌ನ ವಲಯ ಕಚೇರಿಗೆ ಹಾಜರಾಗಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದರು. ಚಿನ್ನವನ್ನು ಕತ್ರಿಗುಪ್ಪೆಯ ಎರಡು ಖಾಸಗಿ ಫೈನಾನ್ಸ್‌ನಲ್ಲಿ ಅಡಮಾನ ಇರಿಸಿದ್ದಾಗಿ ತಿಳಿಸಿದ್ದರು. ಈ ಕುರಿತು ಬಂದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮಹಿಳೆಯೊಬ್ಬರು ಆರು ತಿಂಗಳ ಹಿಂದೆ ಬ್ಯಾಂಕ್ ನಲ್ಲಿ ಚಿನ್ನ ಅಡವಿಟ್ಟು ಸಾಲ ಪಡೆದಿದ್ದರು. ಸಾಲ ತೀರಿಸಿ ಒಡವೆ ಬಿಡಿಸಿಕೊಳ್ಳಲು ಇತ್ತೀಚೆಗೆ ಬ್ಯಾಂಕ್‌ಗೆ ಬಂದಿದ್ದರು. ಪೂರ್ಣ ಸಾಲ ಪಾವತಿಸಿ ಪ್ಯಾಕೆಟ್ ನಲ್ಲಿದ್ದ ಚಿನ್ನ ಪರಿಶೀಲಿಸಿದಾಗ ಕೆಲ ಆಭರಣಗಳು ನಾಪತ್ತೆಯಾಗಿ-ತ್ತು. ಈ ಬಗ್ಗೆ ಬ್ಯಾಂಕ್‌ನ ವ್ಯವಸ್ಥಾಪಕರ ಗಮನಕ್ಕೆ ತಂದಿದ್ದರು. ಅಧಿಕಾರಿಗಳು, ಬ್ಯಾಂಕ್‌ನ ಲಾಕರ್ ಪರಿಶೀಲಿಸಿದಾಗ ಚಿನ್ನದ ಸಾಲ ಮಂಜೂರು ಮಾಡಲಾಗಿದ್ದ 207 ಪ್ಯಾಕೆಟ್ ಗಳಲ್ಲಿ ಸುಮಾರು 21 ಪ್ಯಾಕೆಟ್ ಗಳಲ್ಲಿದ್ದ ಚಿನ್ನ ಕಾಣೆಯಾಗಿತ್ತು. 3 ಪ್ಯಾಕೆಟ್ ಗಳಲ್ಲಿ ಎಲ್ಲ ಚಿನ್ನ ನಾಪ-ತ್ತೆಯಾಗಿತ್ತು. ಹೀಗೆ ಕಳೆದ ಆರು ತಿಂಗಳಲ್ಲಿ ಒಟ್ಟು 2 ಕೆ.ಜಿ. 783 ಗ್ರಾಂ ಅಂದಾಜು ₹4 ಕೋಟಿ ಮೌಲ್ಯದ ಚಿನ್ನ ಕಳವಾಗಿರುವುದು ಗೊತ್ತಾಗಿತ್ತು.

ಗ್ರಾಮ ಸತ್ಯಾಗ್ರಹಕ್ಕೆ ನಿರ್ಧಾರ

ಬದನವಾಳು ಸತ್ಯಾಗ್ರಹ ಸಮಿತಿಯ ಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ 2015ರಲ್ಲಿ ನಡೆದಿದ್ದ ಬದನವಾಳು ಸತ್ಯಾಗ್ರಹವನ್ನು ಗ್ರಾಮ ಸತ್ಯಾಗ್ರಹವಾಗಿ ಮರುನಾಮಕರಣ ಮಾಡಿ ಮುಂದುವರಿಸಲು ಹೋರಾಟಗಾರರು ನಿರ್ಣಯಿಸಿದರು.

ಇಲ್ಲಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಸಭಾಂಗಣದಲ್ಲಿ ಬದನವಾಳು ಸತ್ಯಾಗ್ರಹ ಸಮಿತಿಯು ಆಯೋಜಿಸಿದ್ದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಗ್ರಾಮ ವ್ಯವಸ್ಥೆ, ಕರಕುಶಲ ಉತ್ಪನ್ನಗಳ ಆರ್ಥಿಕತೆ, ಸಹಜ ಕೃಷಿ, ಸ್ಥಳೀಯ ಸಂಸ್ಕೃತಿ, ಮಾತೃಭಾಷೆ ಹಾಗೂ ದುರ್ಬಲಗೊಂಡಿರುವ ಪ್ರಾಕೃತಿಕ ಸಂಪನ್ಮೂಲವನ್ನು ಮೇಲೆತ್ತಬಲ್ಲ ಅಹಿಂಸಾತ್ಮಕ ಚಳವಳಿ ಮುಂದುವರಿಸಲು ನಿರ್ಧರಿಸಲಾಯಿತು. ಬದನವಾಳು ಖಾದಿ ಕೇಂದ್ರವನ್ನು ಗಾಂಧಿ ಅಶ್ರಮವಾಗಿ ನಮ್ಮ ಶ್ರಮದಿಂದ ರೂಪಿಸಬೇಕು ಎಂಬ ಸಂಕಲ್ಪವನ್ನು ಹೋರಾಟಗಾರರು ಮಾಡಿದರು.

ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಸಭಾಂಗಣದಲ್ಲಿ ಬದನವಾಳು ಸತ್ಯಾಗ್ರಹ ಸಮಿತಿಯು ಆಯೋಜಿಸಿದ್ದ ಸಭೆಯಲ್ಲಿ ಹೋರಾಟಗಾರರು ಭಾಗವಹಿಸಿದ್ದರು

ರಂಗಕರ್ಮಿ ಪ್ರಸನ್ನ 'ಬದನವಾಳು ಖಾದಿ ಕೇಂದ್ರವನ್ನು ಗಾಂಧಿ ಅಶ್ರಮವಾಗಿ ರೂಪಿವುದರೊಂದಿಗೆ ಗ್ರಾಮಗಳಲ್ಲಿರುವ ಗಾಂಧಿ ಆಶಯ ಕೇಂದ್ರಗಳನ್ನೂ ಗಟ್ಟಿಗೊಳಿಸುವ ಕೆಲಸ ನಡೆಯಬೇಕು' ಎಂದರು. ಗಾಂಧಿವಾದಿ ಜಿ.ಎಸ್. ಜಯದೇವ ಮಾತನಾಡಿ, 'ಸರ್ಕಾರ ಬದನವಾಳಿಗಾಗಿ ₹ 40 ಕೋಟಿ ಮಂಜೂರು ಮಾಡಿದೆ. ಅದನ್ನು ಬಳಸಿ ಸುತ್ತಲಿನ ಹಳ್ಳಿಗಳ ಸಮುಚ್ಚಯದಲ್ಲಿ ಸರ್ವೋದಯದ ಆರ್ಥಿಕತೆ ಹುಟ್ಟು ಹಾಕುವ ಆಶಯಇದೆ' ಎಂದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು

ಸಂ: ಕರಾಸಾ/ಕಾನಿಅ/ಬೆಂವಿ/ಕಿಅ/895/2025–26 ದಿನಾಂಕ: 14.02.2026

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಎಂ.ಇ.ಎಸ್.ನಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಇ–ಆಡಳಿತ ರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಕಾಲಾವಧಿ ಮಳೆಗಾಲವನ್ನು ಸೇರಿ
1	13	Alteration and Renovation works of KSRTC Hospital building at Jayanagara 4th T block, Bangalore for office of PTFRC (Public Transport Fare Regulatory Committee).	80.60	1,61,200/-	45 ದಿನಗಳು

1. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 04.03.2026.
2. ಹೆಚ್ಚಿನ ವಿವರಗಳನ್ನು http://www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ದಿನಾಂಕ: 20/02/2025ರ ನಂತರ ಪಡೆದುಕೊಳ್ಳಬಹುದು.
3. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕರಾರಸಾ ನಿಗಮ, ಹಳೆ ಸಿಟಿಐ ಕಟ್ಟಡ, ಶಾಂತಿನಗರ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5659/ಆಕಾರ್/2025–26

ಕರ್ನಾಟಕ ಸರ್ಕಾರ
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ
ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ನಾಲತವಾಡ
ನಂ:ಕೈತಸಂ/ನಾ/ಖರೀದಿ/ವಿವ–02/2025–26 ದಿನಾಂಕ:12.02.2026

ಪ್ರಕಟಣೆ

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ನಾಲತವಾಡದಲ್ಲಿ ಅನುಪಯುಕ್ತ ವಸ್ತುಗಳ ಬಹಿರಂಗ ಹರಾಜನ್ನು ದಿನಾಂಕ:04.03.2026 ರಂದು ಬೆಳಿಗ್ಗೆ 11–00 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಜರುಗಲಿದ್ದು, ಸದರಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ.1000/– ಗಳ ಪ್ರಾರಂಭಿಕ ಠೇವಣಿ ಭರಿಸಿ ಹರಾಜಿನಲ್ಲಿ ಭಾಗವಹಿಸಬಹುದೆಂದು ತಿಳಿಸಲಾಗಿದೆ.
ಷರತ್ತು ಮತ್ತು ನಿಯಮಗಳು ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ನಾಲತವಾಡ ಇವರನ್ನು ಸಂಪರ್ಕಿಸಬಹುದು. ಮೊಬೈಲ್ ಸಂಖ್ಯೆ:9986123893

ಸಹಿ/– ಪ್ರಾಚಾರ್ಯರು, ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ನಾಲತವಾಡ
ವಾಸಾಸಂಇ/ವಿಜಯಪುರ/704/ಕೆಸ್‌ಎಂಸಿಎ/2025–26

KENDRIYA VIDYALAYA, RAIL WHEEL FACTORY
Under the Ministry of Education, Govt. of India
YELAHANKA NEW TOWN, BENGALURU - 560 064.
Phone : 080-28460979 (O), Fax No.: 080-28566968
E-Mail : kvrwf123@gmail.com, Website : https://wapyelahanka.kvs.ac.in

WALK - IN INTERVIEW

Walk - In Interview for the following posts on purely Part Time / Contractual basis for the academic Year 2026-27. **Reporting Time : 09.00 a.m.**

DATE	POST
23rd Feb. 2026	Post Graduate Teachers : Hindi, English, Chemistry, Physics, Maths, Biology and Computer Science. Trained Graduate Teachers : Hindi, English, Social Studies, Maths, Science & Sanskrit. Others : Computer Instructor (Primary & Secondary)
24th Feb. 2026	PRT, Sports Coach (Male & Female), Staff Nurse, Kannada Teacher, Education Counsellor, Special Educator, Dance Teacher, Yoga Instructor & Balvatika-III Teacher.

For detail of Eligibility, Educational Qualifications and Application Form, kindly log on to the **Website of Kendriya Vidyalaya, Rail Wheel Factory at https://wapyelahanka.kvs.ac.in.** Candidates should report to the **Venue at 09:00 a.m.** for the interview with original, set of photocopies of all necessary documents and recent passport size photograph. If applying for more than one post, submit separate application forms along with all required documents.
No TA/DA will be paid by the Vidyalaya for Walk-in-Interview.
The timings of the Interview will be from 09:00 a.m. to 01:00 p.m.

Sd/- PRINCIPAL

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಹುಣಸೂರು ವನ್ಯಜೀವಿ ಉಪ ವಿಭಾಗ, ಹುಣಸೂರು
e-mail – acfhunsurwlsd2020@gmail.com
ಸಂಖ್ಯೆ/ಸಅಸಂ./ಹುವಉ/ರೈಬಾ/ಟೆಂಡರ್/ಸಿಆರ್–13/2025–26 ದಿ: 05.02.2026

ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2025–26ನೇ ಸಾಲಿನಲ್ಲಿ ಹುಣಸೂರು ವನ್ಯಜೀವಿ ಉಪ ವಿಭಾಗದ ಹುಣಸೂರು ಮತ್ತು ವೀರನಹೊಸಹಳ್ಳಿ, ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3/ ಕೆ.ಡಬ್ಲ್ಯೂ–4ರಲ್ಲಿನ ಷರತ್ತುಗಳಿಗನುಗುಣವಾಗಿ" ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ.

ಉಪಯೋಗಿತ ರೈಲ್ವೆ ಹಳಿಗಳನ್ನು ಖರೀದಿಸಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು.	1.736 ಮೀ (2 ಯುನಿಟ್)	272.633 ಲಕ್ಷಗಳು*

(* ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 04.03.2026 ಸಂಜೆ 4:00 ಗಂಟೆ. ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: ಮತ್ತು ಸಮಯ: 12.03.2026 ಸಂಜೆ 4:00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ದೂರವಾಣಿ : 08222–252041

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
DIPR/DDMYS/1667/KSMCA/943/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/2025–26/9809–20 ದಿನಾಂಕ: 13.02.2026
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಸೇವೆಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣೆ ಸಂಖ್ಯೆ / ಸೇವೆಗಳ ವಿವರ
1.	ಕೆಪಿಟಿಸಿಎಲ್/2025–26/ಎಸ್‌ಇ2344
	ಕೆಪಿಟಿಸಿಎಲ್‌ನಲ್ಲಿ ಕೈಗೊಳ್ಳಬೇಕಾದ ವಿದ್ಯುತ್ ಉಪಕೇಂದ್ರಗಳ, ಪ್ರಸರಣ ಮಾರ್ಗಗಳ ಮತ್ತು ಹೆಚ್ಚುವರಿ ಸಾಮರ್ಥ್ಯ ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳು ಮತ್ತು ವಿವರವಾದ ಯೋಜನಾ ವರದಿಗಳ (ಡಿಪಿಆರ್) ತಯಾರಿಕೆಯ ಕೆಲಸಕ್ಕಾಗಿ ಸಲಹೆಗಾರರನ್ನು ನಿಯೋಜಿಸಲು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **17.02.2026ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್(ವಿದ್ಯುತ್),
ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ,
9ನೇ ಮಹಡಿ, ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009.

ರಸ್ತೆಯಲ್ಲೇ ನಿಂತ ಅನಾಥ ವಾಹನ

ಕಿರಿದಾದ ರಸ್ತೆಗಳಲ್ಲಿ ಸಂಚಾರ ದಟ್ಟಣೆ, ಸಾರ್ವಜನಿಕರ ಓಡಾಟಕ್ಕೂ ಕಿರಿಕಿರಿ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿರುವ ಅನಾಥ ವಾಹನಗಳು
- ಸುಗಮ ಸಂಚಾರಕ್ಕೆ ಅಡ್ಡಿ
- ಈ ವಾಹನಗಳನ್ನು ಅಕ್ರಮ ಚಟುವಟಿಕೆಗೆ ಬಳಸುವ ಆತಂಕ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳು, ಜಂಕ್ಷನ್‌ಗಳಲ್ಲಿ ಕೆಟ್ಟು ನಿಂತಿರುವ ಹಳೆಯ ಅನಾಥ ವಾಹನಗಳು ಹತ್ತಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ನಿಂತಿವೆ. ಆ ವಾಹನಗಳ ಮಾಲೀಕರು ಯಾರು ಎಂಬುದು ಗೊತ್ತಿಲ್ಲ. ಜಿಬಿಎ ಅವುಗಳನ್ನು ಸ್ಥಳಾಂತರಿಸಿ, ಗುಜರಿಗೆ ಹಾಕುವ ಪ್ರಯತ್ನ ಮಾಡುತ್ತಿಲ್ಲ. ಇದರಿಂದ ಸ್ಥಳೀಯ ನಾಗರಿಕರು, ವಾಹನ ಸವಾರರು ಕಿರಿಕಿರಿ ಅನುಭವಿಸುತ್ತಿದ್ದಾರೆ.

ವೀರಭದ್ರನಗರದ ರಸ್ತೆಯ ಪಾದಚಾರಿ ಮಾರ್ಗದಲ್ಲಿ ನಿಂತಿರುವ ದ್ವಿಚಕ್ರ ವಾಹನಗಳು

ವರ್ಷಾನುಗಟ್ಟಲೇ ಒಂದೇ ಸ್ಥಳದಲ್ಲಿ ನಿಂತಿರುವ ಗಾಜುಗಳಿಲ್ಲದ ಕಾರುಗಳು, ಆಟೊ, ಬೈಕ್‌ಗಳು, ಈ ವಾಹನಗಳಲ್ಲಿ ಎಂಜಿನ್, ಸೀಟ್ ಯಾವುದೂ ಇರುವುದಿಲ್ಲ. ನಿಂತ ಸ್ಥಳದಲ್ಲೇ ವಾಹನಗಳು ನಿಂತು ಸಿಲಿಕಾನ್ ಸಿಟಿಯ ಸೌಂದರ್ಯಕ್ಕೆ ಧಕ್ಕೆ ತರುತ್ತಿವೆ. ಇದರ ಜೊತೆಗೆ ಸಂಚಾರ ದಟ್ಟಣೆ ಹಾಗೂ ಅನೈತಿಕ ಚಟುವಟಿಕೆಗಳ ತಾಣಗಳಾಗಿಯೂ ಮಾರ್ಪಡುತ್ತಿವೆ ಎಂಬುದು ಸಾರ್ವಜನಿಕರ ದೂರು.

‘ರಾಜಧಾನಿ ಬೆಂಗಳೂರಿನಲ್ಲಿ ನಿತ್ಯ ಸಾವಿರಾರು ಹೊಸ ವಾಹನಗಳು ರಸ್ತೆಗೆ ಇಳಿಯುತ್ತಿದ್ದು, ಸುಗಮ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಇದರ ಜೊತೆಗೆ ಹಳೆಯ ಅನಾಥ ವಾಹನಗಳು ಪಾದಚಾರಿ ಮಾರ್ಗ ಅಕ್ರಮಿಸಿಕೊಂಡು ನಿಂತಿದ್ದು, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗುತ್ತಿದೆ. ಕೆಲವು ವಾಹನಗಳನ್ನು ರಸ್ತೆಗಳ ಬದಿಯಲ್ಲಿ ನಿಲುಗಡೆ ಮಾಡುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಇವುಗಳ ಮಾಲೀಕರನ್ನು ಹುಡುಕಿ ದಂಡ ಹಾಕಬೇಕು. ಇಲ್ಲದಿದ್ದರೆ ಈ ವಾಹನಗಳನ್ನು ಸ್ಥಳಾಂತರಿಸಿ ಗುಜರಿಗೆ ಹಾಕಬೇಕು’ ಎಂದು ವಾಹನ ಸವಾರರಾದ ಪ್ರಮೋದ್ ಹಾಗೂ ಧ್ರುವ್ ಒತ್ತಾಯಿಸಿದರು.

ರಾಜಾಜಿನಗರ, ಮಲ್ಲೇಶ್ವರದ ವೃತ್ತ, ಶಿವಾಜಿನಗರ, ಜಯನಗರ, ಜೆ.ಪಿ. ನಗರ, ಯಶವಂತಪುರ, ಸುಂಕದಕಟ್ಟೆ, ವಿಜಯನಗರ, ಹಲಸೂರು, ಇಂದಿರಾನಗರ, ಕೋರಮಂಗಲ, ಬೆನ್ಸನ್‌ಟೌನ್, ಕೆಂಗೇರಿ, ಬ್ಯಾಟರಾಯನಪುರ, ಮೈಸೂರು ರಸ್ತೆ, ಕಬ್ಬನ್‌ಪೇಟೆ, ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆಯ ಅಕ್ಕಪಕ್ಕದ ರಸ್ತೆಗಳಲ್ಲಿ, ಕುರುಬರಹಳ್ಳಿ, ಗಾಂಧಿನಗರ, ಬನ್ನಪ್ಪಪಾರ್ಕ್, ಗಿರಿನಗರ, ಹೊಸಕೆರೆಹಳ್ಳಿ, ರಾಜರಾಜೇಶ್ವರಿನಗರ, ನಂದಿನಿ ಲೇಔಟ್, ಮಹಾಲಕ್ಷ್ಮಿ ಬಡಾವಣೆ, ವೈಟ್ ಫೀಲ್ಡ್, ಮಹದೇವಪುರ ಸೇರಿದಂತೆ ನಗರದ ವಿವಿಧ ಬಡಾವಣೆಗಳಲ್ಲಿ ಬಳಕೆಗೆ ಬಾರದ ಸಾವಿರಾರು ಸಂಖ್ಯೆಯ ವಾಹನಗಳು ರಸ್ತೆಯ ಬದಿಯಲ್ಲಿ ನಿಂತಿವೆ. ಇವುಗಳ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗಾಂಧಿನಗರದ ಶಿವಪ್ರಸಾದ್ ಒತ್ತಾಯಿಸಿದರು.

‘ಕಿರಿದಾದ ರಸ್ತೆಗಳಲ್ಲಿ ತುಕ್ಕು ಹಿಡಿದು ನಿಂತಿರುವ ವಾಹನಗಳಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದು ಅನಗತ್ಯವಾಗಿ ಸಂಚಾರ ದಟ್ಟಣೆ ಆಗುತ್ತಿದೆ. ರೇಸ್ ಕೋರ್ಸ್ ರಸ್ತೆ ಹಾಗೂ ಆಸ್ಟಿನ್ ಟೌನ್ ಪೊಲೀಸ್ ಕ್ವಾಟರ್ಸ್ ಮುಂಭಾಗದ ರಸ್ತೆಗಳಲ್ಲಿ ಎರಡು ಕಾರುಗಳು ಇದ್ದಲ್ಲೇ ತುಕ್ಕು ಹಿಡಿದಿವೆ’ ಎಂದು ತಿಳಿಸಿದರು.

ಜಯನಗರದ ಠಾಣೆಯ ಮುಂಭಾಗದ ರಸ್ತೆಯನ್ನು ಅಕ್ರಮಿಸಿಕೊಂಡು ಅನಾಥವಾಗಿ ನಿಂತಿರುವ ಕಾರುಗಳು ಚಿತ್ರ: ರಂಜು ಪಿ.

‘ಟೋಯಿಂಗ್ ಪ್ರಾರಂಭಿಸುತ್ತೇವೆ’

ನಗರದ ವಿವಿಧ ರಸ್ತೆಗಳಲ್ಲಿ ಹಲವಾರು ತಿಂಗಳುಗಳಿಂದ ರಸ್ತೆ ಬದಿಯಲ್ಲಿ ನಿಂತಿರುವ ಅನಾಥ ವಾಹನಗಳನ್ನು ತೆರವುಗೊಳಿಸುವ ಸಲುವಾಗಿ ಎರಡು ಟೋಯಿಂಗ್ ವಾಹನಗಳನ್ನು ಖರೀದಿಸಲಾಗಿದೆ. ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಎಲ್ಲಾ ಕಡೆ ಅನಾಥ ವಾಹನಗಳ ತೆರವು ಕಾರ್ಯವನ್ನು ಕೂಡಲೇ ಪ್ರಾರಂಭಿಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರರಾವ್ ತಿಳಿಸಿದ್ದಾರೆ.

ಮಹೇಶ್ವರ ರಾವ್

ಬೀದಿಗಳಲ್ಲಿ ವರ್ಷಗಳಿಂದ ಕೆಟ್ಟು ನಿಂತಿರುವ ವಾಹನಗಳನ್ನು ಸಂಚಾರ ವಿಭಾಗದ ಪೊಲೀಸರ ಸಹಕಾರದಿಂದ ವಿಲೇವಾರಿ ಮಾಡಿ ನಗರದ ಸೌಂದರ್ಯ ಕಾಪಾಡಬೇಕು

ಶಿವಪ್ರಸಾದ್, ಗಾಂಧಿನಗರ

‘ಬೈರತಿ ವಿರುದ್ಧ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಶಾಸಕ ಬೈರತಿ ಬಸವರಾಜ ಮನೆಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಭೇಟಿ ನೀಡಿ ಕುಟುಂಬದ ಸದಸ್ಯರು ಮತ್ತು ಮುಖಂಡರು, ಕಾರ್ಯಕರ್ತರೊಡನೆ ಸಮಾಲೋಚನೆ ನಡೆಸಿದರು.

‘ಬೈರತಿ ಬಸವರಾಜ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಇದು ಸಂಪೂರ್ಣ ರಾಜಕೀಯ ಪ್ರೇರಿತ, ಅವರನ್ನು ರಾಜಕೀಯವಾಗಿ ಮುಗಿಸಲು ಸಂಚು ನಡೆಯುತ್ತಿದೆ. ಬೈರತಿ ಬಸವರಾಜ ಅವರೊಂದಿಗೆ ಮಾತನಾಡಿದ್ದು ಧೈರ್ಯವಾಗಿರುವಂತೆ ಸಲಹೆ ನೀಡಿದ್ದೇನೆ’ ಎಂದು ಅವರು ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿದರು.

‘ಪಕ್ಷ ಹಾಗೂ ನಾನು ನಿಮ್ಮ ಜೊತೆ ಇದ್ದೇವೆ. ಈ ಬಗ್ಗೆ ಚಿಂತಿಸುವುದು ಬೇಡ. ಏನೇ ಬಂದರೂ ಕಾರ್ಯಕರ್ತರು ಶಾಸಕರ ಜೊತೆ ಇದ್ದು ಎದುರಿಸಲು ಸಿದ್ಧರಾಗಿಬೇಕು. ನಮ್ಮ ಪಕ್ಷದ 15 ಶಾಸಕರ ವಿರುದ್ದ ದೂರುಗಳನ್ನು ದಾಖಲಿಸಲಾಗಿದೆ’ ಎಂದು ಆರೋಪಿಸಿದರು.

‘ಇಂತಹ ರಾಜಕೀಯ ಷಡ್ಯಂತ್ರಗಳಿಗೆ ನಮ್ಮ ಪಕ್ಷವಾಗಲಿ, ಶಾಸಕರಾಗಲಿ ಹೆದರುವುದಿಲ್ಲ. ದಿಟ್ಟ ಹೋರಾಟ ಮಾಡುತ್ತೇವೆ. ಇನ್ನೆರಡು ವರ್ಷ ಕಾಂಗ್ರೆಸ್ ಅಧಿಕಾರದಲ್ಲಿ ಇರುತ್ತದೆ. ಅಲ್ಲಿಯವರೆಗೂ ಸಹಿಸಿಕೊಳ್ಳೋಣ, ಅವರು ಕೊಟ್ಟಿದ್ದನ್ನು ಮುಂದೆ ಅವರಿಗೆ ವಾಪಸ್ ಕೊಡೋಣ. ನ್ಯಾಯಾಲಯದ ಆದೇಶಕ್ಕೆ ಎಲ್ಲರೂ ತಲೆ ಭಾಗಬೇಕು, ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ’ ಎಂದರು.

ಈ ಸಂದರ್ಭದಲ್ಲಿ ದಾಸರಹಳ್ಳಿ ಕ್ಷೇತ್ರದ ಶಾಸಕ ಮುನಿರಾಜು, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಮಂಡಲ ಅಧ್ಯಕ್ಷ ಮುನೇಗೌಡ, ಮುಖಂಡರಾದ ಸಚ್ಚಿದಾನಂದ, ಗೀತಾ ವಿವೇಕಾನಂದ, ಚಿದಾನಂದ, ಲೋಕೇಶ್, ಮಾರ್ಕೆಟ್ ರಮೇಶ್, ಎಸ್.ಜಿ.ನಾಗರಾಜ್, ವಿ.ಸುರೇಶ್, ಶ್ರೀಕಾಂತ್, ಬಾಕ್ಸರ್ ನಾಗರಾಜ್, ಸಿದ್ದಲಿಂಗಯ್ಯ ಶ್ರೀರಾಮುಲು, ಪ್ರದೀಪ್ ಯಾದವ್ ಮತ್ತಿತರರು ಇದ್ದರು.

ಆರ್.ಅಶೋಕ ಅವರು ಶಾಸಕ ಬೈರತಿ ಬಸವರಾಜ ಮನೆಗೆ ಭೇಟಿಕೊಟ್ಟು ಅವರ ಕುಟುಂಬದ ಸದಸ್ಯರೊಡನೆ ಸಮಾಲೋಚನೆ ನಡೆಸಿದರು

ಬೃಹತ್ ಮೊತ್ತ ದಾಖಲಿಸಿದ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಳಕ್ರಮಾಂಕದ ಆಟಗಾರರ ಉಪಯುಕ್ತ ಆಟದ ನೆರವಿನಿಂದ ಕರ್ನಾಟಕ ತಂಡವು, ಹಿಮಾಚಲ ಪ್ರದೇಶದ ನದೋನ್‌ನಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಡಿ ಗುಂಪಿನ ಪಂದ್ಯದಲ್ಲಿ ಶನಿವಾರ 537 ರನ್‌ಗಳ ದೊಡ್ಡ ಮೊತ್ತ ಪೇರಿಸಿತು. ಉತ್ತರವಾಗಿ ಆತಿಥೇಯ ಹಿಮಾಚಲ ಪ್ರದೇಶ ಹೋರಾಟ ಪ್ರದರ್ಶಿಸಿದ್ದು 1 ವಿಕೆಟ್‌ಗೆ 114 ರನ್ ಗಳಿಸಿದೆ.

3 ವಿಕೆಟ್‌ಗೆ 352 ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಿದ ಕರ್ನಾಟಕ 47 ರನ್ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡಿತು. ಆದರೆ ಹಾರ್ದಿಕ್ ರಾಜ್ (75 ರನ್) ಮತ್ತು ಯಶೋವರ್ಧನ ಪರಂತಾಪ್ (51) ಒಂಬತ್ತನೇ ವಿಕೆಟ್‌ಗೆ 127 (211 ಎ) ಸೇರಿಸಿ ಮೊತ್ತವನ್ನು 500 ದಾಟಿಸಿದರು.

ಸ್ಕೋರುಗಳು: ಕರ್ನಾಟಕ: 142.2 ಓವರುಗಳಲ್ಲಿ 537 (ಅನೀಶ್ವರ ಗೌತಮ್ 42, ಹಾರ್ದಿಕ್ ರಾಜ್ 75, ಯಶೋವರ್ಧನ ಪರಂತಾಪ್ 51; ಪ್ರಶಾಂತ್ ಕುಮಾರ್ 93ಕ್ಕೆ6); ಹಿಮಾಚಲ ಪ್ರದೇಶ: 1 ವಿಕೆಟ್‌ಗೆ 114 (ಸಾಗರ್ ಮಲ್ಹನ್ 54, ಅತುಲ್ ಎ.ಜಸ್ವಾಲ್ ಔಟಾಗದೆ 35)

ಪ್ರಶಸ್ತಿ ವಿಜೇತ ಜೈನ್ ವಿಶ್ವವಿದ್ಯಾಲಯ ತಂಡ. (ಎಡದಿಂದ) ನಿಂತಿರುವವರು: ಆದ್ಯಾ ಗೌಡ, ಅಂಜು, ಖುಷಿ, ಲೋಕೇಶ್ (ಮ್ಯಾನೇಜರ್), ಯು.ವಿ. ಶಂಕರ್ (ಜೈನ್ ವಿ.ವಿ ಕ್ರೀಡಾ ನಿರ್ದೇಶಕ), ಪುನೀತ್ ಸುರೇಶ್ (ಕೋಚ್), ಸಹನಾ, ನೇತ್ರಾ ಹಾಗೂ ಸಿಯಾ ದಿಯೊಧಾರ್. ಕುಳಿತಿರುವವರು: ಆಶ್ಮಿತಾ, ಮೋನಾ, ಸುಷ್ಮಿತಾ, ನವೊಮಿ, ಹರ್ಷಿತಾ ಹಾಗೂ ಧರಾ

ಜೈನ್ ವಿ.ವಿ ಚಾಂಪಿಯನ್

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡವು ಅಖಿಲ ಭಾರತ ಅಂತರ ವಿ.ವಿ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿ.ವಿ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಜೈನ್ ವಿಶ್ವವಿದ್ಯಾಲಯ ತಂಡವು 74–51ರಿಂದ ಪಂಜಾಬ್ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು.

ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದ ಜೈನ್ ವಿಶ್ವವಿದ್ಯಾಲಯದ ಆಟಗಾರ್ತಿಯರು ಮೊದಲಾರ್ಧದಲ್ಲಿ 40–28ರ ಮುನ್ನಡೆ ಗಳಿಸಿದರು. ದ್ವಿತೀಯಾರ್ಧದಲ್ಲಿಯೂ ಪಾರಮ್ಯ ಸಾಧಿಸಿ, 23 ಅಂಕಗಳಿಂದ ನಿರಾಯಾಸವಾಗಿ ಗೆದ್ದರು. ಸಿಯಾ ದಿಯೊಧಾರ್(17 ಅಂಕ) ಹಾಗೂ ನವೊಮಿ (16 ಅಂಕ) ಗೆಲುವಿನಲ್ಲಿ ಮಿಂಚಿದರು. ತೃತೀಯ ಸ್ಥಾನದ ನಿರ್ಧಾರಕ್ಕಾಗಿ ನಡೆದ ಪಂದ್ಯದಲ್ಲಿ ಎಸ್‌ಆರ್‌ಎಂ ವಿಶ್ವವಿದ್ಯಾಲಯ ತಂಡವು 82–58ರಿಂದ ಲಕ್ಷ್ಮೀಬಾಯಿ ರಾಷ್ಟ್ರೀಯ ದೈಹಿಕ ಶಿಕ್ಷಣ ವಿಶ್ವವಿದ್ಯಾಲಯದ ವಿರುದ್ಧ ಜಯಿಸಿತು.

ಡೋಲಿಯಲ್ಲಿ ವೃದ್ಧೆಯ ಹೊತ್ತೊಯ್ದರು

ಹನೂರು (ಚಾಮರಾಜನಗರ ಜಿಲ್ಲೆ): ತೀವ್ರ ಅನಾರೋಗ್ಯಕ್ಕೆ ತುತ್ತಾಗಿದ್ದ ವೃದ್ಧೆಯನ್ನು ಸಕಾಲದಲ್ಲಿ ಆಸ್ಪತ್ರೆಗೆ ಕರೆದೊಯ್ಯಲು ಆಂಬುಲೆನ್ಸ್ ದೊರೆಯದ ಕಾರಣ, ಸಂಬಂಧಿಕರು ಡೋಲಿ ಕಟ್ಟಿಕೊಂಡು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ ಘಟನೆ ಮಹದೇಶ್ವರ ಬೆಟ್ಟದಲ್ಲಿ ಶನಿವಾರ ನಡೆದಿದೆ.

ಕಾಡುಹೊಲ ಗ್ರಾಮದ ದುಂಡಮ್ಮ(55) ಏಕಾಏಕಿ ಅಸ್ವಸ್ಥಗೊಂಡಿದ್ದು ಸಂಬಂಧಿಗಳು ಆಂಬುಲೆನ್ಸ್‌ಗೆ ಕರೆ ಮಾಡಿ ಕರೆದೊಯ್ಯುವಂತೆ ಮನವಿ ಮಾಡಿದ್ದಾರೆ. ಆದರೆ, ಆಂಬುಲೆನ್ಸ್ ಸಮಯಕ್ಕೆ ಸರಿಯಾಗಿ ಬಾರದಿದ್ದರಿಂದ ಡೋಲಿಯಲ್ಲಿ ಮಹದೇಶ್ವರ ಬೆಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗೆ ಕರೆದೊಯ್ಯಲೂ ಸರ್ಕಾರಿ ಆಂಬುಲೆನ್ಸ್ ದೊರೆಯದೆ, ಖಾಸಗಿ ಆಂಬುಲೆನ್ಸ್‌ನಲ್ಲಿ ತಮಿಳುನಾಡಿನ ಮೆಟ್ಟೂರಿಗೆ ಕರೆದೊಯ್ದು ದಾಖಲಿಸಿದ್ದಾರೆ ಎಂದು ತಿಳಿದು ಬಂದಿದೆ.

4,300 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕ ಗಳಿಸಿದ ತಾಲ್ಲೂಕಿನ 4,300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ‘ನೆಲಮಂಗಲ ಉತ್ಸವ’ದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರಮಾಣಪತ್ರ ಮತ್ತು ಭವಿಷ್ಯದ ಶಿಕ್ಷಣಕ್ಕೆ ಅಗತ್ಯವಾದ ಕಿಟ್ ನೀಡಿ ಪುರಸ್ಕರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ಆರ್ಥಿಕ ಅಡಚಣೆಯಿಂದ ಹೆಣ್ಣುಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಪ್ರತಿವರ್ಷ ₹30 ಸಾವಿರ ಶಿಷ್ಯವೇತನ ನೀಡುವ ಯೋಜನೆಯನ್ನು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗಿದೆ. 37 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ ಎಂದರು.

ಇಂದಿನ ಕಾಲಘಟ್ಟಕ್ಕೆ ಅಗತ್ಯವಾದ ಕೌಶಲ ಮತ್ತು ವೃತ್ತಿ ಮಾರ್ಗದರ್ಶನದ ಪಠ್ಯ ಸಿದ್ಧವಾಗುತ್ತಿದೆ. ಶೀಘ್ರದಲ್ಲೇ ಎಲ್ಲ ಶಾಲಾ ಕಾಲೇಜುಗಳಿಗೂ ವಿತರಿಸಲಾಗುವುದು. ₹1,200 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವ ಶಾಸಕ ಎನ್.ಶ್ರೀನಿವಾಸ್ ಅವರು ಶೈಕ್ಷಣಿಕ ಯೋಜನೆಗಳಿಗೂ ಒತ್ತು ನೀಡಿರುವುದು ಶ್ಲಾಘನೀಯ ಎಂದು ಹೇಳಿದರು.

ಶಾಸಕ ಎನ್.ಶ್ರೀನಿವಾಸ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾವೇರಿ 2ನೇ ಹಂತದ ಯೋಜನೆಯಡಿ ಅರ್ಧ ಟಿಎಂಸಿ ಅಡಿ ನೀರು ಮಂಜೂರಾಗಿದೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಯೊಂದಿಗೆ, ಶೈಕ್ಷಣಿಕ ಅಭಿವೃದ್ಧಿಯೂ ಆಗಬೇಕು. ಕಳೆದ ನಾಲ್ಕು ವರ್ಷಗಳಿಂದ ಎಲ್ಲ ಶಾಲಾ ಕಾಲೇಜುಗಳಿಗೂ ನೋಟ್ ಪುಸ್ತಕ ವಿತರಿಸಿದ್ದೇನೆ. ಅಲ್ಲದೆ ಪ್ರತಿಭಾ ಪುರಸ್ಕಾರ ಆಯೋಜಿಸಿದ್ದೇನೆ ಎಂದು ವಿವರಿಸಿದರು.

ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಮಾತನಾಡಿ, ಸಾಮಾಜಿಕ ಜಾಲತಾಣವನ್ನು ಭವಿಷ್ಯ ರೂಪಿಸಿಕೊಳ್ಳಲು ಬಳಸಿಕೊಳ್ಳಬೇಕು, ಪ್ರಯತ್ನಕ್ಕೆ ಯಶಸ್ಸು ಸಿಕ್ಕೇ ಸಿಗುತ್ತದೆ ಎಂದರು.

ಅವಧೂತ ಶ್ರೀ ವಿನಯ್ ಗುರೂಜಿ ಮಾತನಾಡಿ, ಸರ್ಕಾರ ಮಾಡುವ ಮೊದಲೇ ಮಠಗಳು ಶೈಕ್ಷಣಿಕ ಕ್ರಾಂತಿ ಮಾಡಿದ್ದವು. ಯುವ ಜನ ಜವಾಬ್ದಾರಿಯಿಂದ ಬದುಕಿದರೆ ಅಭಿವೃದ್ಧಿ ಸಾಧ್ಯ. ಉತ್ಸವದಲ್ಲಿ ಉದ್ಯೋಗ ಮೇಳ, ಕೃಷಿ ಮೇಳವನ್ನೂ ಸೇರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಶಿಷ್ಯವೇತನಕ್ಕೆ ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳನ್ನೂ ಪರಿಗಣಿಸಲು ಸಚಿವರಿಗೆ ಮನವಿ ಮಾಡಿದರು. ವಿಧಾನ ಪರಿಷತ್ ಸದಸ್ಯ ರವಿ, ಮಾಜಿ ಶಾಸಕ ಗೌರೀಶಂಕರ್, ವಿಧಾನ ಪರಿಷತ್‌ನ ಮಾಜಿ ಸದಸ್ಯ ಬಿ.ಎಂ.ಎಲ್.ಕಾಂತರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ನಾಗರಾಜು, ಮಾಜಿ ಅಧ್ಯಕ್ಷ ಎಂ.ನಾರಾಯಣಗೌಡ, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಮಾಜಿ ಅಧ್ಯಕ್ಷ ಪೂರ್ಣಿಮಾ ಸುಗ್ಗರಾಜು ಇದ್ದರು.

ನೆಲಮಂಗಲ ಉತ್ಸವದ ಭಾಗವಾಗಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಹರ್ಮೀತ್– ಯಶಸ್ವಿನಿ ಜೋಡಿ ಫೈನಲ್‌ಗೆ

ಚೆನ್ನೈ (ಪಿಟಿಐ): ಭಾರತದ ಹರ್ಮೀತ್ ದೇಸಾಯಿ– ಯಶಸ್ವಿನಿ ಘೋರ್ಪಡೆ ಜೋಡಿಯು ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ಶನಿವಾರ ಪ್ರಶಸ್ತಿ ಸುತ್ತು ಪ್ರವೇಶಿಸಿತು. ಪುರುಷರ ಸಿಂಗಲ್ಸ್‌ನಲ್ಲಿ ಜಿ. ಸತ್ಯನ್ ಅವರು ಎಂಟರ ಘಟ್ಟ ತಲುಪಿದರು.

ಯಶಸ್ವಿನಿ ಘೋರ್ಪಡೆ

ನಾಲ್ಕನೇ ಶ್ರೇಯಾಂಕದ ಗುಜರಾತ್‌ನ ಹರ್ಮೀತ್ ಹಾಗೂ ಕರ್ನಾಟಕದ ಯಶಸ್ವಿನಿ ಅವರು ಸೆಮಿಫೈನಲ್ ಪಂದ್ಯದಲ್ಲಿ ಪಯಾಸ್ ಜೈನ್- ಸಿಂಡ್ರೆಲಾ ದಾಸ್ ಜೋಡಿ ವಿರುದ್ಧ 3-0ಯಿಂದ (11-9, 11-6, 11-9) ನೇರ ಗೇಮ್‌ಗಳಲ್ಲಿ ಗೆದ್ದರು. ಫೈನಲ್‌ನಲ್ಲಿ ಭಾರತದ ಜೋಡಿಯು ಎರಡನೇ ಶ್ರೇಯಾಂಕದ ಎಡ್ವರ್ಡ್ ಇಯೊನೆಸ್ಕು- ಬರ್ನಡೆಟ್ ಝೋಕ್ಸ್ (ರೊಮೇನಿಯಾ) ಜೋಡಿಯನ್ನು ಎದುರಿಸಲಿದೆ.

ಸತ್ಯನ್ ಅವರು ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 3-2ರಿಂದ (9-11, 11-3, 10-12, 11-7, 11-5) ಇಯೊನೆಸ್ಕು ವಿರುದ್ಧ ರೋಚಕ ಜಯ ಸಾಧಿಸಿದರು.

ಆದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಹೋರಾಟ ಅಂತ್ಯಗೊಂಡಿತು. ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಿತ್ಯಾ ಮಣಿ 1-3ರಿಂದ (11-9, 5-11, 6-11, 8-11) ತೈವಾನ್‌ನ ಶೆಂಗ್ ಇ-ಶಿಂಗ್ ವಿರುದ್ಧ ಪರಾಭವಗೊಂಡರು.

‘ನೀರಿನ ಸಮಸ್ಯೆಯಾಗದಂತೆ ಎಚ್ಚರ ವಹಿಸಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಬೇಸಿಗೆ ಶುರುವಾಗಲಿದೆ. ನೀರಿನ ಸಮಸ್ಯೆ ಯಾವ ಕಡೆಯೂ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ವಾರ್ಡ್ ಮಟ್ಟದಲ್ಲಿ ಕಾವೇರಿ ನೀರು ಸಮರ್ಪಕವಾಗಿ ಪೂರೈಕೆ ಮಾಡಬೇಕು’ ಎಂದು ಶಾಸಕ ಎಸ್. ಮುನಿರಾಜು ಸೂಚನೆ ನೀಡಿದರು.

ಎಂಎಐ ಬಡಾವಣೆಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಕಚೇರಿಯಲ್ಲಿ ಅವರು ಅಧಿಕಾರಿಗಳ ಸಭೆ ನಡೆಸಿದರು.

‘ಕೆಲವೊಂದು ಪ್ರದೇಶಗಳಲ್ಲಿ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳು ಬಂದಿವೆ. ವಾಟರ್‌ಮನ್‌ಗಳು ನಿರ್ಮಾಣ ಹಂತದ ಕಟ್ಟಡಗಳಿಗೆ ಮತ್ತು ತಮಗೆ ಬೇಕಾದವರಿಗೆ ನೀರು ಪೂರೈಕೆ ಮಾಡುತ್ತಿರುವ ಬಗ್ಗೆಯೂ ದೂರುಗಳಿವೆ. ಅನುಮತಿ ಇಲ್ಲದೆ, ಕಾವೇರಿ ಮೀಟರ್ ಹಾಕಿಸಿಕೊಳ್ಳದೇ ನೀರು ಪೂರೈಕೆ ಮಾಡುವುದಕ್ಕೆ ಕಡಿವಾಣ ಹಾಕಬೇಕು’ ಎಂದು ಸೂಚಿಸಿದರು.

ಕಾವೇರಿ ನೀರನ್ನು ವಾರಕ್ಕೆ ಮೂರು ದಿನ ಸಮರ್ಪಕವಾಗಿ ಪೂರೈಕೆ ಮಾಡಬೇಕು. ಕಾವೇರಿ ನೀರಿನ ಮೀಟರ್ ಹಾಕಿಸಿಕೊಂಡಿಲ್ಲದವರು ಕಡ್ಡಾಯವಾಗಿ ಹಾಕಿಸಿಕೊಳ್ಳಬೇಕು ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಎಷ್ಟು ಕೊಳವೆಬಾವಿಗಳು ಕೆಲಸ ಮಾಡುತ್ತಿವೆ? ಎಷ್ಟು ಬತ್ತಿ ಹೋಗಿವೆ? ದುರಸ್ತಿ ಮಾಡಲು ಸಾಧ್ಯ ಇರುವ ಕೊಳವೆಬಾವಿಗಳೆಷ್ಟು ಎಂಬ ಮಾಹಿತಿ ನೀಡಬೇಕು ಎಂದರು.

ಬಿಡಬ್ಲ್ಯು ಎಸ್‌ಎಸ್‌ಬಿ ಹೆಚ್ಚುವರಿ ಮುಖ್ಯ ಎಂಜಿನಿಯರ್ ದೇವರಾಜು, ಕಾರ್ಯಪಾಲಕ ಎಂಜಿನಿಯರ್ ಹರಿನಾಥ್, ಎಇಇ ನಾಗರಾಜು, ಮಂಜುನಾಥ್ ಮತ್ತು ಕೊಳವೆಬಾವಿ ವಿಭಾಗದ ಎಇಇ ಆಶಾ, ಎಇ ಕಾರ್ತಿಕ್ ಮತ್ತು ಇನ್‌ಸ್ಪೆಕ್ಟರ್‌ಗಳು ಭಾಗವಹಿಸಿದ್ದರು.

ಬಾಗಲಗುಂಟೆಯ ಬಿಡಬ್ಲ್ಯುಎಸ್‌ಎಸ್‌ಬಿ ಕಚೇರಿಯಲ್ಲಿ ಎಸ್. ಮುನಿರಾಜು ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು

ಚಿತ್ರಾವಳಿ

ಜೆ.ಪಿ. ನಗರದ ಎರಡನೇ ಹಂತದಲ್ಲಿರುವ ತಿರುಮಲಗಿರಿ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಬ್ರಹ್ಮ ರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯು ಟಾಟಾ ಇನ್‌ಸ್ಟಿಟ್ಯೂಟ್ ಫಾರ್ ಜೆನೆಟಿಕ್ಸ್ ಆ್ಯಂಡ್ ಸೊಸೈಟಿಯ ಜೊತೆಗೆ ವಿಜ್ಞಾನ ಕ್ಷೇತ್ರದ ಸಂಶೋಧನೆಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಒಪ್ಪಂದದ ಪ್ರತಿಯನ್ನು ಆಸ್ಪತ್ರೆಯ ಡೀನ್ ಡಾ. ಸತ್ಯಮೂರ್ತಿ ಮತ್ತು ಸೊಸೈಟಿ ನಿರ್ದೇಶಕ ಡಾ. ರಾಕೇಶ್ ಮಿಶ್ರಾ ಪ್ರದರ್ಶಿಸಿದರು. ಡಾ. ಅನ್ಬಳಗನ್ ಕೆ., ಡಾ. ಬಸವರಾಜ ಭಂಡಾರೆ, ಡಾ. ಅರ್ಚನಾ ಬಿ.ಆರ್., ಡಾ. ಸಂಗೀತಾ ಎಸ್. ಉಪಸ್ಥಿತರಿದ್ದರು

ಜೋಯಾಲುಕ್ಕಾಸ್ ಸಮೂಹದ ಸಿಎಂಡಿ ಡಾ.ಜೋಯ್ ಆಲುಕ್ಕಾಸ್ ಅವರು ಶನಿವಾರ ಕಮ್ಮನಹಳ್ಳಿಯಲ್ಲಿ ಬ್ರಿಲಿಯನ್ಸ್ ಡೈಮಂಡ್ ಜ್ಯುವೆಲ್ಲರಿ ಮಳಿಗೆ ಉದ್ಘಾಟಿಸಿದ ಬಳಿಕ ಮಹಿಳೆಯರು ವಜ್ರಾಭರಣಗಳನ್ನು ಪ್ರದರ್ಶಿಸಿದರು

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ

‘ಸಮಾಜಮುಖಿ ಕಾರ್ಯದಲ್ಲಿ ತೊಡಗಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಪಾರಂಪರಿಕ ಆಚರಣೆಗಳು ಮಾನವೀಯ ಮೌಲ್ಯಗಳನ್ನು ಜಾಗೃತಗೊಳಿಸುವ ಸಾತ್ವಿಕ ಗುಣವನ್ನು ಹೊಂದಿವೆ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ ಹಾಗೂ ಒಕ್ಕಲಿಗ ಯುವ ಬ್ರಿಗೇಡ್ ಆಶ್ರಯದಲ್ಲಿ ಆಯೋಜಿಸಿದ್ದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರ ಅಭಿನಂದನಾ ಗ್ರಂಥ ಲೋಕಾರ್ಪಣೆ, ಸಾವಯವ ಸಂತೆ, ಉಚಿತ ಆರೋಗ್ಯ ಶಿಬಿರ, ಮಲೆನಾಡು ಗಿಡ್ಡ ರಾಸುಗಳ ಉಚಿತ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಜನ್ಮ ಭೋಗಕ್ಕಲ್ಲ ಯೋಗಕ್ಕೆ ಎಂಬ ಸತ್ಯ ಅರಿಯಬೇಕು. ಬೌದ್ಧಿಕ ಪ್ರಜ್ಞೆ ಬೆಳೆಸಿಕೊಂಡು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಪ್ರೀತಿ, ತ್ಯಾಗ ಮಮಕಾರವನ್ನು ಪ್ರತಿಪಾದಿಸದ ಯಾವುದೇ ಗ್ರಂಥವು ಧರ್ಮ ಗ್ರಂಥವಾಗಲು ಅರ್ಹತೆ ಹೊಂದುವುದಿಲ್ಲ. ಶಿವನು ವೇದ ಪ್ರಿಯನೂ ಅಲ್ಲ. ನಾದ ಪ್ರಿಯನೂ ಅಲ್ಲ. ಅವನು ಭಕ್ತಿ ಪ್ರಿಯ. ಭಕ್ತಿಯೇ ಶಿವನನ್ನು ತಲುಪಲು ಇರುವ ಏಕೈಕ ಮಾರ್ಗ ಎಂದರು.

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ದೇಶ ಹಾಗೂ ನಾಡಿನ ಧಾರ್ಮಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಮಠಗಳ ಪಾತ್ರ ಹಿರಿದಾಗಿದೆ. ಸಾರ್ವಜನಿಕರಿಗೆ ಸೇವೆ, ಸೌಲಭ್ಯ ಕಲ್ಪಿಸುವಲ್ಲಿ ಮುಂಚೂಣಿಯಲ್ಲಿವೆ ಎಂದು ಶ್ಲಾಘಿಸಿದರು.

‘ರಾಸಾಯನಿಕ ರಹಿತ ಆಹಾರ ಧಾನ್ಯಗಳ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಸಾವಯವ ಸಂತೆ, ವಿಜ್ಞಾನ ತಂತ್ರಜ್ಞಾನ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ’ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಸ್ಫಟಿಕಪುರಿ ಮಹಾ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ, ಕೈಲಾಸಾಶ್ರಮ ಮಹಾ ಸಂಸ್ಥಾನದ ಜಯೇಂದ್ರಪುರಿ ಸ್ವಾಮೀಜಿ, ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಮಲೆಮಹದೇಶ್ವರ ಬೆಟ್ಟದ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಎಸ್.ಟಿ. ಸೋಮಶೇಖರ್, ಅಂಕೇಗೌಡ ಮೊದಲಾದವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿದರು. ಶಾಸಕ ಎಸ್. ಟಿ. ಸೋಮಶೇಖರ್, ನಿರ್ಮಲಾನಂದನಾಥ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು

ಪಾಲಿಕೆ ಚುನಾವಣೆಗೆ ಜನಗಣತಿ ಅಡ್ಡಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರುವ ಏಪ್ರಿಲ್‌ನಿಂದ ಜನಗಣತಿ ಆರಂಭವಾಗಲಿದ್ದು, ಸುಪ್ರೀಂ ಕೋರ್ಟ್ ಆದೇಶದಂತೆ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ ಜೂನ್ ಒಳಗೆ ನಡೆಯುವ ಸಾಧ್ಯತೆ ಕಡಿಮೆಯಾಗಿದೆ.

ಜನಗಣತಿಯು ಏಪ್ರಿಲ್‌ನಲ್ಲಿ ಶುರುವಾಗಲಿದೆ ಎಂದು ಕೇಂದ್ರ ಸರ್ಕಾರ ಈಗಾಗಲೇ ಪ್ರಕಟಿಸಿದೆ. ಒಮ್ಮೆ ಜನಗಣತಿ ಶುರುವಾದರೆ, ಆ ಅಂಕಿಸಂಖ್ಯೆಗಳ ಆಧಾರದ ಮೇಲೆ ಚುನಾವಣೆ ನಡೆಸಬೇಕು ಎಂಬ ಬೇಡಿಕೆ ಶುರುವಾಗಲಿದೆ. ಅಲ್ಲದೆ ಜನಗಣತಿ ಬಳಿಕ ಜನಸಂಖ್ಯೆ ಹೆಚ್ಚಾಗಲಿದ್ದು, ಮತ್ತೆ ವಾರ್ಡ್‌ಗಳ ಮರುವಿಂಗಡಣೆ ಮಾಡಬೇಕಾಗುತ್ತದೆ.

2011ರ ಜನಗಣತಿ ಆಧರಿಸಿ ಸದ್ಯ ವಾರ್ಡ್‌ಗಳ ವಿಂಗಡಣೆ ಮಾಡಲಾಗಿದೆ. ಕೋವಿಡ್ ಕಾರಣದಿಂದಾಗಿ 2021ರಲ್ಲಿ ಜನಗಣತಿ ನಡೆದಿರಲಿಲ್ಲ. ಈ ವರ್ಷ ಗಣತಿ ನಡೆಯಲಿದ್ದು, ಅದರ ಅಂಕಿ ಸಂಖ್ಯೆಗಳ ಪೂರ್ಣ ಮಾಹಿತಿ ಲಭ್ಯವಾಗಲು 2028ರವರೆಗೂ ಕಾಯಬೇಕಾಗುತ್ತದೆ. ಈ ವರ್ಷ ನಡೆಯುವ ಜನಗಣತಿಯ ಅಂಕಿ ಸಂಖ್ಯೆಗಳನ್ನು ಆಧರಿಸಿ, ವಾರ್ಡ್‌ಗಳ ಮರುವಿಂಗಡಣೆ ಮಾಡಬೇಕು ಎಂದು ಯಾರಾದರೂ ಕೋರ್ಟ್ ಮೊರೆ ಹೋದರೆ ಜೂನ್ ಒಳಗೆ ಚುನಾವಣೆ ನಡೆಯುವುದು ಅನುಮಾನ ಎಂದು ಪಾಲಿಕೆಯ ಮಾಜಿ ಸದಸ್ಯರೊಬ್ಬರು ತಿಳಿಸಿದರು.

ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ಒಟ್ಟು 369 ವಾರ್ಡ್‌ಗಳಿವೆ. ಇದರಲ್ಲಿ ಶೇ 50ರಷ್ಟು ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡಬೇಕು. ಆದರೆ, ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಿಲ್ಲ ಎಂದು ಕೆಲವರು ಈಗಾಗಲೇ ಆರೋಪಿಸಿದ್ದಾರೆ.

ಈ ಮಧ್ಯೆ ಗ್ರಾಮ ಪಂಚಾಯಿತಿಗಳ ಅವಧಿ ಮುಗಿಯುತ್ತ ಬಂದಿದ್ದು, ನಗರದ ಸುತ್ತಮುತ್ತಲಿನ ಇನ್ನಷ್ಟು ಪ್ರದೇಶಗಳನ್ನು ಜಿಬಿಎ ವ್ಯಾಪ್ತಿಗೆ ಸೇರಿಸುವ ಬಗ್ಗೆ ಚರ್ಚೆ ನಡೆದಿದೆ. ಒಂದು ವೇಳೆ ಇನ್ನಷ್ಟು ಪ್ರದೇಶಗಳು ಸೇರ್ಪಡೆಯಾದರೆ, ವಾರ್ಡ್‌ಗಳ ಸಂಖ್ಯೆ, ವ್ಯಾಪ್ತಿಯಲ್ಲಿ ಬದಲಾವಣೆಯಾಗಲಿದೆ. ಅಲ್ಲದೆ ಮೀಸಲಾತಿಯಲ್ಲೂ ವ್ಯತ್ಯಾಸವಾಗಲಿದೆ. ಇದಕ್ಕೆಲ್ಲ ಸಾಕಷ್ಟು ಸಮಯಬೇಕಾಗುತ್ತದೆ. ಹೀಗಾಗಿ ಚುನಾವಣೆ ನಡೆಯುವುದು ಅನುಮಾನ ಎಂದು ತಿಳಿಸಿದರು.

ಅಪಘಾತ: 150 ಕಿ.ಮೀ ವೇಗದಲ್ಲಿದ್ದ ಕಾರು

ಹೊಸಕೋಟೆ ಸರಣಿ ಅಪಘಾತ ಸ್ಥಳ ಮಹಜರು ಮಾಡಿದ ಅಧಿಕಾರಿಗಳು

• ರವೀಶ್ ಜಿ.ಎನ್

ಹೊಸಕೋಟೆ: ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ತಾಲ್ಲೂಕಿನ ಎಂ.ಸತ್ಯವಾರ ಬಳಿ ಆರು ವಿದ್ಯಾರ್ಥಿಗಳು ಸೇರಿದಂತೆ ಏಳು ಜನರನ್ನು ಬಲಿ ಪಡೆದ ಭೀಕರ ಅಪಘಾತಕ್ಕೆ ಅತಿಯಾದ ವೇಗವೇ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ.

ಅಪಘಾತಕ್ಕೆ ಕಾರಣ ಪತ್ತೆ ಹಚ್ಚಲು ಪೊಲೀಸರ ನೇತೃತ್ವದಲ್ಲಿ ಹೆದ್ದಾರಿ, ಆರ್‌ಟಿಒ ಅಧಿಕಾರಿಗಳು ಹಾಗೂ ಮಹೇಂದ್ರ ಕಂಪನಿಯ ಸಿಬ್ಬಂದಿ ಶನಿವಾರ ಜಂಟಿ ಸಮೀಕ್ಷೆ ಹಾಗೂ ಸ್ಥಳ ಮಹಜರು ನಡೆಸಿದರು.

ಕೊತ್ತನೂರು ನಿವಾಸಿ, ಸಿಎಂಆರ್ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಅಯಾನ್ ಅಲಿ (17) ಕಾರು ಓಡಿಸುತ್ತಿದ್ದ ಎಂಬುದು ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> **ಹೊಸಕೋಟೆ ಬಿರಿಯಾನಿ ತಿನ್ನಲು ಬಂದು ಸಾಕಷ್ಟು ಅಪಘಾತಗಳು ಸಂಭವಿಸುತ್ತಿದ್ದ ಕಾರಣ ಬೆಳಿಗ್ಗೆ 6 ಗಂಟೆ ನಂತರವೇ ಬಿರಿಯಾನಿ ಹೋಟೆಲ್ ತೆಗೆಯಲು ಆರು ತಿಂಗಳ ಹಿಂದೆಯೇ ಕ್ರಮ ಕೈಗೊಳ್ಳಲಾಗಿದೆ**
> **ಮಲ್ಲೇಶ್**
> ಡಿವೈಎಸ್ಪಿ, ಹೊಸಕೋಟೆ

ಎಕ್ಸ್‌ಯುವಿ 700 ಕಾರು ಗಂಟೆಗೆ 140 ರಿಂದ 150 ಕಿ.ಮೀ ವೇಗದಲ್ಲಿ ಹೊಸಕೋಟೆ ಭಾಗದಿಂದ ದೇವನಹಳ್ಳಿ ಕಡೆ ಸಾಗುವಾಗ ಈ ಅಪಘಾತ ಸಂಭವಿಸಿದೆ. ಆಟೊ ಡ್ರೈವ್‌ನಲ್ಲಿ ಕಾರು ಓಡುತ್ತಿತ್ತು. ಅತಿವೇಗವಾಗಿ ಬಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಿಯಂತ್ರಣ ತಪ್ಪಿ ಮುಂದೆ ಹೋಗುತ್ತಿದ್ದ ಕ್ಯಾಂಟರ್‌ಗೂ ಡಿಕ್ಕಿ ಹೊಡೆದಿದೆ.

ಅಧಿಕಾರಿಗಳಿಗೆ ತರಾಟೆ

ಸ್ಥಳ ಮಹಜರು ವೇಳೆ ಡಿವೈಎಸ್ಪಿ ಮಲ್ಲೇಶ್ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಚೆನ್ನೈ ಎಕ್ಸ್‌ಪ್ರೆಸ್ ವೇ ನಾವು ನೋಡಿದ ಅತಿ ಕೆಟ್ಟ ಹೆದ್ದಾರಿಗಳಲ್ಲಿ ಒಂದು. ಹೊಸಕೋಟೆಯಲ್ಲಿ ಹಾದು ಹೋಗಿರುವ ಹೆದ್ದಾರಿಗಳನ್ನು ನೋಡಿದರೆ ಎಷ್ಟು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿದ್ದಾರೆ ಎಂಬುದು ತಿಳಿಯುತ್ತದೆ. ಕಿರಿದಾದ ರಸ್ತೆ, ಸಮರ್ಪಕ ಸರ್ವಿಸ್ ರಸ್ತೆ ಮತ್ತು ಎಲ್ಲೂ ಸೂಕ್ತ ನಾಮಫಲಕ ಇಲ್ಲದಿರುವುದು ಅಪಘಾತಕ್ಕೆ ಕಾರಣ. ಇಂತಹ ರಸ್ತೆಯಲ್ಲಿ ಪೊಲೀಸರು ಹೇಗೆ ವಾಹನ ದಟ್ಟಣೆ, ಅಪಘಾತ ನಿಯಂತ್ರಣ ಮಾಡಬೇಕು' ಎಂದು ತರಾಟೆಗೆ ತೆಗೆದುಕೊಂಡರು.

2 ವರ್ಷದಲ್ಲಿ 23 ಬಲಿ

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಸೂಲಿಬೆಲೆ ಠಾಣಾ ವ್ಯಾಪ್ತಿಯ ದಾಬಸಪೇಟೆ–ಹೊಸಕೋಟೆ ಮಾರ್ಗದಲ್ಲಿ 2024ರಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಎಂಟು ಮಂದಿ, 2025ರಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ.

2026ರಲ್ಲಿ ಫೆಬ್ರುವರಿ 13ರಂದು ಎಂಟು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಪರಿಣಾಮ ಆರು ವಿದ್ಯಾರ್ಥಿಗಳು ಸ್ಥಳದಲ್ಲಿ ಮೃತಪಟ್ಟಿದ್ದಾರೆ ಎಂದು ಜಂಟಿ ಸಮೀಕ್ಷೆಯ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ಸಂಜೆ ಏಳು ಜನ ಮೃತ ದೇಹಗಳನ್ನು ಎಂವಿಜೆ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ಪೋಷಕರಿಗೆ ಹಸ್ತಾಂತರಿಸಲಾಗಿದೆ.

ಹೊಸಕೋಟೆ ತಾಲ್ಲೂಕಿನ ಎಂ.ಸತ್ಯವಾರ ಬಳಿ ಸಂಭವಿಸಿದ ಭೀಕರ ಸರಣಿ ಅಪಘಾತ ಸ್ಥಳದಲ್ಲಿ ಪೊಲೀಸರ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಶನಿವಾರ ಜಂಟಿ ಸಮೀಕ್ಷೆ ನಡೆಸಿದರು

ಪೋಷಕರ ವಿರುದ್ಧ ಕ್ರಮ

18 ವರ್ಷ ಪೂರ್ಣಗೊಳ್ಳದ ಮೃತ ಅಯಾನ್ ಅಲಿ (17ವರ್ಷ) ಕಾರು ಚಲಾಯಿಸುತಿದ್ದದ್ದು ದೃಢವಾಗಿದೆ. ಅದನ್ನು ಮತ್ತೊಮ್ಮೆ ಪರಿಶೀಲಿಸಿ ಅದು ಖಚಿತ ಆದರೆ ಅವರ ಪೋಷಕರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್ ಅವರು ತಿಳಿಸಿದ್ದಾರೆ.

ಹಳ್ಳಿ, ಶಾಲೆಗಳಲ್ಲಿ 'ಲ್ಯಾಂಡ್ ಲಾರ್ಡ್' ಪ್ರದರ್ಶನಕ್ಕೆ ಯತ್ನ: ಉಮಾಶ್ರೀ

ಬೆಂಗಳೂರು: 'ಭೂಮಿಯ ಹಕ್ಕುಗಳ ಜತೆಗೆ ಸಾಮಾಜಿಕ ಸಮಸ್ಯೆಗಳಿಗೆ ದನಿಯಾಗಿರುವ ಲ್ಯಾಂಡ್ ಲಾರ್ಡ್ ಚಿತ್ರವನ್ನು ಎಲ್ಲ ಶಾಲೆಗಳು ಹಾಗೂ ಹಳ್ಳಿಗಳಲ್ಲಿ ಪ್ರದರ್ಶಿಸಲು ಸರ್ಕಾರದ ಹಂತದಲ್ಲಿ ಮಾತುಕತೆ ನಡೆಸುವೆ' ಎಂದು ನಟಿ ಹಾಗೂ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಹೇಳಿದರು.

ಸಮಾನ ಮನಸ್ಕರ ವೇದಿಕೆ ಶುಕ್ರವಾರ ಇಲ್ಲಿ ಆಯೋಜಿಸಿದ್ದ ಸಂವಾದದ ವೇಳೆ ಪ್ರೇಕ್ಷಕರಿಂದ ಬಂದ ಪ್ರತಿಕ್ರಿಯೆಗೆ ಅವರು ಉತ್ತರಿಸಿದರು.

ಹೋರಾಟಗಾರ ಸಿದ್ದನಗೌಡ ಪಾಟೀಲ ಮಾತನಾಡಿ, 'ಊಳಿಗಮಾನ್ಯ ಪದ್ಧತಿ ಹಿನ್ನೆಲೆಯಲ್ಲಿ ಲ್ಯಾಂಡ್ ಲಾರ್ಡ್ ಚಿತ್ರ ಹೊರ ಬಂದಿದೆ. ದೇವರಾಜ ಅರಸು ಅವರ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಎನ್ನುವ ಪರಿಕಲ್ಪನೆ ಕಾನೂನು ರೂಪ ಪಡೆಯಿತು. ಆ ನಂತರದ ಬೆಳವಣಿಗೆಗಳನ್ನು ಹತ್ತಿರದಿಂದ ನೋಡಿದ್ದೇನೆ. ಅದರ ಪರಿಣಾಮ ಈಗಲೂ ಹೇಗಿದೆ ಎನ್ನುವುದನ್ನು ಚಿತ್ರ ಬಿಂಬಿಸಿದೆ' ಎಂದರು.

'ಭೂಮಿ ಹಕ್ಕಿಗಾಗಿ ಹೋರಾಡಿದ ಚೋಮನ ಕಥೆ ಆಧರಿಸಿ ಬಂದ ಚೋಮನ ದುಡಿ ಸಿನಿಮಾದ ನಂತರ ಅಂತಹದೇ ಸಂವೇದನೆ ಇರುವ ಸಿನಿಮಾವಿದು. ಈಗಿನ ಸಾಮಾಜಿಕ ಸಮಸ್ಯೆ ಎನ್ನಿಸಿರುವ ಮರ್ಯಾದೆಗೇಡು ಹತ್ಯೆ, ದೇವದಾಸಿ ವಿಚಾರವನ್ನೂ ಈ ಚಿತ್ರ ಧ್ವನಿಸಿದೆ' ಎಂದು ಹೇಳಿದರು.

ಚುನಾವಣೆ ವೇಳೆ ಮತ ಕೇಳಲು ಬರುವವರು ಅಧಿಕಾರ ಬಂದ ಮೇಲೆ ಲ್ಯಾಂಡ್ ಲಾರ್ಡ್ ರೀತಿಯ ಚಿತ್ರ ನೋಡಲು ಬರುತ್ತಿಲ್ಲ ಎನ್ನುವ ಬೇಸರವಿದೆ ಎಂದು ನಟ ದುನಿಯಾ ವಿಜಯ್ ಅಸಮಾಧಾನ ವ್ಯಕ್ತಪಡಿಸಿದರು.

ಸಾಹಿತಿ ಕೆ.ವೈ.ನಾರಾಯಣಸ್ವಾಮಿ ಮಾತನಾಡಿ, 'ಈಗಂತೂ ಪ್ರಜಾಪ್ರಭುತ್ವವನ್ನು ಸೋಲಿಸುವ ಆಶಯದ ಸಿನಿಮಾಗಳೇ ಹೆಚ್ಚು ಬರುತ್ತಿವೆ. ಅಂತಹ ಸಿನಿಮಾಗಳನ್ನು ದೂರವಿಟ್ಟು, ಜನಮುಖಿಯಾದ ಲ್ಯಾಂಡ್ ಲಾರ್ಡ್ ಸಿನಿಮಾ ಬೆಂಬಲಿಸೋಣ' ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ(ಅಂಬೇಡ್ಕರ್ ವಾದ) ಮಾವಳ್ಳಿ ಶಂಕರ್, ನಿರ್ದೇಶಕ ಜಡೇಶ ಕೆ.ಹಂಪಿ, ಬಿ.ಎಂ.ಗಿರಿರಾಜ್, ಮಾಸ್ತಿ ಉಪ್ಪಾರಳ್ಳಿ, ವಿ.ಕೆ. ಸಂಜ್ಯೋತಿ, ಹುಲಿಕುಂಟೆ ಮೂರ್ತಿ, ವಿ.ಆರ್. ಕಾರ್ಪೆಂಟರ್, ಫಕೀರೇಶ್, ಪ್ರಕಾಶ ಮಂಟೇದ, ಮಧು ಹೊಲೆಯಾರ್, ಅಶ್ವಿನಿ ಬೋಧ್ ಸಿನಿಮಾ ಕುರಿತು ಮಾತನಾಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA SITE FOR SALE Anjanapura 9th Block 30×40 & Anjanapura 1st Block 40×60 North Contact: 9845090471

SALE ANJANAPURA 80ft Road 50x80 Commercial Site N/F 40x60 Residential 8th Block Genuine Buyers: 9880776950

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

40X60, WEST facing site for sale at, Banashankari 6th stage, 4th B Block, call 9844039482

BANASHANKARI 6TH Stage,4th Block 30x40,North Facing 40 Feet Road Near RV Architect College Contact: 8792784772

BANASHANKARI 6TH Stage, 7th Block, North, 40x60, 11500/- sqft. Negotiable. Owner:- 9886052148.

BTM Layout

5888 SQFT BBMP E Katha S/F Site For Sale in BTM 4th Stage Devarchikanalli Price 11000/Sqft. Owner: 9620374404

SITE FOR Sale 30×40 40×60 East North Facing BTM 2nd Stage 25000 to 30000, 9945377119 /9844099557

Bannerghatta Road

30'X40'_TWO_ADJACENT RESIDENTIAL Plots For Sale West Facing Located in Arekere Shanthinikethan Layout. Call Owner 7483853190

Hennur

HENNUR 20X45 North West Corner B ekatha site sale HIREMATH LAYOUT, KOTHANUR Rs.8,000/- 9945033366

Jakkur

SITE FOR SALE/ BUYING Arkavathi, Telecom, MCECHS, Jakkur, Vidayranypura, Kodigehalli 40x60, 30x40, 20x30. Contact: 9449970278

Kanakapura Road

GUBBALALA SITE for SALE Jayanagar Housing Society 30x40 East Facing, Good Location. Call: 9341050991. 9740148870.

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

SITE 30X40 SF BDA 1Cr 15L Negotiable Nada Prabhu Kempegowda Layout Near 300ft Road Arkavati alternate: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar:- 9945119449

30*40, 60*40, 50*80. BDA SITES GOOD LOCATION, KEMPEGOWDA LAYOUT. CONTACT- 9743322555

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

60*90 SADASHIVNAGAR, KEB Layout 30*40, Sanjaynagar 50*80, Dollars Colony 50*80, Judicial Layout 80*120. 9538111239.

Manyata Tech Park

SITE FOR Sale 1200 Sft, 15/40 two sites with A Khata, South Facing, Near upcoming Veeranapalya Metro station/ Manyata Tech Park, 5th B Cross, Kaveri Nagar, Bangalore- 560032. 9844509888

Nagarabhavi

40X60 WEST facing Site for sale. MPM Lyt 2nd Main (60ft Road) Nagarbhavi 2nd Stg. Close to upcoming Metro St. Contact 9900866995

Nelamangala

BYRASHETTYHALLI AISHWARYA County BMRDA 40x60, East And Banashankari BDA 30x40,Sites For Sale : 9620117773/9845857006

Ramamurthy Nagar

48'X42' SITE for SALE 'A'Katha, North Facing Yerranapalya, Ramurthynagar, Bengaluru.Near Shell Petrol Bunk.No Broker Serious Buyer Only. 9986747747 9845953689.

Others

SITES FOR SALE
Rajarajeshwari Nagara Commercial site 50x94 North Facing Semi Commercial site 50x80 East Facing residential site 40x60 North Facing
And Banashankari 6th Stage 50x80 North Facing Price 9000/- 40x60 West Facing 30x40 West and North Facing 40 Feet Road 20x30 Site in 11th Block
Please contact 9448050035

Vishweshwariah Layout

40X60 E/F BDA SITE SALE VISHWESHWARAIAH LAYOUT BLOCK-1 Behind 100ft Road, Bank loan Available. 9742681666

'DIRECT OWNER' 30x40 WF Vishveswaraiah Layout 2nd Block, Opposite Park Full Developed Area: 8496030007/ 8310885235

Mysore

MUDA SITE FOR SALE 40x60 DATTAGALLI, MYSORE. CONTACT 89044 97670

Chickjala

SITE SALE Near Pandukona Coaching Center WF 1750 Sqft 87L, EF 1310 Sqft 85L, EF 1200 Sqft 57L: 9449970278

Nagasandra

50X60, 50FT rd, North/ east corner in Gruhalakshmi Society, HMT Layout, Rs 13500/- Nego, Call: 9731444555

REAL ESTATE BUYING

Flat

R T Nagar

RT NAGAR / Sulthanpalya in and Around Wanted Flat Site for Immediate Settlement. Contact: 9845575731

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED SITE ANJANAPURA BCCHS Layout Narayan Nagar Jayanagar Housing Society, Banashankari 6th Stage 30x40,40x60. Direct Registration. Broker Excuse. Call:9663454878

Banashankari

WANTED 30X40/ 30x50 Semi Commercial Site at BANASHANKARI 6TH STAGE/SMV LAYOUT 5TH/6TH Stage. Direct Owners Contact: 9481921024

BDA-SITES WANTED @ BSK 6th Stage all Blk Vishweshwaraiah Lyt Kempegowda Lyt 30x40, 40x60, 50x80 Call:9845555666

Multiple Locations

WANTED BDA Sites Anjanapura- Arkavathi, Banashankari 6th stage, Vishweswaraiah, Kempegowda, Dr. Shivaramkaranth Layout. Contact: Sapthagiri "(Opposite BDA Head Office) "9036360366.

Vishweshwariah Layout

"WANTED 50X80, 40X60 EAST OR NORTH FACING SITE IN BDA VISHVESHWARAIAH LAYOUT, ULLAL UPKAR LAYOUT CALL: 6366903154"

WANTED BDA Site Vishweshwaria Layout 30x40, 40x60 Contact: 7899570235

RENTAL PROPERTIES

Accommodation Available

Commercial

AVAILABLE OFFICE space fully furnished 3500sqft 50 work stations, 3 Office rooms, 1 Conference room, 1 Server room, 4 toilets with UPS and Generator, 3rd floor M.R.Complex 1st sector, 27th Main, HSR Layout, Bangalore. And 1st floor 3000sqft and 2nd floor 3000sqft Available in Kudlu above Axis Bank. for Rent. 9845539612.

24000 SFT (Ground, First & Second Floor - EACH FLOOR 8000 sqft) Parking - 6000 sqft Contact: +91- 9845761737.

MYSORE STANDALONE Commercial Ground Floor on JLB Road. 1500 SQFT. Banks, Boutique Showroom, Display Centres. Call: 94440 74218.

Flats

SEMI FURNISHED 3BHK FLAT for RENT at Sumukha Meadows VishnuVardhan Road Channasandra Bengaluru,with CarPark,Lift & 24hrs Water Supply.Ready to Occupy.No Brokers. Call:9533339694 9246369439.

3 BHK Flat- Lease, Sahakarnagar. 3 years 32 Lakhs- Car Parking + Terrace Garden, Lift. No Agents. 8660867713.

LEASE 2 BHK flat 2nd floor, JPNagar 1st phase with Car park. 35 lakhs. 9886425997

Industrial And Factory

RENT, PEENYA 4th Phase, 12300 sqft 3 Floors, RCC, 65 HP. Prime Location. Contact: 9845088098

BUILDERS ESSENTIAL

Building Contractors

FROM 25 Years Experience. NO ADVANCE. Full-Teak, Granite, 2400/Sft. Full Honne, Granite- 2200/sft. Full-Sall, Vitrified- 2000/Sft, Labor Contract- 350/sft. Contact- 9611712549. 9019157733

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Accounts & Finance

B.COM GRADUATES with 75% and above Marks having Experience of 1 to 2 Years in Tally and Income Tax/GST.Send Your Resume to: acharyaandcompany@gmail.com. Mob: 9901612959.

General

WANTED FOR Billing and Godown Incharge Qualification PU Pass With Basic Computer knowledge Location Wilson-Garden Siddaiah Road Near Shantinagar Bus-stand Call:9845351200 9535218502.

Marketing & Sales

WE ARE looking for professionals having track record in direct sales (insurance / banking / real estate / MF / financial products preferred. Whatsapp 9900267178, 8951779234

Multiple Vacancy

MULTIPLE JOBS
1) Business Development Manager Sales Manager for
• Plywood Showroom • Ceramics Showroom • Door Manufacturing
• Interior Design Firm • Ed Tech Media/ Training Academy
• Employee Transport/ Cab Service Firm • Catering Service Firm
2) Office Manager for Interior firm
3) Graphic Designer for Digital Marketing firm
4) Sub Editor for English & Kannada Magazine
Send CV to parabolahr@gmail.com Only whatsapp 9019043325

Teachers/ Professors

MOUNT CARMEL ENGLISH SCHOOL
C.A. Site No.3, 12th cross, Ideal Homes, Rajarajeshwari Nagar, Bangalore-98.
Required experienced teachers for N.T.T (Montessori training), Primary, Middle and High school for Science, Maths, English, Kannada, Sanskrit, Computer Science, Hindi, Social Science and Physical Education. Candidates should have Master's/ Bachelor's Degree with B.Ed/D.Ed/B.P.Ed/M.P.Ed training from recognized universities.
Preference: Excellent English communication & teaching experience. Eligible candidates mail your Curriculum vitae with updated resume to Email: mountcarmel.rrnagar@gmail.com
Contact: 080-28602294/95, 7899070902
Walk in interview with original documents on any working day. Timings: 9.00am to 1.00pm in the school premises.

CAMLIN HIGH School, State Board. 6th 'C' Main, 4th Cross Near 7th Main Bus Stop Hampinagar Bangalore- 560104 080-23301363. Email: camlinschool84@gmail.com. REQUIRES for the academic year 26-27 Coordinator, Student Counselor Teachers for High School. Middle and Primary. Kannada English, Hindi Maths Science, Social Science Drawing Physical Education Computer Science. TCH/ D.ED./ NTT/ MTT. Apply with hand written application OR Send resume. English Medium candidates to apply. Candidates can come to give Demo classes. Bus Driver Security Guard Office Boy Helper Aya.

WANTED TEACHER Primary All Subject and High schools Maths, Hindi and Computer Teacher (1 std to 10 Std) for Lewa English High School Woc Road, Mahaganapathinagar Rajajinagar, Bangalore- 10 Email: lewa.bangalore@gmail.com Contact: 9742964160/ 080-23350167/ 9916327680

MOOKAMBIKA SCHOOL NR.Colony, Basavanagudi. Wanted PRINCIPAL/ ACADEMIC ADVISOR- FEMALE ONLY. Fluency in English is mandatory. Should have Oratory skills, Team building and Interpersonal Skills. Ph: 93435-31234 Email: arvindpol.a@gmail.com

WANTED TRAINED TEACHERS for All Subjects from class 1 to 10. Fluency in ENGLISH & COMPUTER Skills Mandatory. secretarymookambikaschool@gmail.com

JAME-UL-ULOOM GROUP OF INSTITUTION
S.J.P ROAD, BANGALORE-560 002
We are hiring

1.	Administrator: Proficient in English, Urdu & Kannada languages. With 5 years experience -No. of post -2
2.	Head Mistress: Post Graduation with B.Ed Proficient in English, Urdu & Kannada With 5 years experience -No. of post-1
3.	Lecturers for PU Composite college:
	a) Mathematics: MSc, B.Ed preferably - No. of Post-1
	b) Physics: M.Sc, B.Ed - No. of Post-1
	c) Hindi : M.A, B.Ed - No. of post-1
	d) Accountancy: M.com - No. of post-1
4.	Accountant:
	a) B.Com/M.Com with knowledge of Tally. -No. of post -2
	b) B.Com with knowledge of writing accounts in Urdu With 2 years Experience - No. of post -2
5.	Teachers : Primary & High school:
	a) Graduate with TCH or B.Ed . (English/Science/Social Science)
	b) Computer Incharge: M.C.A/M.Tech with 3 years experience .
	c) Graduate with B.Ed . (B.A/M.A for urdu and Kannada subjects)
	d) Co-ordinator for Primary Section with 5 years Experience.
	e) Physical Education Teacher with CPEd / BPEd.
	f) Security Guard.

Reach us at our email Id jameululoom84@gmail.com on or before 28-02-2026 Sd/- Secretary

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2026-27. Nursery, Primary, High-School, English, Mathematics, Science, SocialScience & ComputerTeacher. STATE & ICSE. Qualification: B.A./B.Sc.,B.Ed/ M.A./M.Sc,M.Ed, NTT, CPEd. Only English Medium Candidates need to apply

MODERN PUBLIC ENGLISH SCHOOL, RT.Nagar, Bangalore-32 requires qualified ACADEMIC COORDINATORS and TEACHERS for ALL SUBJECTS for PRIMARY and HIGH SCHOOL. Whatsapp CV:9739981605 www.mpes-edu.com

Walk-in

REQUIRED FOR SANITARYWARE SHOWROOM AT BANGALORE
EXPERIENCED SHOWROOM SENIOR SALES OFFICER AND SALES PERSONS WITH COMPUTER KNOWLEDGE
WALK IN INTERVIEW ON 18.02.2026 BETWEEN 11.00 AM TO 06.00 PM AT: TRISHLA BUILD MART
1st Floor, No. 58/1, 58/2, Dr. Rajkumar Rd., 4th Block, Rajaji Ngr., Bengaluru - 560010.
Mobile: 9513152929 / 9884532727
Email: trishlaruhebir@gmail.com

Wanted

WANTED TECHNICAL consultant for Manufacturing of HT SF6 breakers and RMU for Existing electrical industry in Bangalore. Contact: 9590132003

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

MATRIMONIAL

Brides Wanted

Brahmin

BRIDE WANTED
Bangalore Based Educated Brahmin Girl for a B.Tech Boy 29 Years, Employed as Co-Founder of a Company.
Height : 5'.10".
D.O.B : 09-09-1996
Gothram : Koundinya, Nakshatra : Pushyami 2 Pada
Contact No: 99864 87782

Kannada

Wanted Bride
Wanted Bride of any cast for Groom 33 years. Height 5.4", Qualification: BFA, Caste: Lingayath. Own House getting Rent 90,000. Working as Fine Arts Master & Freelancer. Receiving 25,000 Salary. residing at Vijayanagar, B'lore.
Contact: 9448074071 / 9535978512 7760540344

Grooms Wanted

Tamil

GROOMS WANTED TAMIL
Parents seek proposals for Tirunelveli Saiva Pillai Girl 26 BE(CSE) wkg in MNC, from educated, respectable and strict vegetarian families of same caste. BE/BTech Software Engineer Groom, Bangalore settled and a teetotaler, a prerequisite.
Contact: sk_pillai@outlook.com 6364789344

PUBLIC NOTICE

In The Supreme Court Of India
Extra-ordinary Appellate Jurisdiction
Special Leave Petition (Civil) No. 25111 Of 2024
With Prayer For Interim Relief
N.S. Vishwanath And Another .... Petitioner(S)/appellant(S)
Versus
Channegowda And Others ....respondent(S)

To,
1. Channegowda, S/o Kempaiah, R/at No. 2/a, 3rd Block, 8th Cross, 7th A' Main Road, Nandini Badavane, Bangalore - 560 096, Karnataka
Pid: 9058/2026 For R[1] In Slp(C) No.25111/2024 (Sec iv-A)
2. Gangadhara Murthy, S/o Kempaiah, R/at No. 2/a, 3rd Block, 8th Cross, 7th A Main Road, Nandini Badavane, Bangalore - 560 096., Karnataka
Pid: 9059/2026 For R[2] In Slp(C) No.25111/2024 (Sec iv-A)
3. Lakshmamma D/o Late Venkatesh, R/at Guruve Bovi Palya, Bychaguppe, Tavarakere Hobli, Bangalore, South Taluk, Bangalore District., Karnataka
Pid: 9060/2026 For R[4] In Slp(C) No.25111/2024 (Sec iv-A)
4. Chandrashekar S/o Late Venkatesh, R/at Guruve Bovi Palya, Bychaguppe, Tavarakere Hobli, Bangalore South Taluk, Bangalore District.,Karnataka
Pid: 9061/2026 For R[6] In Slp(C) No.25111/2024 (Sec iv-A)
5. K. Ramesh S/o Kale Gowda, R/at Kadabagere Village, Magadi Main Road, Dasanapura - Hobli, Bangalore North Taluk - 560 039, Karnataka
Pid: 9062/2026 For R[7] In Slp(C) No.25111/2024 (Sec iv-A)

Whereas The Petition For Special Leave Petition (Civil) To Appeal With Application For Condonation Of Delay In Filing, Exemption From Filing C/c Of The Impugned Judgment, Exemption From Filing O.T., Condonation Of Delay In Refiling Curing The Defects Above Mentioned (Copy Enclosed) Filed In The Registry By Mr. Rajesh Gulab Inamdar, Advocate On Behalf Of The Petitioner Above Named Was Listed For Hearing Before This Court On 18th October, 2024, When The Court Was Pleased To Pass The Following Order:-

"Applications for exemption from filing c/c of the impugned judgment and exemption from filing O.T. are allowed.

Delay condoned. Issue notice. Status quo, existing as of today, shall be maintained by the parties."

AND, WHEREAS the Petition for Special Leave to Appeal with prayer for interim relief along with application for APPLICATION UNDER ORDER V RULE 20 CPC FOR EFFECTING SERVICE THROUGH PUBLICATION above mentioned (copy enclosed) filed in the Registry by Mr. RAJESH GULAB INAMDAR, Advocate on behalf of the Petitioner(s) above named was listed for hearing before this Court on 05th January, 2026, when the Court was pleased to pass the following order:-

"1. Application seeking substituted service is allowed. Notice shall be published in two newspapers viz. Deccan Herald (English) and Prajavani (Kannada).

2. Learned counsel for petitioners is directed to file proof of publication along with an affidavit within four weeks. List the matter after six weeks.

NOW, THEREFORE, TAKE NOTICE that the above petition with prayer for interim relief will be posted for hearing before this Court in due course and you may enter appearance before this Court either in person or through an advocate on record of this Court duly appointed by you in that behalf immediately from the date of service of notice. You may thereafter show cause to the Court on the day that may subsequently be specified as to why delay in filing SLP delay in filing/refiling SLP be not condoned and Special Leave Petition and interim relief as prayed be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

ASSISTANT REGISTRAR
Dated:12th January, 2026

Copy to :-
* 1 Mr. Rajesh Gulab Inamdar (adv.)
Note: "Counsel for Petitioner is required to file Affidavit of paper publication along with the proof of publication well before next date of listing.

ASSISTANT REGISTRAR
Important Notice LEGAL AID
(1) Legal Services of an advocate is provided by the Supreme Court Legal Services Committee and the Supreme Court Middle Income Group Legal Aid Society to eligible litigants.
For further information, please contact the Secretary, Supreme Court Legal Services Committee or the Member Secretary, Supreme Court Middle Income Group Legal Aid Society, 107-108, Lawyers' Chambers, R.K. Jain Block Near Post Office, Supreme Court Compound, Tilak Marg, New Delhi-110001 (Tel Nos. 011-23116353,23116354 (Additional Building Complex) and 011-23381257 (Front Office))
MEDIATION
(2) The facility of amicable settlement of disputes by trained mediators in cases pending in the Supreme Court is now available in the Supreme Court.
For further information, please contact the Coordinator, Supreme Court Mediation Centre, 109, Lawyers' Chambers, R.K. Jain Block Near Post Office, Supreme Court Compound, Tilak Marg, New Delhi-110001 (Tel No. 011-23071432)

BUSINESS

Business to Business

Business

BIG FINANCE, Land Collateral, Projects, J.Ds available. Dr.Swamy Naidu, Vamshadhara Projects and Services- 9342247637.

Finance

URGENT LOAN avail @ 3.5% per Annum Personal, Business, Educational Takeover All types of Loan Shivganga Finance Call/ WhatsApp: 8826494700.

PERSONAL

Change of Name

I AM changing my name from ATHRVA RAHUL JOSHI to ATHARVA RAHUL JOSHI for passport issuance as per documents.

I, KISHOR VENKATESH RAJEEVA, and my wife SOWMYA K, residing at GF1, NO.2, AMMA HOMES, 5th MAIN, RAGHUVANAHALLI, KANAKAPURA ROAD, BENGALURU - 560109, have changed our minor son's name from VASISHTA SOWMYA KISHOR to BHAVANISHANKARA KISHOR RAJEEVA via Affidavit dated 11/02/2026 before Notary Chandrashekaraiah. S, Bengaluru.

I, SEEMA RAMACHANDREGOWDA SATTAGANA HALLI. R/a #.1240, Sri Simhadri 1st main road. 3rd Stage, BEML Layout, R.R Nagar, Bangalore - 560098 Have Changed My Name From SEEMA RAMACHANDREGOWDA SATTAGANA HALLI To SEEMA VIJAY vide Affidavit Dated 14/02/2026 before Notary Mohammed Hussain.K. Bangalore

I, RANJU DEVI R/a #.6, Jain Temple Street, V.V Puram, Basavanagudi Bangalore -560004 Have Changed My Name From RANJU DEVI To RANJU KUMARI vide Affidavit Dated 14/02/2026 before Notary Mohammed Hussain .K Bangalore.

I, HARIHARAPURA Venkatesha Murthy Vishwa Prakash S/o Venkatesha Murthy HS & Vidya Lakshmi PT residing at NO 507, Shri Durga Nilaya, 4th Main, M V Nagara, BEML Nagar, KGF Kolar Karnataka 563115. I Have changed my name to Vishwaprakash HV vide affidavit dated 12.02.2026 before Notary N.Srinivasa KGF. Henceforth I shall be called as Vishwaprakash HV only.

'ಟೆಕ್ ಮೈತ್ರಿಕೂಟ' ರಚನೆ

ನವದೆಹಲಿ: 'ಸಾಫ್ಟ್‌ವೇರ್, ಸೆಮಿಕಂಡಕ್ಟರ್, ಕ್ಲೌಡ್ ಮೂಲಸೌಕರ್ಯ, ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿನ ಪರಸ್ಪರ ಸಹಕಾರಕ್ಕಾಗಿ, ಜಿಯೊ, ಆಂಥ್ರೊಪಿಕ್, ಎರಿಕ್ಸನ್ ಸೇರಿದಂತೆ ಜಾಗತಿಕ ಮಟ್ಟದ 12 ಪ್ರಮುಖ ತಂತ್ರಜ್ಞಾನ ಕಂಪನಿಗಳು 'ವಿಶ್ವಾಸ ಟೆಕ್ ಮೈತ್ರಿಕೂಟ' ಸ್ಥಾಪನೆಗೆ ಮುಂದಾಗಿವೆ.

ಮ್ಯೂನಿಚ್‌ನಲ್ಲಿ ನಡೆದ ಜಾಗತಿಕ ತಂತ್ರಜ್ಞಾನ ಕಂಪನಿಗಳ 'ಭದ್ರತಾ ಸಮ್ಮೇಳನ-2026'ರಲ್ಲಿ ಈ ಮೈತ್ರಿಕೂಟ ರಚನೆಯನ್ನು ಘೋಷಿಸಲಾಯಿತು.

ಆಫ್ರಿಕಾ, ಏಷ್ಯಾ, ಯುರೋಪ್ ಮತ್ತು ಉತ್ತರ ಅಮೆರಿಕದ 15 ಕಂಪನಿಗಳು ಈ ಒಕ್ಕೂಟದಲ್ಲಿವೆ. ಎಡಬ್ಲ್ಯುಎಸ್, ಕ್ಯಾಸವಾ ಟೆಕ್ನಾಲಜೀಸ್, ಕೊಹೆರೆ, ಗೂಗಲ್ ಕ್ಲೌಡ್, ಹನ್ವಾ, ಮೈಕ್ರೊಸಾಫ್ಟ್, ನೋಕಿಯಾ, ಎನ್‌ಟಿಟಿ, ಎನ್‌ವಿಡಿಯಾ, ರ್‍ಯಾಪಿಡಸ್, ಎಸ್‌ಎಪಿ ಮತ್ತು ಎಸ್‌ಎಪಿ ಮೈತ್ರಿಕೂಟದ ಭಾಗವಾಗಿರುವ ಇತರೆ ಕಂಪನಿಗಳು.

ಕೂಟದ ಭಾಗವಾಗಿರುವ ಕಂಪನಿಗಳು ಪಾರದರ್ಶಕತೆ, ಭದ್ರತೆ ಮತ್ತು ದತ್ತಾಂಶ ಸಂರಕ್ಷಣೆಗೆ ಬದ್ಧವಾಗಿರುತ್ತವೆ ಆ ಮೂಲಕ ಜಗತ್ತಿನಾದ್ಯಂತ ಜನರಿಗೆ ತಂತ್ರಜ್ಞಾನದ ಪ್ರಯೋಜನಗಳನ್ನು ಒದಗಿಸಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ಜಾಗತಿಕ ಕಂಪನಿಗಳೊಂದಿಗಿನ ಸಹಭಾಗಿತ್ವವು ಡಿಜಿಟಲ್ ಅವಕಾಶಗಳನ್ನು ಹೆಚ್ಚಿಸಲಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಸುಸ್ಥಿರತೆಯನ್ನು ಬಲಪಡಿಸುತ್ತದೆ' ಎಂದು ಜಿಯೊ ಪ್ಲ್ಯಾಟ್‌ಫಾರ್ಮ್ಸ್‌ನ ಸಿಇಒ ಕಿರಣ್ ಥಾಮಸ್ ಅಭಿಪ್ರಾಯಪಟ್ಟಿದ್ದಾರೆ.

ದ್ವಿತಳಿ ರೇಷ್ಮೆಗೆ ಬಂತು ಬಂಪರ್ ಬೆಲೆ

ಕೆ.ಜಿಗೆ ₹1 ಸಾವಿರ ತಲುಪಿದ ಧಾರಣೆ • ರೇಷ್ಮೆ ಬೆಳೆಗಾರರ ಮೊಗದಲ್ಲಿ ಮಂದಹಾಸ

• ಓದೇಶ ಸಕಲೇಶಪುರ

ರಾಮನಗರ: ನಗರದ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಶನಿವಾರ ದ್ವಿತಳಿ (ಬೈವೋಲ್ಟೀನ್) ಗೂಡಿನ ದರ ಪ್ರತಿ ಕೆ.ಜಿ.ಗೆ ಗರಿಷ್ಠ ₹1 ಸಾವಿರಕ್ಕೆ ಮಾರಾಟವಾಗುವ ಮೂಲಕ ಹೊಸ ದಾಖಲೆ ಬರೆಯಿತು. ಮಿಶ್ರತಳಿ ಗೂಡಿಗೂ ಬಂಪರ್ ಬೆಲೆ ಬಂದಿದ್ದು ಪ್ರತಿ ಕೆ.ಜಿಗೆ ₹800ಕ್ಕೆ ವಿಕ್ರಯವಾಯಿತು.

ಎರಡೂವರೆ ತಿಂಗಳ ಹಿಂದೆ ₹900 ಗಡಿ ದಾಟಿದ್ದ ದ್ವಿತಳಿ ದರವು ನಂತರ ನಿಧಾನವಾಗಿ ಏರಿಕೆಯಾಗುತ್ತಿತ್ತು. ಶುಕ್ರವಾರ ₹999 ತಲುಪಿದ್ದ ದರವು ಶನಿವಾರ ಸಾವಿರದ ಗಡಿ ಮುಟ್ಟಿದೆ. ಪ್ರತಿ ಕೆ.ಜಿಗೆ ₹750ರ ಆಸುಪಾಸಿನಲ್ಲಿದ್ದ ಮಿಶ್ರತಳಿ ದರವೂ ₹800 ದಾಟಿದೆ.

2022ರಲ್ಲಿ ನಾಲ್ಕಂಕಿ ತಲುಪಿದ್ದ ದ್ವಿತಳಿ ರೇಷ್ಮೆಗೂಡಿನ ದರ, ಇದೀಗ ಮತ್ತೆ ಸಾವಿರಕ್ಕೆ ಏರಿಕೆಯಾಗಿರುವುದರಿಂದ ರೇಷ್ಮೆ ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ಮಾರುಕಟ್ಟೆಗೆ ಶನಿವಾರ ಗೂಡುಗಳನ್ನು ತಂದಿದ್ದ 330 ಬೆಳೆಗಾರರ ಪೈಕಿ, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಯುದಲಡಕು ಗ್ರಾಮದ ಶ್ರೀನಿವಾಸ್ ಅವರು ತಂದಿದ್ದ 84 ಕೆ.ಜಿ ದ್ವಿತಳಿ ಗೂಡನ್ನು ರೀಲರ್ ಮೊಹಮದ್ ಜಬಿ ಅಹಮದ್ ಅವರು ಪ್ರತಿ ಕೆ.ಜಿ.ಗೆ ₹1 ಸಾವಿರದಂತೆ ಖರೀದಿಸಿದರು.

ರೇಷ್ಮೆ ಧಾರಣೆ (ಕೆ.ಜಿ ₹ಗಳಲ್ಲಿ)		
ದಿನ	ಮಿಶ್ರತಳಿ(ಸಿ.ಬಿ) ಕನಿಷ್ಠ–ಗರಿಷ್ಠ	ದ್ವಿತಳಿ(ಬಿ.ವಿ) ಕನಿಷ್ಠ–ಗರಿಷ್ಠ
ಫೆ.08	588-770	356-933
ಫೆ.09	612-773	390-946
ಫೆ.10	600-777	282-985
ಫೆ.11	635-795	392-985
ಫೆ.12	556-805	315-993
ಫೆ.13	600-790	515-999
ಫೆ.14	656-802	381-1,000

(ಮಾಹಿತಿ: ರಾಮನಗರ ರೇಷ್ಮೆಗೂಡು ಮಾರುಕಟ್ಟೆ)

> ರೇಷ್ಮೆಗೆ ಉತ್ತಮ ದರ ಸಿಕ್ಕಿರುವುದು ಸಂತಸದ ವಿಷಯ. ಆದರೆ ವಿವಿಧ ಕಾರಣಗಳಿಗಾಗಿ ಇತ್ತೀಚೆಗೆ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವವರ ಸಂಖ್ಯೆ ಕಡಿಮೆಯಾಗುತ್ತಿದೆ. ರೇಷ್ಮೆ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು
> **ಗೌತಮ್ ಗೌಡ**, ಅಧ್ಯಕ್ಷ, ರೇಷ್ಮೆ ಬೆಳೆಗಾರರ ಹಿತರಕ್ಷಣಾ ಸಮಿತಿ, ಬೆಂಗಳೂರು ದಕ್ಷಿಣ ಜಿಲ್ಲೆ

ಅತಿ ಹೆಚ್ಚು ದರ ಪಡೆದ ಶ್ರೀನಿವಾಸ್ ಅವರಿಗೆ ಮಾರುಕಟ್ಟೆ ಅಧಿಕಾರಿಗಳು ಅಭಿನಂದನಾ ಪತ್ರ ನೀಡಿದರು.

ದ್ವಿತಳಿಯತ್ತ ಚಿತ್ತ: ಕೆಲ ತಿಂಗಳುಗಳಿಂದ ದ್ವಿತಳಿ ರೇಷ್ಮೆಗೂಡಿಗೆ ಉತ್ತಮ ಧಾರಣೆ ಸಿಗುತ್ತಿರುವುದರಿಂದ ಬೆಳೆಗಾರರು, ಮಿಶ್ರತಳಿಗಿಂತ ಹೆಚ್ಚಾಗಿ ದ್ವಿತಳಿಯತ್ತ ಚಿತ್ತ ಹರಿಸಿದ್ದಾರೆ. ದೇಶೀಯ ಸೀರೆ ಮತ್ತಿತರ ಸಿದ್ಧ ಉಡುಪಿನಲ್ಲಿ ದ್ವಿತಳಿ ರೇಷ್ಮೆ ಹೆಚ್ಚಾಗಿ ಬಳಕೆಯಾಗುವುದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗಿದೆ ಎನ್ನುತ್ತಾರೆ ರೇಷ್ಮೆ ಇಲಾಖೆ ಅಧಿಕಾರಿಗಳು.

ಏಷ್ಯಾದಲ್ಲಿಯೇ ರಾಮನಗರದ ರೇಷ್ಮೆ ಮಾರುಕಟ್ಟೆ ಅತ್ಯಂತ ದೊಡ್ಡದಾಗಿದೆ. ಇಲ್ಲಿಗೆ ರಾಜ್ಯದ ಬೆಳೆಗಾರರಷ್ಟೇ ಅಲ್ಲದೆ ನೆರೆಯ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರದಿಂದಲೂ ಬೆಳೆಗಾರರು ಗೂಡುಗಳನ್ನು ತಂದು ಮಾರಾಟ ಮಾಡುತ್ತಾರೆ. ಬೇರೆ ಜಿಲ್ಲೆಗಳ ಮಾರುಕಟ್ಟೆಗಳು ಸ್ಥಳೀಯ ಹಾಗೂ ಅಕ್ಕಪಕ್ಕದ ತಾಲ್ಲೂಕುಗಳ ಬೆಳೆಗಾರರಿಗೆ ಮಾತ್ರ ಸೀಮಿತವಾಗಿವೆ. ಹಾಗಾಗಿ, ಹೆಚ್ಚಿನ ಬೆಳೆಗಾರರು ರಾಮನಗರ ಮಾರುಕಟ್ಟೆಗೆ ಬರುತ್ತಾರೆ.

ರಾಮನಗರದಲ್ಲಿರುವ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆ

> 4 ವರ್ಷದ ಬಳಿಕ ದ್ವಿತಳಿ ರೇಷ್ಮೆಗೂಡಿನ ದರ ಪ್ರತಿ ಕೆ.ಜಿ.ಗೆ ₹1 ಸಾವಿರ ತಲುಪಿದೆ. ಮಿಶ್ರತಳಿ ದರವು ₹800 ದಾಟಿದೆ. ಮುಂದಿನ ದಿನಗಳಲ್ಲಿ ದರವು ಮತ್ತಷ್ಟು ಏರಿಕೆಯಾಗುವ ನಿರೀಕ್ಷೆ ಇದೆ
> **ಎಂ. ಮಲ್ಲಿಕಾರ್ಜುನ ಸ್ವಾಮಿ**, ರೇಷ್ಮೆ ಇಲಾಖೆ ನಿರ್ದೇಶಕ, ರಾಮನಗರ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ

> ರೇಷ್ಮೆ ಬೆಳೆ ಕೈ ಹಿಡಿದಿದೆ. ಕಳೆದ ಹತ್ತು ವರ್ಷಗಳಿಂದ ದ್ವಿತಳಿ ರೇಷ್ಮೆ ಬೆಳೆಯುತ್ತಿದ್ದೇನೆ. ನಾನು ತಂದ ಗೂಡಿಗೆ ಪ್ರತಿ ಕೆ.ಜಿಗೆ ₹1 ಸಾವಿರ ದರ ಸಿಕ್ಕಿರುವುದರಿಂದ ಸಂತಸವಾಗಿದೆ. ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿದೆ
> **ಶ್ರೀನಿವಾಸ್**, ರೇಷ್ಮೆ ಬೆಳೆಗಾರ, ತುಮಕೂರು ಜಿಲ್ಲೆ

ದರ ಏರಿಕೆ, ಉತ್ಪಾದನೆ ಇಳಿಕೆ

ರೇಷ್ಮೆಗೂಡಿಗೆ ಬಂಪರ್ ಬೆಲೆ ಸಿಗುತ್ತಿದ್ದರೆ, ಮತ್ತೊಂದೆಡೆ ಉತ್ಪಾದನೆ ಕುಸಿತ ಕಂಡಿದೆ. ಮಾರುಕಟ್ಟೆಗೆ ಐದು ತಿಂಗಳ ಹಿಂದೆ ಆವಕವಾಗುತ್ತಿದ್ದ 40-45 ಟನ್ ರೇಷ್ಮೆಗೂಡು, ಇದೀಗ 20-25 ಟನ್‌ಗೆ ಕುಸಿದಿದೆ. ಹಾಗಾಗಿ, ಗೂಡಿಗೆ ಉತ್ತಮವಾದ ದರ ಸಿಗುತ್ತಿದೆ ಎಂಬ ಮಾತುಗಳೂ ಕೇಳಿ ಬರುತ್ತಿವೆ.

'ಚಳಿಗಾಲದಲ್ಲಿ ಹಿಪ್ಪುನೇರಳೆ ಜೊತೆಗೆ ರೇಷ್ಮೆಗೂಡು ಉತ್ಪಾದನೆ ಇಳಿಕೆಯಾಗುವುದರಿಂದ ಮಾರುಕಟ್ಟೆಗೆ ಗೂಡಿನ ಆವಕ ತಗ್ಗಿದೆ. ಚಳಿಗಾಲದ ವಾತಾವರಣದಿಂದಾಗಿ ನವೆಂಬರ್–ಫೆಬ್ರುವರಿ ಅವಧಿಯಲ್ಲಿ ಹಿಪ್ಪುನೇರಳೆ ಸೊಪ್ಪು ಉತ್ಪಾದನೆ ಕುಂಠಿತವಾಗುವುದು ಸಾಮಾನ್ಯ. ಇದರಿಂದಾಗಿ ರೇಷ್ಮೆಹುಳು ಸಾಕಾಣಿಕೆ ಕುಸಿಯುತ್ತದೆ. ಏಪ್ರಿಲ್‌ನಿಂದ ಸೊಪ್ಪು ಹೆಚ್ಚಾಗುವುದರಿಂದ ಮತ್ತೆ ಗೂಡು ಉತ್ಪಾದನೆ ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ರಾಮನಗರ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಯ ಜಂಟಿ ನಿರ್ದೇಶಕ ಎಂ. ಮಲ್ಲಿಕಾರ್ಜುನ ಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

ಶಿಡ್ಲಘಟ್ಟದಲ್ಲೂ ಧಾರಣೆ ಏರಿಕೆ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ಇಲ್ಲಿನ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಕಳೆದ ಎರಡು ದಿನಗಳಿಂದ ರೇಷ್ಮೆಗೂಡಿನ ಧಾರಣೆಯಲ್ಲಿ ಏರಿಕೆ ಕಂಡಿದೆ.

ಶನಿವಾರ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಮಿಶ್ರತಳಿ ಒಂದು ಕೆ.ಜಿ ಗೂಡು ಗರಿಷ್ಠ ₹822, ಬೈವೋಲ್ಟೀನ್ (ದ್ವಿತಳಿ) ಗೂಡು ಕೆ.ಜಿಗೆ ₹943 ಮಾರಾಟವಾಗಿದೆ. ಶುಕ್ರವಾರ ಮಿಶ್ರತಳಿ ಗೂಡು ಗರಿಷ್ಠ ₹833 ಮತ್ತು ಬೈವೋಲ್ಟೀನ್ ಗೂಡು ₹986ಕ್ಕೆ ಮಾರಾಟವಾಗಿದೆ.

ಗೂಡಿನ ಆವಕ ಕಡಿಮೆ ಆಗಿರುವುದು, ಕಚ್ಚಾ ರೇಷ್ಮೆ ಬೆಲೆ ಏರಿಕೆಯಿಂದ ಗೂಡಿನ ಬೆಲೆ ಹೆಚ್ಚಳವಾಗುತ್ತಿದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಹಿಪ್ಪುನೇರಳೆ ಸೊಪ್ಪಿನ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇದೂ ಕೂಡ ರೇಷ್ಮೆ ಗೂಡಿನ ಆವಕ ಕಡಿಮೆ ಆಗಲು ಕಾರಣವಾಗಿದೆ.

ಈಗ ಮಾರುಕಟ್ಟೆಗೆ ಬರುತ್ತಿರುವ ರೇಷ್ಮೆಗೂಡುಗಳು ಉತ್ತಮ ಗುಣಮಟ್ಟದಿಂದ ಕೂಡಿವೆ. ರೇಷ್ಮೆ ಬಿಚ್ಚಾಣಿಕೆ ತುಂಬಾ ಚೆನ್ನಾಗಿ ಆಗುತ್ತಿದ್ದು, ರೇಷ್ಮೆ ಗೂಡಿನ ಗುಣಮಟ್ಟದಿಂದ ರೀಲರುಗಳು ಕೊಂಚ ಹೆಚ್ಚಿನ ಬೆಲೆಗೆ ಹರಾಜು ಕೂಗುತ್ತಾರೆ.

'ಯಾವ ಬೆಳೆಗೂ ಸಿಗದ ಉತ್ತಮ ವ್ಯವಸ್ಥೆಯನ್ನು ರೇಷ್ಮೆ ಬೆಳೆಗಾರರು ಹೊಂದಿದ್ದಾರೆ. ಬೆಲೆ ಹೆಚ್ಚುತ್ತಿದೆ. ಹಾಗಾಗಿ ರೇಷ್ಮೆಗೂಡನ್ನು ಮಾರಾಟ ಮಾಡುವ ಬದಲು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಉತ್ತಮ ಬೆಲೆ ಪಡೆಯಬಹುದು' ಎಂದು ರೇಷ್ಮೆಗೂಡು ಮಾರುಕಟ್ಟೆಯ ಉಪನಿರ್ದೇಶಕ ಎಸ್. ಉಮೇಶ್ ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ (ಶೇಂಗಾ)	
14-02-2026	
ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1780)
ಒಂದು ವಾರದ ಡೆಲಿವರಿ	1775 (1775)
ಪಾಮ್ ವಾರದ ಡೆಲಿವರಿ	1293 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1510 (1515)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,800 (1,53,450)
ಬೆಳ್ಳಿ ಕೆ.ಜಿಗೆ	2,42,000 (2,46,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಪಾರ್ವತಮ್ಮ
ಧೂಳೆಹೊಳೆ ಮಠದ ದಿ. ರೇವಣ್ಣಸಿದ್ಧಯ್ಯನವರ ಧರ್ಮಪತ್ನಿ ಇವರು ದಿನಾಂಕ 14-02-2026 ರಂದು ಶನಿವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 15-02-2026 ಭಾನುವಾರದಂದು ಬೆಳಿಗ್ಗೆ 10:00 ಗಂಟೆಗೆ ಚಾಮರಾಜಪೇಟೆಯಲ್ಲಿರುವ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ಕುಟುಂಬವರ್ಗದವರು

ದ್ವಿತೀಯ ವರ್ಷದ ಪುಣ್ಯ ಸ್ಮರಣೆ

ಶ್ರೀ ಕೆ. ನಾರಾಯಣ ರೆಡ್ಡಿ, B.E.
ಕಾಚರಕನಹಳ್ಳಿ, ಬೆಂಗಳೂರು
ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ,
ಮಾಜಿ ಉಪಾಧ್ಯಕ್ಷರು, ಎಪಿಎಂಸಿ
ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ
ಕುಟುಂಬ ಸದಸ್ಯರು

ಸಾಕೇತ್ ಪತ್ತೆಗಾಗಿ ಪತ್ರ ಬರೆದ ಸಿ.ಎಸ್

ಒಂದನೇ ಪುಟದಿಂದ...

ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಮೂಲಕ ಸ್ಥಳೀಯ ಕಾನೂನು ಜಾರಿ ಸಂಸ್ಥೆಗಳ ಜೊತೆ ಸಮನ್ವಯ ಸಾಧಿಸಿ ನೆರವು ನೀಡುವಂತೆಯೂ ಕೋರಿದ್ದಾರೆ.

'ಸಾಕೇತ್ ಅವರು ಪ್ರಸ್ತುತ ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವ-ವಿದ್ಯಾಲಯದಲ್ಲಿ ಎಂ.ಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ. ನಾಪತ್ತೆ ಆಗಿರುವ ಬಗ್ಗೆ ಬರ್ಕ್ಲಿ ಪೊಲೀಸ್ ಇಲಾಖೆಯಲ್ಲಿ ದೂರು ದಾಖಲಾಗಿದ್ದರೂ ಅವರು ಎಲ್ಲಿದ್ದಾರೆ ಎಂಬುದು ತಿಳಿದಿಲ್ಲವೆಂದು ಅವರ ಮನೆಯವರು ಮಾಹಿತಿ ನೀಡಿದ್ದಾರೆ. ಪರಿಸ್ಥಿತಿಯ ಗಂಭೀರತೆ ಮತ್ತು ಅವರ ಕುಟುಂಬ ಆತಂಕಕ್ಕೆ ಒಳಗಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ತಕ್ಷಣ ಮಧ್ಯಪ್ರವೇಶಿಸಿ ನೆರವು ನೀಡಬೇಕು' ಎಂದೂ ಪತ್ರದಲ್ಲಿ ಅವರು ಕೋರಿದ್ದಾರೆ.

'ಸೆಪ್ಟೆಂಬರ್‌ನಲ್ಲಿ ಸಾಕೇತ್ ಅಮೆರಿಕಾಕ್ಕೆ ತೆರಳಿದ್ದು, ನಿತ್ಯ ಸಂಪರ್ಕ-ದಲ್ಲಿದ್ದ. ಯಾವುದೇ ಬೆದರಿಕೆ ಅಥವಾ ಭಯದ ಬಗ್ಗೆ ದೂರು ನೀಡಿರಲಿಲ್ಲ. ಫೆಬ್ರುವರಿ 12ರಿಂದ ನಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ' ಎಂದು ಸಾಕೇತ್ ಅವರ ತಂದೆ ಶ್ರೀನಿವಾಸಯ್ಯ ತಿಳಿಸಿದ್ದಾರೆ.

'ನಥಿಂಗ್' ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಡನ್ ಮೂಲದ ಗ್ರಾಹಕ ತಂತ್ರಜ್ಞಾನ ಕಂಪನಿ 'ನಥಿಂಗ್', ಬೆಂಗಳೂರಿನಲ್ಲಿ ತನ್ನ ಮೊದಲ ಮಳಿಗೆಯನ್ನು ಆರಂಭಿಸಿದೆ. ಇದು ಕಂಪನಿಯು ದೇಶದಲ್ಲಿ ಆರಂಭಿಸಿದ ಮೊದಲ ಮಳಿಗೆ ಸಹ ಆಗಿದೆ.

ಕಂಪನಿಯ ಸಿಇಒ ಕಾರ್ಲ್ ಪೆ ಮತ್ತು ಸಹ-ಸ್ಥಾಪಕ ಅಕಿಸ್ ಇವಾಂಜೆಲಿಡಿಸ್ ಅವರು ಈ ಮಳಿಗೆಯನ್ನು ಉದ್ಘಾಟಿಸಿದರು. ಮಳಿಗೆಯಲ್ಲಿ ಕಂಪನಿಯ ಅಧಿಕೃತ ಉತ್ಪನ್ನಗಳ ಜೊತೆಗೆ ಸಿಎಂಎಫ್ ಉತ್ಪನ್ನಗಳು ಒಂದೆಡೆ ದೊರೆಯಲಿದೆ ಎಂದು ಕಂಪನಿ ತಿಳಿಸಿದೆ.

'ಭಾರತದಲ್ಲಿ ನಥಿಂಗ್‌ನ ಮೊದಲ ಮಳಿಗೆ ತೆರೆದಿರುವುದು, ಕಂಪನಿಯ ಪಾಲಿಗೆ ಮಹತ್ವದ ಮೈಲಿಗಲ್ಲು ಆಗಿದೆ. ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಸ್ಮಾರ್ಟ್‌ಫೋನ್ ಬ್ರ್ಯಾಂಡ್‌ಗಳಲ್ಲಿ ಕಂಪನಿಯ ಸ್ಥಾನವನ್ನು ಈ ಮಳಿಗೆ ಬಲಪಡಿಸಲಿದೆ' ಎಂದು ಕಂಪನಿಯ ಸಹ–ಸಂಸ್ಥಾಪಕ ಅಕಿಸ್ ಇವಾಂಜೆಲಿಡಿಸ್ ಹೇಳಿದ್ದಾರೆ.

ಸಿಬಲ್‌ಗೆ ಪ್ರಶಸ್ತಿ: ರಾಹುಲ್ ಉತ್ತರಕ್ಕೆ ಬಿಜೆಪಿ ಆಗ್ರಹ

ನವದೆಹಲಿ(ಪಿಟಿಐ): ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಧನಸಹಾಯದಿಂದ ಸ್ಥಾಪಿಸಿದ್ದ ಎನ್ನಲಾದ ಪ್ರಶಸ್ತಿಯನ್ನು 2010ರಲ್ಲಿ ಕೇಂದ್ರದ ಆಗಿನ ಸಚಿವ ಕಪಿಲ್ ಸಿಬಲ್ ಅವರಿಗೆ ನೀಡಲಾಗಿತ್ತು. ಈ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಉತ್ತರಿಸಬೇಕು ಎಂದು ಬಿಜೆಪಿ ಶನಿವಾರ ಆಗ್ರಹಿಸಿದೆ.

ಈ ಕುರಿತು ಪಕ್ಷದ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು,'ಎಪ್‌ಸ್ಟೈನ್ ಧನಸಹಾಯದಿಂದ ಸ್ಥಾಪಿಸಿದ್ದು ಎನ್ನಲಾದ ಪ್ರಶಸ್ತಿಯನ್ನು ಗಾಂಧಿ ಕುಟುಂಬಕ್ಕೆ ಆಪ್ತರಾದ ಕಪಿಲ್ ಸಿಬಲ್, 2010ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಿದ್ದರು' ಎಂದು ಹೇಳಿದ್ದಾರೆ. ಪ್ರಶಸ್ತಿ ಪುರಸ್ಕೃತ ಪಟ್ಟಿಯೊಂದನ್ನು ಕೂಡ ಭಂಡಾರಿ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದು, ಅದರಲ್ಲಿ ಸಿಬಲ್, ಸ್ಯಾಮ್ ಪಿತ್ರೋಡಾ ಹೆಸರು ಇದೆ ಎಂದು ಹೇಳಲಾಗುತ್ತಿದೆ

ಬಿಜೆಪಿಯ ಆರೋಪಗಳನ್ನು ತಳ್ಳಿಹಾಕಿರುವ ಸಿಬಲ್,'ಈ ಹೇಳಿಕೆಗಳು ಹಾಸ್ಯಾಸ್ಪದ' ಎಂದಿದ್ದಾರೆ.

'ರೈತರು, ರಫ್ತುದಾರರನ್ನು ವಂಚಿಸುತ್ತಿರುವ ಒಪ್ಪಂದ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ಮೂಲಕ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಹತ್ತಿ ಬೆಳೆಯುವ ರೈತರು ಹಾಗೂ ಜವಳಿ ರಫ್ತುದಾರರಿಗೆ ವಂಚಿಸುತ್ತಿದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಈ ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದು, ಒಪ್ಪಂದದಿಂದ ಭಾರತದ ಜವಳಿ ಉದ್ಯಮಿಗಳಿಗೆ ಅಮೆರಿಕವು ಶೇಕಡಾ 18ರಷ್ಟು ಸುಂಕ ವಿಧಿಸಿದರೆ, ಬಾಂಗ್ಲಾದೇಶಕ್ಕೆ ಶೂನ್ಯ ಸುಂಕ ವಿಧಿಸಲಾಗುತ್ತದೆ ಎಂದು ಸಚಿವರು ಉತ್ತರ ನೀಡಿದ್ದಾರೆ. ಭಾರತವು ಅದೇ ಪ್ರಯೋಜನವನ್ನು ಪಡೆಯಬೇಕಾದರೆ, ಅಮೆರಿಕದಿಂದ ನಾವು ಹತ್ತಿಯನ್ನು ಆಮದು ಮಾಡಿಕೊಳ್ಳ-ಬೇಕಾಗುತ್ತದೆ. ಈ ವಿಷಯದ ಬಗ್ಗೆ ಪರಿಣತ ಸುಳ್ಳುಗಾರರಾದ ಪ್ರಧಾನಿ ಹಾಗೂ ಸಂಪುಟದ ಸಚಿವರು ಗೊಂದಲವನ್ನು ಮೂಡಿಸುತ್ತಿದ್ದಾರೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ರಾಹುಲ್ ಆರೋಪದ ಕುರಿತಂತೆ ಮುಂಬೈನಲ್ಲಿ ಪ್ರತಿಕ್ರಿಯಿಸಿದ ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್, 'ರಾಹುಲ್ ಗಾಂಧಿ ಅಪಕ್ವರಾಗಿದ್ದು, ಆರ್ಥಿಕತೆಯ ಬಗ್ಗೆ ಯಾವುದೇ ಜ್ಞಾನ ಹೊಂದಿಲ್ಲ, ಅವರು ಸತ್ಯದಿಂದ ಸಾವಿರಾರು ಕಿಲೋ ಮೀಟರ್ ದೂರದಲ್ಲಿದ್ದಾರೆ. ಅವರಂತಹ ಅಪಖ್ಯಾತ ಹೊಂದಿದ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರು ದೇಶಕ್ಕೆ ಸೇವೆ ಸಲ್ಲಿಸುವುದನ್ನು ತಡೆಯಲು ಸಾಧ್ಯವಿಲ್ಲ. ತಪ್ಪು ಮಾಹಿತಿ ಹಾಗೂ ದಾರಿ ತಪ್ಪಿಸುವ ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ' ಎಂದು ಹೇಳಿದ್ದಾರೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1770 (1770)
ಸೋಯಾ (ರಿಫೈನ್ಡ್)	₹1375 (1380)
ಸೂರ್ಯಕಾಂತಿ (ರಿಫೈನ್ಡ್)	₹1605 (1610)
ಪಾಮೋಲಿನ್	₹1295 (1300)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹580
	12 ಕ್ಕೆ	₹85
ಮೈಸೂರು:	100 ಕ್ಕೆ	₹582

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹656-802
ದ್ವಿತಳಿ (ಬಿ.ವಿ)	₹381-1000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203.50
ಗುಡ್ ಲಾಟ್	₹191.50

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23650
ಎಸಿ	₹13000
ಆರ್‌ಪಿ	₹18400
ಆರ್‌ಸಿ	₹10175

ಬ್ಯಾಂಕ್‌ಗಳ ಸಾಲ ನೀಡಿಕೆ ಹೆಚ್ಚಳ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜನವರಿ 31ರ ವೇಳೆಗೆ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣವು ಶೇ 14.41ಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಜಿಎಸ್‌ಟಿ ದರ ಸರಳೀಕರಣದ ಬಳಿಕ ಬ್ಯಾಂಕ್‌ಗಳ ಸಾಲದ ಬೆಳವಣಿಗೆ ದರ ವಿಸ್ತರಣೆ ಆಗಿದೆ. ರಿಟೇಲ್ ಮತ್ತು ಕಾರ್ಪೊರೇಟ್ ಕಂಪನಿಗಳ ಸಾಲ ತೆಗೆದುಕೊಳ್ಳುವಿಕೆ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಜುಲೈ ತಿಂಗಳಿನಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಶೇ 9.98ರಷ್ಟಿತ್ತು. ಆಗಸ್ಟ್‌ನಲ್ಲಿ ಶೇ 10 ದಾಟಿತ್ತು. ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ಮಂಡಳಿಯು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದು ವ್ಯಾಪಾರಕ್ಕೆ ಉತ್ತೇಜನ ನೀಡಿದ್ದು, ಸಾಲದ ನೀಡಿಕೆಯು ಶೇ 10.29ಕ್ಕೆ ತಲುಪಿತು.

ಹಬ್ಬದ ಬೇಡಿಕೆ, ರಿಟೇಲ್ ಸಾಲದ ಹೆಚ್ಚಳ ಮತ್ತು ವ್ಯಾಪಾರಕ್ಕೆ ನೀಡುವ ಸಾಲದಲ್ಲಿನ ಏರಿಕೆಯಿಂದ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಇದು ಶೇ 11.4ಕ್ಕೆ ಏರಿಕೆ ಆಯಿತು. ಇದೇ ಪ್ರವೃತ್ತಿ ಡಿಸೆಂಬರ್‌ನಲ್ಲೂ ಮುಂದುವರಿಯಿತು. ಡಿಸೆಂಬರ್ 31ರ ವೇಳೆಗೆ ಸಾಲದ ಬೆಳವಣಿಗೆ ದರ ಶೇ 14.39ಕ್ಕೆ ತಲುಪಿತು. ಜನವರಿ ಅಂತ್ಯದ ವೇಳೆಗೆ ಶೇ 14.41ಕ್ಕೆ ತಲುಪಿದೆ ಎಂದು ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಫೆಬ್ರುವರಿ 6ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹60 ಸಾವಿರ ಕೋಟಿಯಷ್ಟು ಇಳಿಕೆ ಆಗಿದೆ.

ಒಟ್ಟು ಮೀಸಲು ಸಂಗ್ರಹವು ₹64.93 ಲಕ್ಷ ಕೋಟಿಗೆ ಇಳಿದಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ತಿಳಿಸಿದೆ.

ಜನವರಿ 30ಕ್ಕೆ ಕೊನೆಗೊಂಡ ವಾರದಲ್ಲಿ ಇದು ₹65.54 ಲಕ್ಷ ಕೋಟಿಯಷ್ಟಾಗಿತ್ತು. ಇದು ಇದುವರೆಗಿನ ಗರಿಷ್ಠ ಮಟ್ಟವಾಗಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹69,374 ಕೋಟಿಯಷ್ಟು ಹೆಚ್ಚಳವಾಗಿದ್ದು, ₹51.62 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹1.28 ಲಕ್ಷ ಕೋಟಿ ಇಳಿಕೆಯಾಗಿದ್ದು, ₹11.18 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.70 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹42,696 ಕೋಟಿಯಾಗಿದೆ ಎಂದು ತಿಳಿಸಿದೆ.

ಇ - ಸ್ವತ್ತು: ತಾಂತ್ರಿಕ ತೊಡಕು ನಿವಾರಣೆ– ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇ-ಸ್ವತ್ತು 2.0' ಜಾರಿಗೊಳ್ಳುವ ಮೊದಲು ಸೃಜನೆಯಾಗಿರುವ ಕಟ್ಟಡಗಳು ಮತ್ತು ನಿವೇಶನಗಳನ್ನು ಗ್ರಾಮ ಪಂಚಾಯತಿಗಳು ಸಮೀಕ್ಷೆಯ ಸಂದರ್ಭದಲ್ಲಿ ಕೈಬಿಟ್ಟಿದ್ದು, ಅದರಿಂದ ತೊಂದರೆಗೆ ಒಳಗಾಗಿರುವ ಜನರು ಹಾಗೂ ಸಂಸ್ಥೆಗಳು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ (ಸಿಇಒ) ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು– 2025'ರ ಅನ್ವಯ, ಈ ಹಿಂದೆ ಜಾರಿಯಲ್ಲಿದ್ದ ಇ-ಸ್ವತ್ತು ತಂತ್ರಾಂಶವನ್ನು ನಾಗರಿಕ ಸ್ನೇಹಿಯಾಗಿ ಪರಿಷ್ಕರಿಸಿ ಡಿ. 1ರಂದು 'ಇ-ಸ್ವತ್ತು 2.0' ತಂತ್ರಾಂಶಕ್ಕೆ ಚಾಲನೆ ನೀಡಲಾಗಿತ್ತು. ಅದರಂತೆ, ಏಪ್ರಿಲ್ 7ಕ್ಕೂ ಮೊದಲು ಸೃಜನೆಯಾಗಿರುವ ಕಟ್ಟಡಗಳು ಮತ್ತು ನಿವೇಶನಗಳು ಪಂಚತಂತ್ರ ತಂತ್ರಾಂಶದಲ್ಲಿ ನಮೂದು ಆಗದೇ ಇದ್ದರೆ, ಇ– ಖಾತಾ ಪಡೆಯಲು 'ಇ-ಸ್ವತ್ತು 2.0' ತಂತ್ರಾಂಶದ 'ಸಿಟಿಜನ್ ಇಂಟರ್ ಫೇಸ್' ಮೂಲಕ ಹೊಸ ನಮೂನೆ-11 ಬಿ ಅರ್ಜಿಗಳನ್ನು ಸಲ್ಲಿಸಬೇಕು. ಈವರೆಗೆ 27 ಸಾವಿರಕ್ಕೂ ಹೆಚ್ಚು ಹೊಸ ಅರ್ಜಿಗಳು ಸಲ್ಲಿಕೆ ಆಗಿವೆ. ಈ ಪೈಕಿ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯ ಅರ್ಜಿಗಳು 26 ಸಾವಿರ' ಎಂದು ಅವರು ವಿವರಿಸಿದ್ದಾರೆ.

'2025ರ ಏಪ್ರಿಲ್ 7ಕ್ಕಿಂತ ಮೊದಲು ಸೃಜನೆ ಆಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅರ್ಜಿಗಳನ್ನು ಪಿಡಿಒಗಳು ಹಾಗೂ ಜಿಲ್ಲಾ ಪಂಚಾಯಿತಿಯ ಸಹಾಯಕ ಕಾರ್ಯದರ್ಶಿಗಳ ಮೂಲಕ ಅನುಮೋದನೆಗಾಗಿ ಸಿಇಒಗಳಿಗೆ ಕಳುಹಿಸಬೇಕು. ಸಿಇಒ ಅನುಮೋದನೆ ನೀಡಿದ ನಂತರ 15 ದಿನಗಳ ಒಳಗೆ ನಮೂನೆ-11 ಬಿ ವಿತರಿಸಲಾಗುವುದು. ಈಗಾಗಲೇ ಸಲ್ಲಿಕೆಯಾಗಿರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

ಇರಾನ್‌ನಲ್ಲಿ ಆಡಳಿತ ಬದಲಾವಣೆ: ಟ್ರಂಪ್ ಒತ್ತಡ

ವಾಷಿಂಗ್ಟನ್ (ಎಎಫ್‌ಪಿ): 'ಇರಾನ್‌ನಲ್ಲಿ ಆಡಳಿತ ಬದಲಾವಣೆ ಒಳ್ಳೆಯದು' ಎಂದಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಮೇಲೆ ಮಿಲಿಟರಿ ಒತ್ತಡ ಹೆಚ್ಚಿಸಲು ಪಶ್ಚಿಮ ಏಷ್ಯಾಕ್ಕೆ ಎರಡನೆಯ ವಿಮಾನವಾಹಕ ನೌಕೆ ಕಳುಹಿಸುತ್ತಿರುವುದಾಗಿ ಹೇಳಿದ್ದಾರೆ.

ಇರಾನ್‌ನ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿಯ ಹಿಡಿತದಿಂದ ಅಧಿಕಾರ ಬದಲಿಸುವುದು ಮತ್ತು ಟೆಹರಾನ್‌ನ ಪರಮಾಣು ಕಾರ್ಯಕ್ರಮಗಳನ್ನು ಮಿತಿಗೊಳಿಸಲು ಒಪ್ಪಂದ ಮಾಡಿಕೊಳ್ಳುವಂತೆ ಟ್ರಂಪ್, ಇರಾನ್ ಮೇಲೆ ಒತ್ತಡ ಹೇರುತ್ತಿದ್ದಾರೆ.

1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಗಡಿಪಾರು ಮಾಡಲಾದ ಇರಾನ್‌ನ ಪಹ್ಲವಿ ರಾಜಮನೆತನದ ಕೊನೆಯ ದೊರೆ ಷಾ ಅವರ ಪುತ್ರ, ರೇಜಾ ಪಹ್ಲವಿ ಅವರು, ಟೆಹರಾನ್ ವಿಷಯದಲ್ಲಿ ಅಂತರರಾಷ್ಟ್ರೀಯ ಹಸ್ತಕ್ಷೇಪಕ್ಕಾಗಿ ಮನವಿ ಮಾಡಿದ್ದಾರೆ. ರೇಜಾ ಪಹ್ಲವಿ ಸದ್ಯ ಅಮೆರಿಕದಲ್ಲಿದ್ದಾರೆ. ರೇಜಾ ಮನವಿಯ ಬೆನ್ನಲ್ಲೇ, ಟ್ರಂಪ್ ಹೇಳಿಕೆ ಹೊರಬಿದ್ದಿದೆ.

'ಬೇರೆ ಜನರಿದ್ದಾರೆ'

'ಖಮೇನಿ ಬದಲು ಇರಾನ್‌ನಲ್ಲಿ ಯಾರು ಅಧಿಕಾರ ವಹಿಸಿಕೊಳ್ಳುತ್ತಾರೆ' ಎನ್ನುವುದಕ್ಕೆ ಉತ್ತರಿಸಲು ನಿರಾಕರಿಸಿರುವ ಟ್ರಂಪ್, 'ಅದಕ್ಕೆ ಬೇರೆ ಜನರಿದ್ದಾರೆ' ಎಂದಷ್ಟೇ ಹೇಳಿದ್ದಾರೆ.

'ಯುಎಸ್‌ಎಸ್ ಜೆರಾಲ್ಡ್ ಆರ್. ಫೋರ್ಡ್ ಯುದ್ಧನೌಕೆಯು ಶೀಘ್ರದಲ್ಲೇ ಪಶ್ಚಿಮ ಏಷ್ಯಾದತ್ತ ಹೊರಡಲಿದೆ. ಇರಾನ್ ಒಪ್ಪಂದಕ್ಕೆ ಒಪ್ಪದಿದ್ದರೆ, ನಮಗೆ ಈ ನೌಕೆ ಬೇಕಾಗುತ್ತದೆ' ಎಂದು ಟ್ರಂಪ್ ಹೇಳಿದ್ದಾರೆ.

ಮಾರಕ ವಿಷವಿಕ್ಕಿ ನವಾಲ್ನಿ ಹತ್ಯೆ: ರಷ್ಯಾ ವಿರುದ್ಧ ಆರೋಪ

ಮ್ಯೂನಿಚ್ (ಜರ್ಮನಿ) (ಎಎಫ್‌ಪಿ): 'ರಷ್ಯಾದ ವಿರೋಧ ಪಕ್ಷದ ನಾಯಕ ಅಲೆಕ್ಸಿ ನವಾಲ್ನಿ ಅವರನ್ನು 2024ರಲ್ಲಿ ಜೈಲಿನಲ್ಲಿ, ಮಾರಕ ವಿಷವಿಕ್ಕಿ ರಷ್ಯಾವೇ ಹತ್ಯೆ ಮಾಡಿದೆ' ಎಂದು ಯೂರೋಪಿನ ಐದು ರಾಷ್ಟ್ರಗಳು ಆರೋಪಿಸಿವೆ.

ಮ್ಯೂನಿಚ್‌ನಲ್ಲಿ ನಡೆದ ಭದ್ರತಾ ಸಮ್ಮೇಳನದಲ್ಲಿ ಬ್ರಿಟನ್, ಫ್ರಾನ್ಸ್, ಜರ್ಮನಿ, ಸ್ವೀಡನ್ ಮತ್ತು ನೆದರ್ಲೆಂಡ್ಸ್ ಈ ಆರೋಪ ಮಾಡಿವೆ.

ನವಾಲ್ನಿ ಅವರು ರಷ್ಯಾ ಅಧ್ಯಕ್ಷ ಪುಟಿನ್ ಅವರ ಪ್ರಬಲ ರಾಜಕೀಯ ವಿರೋಧಿ ಆಗಿದ್ದರು. ಜೈಲಿನಲ್ಲಿದ್ದ ಅವರನ್ನು ಹತ್ಯೆ ಮಾಡಲು ದಕ್ಷಿಣ ಅಮೆರಿಕದಲ್ಲಿ ಕಂಡುಬರುವ 'ಪಾಯಿಸನ್ ಡಾರ್ಟ್ ಕಪ್ಪೆ'ಯ ಚರ್ಮದಲ್ಲಿರುವ 'ಎಪಿಬ್ಯಾಟಿಡಿನ್' ಎಂಬ ವಿಷವನ್ನು ಬಳಸಲಾಗಿದೆ. ಮೃತದೇಹದ ಜೈವಿಕ ಮಾದರಿ ಪರಿಶೀಲನೆ ವೇಳೆ ಇದು ದೃಢಪಟ್ಟಿದೆ' ಎಂದು ಈ ರಾಷ್ಟ್ರಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

'ರಷ್ಯಾ ಎದುರಾಳಿಯನ್ನು ಕೊಲೆ ಮಾಡಿದೆ ಎನ್ನುವುದು ಈಗ ವೈಜ್ಞಾನಿಕವಾಗಿ ಸಾಬೀತಾಗಿದೆ' ಎಂದು ಅಲೆಕ್ಸಿ ನವಾಲ್ನಿ ಅವರ ಪತ್ನಿ ಯೂಲಿಯಾ ಸುದ್ದಿಗಾರಿಗೆ ತಿಳಿಸಿದರು.

'ಪ್ರಜಾಪ್ರಭುತ್ವದ ಉಳಿವಿಗೆ ಹೋರಾಡಿದವರಿಗೆ ಗೆಲುವು ಅರ್ಪಣೆ'

ಒಗ್ಗಟ್ಟಿಗೆ ಕರೆ ನೀಡಿದ ತಾರಿಕ್

> ಸ್ವಾತಂತ್ರ್ಯವನ್ನು ಪ್ರೀತಿಸುವ ಮತ್ತು ಪ್ರಜಾಪ್ರಭುತ್ವದ ಪರವಾಗಿರುವ ಜನರು ಮತ್ತೊಮ್ಮೆ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿಗೆ ಜಯ ತಂದುಕೊಟ್ಟಿದ್ದಾರೆ
> **ತಾರಿಕ್ ರೆಹಮಾನ್**, ಬಿಎನ್‌ಪಿ ಮುಖ್ಯಸ್ಥ

ಢಾಕಾ (ಎಎಫ್‌ಪಿ): ಬಾಂಗ್ಲಾದೇಶದ ಮುಂದಿನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳಲಿರುವ ಬಿಎನ್‌ಪಿ ಪಕ್ಷದ ಮುಖ್ಯಸ್ಥ ತಾರಿಕ್ ರೆಹಮಾನ್ ಅವರು ಒಗ್ಗಟ್ಟಿನಿಂದ ಇರುವಂತೆ ದೇಶದ ಜನರಿಗೆ ಕರೆ ನೀಡಿದ್ದಾರೆ.

ಚುನಾವಣೆಯ ಫಲಿತಾಂಶದ ಬಳಿಕ ದೇಶವನ್ನುದ್ದೇಶಿಸಿ ಮಾಡಿದ ಮೊದಲ ಭಾಷಣದಲ್ಲಿ ಅವರು, ತಮ್ಮ ಪಕ್ಷದ ಅಭೂತಪೂರ್ವ ಗೆಲುವನ್ನು ಪ್ರಜಾಪ್ರಭುತ್ವದ ಉಳಿವಿಗಾಗಿ ತ್ಯಾಗ ಮಾಡಿದವರಿಗೆ ಅರ್ಪಿಸಿದ್ದಾರೆ.

ಗುರುವಾರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮೂರನೇ ಎರಡು ಬಹುಮತ ಪಡೆದುಕೊಂಡಿದೆ. ಚುನಾವಣೆ ನಡೆದ 299 ಕ್ಷೇತ್ರಗಳಲ್ಲಿ 212 ಸ್ಥಾನಗಳನ್ನು ಬಿಎನ್‌ಪಿ ತನ್ನದಾಗಿಸಿಕೊಂಡಿದೆ. ಪ್ರಮುಖ ಪ್ರತಿಸ್ಪರ್ಧಿ ಜಮಾತ್ ಎ ಇಸ್ಲಾಮಿ ನೇತೃತ್ವದ ಮೈತ್ರಿಕೂಟ 77 ಸ್ಥಾನಗಳನ್ನು ಜಯಿಸಿದೆ.

'ನಾವು ತುಳಿಯುವ ಹಾದಿ ಮತ್ತು ಅಭಿಪ್ರಾಯಗಳು ಭಿನ್ನವಾಗಿರಬಹುದು. ಆದರೆ ದೇಶದ ಹಿತಾಸಕ್ತಿಗಾಗಿ, ಎಲ್ಲರೂ ಒಗ್ಗಟ್ಟಿನಿಂದ ಇರಬೇಕು. ರಾಷ್ಟ್ರೀಯ ಏಕತೆಯು ಸಾಮೂಹಿಕ ಶಕ್ತಿಯಾದರೆ, ವಿಭಜನೆ ಎನ್ನುವುದು ದೌರ್ಬಲ್ಯವಾಗಿದೆ ಎಂದು ನಾನು ದೃಢವಾಗಿ ನಂಬುತ್ತೇನೆ' ಎಂದು ಹೇಳಿದ್ದಾರೆ.

'ಬಿಎನ್‌ಪಿಗೆ ದೊರೆತ ಯಶಸ್ಸು ಈ ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಸಂದ ಗೆಲುವು ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಮರುಸ್ಥಾಪನೆಗೆ ಆಶಿಸಿದ ಮತ್ತು ಅದಕ್ಕಾಗಿ ತ್ಯಾಗ ಮಾಡಿದ ಜನರಿಗೆ ಗೆಲುವು ಅರ್ಪಿಸುತ್ತೇನೆ' ಎಂದಿದ್ದಾರೆ.

ಸವಾಲು ಮುಂದಿದೆ: 'ಹೊಸ ಸರ್ಕಾರದ ಮುಂದೆ ಸಾಕಷ್ಟು ಸವಾಲುಗಳಿವೆ. ಈ ಹಿಂದೆ ಇದ್ದ ಸರ್ವಾಧಿಕಾರಿ ಆಡಳಿತವು ದೇಶದ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಿದ್ದು, ಕಾನೂನು ಮತ್ತು ಸುವ್ಯವಸ್ಥೆಯನ್ನು ನಾಶಪಡಿಸಿದೆ. ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಪ್ರಯಾಣ ಆರಂಭಿಸಲಿದ್ದೇವೆ' ಎಂದು ಹೇಳಿದ್ದಾರೆ.

'16 ಅಥವಾ 17ರಂದು ಪ್ರಮಾಣ ವಚನ'

ಬಾಂಗ್ಲಾದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ತಾರಿಕ್ ರೆಹಮಾನ್ ನೇತೃತ್ವದ ಹೊಸ ಸಂಪುಟಕ್ಕೆ ಮುಂದಿನ ನಾಲ್ಕು ದಿನಗಳಲ್ಲಿ ಪ್ರಮಾಣ ವಚನ ಬೋಧಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಸಂವಿಧಾನಕ್ಕೆ ಅನುಗುಣವಾಗಿ, ಅಧ್ಯಕ್ಷರು ಬಂಗಭವನದಲ್ಲಿ (ಅಧ್ಯಕ್ಷರ ನಿವಾಸ) ಪ್ರಮಾಣ ವಚನ ಬೋಧಿಸುತ್ತಾರೆ' ಎಂದು ಸಂಪುಟ ಕಾರ್ಯದರ್ಶಿ ಶೇಖ್ ಅಬ್ದುಲ್ ರಶೀದ್ ಹೇಳಿದ್ದಾರೆ. ಪ್ರಮಾಣ ವಚನ ಸಮಾರಂಭದ ನಿರ್ದಿಷ್ಟ ದಿನಾಂಕವನ್ನು ಅವರು ಪ್ರಕಟಿಸಲಿಲ್ಲ. ಆದರೆ, ಪ್ರಮಾಣ ವಚನ ಸಮಾರಂಭವು ಫೆಬ್ರುವರಿ 16 ಅಥವಾ 17 ರಂದು ನಡೆಯಲಿದೆ ಎಂದು ಬಿಎನ್‌ಪಿಯ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಜನಾದೇಶ ಒಪ್ಪಿಕೊಂಡ ಜಮಾತ್ ಎ ಇಸ್ಲಾಮಿ

ಬಾಂಗ್ಲಾದೇಶದ ಅತಿದೊಡ್ಡ ಇಸ್ಲಾಮಿಸ್ಟ್ ಪಕ್ಷ ಜಮಾತ್ ಎ ಇಸ್ಲಾಮಿಯು ಜನಾದೇಶವನ್ನು ಒಪ್ಪಿಕೊಳ್ಳುವುದಾಗಿ ಶನಿವಾರ ಹೇಳಿದೆ. 'ಮತದಾನ ಪ್ರಕ್ರಿಯೆಯಲ್ಲಿ ಲೋಪಗಳು ನಡೆದಿವೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು' ಎಂದು ಪಕ್ಷವು ಶುಕ್ರವಾರ ಹೇಳಿತ್ತು.

ಆದರೆ ಪಕ್ಷದ ಮುಖ್ಯಸ್ಥ ಶಫೀಕ್ ಉರ್ ರೆಹಮಾನ್ ಅವರು ಚುನಾವಣೆಯಲ್ಲಿ ಸೋಲು ಒಪ್ಪಿಕೊಂಡಿರುವುದಾಗಿ ಶನಿವಾರ ತಿಳಿಸಿದ್ದಾರೆ. 'ನಾವು ಒಟ್ಟಾರೆ ಫಲಿತಾಂಶವನ್ನು ಒಪ್ಪಿಕೊಳ್ಳುತ್ತೇವೆ ಹಾಗೂ ಕಾನೂನನ್ನು ಗೌರವಿಸುತ್ತೇವೆ' ಎಂದಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

ಬೇಕಾಗಿದ್ದಾರೆ
1. ಮ್ಯಾನೇಜರ್, ಮಠ ಮತ್ತು ಸಮುದಾಯ ಭವನಕ್ಕೆ ಜವಾಬ್ದಾರಿ
2. ಕನ್ನಡ ಟೈಪಿಂಗ್ ಕಮ್ ಅಕೌಂಟೆಂಟ್
3. ಇನ್ನೋವಾ ಕಾರು ಡ್ರೈವರ್
4. ಸಸ್ಯಾಹಾರಿ ಅಡುಗೆಯವರು
ಸ್ಥಳ: ನೆಲಮಂಗಲ, ತೈಲೇಶ್ವರ ಗಾಣಿಗರ ಮಠ.
ಬೇಕಿದ್ದರೆ ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ.
ಸಂಪರ್ಕಿಸಿ: 9972658884 / 9480259762

Drivers

ಡ್ರೈವರ್ ಬೇಕಾಗಿದ್ದಾರೆ
ಬೆಂಗಳೂರು
ಎಲೆಕ್ಟ್ರಿಕ್ ಬಸ್‌ಗಳಿಗಾಗಿ
ಕನಿಷ್ಠ ತಿಂಗಳ ಗಳಿಕೆ ₹ 30,000/-
ಗರಿಷ್ಠ ತಿಂಗಳ ಗಳಿಕೆ ₹ 40,000/-
ತಿಂಗಳ ಗಳಿಕೆ
₹ 23,150/-
ಇಎಸ್‌ಐ ಮತ್ತು ಪಿಎಫ್
ಉಚಿತ ವಸತಿ, ಬಸ್ ಪಾಸ್*
ಸಬ್ಸಿಡಿ ಕ್ಯಾಂಟೀನ್* ಡೈಲಿ ಬಾಟಾ*
ಅಪಘಾತ ವಿಮೆ 5 ಲಕ್ಷ
ರಜಾ ವೇತನ
ಪ್ರೋತ್ಸಾಹಕ ಧನ, ಭತ್ಯೆ, ಬೋನಸ್ ಇತ್ಯಾದಿ..
ಭಾರೀ ವಾಹನ ಚಾಲನ ಪರವಾನಗಿ ಕಡ್ಡಾಯ
ಕನಿಷ್ಠ 3 ವರ್ಷ ಅನುಭವ ಕಡ್ಡಾಯ
ಸಂಪರ್ಕಿಸಿ : 8438889961 / 8438889963

Hotel

ಮ್ಯಾನೇಜರ್, ಸೂಪರ್ ವೈಸರ್, ಹೋಟೆಲ್ ಮ್ಯಾನೇಜ್ ಮೆಂಟ್ ಅಭ್ಯರ್ಥಿಗಳು, ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಹಿನ್ನೆಲೆಯುಳ್ಳವರು ಹಾಗೂ ಅಡುಗೆಯವರು ಬೇಕಾಗಿದ್ದಾರೆ.
ಸ್ಥಳ: ಕೆಫೆ ಮೈತ್ರಿ ಬೊಮ್ಮಸಂದ್ರ, ಬೆಂಗಳೂರು560099.
ಸಂಪರ್ಕಿಸಿ: 08026601239/ 9741862781 Email: cafemythri@gmail.com

ವೈವಾಹಿಕ

Brides Wanted

Kannada

ವಧು ಬೇಕಾಗಿದೆ
33 ವರ್ಷದ ಬಿಎಫ್‌ಎ ವಿದ್ಯಾರ್ಹತೆಯುಳ್ಳ ಫೈನ್ ಆರ್ಟ್ಸ್ ಮಾಸ್ಟರ್ & ಫ್ರೀಲಾನ್ಸರ್ ಆಗಿ ಕೆಲಸ ಮಾಡುತ್ತಿರುವ, 5.4" ಎತ್ತರವಿರುವ ಲಿಂಗಾಯಿತ ವರನಿಗೆ ಯಾವುದೇ ಜಾತಿ ಅಭ್ಯಂತರವಿಲ್ಲದ ವಧು ಬೇಕಾಗಿದೆ. ಸಂಬಳ 25,000/-. ಬೆಂಗಳೂರಿನ ವಿಜಯನಗರದಲ್ಲಿ ಸ್ವಂತ ಮನೆಯಿದ್ದು 90,000/– ಬಾಡಿಗೆ ಬರುತ್ತದೆ.
ಸಂಪರ್ಕಿಸಿ
9448074071 / 9535978512
7760540344

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Land

General

EAST FACE Double corner Commercial site for sale 1920 sq ft in MANDYA CITY, APMC MARKET ROAD VV NAGAR Beside Global public school. Please contact: 8050031150

Sites

General

ಸೈಟ್ ತೆಗೆದುಕೊಳ್ಳುವಂತವರು ಸೈಟ್ ಮಾರಾಟಗಾರರು ಮನೆ ತೆಗೆದುಕೊಳ್ಳುವಂತವರು ಮನೆ ಮಾರಾಟಗಾರರು ಬಡವರಿಗೆ ಮನೆ ಕಟ್ಟಿ ಕೊಡಲು ಸಹಾಯ ಮಾಡಲಾಗುವುದು. ಬೆಂಗಳೂರು 9036957018.

ವ್ಯಾಪಾರ

Business to Business

Services

ANR ರಿಯಲ್ ಎಸ್ಟೇಟ್ ಕನ್ಸಲ್ಟೆಂಟ್ಸ್ ಕೃಷಿ ಮತ್ತು ವಾಣಿಜ್ಯ ಭೂಮಿಗಳು ಮಾರಾಟಕ್ಕೆ. ಸಮಂಜಸ ದರಗಳಲ್ಲಿ ಶ್ರೀ ಸತ್ಯ ಸಾಯಿ ಜಿಲ್ಲೆ 9052852407

ಪ್ರವಾಸ

Travel

★ಶ್ರೇಯಸ್ ಟೂರ್ಸ್★
22.03.2026 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.08.03.2026 4ದಿನಗಳು ರಾಮೇಶ್ವರಂ ಕನ್ಯಾಕುಮಾರಿ,ಮಧುರೈ,ಇತರೆ. 22.03.2026 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಂಚಲಿಂಗ್. 21.03.2026 7ದಿನಗಳು ಆಸ್ಸಾಂ,ಮೇಘಾಲಯ, ಕಾಜಿರಂಗ.8073824856 9206979202

7 ದಿನಗಳ ಸಿಂಗಾಪುರ್ ಮಲೇಶಿಯಾ. 13 ದಿನಗಳ ಚಾರ್ ಧಾಮ್‌ಯಾತ್ರೆ. 10 ದಿನಗಳ ನೇಪಾಳ,ಮುಕ್ತಿನಾಥ. 7 ದಿನಗಳ ಕಾಶಿಯಾತ್ರೆ. 8 ದಿನಗಳ ಗ್ಯಾಂಗ್ ಟಾಕ್ ಡಾರ್ಜಿಲಿಂಗ್. 8 ದಿನಗಳ ಅಸ್ಸಾಂ,ಮೇಘಾಲಯ. 6 ದಿನಗಳ ಕಾಶ್ಮೀರ್ ಪ್ರವಾಸ. ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04. 9980270467 9740228186

Holiday Package Tours

ಭಾರತೀಯ ರೈಲ್ವೆಯ ಪ್ರವಾಸಿ ರೈಲು ವೈಷ್ಣೋದೇವಿ, ಅಮೃತಸರ, ಹರಿದ್ವಾರ, ಮಥುರಾ ಪ್ರವಾಸಕ್ಕೆ 13 ದಿನಗಳ ಪ್ರವಾಸವನ್ನು ಏರ್ಪಡಿಸಿದೆ. ಇದು ಏಪ್ರಿಲ್ 11 ರಂದು ಬೆಂಗಳೂರಿನಿಂದ ಪ್ರಾರಂಭವಾಗುತ್ತದೆ, 3AC ಊಟ ಮತ್ತು ವಸತಿಯೊಂದಿಗೆ 48,700 ರೂ . ಬುಕಿಂಗ್‌ಗಾಗಿ 7305858585 / (www.tourtimes.in) ಸಂಪರ್ಕಿಸಿ .

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪಾರಮ್ಯ ಸಾಧಿಸುವತ್ತ ಸೂರ್ಯ ಪಡೆ ಚಿತ್ತ

'ಬದ್ಧ ಪ್ರತಿಸ್ಪರ್ಧಿ'ಗಳಾದ ಭಾರತ–ಪಾಕಿಸ್ತಾನ ಮುಖಾಮುಖಿ
ಇಂದು • ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ಉಭಯ ತಂಡಗಳು

ಪ್ರಜಾವಾಣಿ ವಾರ್ತೆ/ಪಿಟಿಐ

ಕೊಲಂಬೊ: ಮಹಾಶಿವರಾತ್ರಿಯ ದಿನವಾದ ಭಾನುವಾರ ಕ್ರಿಕೆಟ್ ಪ್ರಿಯರಿಗೆ ರೋಚಕತೆಯ ರಸದೌತಣ ಖಾತ್ರಿಯಾಗಿದೆ. ಏಕೆಂದರೆ 'ಬದ್ಧ ಪ್ರತಿಸ್ಪರ್ಧಿ'ಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಇಲ್ಲಿ ಮುಖಾಮುಖಿಯಾಗಲಿವೆ.

ಬಹುಶಃ ಇತಿಹಾಸದಲ್ಲಿ ಹಿಂದೆಂದೂ ಇಂತಹ ತೀವ್ರವಾದ ನಾಟಕಕ್ಕೆ ಕ್ರಿಕೆಟ್ ಆಟವು ಸಾಕ್ಷಿಯಾಗಿರಲಿಲ್ಲ. ಭಾರತ ಮತ್ತು ಪಾಕಿಸ್ತಾನಗಳ ನಡುವಣ ಯುದ್ಧಗಳು ನಡೆದಾಗಲೂ ಕ್ರಿಕೆಟ್ ಸಂಬಂಧವು ಈ ಮಟ್ಟಕ್ಕೆ ಹಾಳಾಗಿರಲಿಲ್ಲ. ಅತ್ಯಂತ ವಿಷಮ ಪರಿಸ್ಥಿತಿಗಳಲ್ಲಿ ಮೈದಾನದಲ್ಲಿ ಸಾಂದರ್ಭಿಕವಾಗಿ ಪ್ರತಿರೋಧ ಭುಗಿಲೆದ್ದಿದ್ದವು. ಆದಾಗ್ಯೂ, ರಾಜಕೀಯವು ಸಂಪೂರ್ಣವಾಗಿ ಕ್ರೀಡೆಯೊಂದಿಗೆ ಬೆಸೆದುಕೊಂಡಿರಲಿಲ್ಲ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮತ್ತು ಸಂಬಂಧಿತ ಸಂಸ್ಥೆಗಳಿಗೆ ಅತಿ ದೊಡ್ಡ ಆದಾಯ ತರುವ ಪಂದ್ಯ ಇದು. ಒಂದು ವಾರದ ಹಿಂದಿನವರೆಗೂ ಈ ಪಂದ್ಯ ನಡೆಯುವ ಬಗ್ಗೆ ಸ್ಪಷ್ಟತೆ ಇರಲಿಲ್ಲ. 'ಬಾಂಗ್ಲಾ ತಂಡವನ್ನು ಅನರ್ಹಗೊಳಿಸಿದ್ದಕ್ಕಾಗಿ ಭಾರತದ ಎದುರು ಆಡಬಾರದು' ಎಂದು ಪಾಕಿಸ್ತಾನ ಸರ್ಕಾರ ತಮ್ಮ ತಂಡಕ್ಕೆ ಸೂಚಿಸಿತ್ತು. ಆದರೆ ಹಲವು ನಾಟಕೀಯ ಬೆಳವಣಿಗೆಗಳ ನಂತರ ಹೋದ ಸೋಮವಾರ ಪಾಕಿಸ್ತಾನವು 'ಯೂ ಟರ್ನ್' ತೆಗೆದುಕೊಂಡಿತು. ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ಅವರು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರಿಗೆ ಕರೆ ಮಾಡಿ ಭಾರತದ ಎದುರು ಆಡುವಂತೆ ಮನವಿ ಮಾಡಿದ್ದರು. ಅಲ್ಲದೇ ಇನ್ನೂ ಕೆಲವು ರಾಜತಾಂತ್ರಿಕ ಮಾರ್ಗಗಳ ಮೂಲಕ ಮಾತುಕತೆಗಳು ನಡೆದು 'ಪಂದ್ಯದಲ್ಲಿ ಆಡಲು ಪಾಕಿಸ್ತಾನ ಸಿದ್ಧವಾಗಿದೆ' ಎನ್ನುವ ಮೂಲಕ ಪ್ರಹಸನಕ್ಕೆ ತೆರೆಬಿದ್ದಿತ್ತು.

ಭಾರತ ಮತ್ತು ಪಾಕ್ ಪಂದ್ಯಕ್ಕೆ ಯಾವುದೇ ಹೆಚ್ಚುವರಿ ಪ್ರಚಾರದ ಅಗತ್ಯವಿಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ ದುಬೈನಲ್ಲಿ ನಡೆದ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತದ ನಾಯಕ ಸೂರ್ಯಕುಮಾರ್ ಯಾದವ್ ಅವರು ಪಾಕ್ ತಂಡದ ಸಲ್ಮಾನ್ ಅಲಿ ಆಘಾ ಅವರ ಕೈಕುಲುಕಲು ನಿರಾಕರಿಸಿದರು. ಇದು ದೊಡ್ಡ ವಿವಾದಕ್ಕೆ ಕಾರಣವಾಯಿತು. ಫೈನಲ್‌ನಲ್ಲಿ ಗೆದ್ದ ನಂತರ, ಭಾರತ ತಂಡವು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ, ಪಾಕಿಸ್ತಾನ ಸಚಿವರೂ ಆಗಿರುವ ಮೊಹ್ಸಿನ್ ನಖ್ವಿ ಅವರಿಂದ ಟ್ರೋಫಿಯನ್ನು ತೆಗೆದುಕೊಳ್ಳದಿರಲು ನಿರ್ಧರಿಸಿತು. ಇದರಿಂದ ಕುಪಿತಗೊಂಡ ನಖ್ವಿ ಟ್ರೋಫಿಯನ್ನು ಎಸಿಸಿ ಕಚೇರಿಗೆ ಕೊಂಡೊಯ್ದು ಕಪಾಟಿನಲ್ಲಿಟ್ಟಿದ್ದಾರೆ.

ಇದೆಲ್ಲದರಾಚೆ; ಭಾರತವು ಆಟ ದಂಗಳದಲ್ಲಿ ಪಾಕಿಸ್ತಾನಕ್ಕಿಂತ ಮುಂದೆ ಇದೆ. ಇಲ್ಲಿಯವರೆಗಿನ ಒಟ್ಟು 16 ಟಿ20 ಪಂದ್ಯಗಳಲ್ಲಿ 13ರಲ್ಲಿ ಭಾರತ ಮೇಲುಗೈ ಸಾಧಿಸಿದೆ. ಹಾಲಿ ಚಾಂಪಿಯನ್ ಭಾರತವು ಪ್ರೇಮದಾಸ ಕ್ರೀಡಾಂಗಣದ ಮೇಲ್ಮೈನಲ್ಲಿ ಚೆಂಡು ನಿಧಾನಗತಿಯಿಂದ ಸಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ತಂತ್ರಗಾರಿಕೆಯನ್ನು ರೂಪಿಸಬೇಕಿದೆ. ತಂಡದಲ್ಲಿ ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರಿಗೆ ಸ್ಥಾನ ನೀಡುವ ಸಾಧ್ಯತೆ ಇದೆ. ಇದರಿಂದಾಗಿ ಅರ್ಷದೀಪ್ ಸಿಂಗ್ ಹಾಗೂ ಬ್ಯಾಟರ್ ರಿಂಕು ಸಿಂಗ್ ವಿಶ್ರಾಂತಿ ಪಡೆಯಬಹುದು. ಜಸ್‌ಪ್ರೀತ್ ಬೂಮ್ರಾ ಅವರಿಗೆ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಎರಡನೇ ಮಧ್ಯಮ ವೇಗಿಯಾಗಿ ಜೊತೆ ನೀಡಬಹುದು.

ಹೊಟ್ಟೆನೋವಿನ ಸಮಸ್ಯೆಯಿಂದ ಬಳಲಿರುವ ಅಭಿಷೇಕ್ ಶರ್ಮಾ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗದಿದ್ದರೆ ಮಾತ್ರ ಭಾರತದ ಚಿಂತೆ. ಸಂಜು ಸ್ಯಾಮ್ಸನ್ ದೊಡ್ಡ ಇನಿಂಗ್ಸ್ ಆಡಬೇಕು. ಇಶಾನ್ ಕಿಶನ್ ಮೇಲೆ ಹೆಚ್ಚಿನ ಒತ್ತಡ ಬೀಳಬಹುದು. ತಿಲಕ್ ವರ್ಮಾ, ಸೂರ್ಯಕುಮಾರ್ ಮತ್ತು ಶಿವಂ ದುಬೆ ಅವರು ಸ್ಥಿರ ಪ್ರದರ್ಶನ ನೀಡಿದರೆ ದೊಡ್ಡ ಮೊತ್ತ ಗಳಿಸುವುದು ಸಾಧ್ಯವಾಗಲಿದೆ.

ಈ ಬಾರಿ ಭಾರತದ ಪಾರಮ್ಯವನ್ನು ಮೀರಿನಿಲ್ಲುವ ಛಲದಲ್ಲಿರುವ ಪಾಕ್ ತಂಡವು ತನ್ನ ಸ್ಪಿನ್ ಬೌಲರ್‌ಗಳಾದ ಅಬ್ರಾರ್ ಅಹಮದ್, ಮೊಹಮ್ಮದ್ ನವಾಜ್, ಶಾದಾಬ್ ಖಾನ್ ಮತ್ತು ಉಸ್ಮಾನ್ ತಾರೀಖ್ ಮೇಲೆ ವಿಶ್ವಾಸ ವಿಟ್ಟಿದೆ. ಶರವೇಗದ ಬೌಲರ್‌ಗಳನ್ನು ಕ್ರಿಕೆಟ್ ಲೋಕಕ್ಕೆ ನೀಡಿದ ಹೆಮ್ಮೆಯನ್ನು ವ್ಯಕ್ತಪಡಿಸುವ ಪಾಕಿಸ್ತಾನವು ಸ್ಪಿನ್ ಬೌಲರ್‌ಗಳ ಮೇಲೆ ಅವಲಂಬಿತವಾಗುತ್ತಿರುವುದು ಅಸಾಂಪ್ರದಾಯಿವಾಗಿರುವುದಂತೂ ನಿಜ. ವಿಶ್ವಕಪ್ ಟೂರ್ನಿಯಲ್ಲಿ ಇದುವರೆಗೆ ಆಡಿರುವ ಎರಡೂ ಪಂದ್ಯಗಳಲ್ಲಿಯೂ ಇದು ಸ್ಪಿನ್ನರ್‌ಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅದರಲ್ಲೂ ತಮ್ಮ 'ಪಾಜ್ ಆ್ಯಂಡ್ ಡೆಲಿವರಿ' ಶೈಲಿಯಿಂದ ಚರ್ಚೆಗೆ ಗ್ರಾಸವಾಗಿರುವ ಸ್ಪಿನ್ನರ್ ಉಸ್ಮಾನ್ ತಾರೀಖ್ ಅವರತ್ತ ಗಮನ ಹೆಚ್ಚಿದೆ. ಅವರು ನಾಲ್ಕು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಕೆಲವು ಮಾಜಿ ಆಟಗಾರರು ಅವರ ಶೈಲಿಯನ್ನು 'ಚಕಿಂಗ್' ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ಕೆಲವರು ಅವರ ಶೈಲಿ ನಿಯಮಬದ್ಧ ಎಂದೂ ವಾದಿಸಿದ್ದಾರೆ. ಒಟ್ಟಿನಲ್ಲಿ ಈ ಪಂದ್ಯದಲ್ಲಿ ಗೆಲ್ಲುವ ತಂಡವು ಸೂಪರ್ 8ರ ಹಂತಕ್ಕೆ ಪ್ರವೇಶಿಸಲಿದೆ.

ಮಳೆ ಸಾಧ್ಯತೆ

ವಾಯುಭಾರ ಕುಸಿತದ ಕಾರಣದಿಂದಾಗಿ ಕೊಲಂಬೊದಲ್ಲಿ ಭಾನುವಾರ ಮಳೆಯಾಗುವ ಸಾಧ್ಯತೆ ಇದೆ. ಪಂದ್ಯದ ವೇಳೆಯಲ್ಲಿಯೇ ಮಳೆಯಾಗಬಹುದು.

ಜೋರಾಗಿ ಮಳೆ ಸುರಿದರೆ ಪಂದ್ಯಕ್ಕೆ ಅಡಚಣೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಇಂದಿನ ಪಂದ್ಯ

ನೇಪಾಳ V/s ವೆಸ್ಟ್ ಇಂಡೀಸ್
ತಾಣ: ಮುಂಬೈ, ಬೆಳಿಗ್ಗೆ 11 ರಿಂದ

ಅಮೆರಿಕ V/s ನಮೀಬಿಯಾ
ತಾಣ: ಚೆನ್ನೈ, ಮಧ್ಯಾಹ್ನ 3 ರಿಂದ

ಭಾರತ V/s ಪಾಕಿಸ್ತಾನ
ತಾಣ: ಕೊಲಂಬೊ, ರಾತ್ರಿ 7 ರಿಂದ

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಸ್ಟಾರ್

ಜಸ್‌ಪ್ರೀತ್ ಬೂಮ್ರಾ

ಕೊಲಂಬೊದ ಪ್ರೇಮದಾಸ ಕ್ರೀಡಾಂಗಣದಲ್ಲಿ ಶನಿವಾರ ಭಾರತ ತಂಡದ ಇಶಾನ್ ಕಿಶನ್, ಅಕ್ಷರ್ ಪಟೇಲ್, ಶಿವಂ ದುಬೆ, ತಿಲಕ್ ವರ್ಮಾ, ಮೊಹಮ್ಮದ್ ಸಿರಾಜ್, ಸಂಜು ಸ್ಯಾಮ್ಸನ್ ಮತ್ತು ಅರ್ಷದೀಪ್ ಸಿಂಗ್ ಅಭ್ಯಾಸ ನಡೆಸಿದರು ಪಿಟಿಐ ಚಿತ್ರಗಳು

ಪಾಕಿಸ್ತಾನದ ಶಹೀನ್ ಶಾ ಅಫ್ರಿದಿ ಮತ್ತು ಉಸ್ಮಾನ್ ತಾರೀಖ್

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಗುಂಪು ಎ						
1	ಭಾರತ	2	2	0	4	3.050
2	ಪಾಕಿಸ್ತಾನ	2	2	0	4	0.932
3	ಅಮೆರಿಕ	3	1	2	2	0.533
4	ನೆದರ್ಲೆಂಡ್ಸ್	3	1	2	2	-1.352
5	ನಮೀಬಿಯಾ	2	0	2	0	-2.884
ಗುಂಪು ಬಿ						
1	ಶ್ರೀಲಂಕಾ	2	2	0	4	3.125
2	ಜಿಂಬಾಬ್ವೆ	2	2	0	4	1.984
3	ಆಸ್ಟ್ರೇಲಿಯಾ	2	1	1	2	1.100
4	ಐರ್ಲೆಂಡ್	3	1	2	2	0.150
5	ಒಮಾನ್	3	0	3	0	-4.546
ಗುಂಪು ಸಿ						
1	ವೆಸ್ಟ್ ಇಂಡೀಸ್	2	2	0	4	1.625
2	ಇಂಗ್ಲೆಂಡ್	3	2	1	4	-0.143
3	ಸ್ಕಾಟ್ಲೆಂಡ್	3	1	2	2	0.359
4	ಇಟಲಿ	2	1	1	2	-0.352
5	ನೇಪಾಳ	2	0	2	0	-1.854
ಗುಂಪು ಡಿ						
1	ದಕ್ಷಿಣ ಆಫ್ರಿಕಾ	3	3	0	6	1.477
2	ನ್ಯೂಜಿಲೆಂಡ್	3	2	1	4	0.701
3	ಯುಎಇ	2	1	1	2	-1.030
4	ಅಫ್ಗಾನಿಸ್ತಾನ	2	0	2	0	-0.555
5	ಕೆನಡಾ	2	0	2	0	-1.526

ಐರ್ಲೆಂಡ್‌ಗೆ ಶರಣಾದ ಒಮಾನ್

ಕೊಲಂಬೊ (ಎಎಫ್‌ಪಿ): ಹಂಗಾಮಿ ನಾಯಕ ಲೋರ್ಕನ್ ಟಕ್ಕರ್ ಅವರ ಅಜೇಯ 94 ರನ್‌ಗಳ ನೆರವಿನಿಂದ ಐರ್ಲೆಂಡ್ ತಂಡ, ಟಿ20 ವಿಶ್ವಕಪ್ ಪಂದ್ಯದಲ್ಲಿ ಒಮಾನ್ ತಂಡವನ್ನು ಶನಿವಾರ 96 ರನ್‌ಗಳಿಂದ ಸದೆಬಡಿಯಿತು.

ಐರ್ಲೆಂಡ್ 5 ವಿಕೆಟ್‌ಗೆ 235 ರನ್ ಗಳಿಸಿ, ಈ ವಿಶ್ವಕಪ್‌ನ ಅತ್ಯಧಿಕ ಮೊತ್ತ ದಾಖಲಿಸಿತು. ಇದು ಪುರುಷರ ಟಿ20 ವಿಶ್ವಕಪ್‌ನ ಎರಡನೇ ಅತ್ಯಧಿಕ ಮೊತ್ತ ಸಹ. ಒಮಾನ್ ತಂಡ 18 ಓವರುಗಳಲ್ಲಿ 139 ರನ್‌ಗಳಿಗೆ ಕುಸಿಯಿತು.

ಟಕ್ಕರ್ ಗಳಿಸಿದ ಅಜೇಯ 94 ರನ್‌ಗಳು ಈ ವಿಶ್ವಕಪ್‌ನ ವೈಯಕ್ತಿಕ ಗರಿಷ್ಠ ಮೊತ್ತವೆನಿಸಿತು. ಅವರು ಪಂದ್ಯಶ್ರೇಷ್ಠ ಗೌರವಕ್ಕೂ ಪಾತ್ರರಾದರು. ತಂಡಕ್ಕೆ ನಾಯಕರಾಗಿದ್ದ ಪಾಲ್ ಸ್ಟರ್ಲಿಂಗ್ ಮೊಣಕಾಲಿನ ಲಿಗಾಮೆಂಟ್ ಗಾಯದಿಂದಾಗಿ ವಿಶ್ವಕಪ್‌ನಿಂದ ಹೊರ ಬಿದ್ದಿದ್ದಾರೆ. ಹೀಗಾಗಿ ನಾಯಕತ್ವವು ಅನುಭವಿ ಟಕ್ಕರ್ ಹೆಗಲೇರಿದೆ.

7.3 ಓವರುಗಳಲ್ಲಿ 4 ವಿಕೆಟ್‌ಗೆ 64 ರನ್ ಗಳಿಸಿ ತಂಡ ಕುಸಿಯುವ ಅಪಾಯದಲ್ಲಿದ್ದಾಗ ಟಕ್ಕರ್ ನೆರವಿಗೆ ನಿಂತರು. 51 ಎಸೆತಗಳ ಅವರ ಇನಿಂಗ್ಸ್ 10 ಬೌಂಡರಿ, ನಾಲ್ಕು ಸಿಕ್ಸರ್‌ಗಳನ್ನು ಒಳಗೊಂಡಿತ್ತು. ಕೊನೆಯ ಓವರಿನಲ್ಲಿ ಜಾರ್ಜ್ ಡಾಕ್ರೆಲ್ ಆಡಿದ್ದರಿಂದ ಅವರಿಗೆ ಬ್ಯಾಟಿಂಗ್ ಅವಕಾಶ ಸಿಗಲಿಲ್ಲ. ಡಾಕ್ರೆಲ್ ಮೂರು ಬೌಂಡರಿಗಳನ್ನು ಬಾರಿಸಿದರು.

ಐದನೇ ವಿಕೆಟ್‌ಗೆ ಟಕ್ಕರ್ ಮತ್ತು ಗೆರೆತ್ ಡೆಲಾನಿ 101 ರನ್ ಸೇರಿಸಿ ತಂಡದ ಮೊತ್ತ ಏರಿಸಿದರು. ಡೆಲಾನಿ 30 ಎಸೆತಗಳಲ್ಲಿ 56 ರನ್ ಬಾರಿಸಿದರು. ಡಾಕ್ರೆಲ್ ಕೇವಲ 9 ಎಸೆತಗಳಲ್ಲಿ 35 ರನ್ ಸೇರಿಸಿದರು.

ಅಜೇಯ 94 ರನ್ ಬಾರಿಸಿದ ಲೋರ್ಕನ್ ಟಕ್ಕರ್

ಒಮಾನ್ ಪರ ಆರಂಭ ಆಟಗಾರ ಅಮೀರ್ ಕಲೀಮ್ ಬರೋಬ್ಬರಿ 50 ರನ್ (29ಎ, 4x5, 6x2) ಗಳಿಸಿದರೆ, ಹಮ್ಮದ್ ಮಿರ್ಜಾ 46 ರನ್ (37ಎ, 4x6, 6x1) ಗಳಿಸಿದರು. ಮೂರನೇ ವಿಕೆಟ್‌ಗೆ ಇವರು 74 ರನ್ ಸೇರಿಸಿದ್ದು ಸೋಲಿನಲ್ಲೂ ಗಮನ ಸೆಳೆಯಿತು. ಎಡಗೈ ವೇಗಿ ಜೋಶುವಾ ಲಿಟ್ಲ್ 16 ರನ್ನಿಗೆ 3 ವಿಕೆಟ್ ಪಡೆದರೆ, ಮ್ಯಾಥ್ಯೂ ಹಂಫ್ರಿಸ್ ಮತ್ತು ಬ್ಯಾರಿ ಮೆಕಾರ್ಥಿ ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 235 (ಲೋರ್ಕನ್ ಟಕ್ಕರ್ 94, ಗೆರೆತ್ ಡೆಲಾನಿ 56, ಜಾರ್ಜ್ ಡಾಕ್ರೆಲ್ 35; ಶಕೀಲ್ ಅಹಮದ್ 33ಕ್ಕೆ3). ಒಮಾನ್: 18 ಓವರ್‌ಗಳಲ್ಲಿ 139 (ಅಮೀರ್ ಕಲೀಮ್ 50, ಹಮ್ಮದ್ ಮಿರ್ಜಾ 46; ಜೋಶುವಾ ಲಿಟ್ಲ್ 16ಕ್ಕೆ3, ಮ್ಯಾಥ್ಯೂ ಹಂಫ್ರಿಸ್ 27ಕ್ಕೆ2, ಬ್ಯಾರಿ ಮೆಕಾರ್ಥಿ 32ಕ್ಕೆ2).

ಪ್ರೊ ಲೀಗ್: ಭಾರತಕ್ಕೆ ಹ್ಯಾಟ್ರಿಕ್ ಸೋಲು

ರೂರ್ಕೆಲಾ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್‌ನ ರೂರ್ಕೆಲಾ ಲೆಗ್‌ನಲ್ಲಿ ಭಾರತ ಪುರುಷರ ಹಾಕಿ ತಂಡದ ನಿರಾಶಾದಾಯಕ ಪ್ರದರ್ಶನ ಮುಂದುವರಿದಿದೆ. ಶನಿವಾರ ನಡೆದ ಪಂದ್ಯದಲ್ಲಿ ಆತಿಥೇಯ ತಂಡವು 2-4 ಅಂತರದಿಂದ ಬೆಲ್ಜಿಯಂ ವಿರುದ್ಧ ಸೋಲು ಅನುಭವಿಸಿದೆ.

ಇಲ್ಲಿನ ಬಿರ್ಸಾ ಮುಂಡಾ ಹಾಕಿ ಕ್ರೀಡಾಂಗಣದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಬಳಗಕ್ಕೆ ಇದು ಹ್ಯಾಟ್ರಿಕ್ ಸೋಲು. ಇದಕ್ಕೂ ಮುನ್ನ ಬೆಲ್ಜಿಯಂ ವಿರುದ್ಧ 1–3ರಿಂದ; ಅರ್ಜೆಂಟೀನಾ ವಿರುದ್ಧ 0–8ರಿಂದ ಮುಗ್ಗರಿಸಿತ್ತು.

ಭಾರತ ತಂಡದ ಪರ ಆದಿತ್ಯ ಲಾಲೇಜ್ (24ನೇ ನಿಮಿಷ) ಮತ್ತು ನಾಯಕ ಹರ್ಮನ್‌ಪ್ರೀತ್ ಸಿಂಗ್ (37ನೇ ನಿ) ತಲಾ ಒಂದು ಗೋಲು ಗಳಿಸಿದರು. ಬೆಲ್ಜಿಯಂ ಪರ ಅಲೆಕ್ಸಾಂಡರ್ ಹೆಂಡ್ರಿಕ್ಸ್ (14ನೇ ಮತ್ತು 17ನೇ) ಎರಡು ಗೋಲು ಗಳಿಸಿ ಮಿಂಚಿದರು. ಹ್ಯೂಗೋ ಲಾಬೌಚೆರ್ (11ನೇ) ಮತ್ತು ಆರ್ಥರ್ ಡಿ ಸ್ಲೋವರ್ (15ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಭಾರತ ತಂಡವು ಭಾನುವಾರ ರೂರ್ಕೆಲಾ ಲೆಗ್‌ನ ಕೊನೆಯ ಪಂದ್ಯವನ್ನು ಅರ್ಜೆಂಟೀನಾ ವಿರುದ್ಧ ಆಡಲಿದೆ.

ಮರ್ಕರಂ ಅಜೇಯ ಅರ್ಧಶತಕ: ಯಾನ್ಸೆನ್ ಮಿಂಚು
ಸೂಪರ್ ಎಂಟರ ಘಟ್ಟಕ್ಕೆ ದಕ್ಷಿಣ ಆಫ್ರಿಕಾ

ಅಹಮದಾಬಾದ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ಬಹುನಿರೀಕ್ಷಿತ ಪಂದ್ಯದಲ್ಲಿ ನಾಯಕ ಏಡನ್ ಮರ್ಕರಂ ಅಜೇಯ 86 ರನ್ ಬಾರಿಸಿ ದಕ್ಷಿಣ ಆಫ್ರಿಕಾ ತಂಡವು ನ್ಯೂಜಿಲೆಂಡ್ ವಿರುದ್ಧ ಸುಲಭ ಗೆಲುವು ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇನ್ನೂ 17 ಎಸೆತಗಳಿರುವಂತೆ ಏಳು ವಿಕೆಟ್‌ಗಳಿಂದ ಗೆದ್ದ ಹರಿಣಗಳ ಪಡೆ ಸೂಪರ್ ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಿತು.

ಈ ಪಂದ್ಯಕ್ಕೆ ಮೊದಲು ಎರಡೂ ತಂಡಗಳು ಡಿ ಗುಂಪಿನಲ್ಲಿ ಅಜೇಯವಾಗಿದ್ದು, ಉತ್ತಮ ಪೈಪೋಟಿ ನಿರೀಕ್ಷಿಸಿ ಸುಮಾರು 30,000 ಪ್ರೇಕ್ಷಕರು ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಬಂದಿದ್ದರು. ವೇಗ ಮತ್ತು ಬೌನ್ಸ್‌ಗೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ನ್ಯೂಜಿಲೆಂಡ್ 7 ವಿಕೆಟ್‌ಗೆ 175 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು. ಕಳೆದ ಬಾರಿಯ ರನ್ನರ್ ಅಪ್ ದಕ್ಷಿಣ ಆಫ್ರಿಕಾ ತಂಡವು 17.1 ಓವರುಗಳಲ್ಲಿ 3 ವಿಕೆಟ್‌ಗೆ 178 ರನ್ ಬಾರಿಸಿ ಸತತ ಮೂರನೇ ಗೆಲುವನ್ನು ದಾಖಲಿಸಿ ಪ್ಲೇ ಆಫ್‌ಗೆ ಮುನ್ನಡೆಯಿತು.

ಮರ್ಕರಂ ಕೇವಲ 44 ಎಸೆತಗಳಲ್ಲಿ ಎಂಟು ಬೌಂಡರಿ, ನಾಲ್ಕು ಸಿಕ್ಸರ್‌ಗಳನ್ನು ಹೊಡೆದರು. ಉಳಿದವರ ಕಾಣಿಕೆ ಅಲ್ಪಮಾತ್ರ. ಮರ್ಕರಂ ಮೊದಲ ವಿಕೆಟ್‌ಗೆ ಕ್ವಿಂಟನ್ ಡಿ ಕಾಕ್ (20) ಜೊತೆ 4.4 ಓವರುಗಳಲ್ಲೇ 62 ರನ್ ಸೇರಿಸಿ ತಂಡಕ್ಕೆ ಬಿರುಸಿನ ಆರಂಭ ನೀಡಿದರು. ರಿಕೆಲ್ಟನ್ (21) ಜೊತೆ ಎರಡನೇ ವಿಕೆಟ್‌ಗೆ 40 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯತ್ತ ಮುನ್ನಡೆಸಿದರು. ಮುರಿಯದ ನಾಲ್ಕನೇ ವಿಕೆಟ್‌ಗೆ ಡೇವಿಡ್ ಮಿಲ್ಲರ್ (ಔಟಾಗದೇ 24, 17ಎಸೆತ) ಜೊತೆ 47 ರನ್ ಸೇರಿಸಿದರು.

ಇದಕ್ಕೆ ಮೊದಲು, ಟಿಮ್ ಸೀಫರ್ಟ್ (13) ಮತ್ತು ಫಿನ್ ಅಲೆನ್ (31, 17ಎ, 4x4, 6x2) ನ್ಯೂಜಿಲೆಂಡ್ ತಂಡಕ್ಕೆ ಮಗದೊಮ್ಮೆ ಉತ್ತಮ ಆರಂಭ ನೀಡಿದರು. ತಂಡ 3.2 ಓವರುಗಳಲ್ಲಿ 33 ರನ್ ಗಳಿಸುತ್ತಿದ್ದಂತೆ ಮಾರ್ಕೊ ಯಾನ್ಸನ್ (40ಕ್ಕೆ4) ಸೀಫರ್ಟ್ ವಿಕೆಟ್ ಪಡೆದು ಜೊತೆಯಾಟ ಮುರಿದರು. ಫಿನ್ ಅಲೆನ್ ಮತ್ತು ರಚಿನ್ ರವೀಂದ್ರ (13) ವಿಕೆಟ್‌ಗಳೂ ಯಾನ್ಸೆನ್ ಪಾಲಾದವು. ಸ್ಪಿನ್ನರ್ ಕೇಶವ್ ಮಹಾರಾಜ್ ಅವರು ಗ್ಲೆನ್ ಫಿಲಿಪ್ಸ್ (1) ವಿಕೆಟ್ ಪಡೆದರು. ಆಗ ಮೊತ್ತ 4 ವಿಕೆಟ್‌ಗೆ 64. ಈ ಹಂತದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಮಾರ್ಕ್ ಚಾಪ್‌ಮನ್ (48, 4x6, 6x2) ಮತ್ತು ಡೇರಿಲ್ ಮಿಚೆಲ್ (32, 24 ಎಸೆತ) ನಡುವಣ 74 ರನ್‌ಗಳ ಜೊತೆಯಾಟ ತಂಡಕ್ಕೆ ಚೇತರಿಕೆ ನೀಡಿತು. ಜೇಮ್ಸ್ ನೀಶಮ್ ಕೊನೆಯಲ್ಲಿ 15 ಎಸೆತಗಳಲ್ಲಿ 23 ರನ್ ಬಾಚಿ ಮೊತ್ತ 175 ತಲುಪಲು ನೆರವಾದರು.

ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ ಎಎಫ್‌ಪಿ ಚಿತ್ರ

ಸ್ಕೋರುಗಳು: ನ್ಯೂಜಿಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 175 (ಫಿನ್ ಅಲೆನ್ 31, ಚಾಪ್‌ಮನ್ 48, ಡೇರಿಲ್ ಮಿಚೆಲ್ 32, ಜೇಮ್ಸ್ ನೀಶಮ್ ಔಟಾಗದೇ 23; ಮಾರ್ಕೊ ಯಾನ್ಸೆನ್ 40ಕ್ಕೆ4); ದಕ್ಷಿಣ ಆಫ್ರಿಕಾ: 17.1 ಓವರುಗಳಲ್ಲಿ 3 ವಿಕೆಟ್‌ಗೆ 178 (ಏಡನ್ ಮರ್ಕರಂ ಔಟಾಗದೇ 86, ಡೇವಿಡ್ ಮಿಲ್ಲರ್ ಔಟಾಗದೇ 24) ಪಂದ್ಯದ ಆಟಗಾರ: ಮಾರ್ಕೊ ಯಾನ್ಸೆನ್

ರಶೀದ್ ಕೈಚಳಕ: ಬ್ಯಾಂಟನ್ ಅರ್ಧಶತಕ
ಇಂಗ್ಲೆಂಡ್‌ಗೆ ಮಣಿದ ಸ್ಕಾಟ್ಲೆಂಡ್: ಬ್ಯಾರಿಂಗ್ಟನ್ ಹೋರಾಟ

ಕೋಲ್ಕತ್ತ (ಪಿಟಿಐ): ಅನುಭವಿ ಲೆಗ್ ಸ್ಪಿನ್ನರ್ ಅದಿಲ್ ರಶೀದ್ ಅವರ ಕೈಚಳಕ ಮತ್ತು ಟಾಮ್ ಬ್ಯಾಂಟನ್ ಅವರ ಅಜೇಯ ಅರ್ಧಶತಕದ ಬಲದಿಂದ ಇಂಗ್ಲೆಂಡ್ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ ಐದು ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಇಂಗ್ಲೆಂಡ್ ತಂಡವು ರಶೀದ್ (36ಕ್ಕೆ 3) ಅವರ ಉತ್ತಮ ಬೌಲಿಂಗ್‌ನಿಂದ ಸ್ಕಾಟ್ಲೆಂಡ್ ತಂಡವನ್ನು 19.2 ಓವರ್‌ಗಳಲ್ಲಿ 152 ರನ್‌ಗಳಿಗೆ ಕಟ್ಟಿಹಾಕಿತು. ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಬ್ಯಾಂಟನ್ (ಔಟಾಗದೇ 63;41ಎ) ಅವರ ಬ್ಯಾಟಿಂಗ್ ನೆರವಿನಿಂದ ಇನ್ನೂ 10 ಎಸೆತಗಳು ಬಾಕಿ ಇರುವಂತೆ 5 ವಿಕೆಟ್‌ಗೆ 155 ರನ್ ಗಳಿಸಿ ಸಂಭ್ರಮಿಸಿತು.

ತನ್ನ ಎರಡನೇ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಆಘಾತಕಾರಿ ಸೋಲು ಅನುಭವಿಸಿದ್ದ ಆಂಗ್ಲರ ಪಡೆ ಗೆಲುವಿನ ಹಳಿಗೆ ಮರಳಿತು. ಇದರೊಂದಿಗೆ ಪ್ಲೇ ಆಫ್ ಕನಸನ್ನೂ ಜೀವಂತವಾಗಿರಿಸಿಕೊಂಡಿತು.

ಸ್ಕಾಟ್ಲೆಂಡ್ ತಂಡಕ್ಕೆ ವೇಗಿ ಜೋಫ್ರಾ ಆರ್ಚರ್ ಆರಂಭದಲ್ಲೇ ಪೆಟ್ಟು ನೀಡಿದರು. ತಂಡವು 18 ರನ್ ಗಳಿಸುವಷ್ಟರಲ್ಲಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಜಾರ್ಜ್ ಮುನ್ಸೆ (4) ಮತ್ತು ಬ್ರಾಂಡನ್ ಮೆಕ್‌ಮುಲ್ಲೆನ್ (0) ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ಆದರೆ, ಮೈಕೆಲ್ ಜೋನ್ಸ್ (33;20ಎ) ಮತ್ತು ನಾಯಕ ರಿಚಿ ಬ್ಯಾರಿಂಗ್ಟನ್ (49;32ಎ) ಅವರು ಮೂರನೇ ವಿಕೆಟ್‌ಗೆ 71 ರನ್ ಸೇರಿಸಿ ಕೊಂಚ ಪ್ರತಿರೋಧ ತೋರಿದರು. ಆಲಿವರ್ ಡೇವಿಡ್ಸನ್ (ಔಟಾಗದೇ 20) ತಂಡದ ಮೊತ್ತ 150 ದಾಟಿಸಲು ನೆರವಾದರು.

ಇಂಗ್ಲೆಂಡ್ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. ಫಿಲ್ ಸಾಲ್ಟ್ (2) ಮತ್ತು ಜೋಸ್ ಬಟ್ಲರ್ (3) ಅವರು ಕ್ರಮವಾಗಿ ಮೊದಲ ಮತ್ತು ಎರಡನೇ ಓವರಿನಲ್ಲಿ ವಿಕೆಟ್ ಒಪ್ಪಿಸಿದರು. ಜೇಕಬ್ ಬೆಥೆಲ್ (32;28) ಮತ್ತು ಬ್ಯಾಂಟನ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ಬೆಥೆಲ್ ನಿರ್ಗಮನದ ಬಳಿಕ ಬಂದ ನಾಯಕ ಹ್ಯಾರಿ ಬ್ರೂಕ್ (4) ನಿರಾಸೆ ಮೂಡಿಸಿದರು. ನಂತರದಲ್ಲಿ ಸ್ಯಾಮ್ ಕರನ್ (28;20ಎ) ಮತ್ತು ವಿಲ್ ಜ್ಯಾಕ್ಸ್ (ಔಟಾಗದೇ 16) ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಮೂರು ವಿಕೆಟ್ ಪಡೆದ ಆದಿಲ್ ರಶೀದ್ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 19.4 ಓವರ್‌ಗಳಲ್ಲಿ 152 (ಮೈಕೆಲ್ ಜೋನ್ಸ್ 33, ರಿಚಿ ಬ್ಯಾರಿಂಗ್ಟನ್ 49; ಅದಿಲ್ ರಶೀದ್ 36ಕ್ಕೆ 3, ಜೋಫ್ರಾ ಆರ್ಚರ್ 24ಕ್ಕೆ 2, ಲಿಯಾಮ್ ಡಾಸನ್ 34ಕ್ಕೆ 2). ಇಂಗ್ಲೆಂಡ್: 18.2 ಓವರ್‌ಗಳಲ್ಲಿ 5 ವಿಕೆಟ್‌ಗೆ 155 (ಟಾಮ್ ಬ್ಯಾಂಟನ್ ಔಟಾಗದೇ 63, ಜೇಕಬ್ ಬೆಥೆಲ್ 32). ಪಂದ್ಯದ ಆಟಗಾರ: ಟಾಮ್ ಬ್ಯಾಂಟನ್

ಸ್ವಾಭಿಮಾನ ಕಲಿಸಿದ ಸಂತ

• ಶಿರಗಾನಹಳ್ಳಿ ಶಾಂತನಾಯ್ಕ್

ಸಂತ ಸೇವಾಲಾಲ ಜಯಂತಿ

ಸಂಸ್ಕೃತಿಗಳು ವಿಕೃತಗೊಳ್ಳುತ್ತಿರುವ ಕಾಲದಲ್ಲಿ ನಾವಿದ್ದೇವೆ. ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟು ಜನಸಮುದಾಯಗಳು ತಮ್ಮ ಮೂಲನೆಲೆ, ಸಂಸ್ಕೃತಿ, ಪರಂಪರೆ, ಆಚರಣೆ, ವಿಧಿವಿಧಾನಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿವೆ. ಅಲೆಮಾರಿಗಳಾಗಿದ್ದ ಬಂಜಾರರು ಕಾಡಿನ ಜೀವನವನ್ನು ಬಿಟ್ಟು ತಾಂಡಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಆದರೆ, ಅವರು ಎಷ್ಟೇ ನಿಯತ್ತಿನಿಂದ ದುಡಿದು ಉಣ್ಣುವ ಪ್ರಯತ್ನ ಮಾಡಿದರೂ ಅವರಿಗೆ ಅಂಟಿರುವ ಸಾಮಾಜಿಕ ಬಹಿಷ್ಕಾರದಂತಹ ಪೀಡೆ ದೂರವಾಗಿಲ್ಲ. ಅವರನ್ನು ಸಮಾಜ ಇಂದಿಗೂ ನಿರ್ಲಕ್ಷ್ಯದಿಂದ ನೋಡುತ್ತಿದೆ. ಇಂತಹ ಸಮುದಾಯಕ್ಕೆ ದಿಕ್ಕು ತೋರಿಸಿದ ಮಹಾನ್ ಸಂತ ಸೇವಾಲಾಲರು.

ಸಮುದಾಯದ ಸಾಂಸ್ಕೃತಿಕ ನಾಯಕ ಸಂತ ಸೇವಾಲಾಲರು, ಭೀಮ ನಾಯ್ಕ್ ಮತ್ತು ಧರ್ಮಿಣಿ ಯಾಡಿ ದಂಪತಿಯ ಮೂರನೇ ಮಗ. ಕರ್ನಾಟಕದ ಸೂರಗೊಂಡನಕೊಪ್ಪದಲ್ಲಿ ರಾಮವತ್ ಎನ್ನುವ ಬುಕ್ಯಾ ಬೆಡಗದಲ್ಲಿ 1739ರ ಫೆಬ್ರುವರಿ 15ರಂದು ಜನಿಸಿದರು. ಶಿರಸಿಯ ಮಾರಿಕಾಂಬ ದೇವಿಯ ಕೃಪಾಕಟಾಕ್ಷಕ್ಕೆ ಒಳಗಾಗಿ ಸಂತನಾದರು. ಬಾಲ್ಯದಿಂದಲೂ ಸಂತ ಪರಂಪರೆಯ ಕಡೆಗೆ ಒಲವನ್ನು ಹೊಂದಿದ ಸೇವಾಲಾಲರು, ತಮ್ಮ ಪವಾಡಗಳಿಂದ ಸೇವಾ 'ಭಾಯ' (ಅಣ್ಣ) ಆದರು. ಹೆಂಗಸರು, ಗಂಡಸರು 'ಭಾಯ' ಎನ್ನುವುದರಿಂದಾಗಿ ಆಜನ್ಮ ಬ್ರಹ್ಮಚಾರಿಯಾಗಿಯೇ ಉಳಿದು ಬಿಟ್ಟರು. ಸಮುದಾಯದವರು ಅಂದು ಬದುಕಿದ್ದ ಸ್ಥಿತಿಯನ್ನು ಕಂಡು ಅವರ ಬದುಕಿಗೆ ಒತ್ತಾಸೆಯಾಗಿ ನಿಂತು ದುಡಿಮೆ, ಜ್ಞಾನಾರ್ಜನೆ, ಸ್ವಾಭಿಮಾನ, ಸ್ವಾವಲಂಬನೆ ಕುರಿತು ಅರಿವು ಮೂಡಿಸಿದ್ದರು.

ಸೇವಾಲಾಲರು ಲದೇಣಿಯದಲ್ಲಿ ಭಾಗವಹಿಸುತ್ತಾ ದಕ್ಷಿಣ ಭಾರತದ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದ ಪ್ರತಿಯೊಂದು ತಾಂಡಗಳ ಮನೆ ಮಾತಾಗಿದ್ದಾರೆ. ಅವರ ತ್ಯಾಗದ ಫಲದಿಂದಾಗಿಯೇ ಬಂಜಾರ ಸಮಾಜ ಸಾಮಾಜಿಕ ಬದುಕನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಅವರ ಆದರ್ಶಗಳನ್ನು ಮರೆತು ತಾವೇ ಸರ್ವಶ್ರೇಷ್ಠರು ಎಂದು ಮೆರೆಯುತ್ತಿರುವ ಅಜ್ಞಾನಿ ವಿದ್ಯಾವಂತರಿಗೆ ಸಮಾಜವನ್ನು ಕಟ್ಟಿ ಬೆಳೆಸಲು ಸಾಧ್ಯವಾಗುತ್ತಿಲ್ಲ.

ಆದಿವಾಸಿ ಬುಡಕಟ್ಟು ಸಮಾಜವಾಗಿದ್ದರೂ ಈ ಸಮುದಾಯದವರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಮೀಸಲಾತಿ ಪಡೆದು ಸಾಕಷ್ಟು ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ. ಸಮುದಾಯದಲ್ಲಿ ಭೂರಹಿತರು, ವಲಸೆ ಕಾರ್ಮಿಕರು, ಅವಿದ್ಯಾವಂತರು, ಬಡತನದ ರೇಖೆಗಿಂತ ಕೆಳಗಿರುವವರು ಇವತ್ತಿಗೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಮೂರು ಸಾವಿರಕ್ಕೂ ಹೆಚ್ಚಿರುವ ತಾಂಡಗಳಲ್ಲಿ ನೆಲಸಿರುವ ಈ ಜನಾಂಗ, ಮುಂಬೈನಲ್ಲಿ ಕಟ್ಟಡ ಕಾರ್ಮಿಕರಾಗಿದ್ದಾರೆ.

ಮಂಗಳೂರು, ಬೆಂಗಳೂರು, ಕಾಸರಗೋಡು ಹಾಗೂ ಗೋವಾದ ಕಾಫಿ ತೋಟಗಳಲ್ಲಿ ಸಮುದಾಯದವರು ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಸಮುದಾಯದ ಸ್ತ್ರೀಯರ ಮೇಲೆ ಪ್ರಬಲ ವರ್ಗದವರಿಂದ ದಬ್ಬಾಳಿಕೆ, ಲೈಂಗಿಕ ದೌರ್ಜನ್ಯ ಘಟನೆಗಳು ನಡೆಯುತ್ತಿದ್ದರೂ ಎಲ್ಲೂ ಪ್ರಕರಣಗಳು ದಾಖಲಾಗದಿರುವುದು ದುರದೃಷ್ಟಕರ. 'ಯಾರ ಕೈಯಲ್ಲಿ ದೊಣ್ಣೆ ಇದೆಯೋ ಅವರದ್ದೇ ಎಮ್ಮೆ' ಎನ್ನುವ ಕಾಲದಲ್ಲಿ ಸಳೋಯಿ (ಭೋಟಿ) ಹಡಕಗಳಿಗೆ (ಎಲುಬು) ಹೊಡೆದಾಡಿಕೊಂಡು ತಾಂಡಗಳನ್ನೇ ಬದಲಾವಣೆ ಮಾಡುವ ಮನಃಸ್ಥಿತಿಯಿಂದ ನಾವು ಹೊರಬರಬೇಕು. ಚಿಂತನಶೀಲ ಮನಸ್ಥಿತಿಯನ್ನು ಹೊಂದುವುದರೊಂದಿಗೆ ಒಮ್ಮತದ ಬದುಕನ್ನು ಕಟ್ಟಿಕೊಂಡಾಗ ಮಾತ್ರ ಸ್ವಾಭಿಮಾನ ಕಲಿಸಿದ ಸಂತ ಸೇವಾಲಾಲರ ಕನಸನ್ನು ಈಡೇರಿಸಿದಂತಾಗುತ್ತದೆ.

ಲೇಖಕ: ಪ್ರಾಧ್ಯಾಪಕ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

ಶಿವ: ಎಲ್ಲೆಲ್ಲೂ ಇರುವ ಒಳಿತು

• ಎಸ್. ಸೂರ್ಯಪ್ರಕಾಶ ಪಂಡಿತ್

ಮಹಾ ಶಿವರಾತ್ರಿ

ಇಡಿಯ ಸೃಷ್ಟಿ ಶಿವನ ದೇಹವೇ ಆಗಿದೆ ಎಂಬುದು ನಮ್ಮ ಸಂಸ್ಕೃತಿಯ ಒಕ್ಕಣೆ. ಈ ಭಾವವನ್ನು ಮಹಾಕವಿ ಕಾಳಿದಾಸ ತುಂಬ ಸೊಗಸಾಗಿ ಎತ್ತಿಹಿಡಿದಿದ್ದಾನೆ; 'ಸೃಷ್ಟಿಕರ್ತನ ಪ್ರಥಮ ಸೃಷ್ಟಿಯಾದ ನೀರು, ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವ ಅಗ್ನಿ, ಯಜಮಾನ, ಕಾಲವಿಭಜನೆಗೆ ಕಾರಣರಾದ ಸೂರ್ಯ–ಚಂದ್ರರು, ಎಲ್ಲ ಕಡೆಗೂ ವ್ಯಾಪಿಸಿರುವ ಆಕಾಶ, ಎಲ್ಲ ವಿಧದ ಬೀಜಶಕ್ತಿಗೂ ಆಧಾರವಾಗಿರುವ ಭೂಮಿ, ಎಲ್ಲ ಪ್ರಾಣಿಗಳಿಗೂ ಪ್ರಾಣವನ್ನು ಒದಗಿಸುವ ವಾಯು – ಈ ಎಂಟು ವಿವರಗಳು ಶಿವನ ಪ್ರತ್ಯಕ್ಷ ಶರೀರಗಳು' ಎಂದು ಅವನು ಒಕ್ಕಣಿಸಿದ್ದಾನೆ. ವಿಶ್ವದ ಒಂದೊಂದು ಕಣದ ಚಲನೆಯೂ, ಅದು ದಿಟದಲ್ಲಿ ಶಿವನ ಕುಣಿತ ಎಂಬುದು ಇಲ್ಲಿಯ ಭಾವ. ತ್ರಿಮೂರ್ತಿಗಳಲ್ಲಿ ಒಬ್ಬನಾಗಿರುವವನು ಶಿವ. ಆದರೆ ಶಿವನ ಈ ವರ್ಣನೆಯ ಸ್ವಾರಸ್ಯವನ್ನು ಅರ್ಥ-ಮಾಡಿಕೊಂಡಾಗ ಆಗ ಸ್ಪಷ್ಟವಾಗುತ್ತದೆ, ತ್ರಿಮೂರ್ತಿಗಳು ಮೂವರು ಪ್ರತ್ಯೇಕ ದೇವತೆಗಳಲ್ಲ, ಒಂದೇ ತತ್ತ್ವದ ಮೂರು ಆಯಾಮಗಳ ಸಂಕೇತಗಳಷ್ಟೆ.

ಇಂಥ ಶಿವನನ್ನು ಆರಾಧಿಸಲು, ಅರ್ಚಿಸಲು ಇರುವ ಪರ್ವದಿನವೇ ಮಹಾಶಿವರಾತ್ರಿ. ನಮ್ಮ ಪರಂಪರೆಯಲ್ಲಿ ಅತ್ಯಂತ ಮುಖ್ಯವಾಗಿ ಕಾಣಿಸಿರುವ ಮಹಾದಿನಗಳಲ್ಲಿ ಶಿವರಾತ್ರಿ ಕೂಡ ಒಂದು; ಸಾವಿರಾರು ವರ್ಷಗಳಿಂದಲೂ ದೇಶದ ಉದ್ದಗಲಕ್ಕೂ ಆಸ್ತಿಕರು ಅತ್ಯಂತ ಶ್ರದ್ಧಾಭಕ್ತಿಗಳಿಂದ ಈ ವ್ರತವನ್ನು ಆಚರಿಸುತ್ತಬಂದಿದ್ದಾರೆ.

ಶಿವನಿಗಿರುವ ಹೆಸರುಗಳು ಹಲವು; ಒಂದೊಂದು ಹೆಸರು ಶಿವತತ್ತ್ವದ ಒಂದೊಂದು ಆಯಾಮವನ್ನು ಎತ್ತಿಹಿಡಿಯುತ್ತದೆ. 'ನಮೋ ಭವಾಯ ಚ ನಮಃ ಶರ್ವಾಯ ಚ ಪಶುಪತಯೇ ಚ ನಮೋ ನೀಲಗ್ರೀವಾಯ ಚ ಶಿತಿಕಂಠಾಯ ಚ ನಮಃ ಕಪರ್ದಿನೇ ಚ ವ್ಯುಪ್ತಕೇಶಾಯ ಚ ನಮಃ ಸಹಸ್ರಾಕ್ಷಾಯ ಚ ಶತಧನ್ವನೇ ಚ' – ವೇದದಲ್ಲಿರುವ ರುದ್ರಾಧ್ಯಾಯದ ಈ ಒಂದು ಸೊಲ್ಲನ್ನು ಮನನ ಮಾಡಿದರೂ ಸಾಕು, ಶಿವತತ್ತ್ವದ ಮಹತ್ವ ಸ್ಪಷ್ಟವಾಗುತ್ತದೆ. ಅವನು 'ಭವ', ಎಂದರೆ ಇಡಿಯ ಸೃಷ್ಟಿಗೆ ಕಾರಣನು. ಅವನು 'ಸಹಸ್ರಾಕ್ಷ', ಸಾವಿರ ಸಾವಿರ ಕಣ್ಣುಗಳುಳ್ಳವನು; ಎಂದರೆ ಎಲ್ಲವನ್ನೂ ನೋಡುವವನು, ಅರ್ಥಾತ್, ಎಲ್ಲವನ್ನೂ ತಿಳಿದವನು. ಸೃಷ್ಟಿಯ ಪ್ರತಿ ವಿವರವೂ ಅವನೇ; ಪ್ರತಿ ವಿವರವೂ ಅವನ ತಿಳಿವಳಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಿದ್ದರೂ ಅವನು 'ವ್ಯುಪ್ತಕೇಶ', ಎಂದರೆ ಬೋಳಾದ ತಲೆಯನ್ನುಳ್ಳವನು; ಅರ್ಥಾತ್, ಅವನು ಸಂನ್ಯಾಸಿ, ಪರಮವೈರಾಗ್ಯಮೂರ್ತಿ. ಇಡಿಯ ಸೃಷ್ಟಿ; ಭೂತ, ವರ್ತಮಾನ, ಭವಿಷ್ಯಗಳು ಅವನ ಅಧೀನದಲ್ಲಿದ್ದರೂ ಶಿವನು ಮಾತ್ರ ತ್ಯಾಗಮೂರ್ತಿಯಾಗಿದ್ದಾನೆ, ಎಲ್ಲವನ್ನೂ ತೊರೆದು ತಪಸ್ಸಿನಲ್ಲಿ ನೆಲೆನಿಂತಿದ್ದಾನೆ. ತ್ಯಾಗ–ಭೋಗಗಳ ಸಾಮರಸ್ಯಕ್ಕೆ ಸುಂದರ ನಿರೂಪಣೆಯೇ ಶಿವತತ್ತ್ವ.

ಶಿವನನ್ನು ಆರಾಧಿಸಲು ಪರಂಪರೆ ಆರಿಸಿಕೊಂಡಿರುವುದು ರಾತ್ರಿಯ ಸಮಯವನ್ನು; ಇದಕ್ಕೂ ಹಲವು ತಾತ್ತ್ವಿಕ ಆಯಾಮಗಳೇ ಮೂಲ. ರಾತ್ರಿ ಎಂದರೆ ಕತ್ತಲು; ಕತ್ತಲು ಎಂದರೆ ಭಯ, ಎಲ್ಲ ರೀತಿಯ ಭಯ. ಎಲ್ಲ ಭಯಗಳಿಂದಲೂ ನಮ್ಮನ್ನು ಕಾಪಾಡುವವನೇ ಶಿವ. ಅವನನ್ನು ಪ್ರಳಯಕಾರಕ ಎಂದೂ ಹೇಳಲಾಗುತ್ತದೆ. ಪ್ರಳಯ ಎಂಬುದು ವಿಶ್ರಾಂತಸ್ಥಾನವೂ ಹೌದು, ಸೃಷ್ಟಿಯ ಆರಂಭಬಿಂದುವೂ ಹೌದು. ಎಂದರೆ ನಮ್ಮ ಅಂತ್ಯದಲ್ಲೂ ಆರಂಭದಲ್ಲೂ ನಮ್ಮ ರಕ್ಷಿಸಿ, ಉದ್ಧರಿಸುವವನು ಅವನು. ಇಂಥ ಮಹಾಕಾಲನನ್ನು, ಮಹಾದೇವನನ್ನು ಪೂಜಿಸುವಾಗ ನಮ್ಮ ಭಾವ–ಬುದ್ಧಿಗಳ ಎಚ್ಚರ ಅತ್ಯಂತ ಆವಶ್ಯಕ. ಇದರ ಸೂಚಕವೇ ಶಿವರಾತ್ರಿಯ ಜಾಗರಣೆ.

ಶಿವನ ಅರ್ಚನೆಯೂ ಸುಲಭವಾದುದೇ ಹೌದು. ಬಿಲ್ವಪತ್ರೆಯಷ್ಟೆ ಸಾಕು; ಅಥವಾ ತುಂಬೆಹೂವಷ್ಟೆ ಸಾಕು. ಅವನು ಅಭಿಷೇಕಪ್ರಿಯ. ಒಂದು ವೇಳೆ ಇವನ್ನು ಕೂಡ ಅರ್ಪಿಸಲು ಸಾಧ್ಯವಾಗದಿದ್ದಾಗ ಭಕ್ತಿ–ಶ್ರದ್ಧೆಗಳಿಂದ ಅವನನ್ನು ಸ್ಮರಿಸಿದರೂ ಸಾಕು. ಅವನು ಒಲಿಯುವ. ನಾವು ಆಡುವ ಮಾತು, ಮಾಡುವ ಕೆಲಸಗಳೆಲ್ಲದರಲ್ಲೂ ಅವನೇ ಇದ್ದಾನೆ; ಅದನ್ನು ನಾವು ಕಾಣಬೇಕಷ್ಟೆ. 'ಶಿವ' ಎಂದರೆ ಮಂಗಳಕಾರಕ; ಎಲ್ಲೆಲ್ಲಿ ಒಳ್ಳೆಯದು ಇದೆಯೋ, ಅಲ್ಲೆಲ್ಲ ಶಿವನಿದ್ದಾನೆ ಎಂದೇ ಹೌದು.

ಅಗಸ್ತ್ಯನ ಮುಡಿಯಿಂದ
ಚಾರಣಿಗರಿಗೆ ಸವಾಲು ಒಡ್ಡುವಂತಿರುವ ಅಗಸ್ತ್ಯಕೂಡಂ ಬೆಟ್ಟದ ಚಾರಣ ಅನುಭವ.
13

ಮೈಸೂರಿನ ಹೊರವಲಯದಲ್ಲಿ ಸಾಗುವ ವರುಣಾ ನಾಲೆಯ ನೋಟ

ಚಿತ್ರಗಳು: ಅನೂಪ್ ರಾಘ .ಟಿ.

ಇಂತಿ ನಿಮ್ಮ ಪ್ರೀತಿಯ ವರುಣಾ

• ಕೆ.ನರಸಿಂಹಮೂರ್ತಿ

ವರುಣಾ ನಾಲೆ ಕನ್ನಂಬಾಡಿ ಕಟ್ಟೆಯ ಕೂಸು. ನಾಲೆ ಬೇಕು ಎನ್ನುವುದು ಮೈಸೂರು ಜಿಲ್ಲೆ ಜನರ ಆಗ್ರಹ. ಮಾಡಬೇಡಿ ಎನ್ನುವುದು ಮಂಡ್ಯ ಜಿಲ್ಲೆಯ ಜನರ ಒತ್ತಾಯ. ಬೇಕು–ಬೇಡಗಳ ಹೋರಾಟದ ನಡುವೆಯೇ ವರುಣಾ ನಾಲೆ ನಿರ್ಮಾಣವಾಯಿತು. ಆದರೆ, ಈಗಿನ ವಾಸ್ತವ ಸ್ಥಿತಿ ಏನಿದೆ ಎನ್ನುವುದನ್ನು ಸ್ವತಃ ವರುಣಾ ನಾಲೆಯೇ ಇಲ್ಲಿ ನಿವೇದಿಸಿಕೊಂಡಿದೆ!

ನಮಸ್ಕಾರ,

ನನ್ನ ಹೆಸರು ವರುಣಾ ನಾಲೆ. ಸರ್ಕಾರಿ ದಾಖಲೆಗಳಲ್ಲಿ 'ಡಿ.ಡಿ.ಅರಸು ನಾಲೆ'. ಗೊತ್ತಾಗಲಿಲ್ಲವೇ? 'ಡಿ.ದೇವರಾಜ ಅರಸು ನಾಲೆ'. ನಾನು ಕನ್ನಂಬಾಡಿ ಕಟ್ಟೆಯ ಕೂಸು.

70ರ ದಶಕದಲ್ಲಿ ಮೈಸೂರು ಜಿಲ್ಲೆಯ ಜನ ನನಗೋಸ್ಕರ ದೊಡ್ಡ ಹೋರಾಟವನ್ನೇ ಮಾಡಿದ್ದರು. ನನ್ನ ವಿರುದ್ಧ ಪಕ್ಕದ ಜಿಲ್ಲೆ ಮಂಡ್ಯದ ಜನ ಹೆಚ್ಚು ಕಡಿಮೆ ಒಂದು ದಶಕ ಪ್ರತಿಭಟಿಸಿದ್ದರು. ವಿಪರ್ಯಾಸ ನೋಡಿ, ನನ್ನ ಪರ–ವಿರುದ್ಧ ಇದ್ದವರೆಲ್ಲರೂ ಮೈಸೂರು ಪ್ರಾಂತ್ಯದವರೇ ಆಗಿದ್ದರು.

'ಜೀವ ನದಿ ಕಾವೇರಿ ನಾಡು' ಎಂದೇ ಗುರುತಿಸಲ್ಪಡುವ ಈ ಪ್ರಾಂತ್ಯದ ಜನರ ನಡುವೆ ದ್ವೇಷ, ವೈಮನಸ್ಯಕ್ಕೂ ಕಾರಣವಾಗಿದ್ದೆ. 'ನಮ್ಮ ಕನ್ನಂಬಾಡಿ ನೀರನ್ನು ಮೈಸೂರಿಗೆ ಕೊಟ್ಟರೆ ನಮ್ಮ ಕೃಷಿಯ ಗತಿ ಏನು? ಸಕ್ಕರೆ ಕಾರ್ಖಾನೆಗಳು, ಸಾವಿರಾರು ಆಲೆಮನೆಗಳನ್ನು ಮುಚ್ಚಬೇಕೇನು' ಎಂಬುದು ಮಂಡ್ಯದವರ ಪ್ರಶ್ನೆಯಾಗಿತ್ತು.

'ಹುರಳಿ ಬಿಟ್ಟರೆ ಬೇರೇನೂ ಬೆಳೆಯಲಾರೆವು. ಕೆರೆ, ಕಟ್ಟೆ, ಬಾವಿಗಳಲ್ಲಿ ನೀರಿಲ್ಲ. ಕುಡಿಯುವ ನೀರಿಗೂ ಪರದಾಡುತ್ತಾ, ಬರಗಾಲವನ್ನೇ ಹಾಸಿಕೊಂಡು, ಹೊದ್ದು, ಹೊಟ್ಟೆ ತುಂಬ ಉಣ್ಣಲಾಗದ ಸ್ಥಿತಿಯಲ್ಲಿದ್ದೇವೆ. ನಮಗೂ ಕೃಷಿಗೋಸ್ಕರ ಸ್ವಲ್ಪ ನೀರು ಬೇಕು' ಎಂಬುದು ಮೈಸೂರಿನ ರೈತರ ಆಗ್ರಹವಾಗಿತ್ತು.

ಈ 'ಕೃಷಿ ಕಾರಣ'ವು 'ಹೋರಾಟದ ರಾಜಕಾರಣ'ಕ್ಕೂ ದಾರಿ ಮಾಡಿದ್ದು ಎರಡೂ ಜಿಲ್ಲೆಯ ಜನರ ಮನದಲ್ಲಿ ಇನ್ನೂ ಹಾಗೇ ಇದೆ. ಅಂದಿನ ಮುಖ್ಯಮಂತ್ರಿ, ನೀರಾವರಿ ಖಾತೆಯ ಹೊಣೆಯನ್ನೂ ಹೊತ್ತಿದ್ದ ಡಿ.ದೇವರಾಜ ಅರಸು ಮೈಸೂರು ರೈತರಿಗೆ ಒತ್ತಾಸೆಯಾಗಿ ನಿಂತಿದ್ದರು. ಆದರೆ ಅವರ ಸಂಪುಟದಲ್ಲಿ ಕೈಗಾರಿಕಾ ಸಚಿವರಾಗಿದ್ದ, ಮಂಡ್ಯದ ಎಸ್.ಎಂ.ಕೃಷ್ಣ ಅವರೇ, 'ವರುಣಾ, ಮಂಡ್ಯ ಜಿಲ್ಲೆ ಜನರ ಮರಣ' ಎಂದು ಹೇಳಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಅದು ಸರ್ಕಾರದ ಒಳಗೇ ಎದ್ದಿದ್ದ ವಿರೋಧ. ಹೊರಗೆ, 'ವರುಣಾ ನಾಲಾ ವಿರೋಧಿ ಹೋರಾಟ ಸಮಿತಿ' ರಚನೆಯಾಗಿತ್ತು. 'ಬೆಂಗಳೂರು ಚಲೋ', ಉಪವಾಸ ಸತ್ಯಾಗ್ರಹ, ಬಂದ್, ಪಿಕೆಟಿಂಗ್ ನಡೆದಿತ್ತು. ರೈತರು ಪಟಾಪಟಿ ಚಡ್ಡಿ, ಬನಿಯನ್ ಧರಿಸಿ ಚಳವಳಿ ನಡೆಸಿದ್ದರು. ಅದು 'ಚಡ್ಡಿ ಚಳವಳಿ' ಎಂದೇ ಪ್ರಸಿದ್ಧ. ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಬೆಂಗಳೂರಿಗೆ ಬಂದಾಗ ಅವರ ಮುಂದೆ ಕಪ್ಪು ಬಾವುಟವನ್ನೂ ಪ್ರದರ್ಶಿಸಿದ್ದರು.

ಇದೇ ವೇಳೆಯಲ್ಲಿ, ನನಗೋಸ್ಕರ ಮೈಸೂರು ಜಿಲ್ಲೆಯಾದ್ಯಂತ ಪ್ರತಿಭಟನೆಗಳು, ಸಭೆಗಳು ತಾರಕಕ್ಕೇರಿದ್ದವು. 'ನಾಲೆ ಬೇಕೇ ಬೇಕು' ಎಂಬ ಆಗ್ರಹ ಮೇರೆ ಮೀರಿತ್ತು. 'ನಾಲೆ ಬೇಕೆ?' ಎಂಬ ಬಗ್ಗೆ ವರದಿ ತಯಾರಿಸಲೆಂದೇ ಎರಡು ಸಮಿತಿಗಳು ರಚನೆಯಾಗಿದ್ದವು. ನನಗೋಸ್ಕರ ಎರಡು ಸರ್ಕಾರಗಳು ಬಂದು ಹೋದವು. ಎರಡೂ ಜಿಲ್ಲೆಗಳಿಗೆ ನಾನು 'ಅಸ್ಮಿತೆ' ಮತ್ತು 'ಅಸ್ತಿತ್ವ'ದ ಪ್ರಶ್ನೆಯಾಗಿದ್ದೆ.

ಕನ್ನಂಬಾಡಿ ಅಣೆಕಟ್ಟೆಯ ಬಲದಂಡೆಯಲ್ಲಿ ಒಂದು ತೂಬು ಇಡಬಹುದು ಎಂದು ಬಿ.ಸುಬ್ಬರಾವ್ ಎಂಬ ಎಂಜಿನಿಯರ್ ನೀಡಿದ್ದ ವರದಿಯ ಅಂಶವೇ ಮೈಸೂರಿನ ರೈತರಲ್ಲಿ ಆಸೆಯನ್ನು ಮೂಡಿಸಿತ್ತು. ಅದು, ನನ್ನನ್ನು ನಿರ್ಮಿಸಿ ಅಣೆಕಟ್ಟೆಯಿಂದ ನೀರು ಪಡೆದು ಬದುಕು ಕಟ್ಟಿಕೊಳ್ಳುವ ಆಸೆ. ಆಸೆಯೇ ಹೋರಾಟಕ್ಕೂ, ನೀರಾವರಿ ಒಪ್ಪಂದದ ಮೂಲಕ ಉತ್ತಮ ಬದುಕಿಗೂ ಮೂಲವಾಯಿತು. ಅರಸು ಒತ್ತಾಸೆ ಇದ್ದ ಕಾರಣಕ್ಕೇ ಅವರ ಹೆಸರನ್ನೇ ನನಗಿಟ್ಟರು. ಆಮೇಲೆ ವರುಣಾ ಎಂಬ ಹೆಸರೂ ಬಂತು.

ವರುಣಾ ನಾಲೆಯನ್ನು ವಿರೋಧಿಸಿ ಮಂಡ್ಯದ ರೈತರು ಚಡ್ಡಿ–ಬನಿಯನ್ ಧರಿಸಿ ಪ್ರತಿಭಟಿಸಿದ್ದರು.

ಮೊದಲಿಗೆ ನಿರ್ಮಾಣವಾದ ಅಣೆಕಟ್ಟೆಯ ಎಡದಂಡೆ ನಾಲೆ (ವಿಶ್ವೇಶ್ವರಯ್ಯ ನಾಲೆ)ಯಿಂದ ಮಂಡ್ಯದ ರೈತರಿಗೆ ನೀರು ಹರಿದರೆ, ಬಲದಂಡೆಯಲ್ಲಿ ತೋಡಿದ ನನ್ನ ಮೂಲಕ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮೈಸೂರು ಜಿಲ್ಲೆಯ ಮೈಸೂರು, ತಿ.ನರಸೀಪುರ, ನಂಜನಗೂಡು ಮತ್ತು ಎಚ್.ಡಿ.ಕೋಟೆ ತಾಲ್ಲೂಕಿನ ನೂರಾರು ಹಳ್ಳಿಗಳ ಅಂದಾಜು 80 ಸಾವಿರ ಎಕರೆ ಜಮೀನಿಗೆ ಪ್ರತಿ ವರ್ಷ ಆರು ತಿಂಗಳು ನೀರು ಹರಿಯುತ್ತದೆ. ಇದು ಅರೆ ನೀರಾವರಿ ಬೆಳೆಯಲಷ್ಟೇ. ಇನ್ನಾರು ತಿಂಗಳು ಎಂಜಿನಿಯರ್‌ಗಳಿಗೆ ನನ್ನ ನಿರ್ವಹಣೆಯ ಕೆಲಸ.

127 ಕಿ.ಮೀ ಇರುವ ನನ್ನುದ್ದಕ್ಕೂ 55 ವಿತರಣಾ ನಾಲೆಗಳು ಹಾಗೂ 74 ನೇರ ತೂಬುಗಳಿವೆ. ಎಂಟು ಮೇಲ್ಗಾಲುವೆ (ಅಕ್ವಾಡಕ್ಟ್)ಗಳಿವೆ. ನನಗೆ ಒತ್ತಾಸೆಯಾಗಿದ್ದ ಅರಸು ಅವರ ಬಳಿಕ, ಸಿದ್ದರಾಮಯ್ಯ ಹಣಕಾಸು ಸಚಿವರಾಗಿದ್ದಾಗ ನೀಡಿದ ಅನುದಾನ, ಆದ್ಯತೆಯೂ ದೊಡ್ಡದು. ಅಂದಹಾಗೆ, ನನ್ನಿಂದ ಹೆಚ್ಚು ಪ್ರಯೋಜನ ಪಡೆಯುವ ರೈತರು ಯಾರು ಗೊತ್ತಾ? ಸಿದ್ದರಾಮಯ್ಯ ಈಗ ಮುಖ್ಯಮಂತ್ರಿಯಾಗಿ ಪ್ರತಿನಿಧಿಸುತ್ತಿರುವ ವರುಣಾ ಕ್ಷೇತ್ರದವರು.

ಅನ್ಯಕ್ರಾಂತ, ನಾನು ಚಿಂತಾಕ್ರಾಂತೆ...

'ಬರಗಾಲದೆದೆಗೆ ಗುರಿಯಿಟ್ಟು ಕಟ್ಟೆಯ ಕೋವಿ ಕಟ್ಟಿದಂತಿದೆ...' –'ಕನ್ನಂಬಾಡಿ ಕಟ್ಟೆ' ಹೆಸರಿನ ತಮ್ಮ ಪದ್ಯದಲ್ಲಿ ಕೆಆರ್‌ಎಸ್ ಕುರಿತು ಕುವೆಂಪು ಹೀಗೆ ಉದ್ಗರಿಸಿದ್ದರು.

ಮಳೆಯಾಶ್ರಿತ ಕೃಷಿಯನ್ನೇ ನೆಚ್ಚಿಕೊಂಡು, ಬರಗಾಲವೇ ಬದುಕಾಗಿದ್ದ ಮೈಸೂರು ಭಾಗದ ಜನರ ಅನ್ನದ ತಟ್ಟೆಯಲ್ಲಿ ನೀರಾವರಿ ಕೃಷಿಯಿಂದ ದೊರಕಬಹುದಾದ ಸಮಾಧಾನ, ಸಂತೃಪ್ತಿಯನ್ನು ಕಟ್ಟೆಯು ಸಾಧ್ಯವಿದ್ದಷ್ಟೂ ತುಂಬಿಸಿದೆ. ರೈತರೇ ಹೇಳುವಂತೆ, ಇದುವರೆಗೆ ಮೂರು ತಲೆಮಾರುಗಳಿಗೆ ನೀರು ಹರಿದುಹೋಗಿದೆ.

ಅರೆ ನೀರಾವರಿಯಾದರೂ ರೈತರು ಕಬ್ಬು, ಭತ್ತ, ತಾಜಾ ತರಕಾರಿಗಳು ಸೇರಿ ತಮಗೆ ಬೇಕಾದದ್ದನ್ನು ಬೆಳೆದು ಸ್ಥಿತಿವಂತರಾಗಿದ್ದಾರೆ. ಈಗಲೂ ಬೆಳೆಯುತ್ತಿದ್ದಾರೆ. ಕಟ್ಟೆಯ ನೀರನ್ನು ಹರಿಸಿದ ನಾನು ನೆಪ ಮಾತ್ರ. ಆದರೆ ಈಗ ನನ್ನ ಕಷ್ಟ ಕೇಳುವವರಿಲ್ಲ ಎಂಬುದೇ ನನ್ನ ಸಂಕಟ.

ಕನ್ನಂಬಾಡಿ ಕಟ್ಟೆಗೆ ಅಂಟಿಕೊಂಡು ಇರುವ ನಾನು, ಮೊದಲು ಪ್ರವೇಶಿಸುವುದು ಶ್ರೀರಂಗಪಟ್ಟಣ ತಾಲ್ಲೂಕಿನ ಹೊಂಗಳ್ಳಿಯನ್ನು. ಎಚ್.ಡಿ.ಕೋಟೆ ತಾಲ್ಲೂಕಿನ ವಡವಿನಕಟ್ಟೆ ನನ್ನ ಕೊನೆಯ ನಿಲ್ದಾಣ. ಇಲ್ಲಿವರೆಗೆ 80 ಸಾವಿರ ಎಕರೆ ಜಮೀನಿಗೆ ನೀರು ಉಣಿಸುವ ಗುರಿ ನನ್ನದು. ಆದರೀಗ ಅದರ ಹತ್ತು ಸಾವಿರ ಎಕರೆಗಿಂತಲೂ ಹೆಚ್ಚು ಕೃಷಿ ಭೂಮಿ ಅನ್ಯಕ್ರಾಂತವಾಗಿದೆ.

ಅರ್ಥವಾಗಲಿಲ್ಲವೇ, 'ಡಿಸಿ ಕನ್ವರ್ಷನ್ ಆಗಿದೆ' ಎಂದರೆ ನಿಮಗೆ ಸುಲಭವಾಗಿ ಅರ್ಥವಾಗಿಬಿಡುತ್ತದೆ. ನನ್ನುದ್ದಕ್ಕೂ ಅಲ್ಲಲ್ಲಿ ಕೃಷಿಭೂಮಿ ಅನ್ಯ ಉದ್ದೇಶಕ್ಕೆ ಪರಿವರ್ತನೆಯಾಗಿದೆ. ಅಂದರೆ, ಕೃಷಿಗೆ ಆದ್ಯತೆ ಇಲ್ಲ. ನಾನು ಇದ್ದರೂ ನೀರು ಪ್ರಯೋಜನಕ್ಕಿಲ್ಲ. ಹಳ್ಳಿಗಳಲ್ಲಿ ನನ್ನ ನೀರೇ ರಾಜ. ಹಾದುಹೋಗಿರುವ ನಗರ, ಪಟ್ಟಣಗಳಲ್ಲಿ ಮಾತ್ರ ಅನಾಥ. ಇದು ಸದ್ಯದ ಸ್ಥಿತಿಗತಿ.

ಒಮ್ಮೆ ಇಲ್ಲಿಗೆ ಬನ್ನಿ...

ಬೆಂಗಳೂರು–ಮೈಸೂರು ಹೆದ್ದಾರಿ ಕೊನೆಗೊಂಡು ಮೈಸೂರಿಗೆ ಪ್ರವೇಶಿಸುವ ಜಂಕ್ಷನ್‌ನಲ್ಲಿ ನನ್ನನ್ನು ಮೇಲ್ಭಾಗದಿಂದ ಹರಿಯುವಂತೆ (ಅಕ್ವಾಡಕ್ಟ್) ಮಾಡಿದ್ದಾರೆ. ಇದು ನಿಮ್ಮ ಗಮನ ಸೆಳೆಯುತ್ತಲೇ ಇರುವುದನ್ನು ನೀವೂ ಬಲ್ಲಿರಿ. ಅದು ಕೆಲವು ಕ್ಷಣಗಳ ಸುಂದರ, ಮೋಹಕ ನೋಟ.

ಆದರೆ, ಸ್ವಲ್ಪ ಬಿಡುವು ಮಾಡಿಕೊಂಡು ನನ್ನ ಕೆಳಗೆ ಸುಮ್ಮನೆ ನಡೆದುಕೊಂಡು ಹೋದರೆ ನಿಮಗೆ ಕಟು ವಾಸ್ತವದ ಅರಿವಾಗುತ್ತದೆ; ಹೋರಾಟ ಮಾಡಿ ಪಡೆದ ನನ್ನ ನೀರನ್ನು ಬಳಸಿ ಕೃಷಿ ನಡೆಯಬೇಕಾದ ಕಡೆಯೆಲ್ಲ ಬಡಾವಣೆಗಳು ಹರಡಿಕೊಂಡಿವೆ. ಅಲ್ಲಿಗೆ ನನ್ನ ಪಕ್ಕದ ಜಾಗವೇ ಸಂಪರ್ಕ ರಸ್ತೆ. ಅದರೊಂದಿಗೆ ಹೋಟೆಲು, ಗ್ಯಾರೇಜು, ಕಾರ್ಖಾನೆ ಮತ್ತಿತರೆ ಕಟ್ಟಡಗಳು ತಲೆ ಎತ್ತಿವೆ. ಕೆಲವು ಶಾಶ್ವತ, ಕೆಲವು ತಾತ್ಕಾಲಿಕ ರಚನೆಯ ಹೆಸರಿನಲ್ಲಿ ದಶಕಗಳಿಂದಲೂ ಇವೆ. ನನ್ನನ್ನೂ ಸೇರಿಸಿ ಖಾತೆ ಮಾಡಿದ ಬಗ್ಗೆ ಪಂಚಾಯಿತಿ ಸಿಬ್ಬಂದಿಗಳ ವಿರುದ್ಧವೇ ದಾಖಲಾದ ಕ್ರಿಮಿನಲ್ ಪ್ರಕರಣಗಳೇನೂ ಕಡಿಮೆ ಇಲ್ಲ.

ಕಸ ಸುರಿಯಲು, ಅದನ್ನು ಸುಡಲೂ ನಾನೇ ಬೇಕು. ನನ್ನನ್ನು ಒತ್ತುವರಿ ಮಾಡಿಕೊಳ್ಳುವ ಮೂಲಕ ಕೃಷಿಯೇ ಇಲ್ಲಿ ಒತ್ತುವರಿಯಾಗಿದೆ. ರೈತರೇ ಕೃಷಿ ಬಿಟ್ಟು ಜಮೀನು ಮಾರಿದ್ದಾರೆ, ಮಾರುತ್ತಿದ್ದಾರೆ. ಹೆದ್ದಾರಿ ಬದಿ ಜಮೀನು ಎಂದರೆ ಏನು ಕಡಿಮೆಯೇ? ಚಿನ್ನಕ್ಕಿಂತ ದುಬಾರಿ. ಈ ನಡುವೆಯೂ ಮೇಲ್ಗಾಲುವೆಯ ಇನ್ನೊಂದು ಬದಿ, ಹರಿದ ಬಟ್ಟೆಗೆ ತೇಪೆ ಹಾಕಿದಂತೆ, ಅಲ್ಲಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತಿರುವುದನ್ನೂ ಕಾಣಬಹುದು.

ನಾನು ಮೊದಲಿಗೆ ಹರಿದು ಬರುವ ಕೆಆರ್‌ಎಸ್ ರಸ್ತೆಯ ಬೆಳಗೊಳದ ಬಳಿಗೆ ಬನ್ನಿ. ಅಲ್ಲಿ ನನಗೇ ಅಂಟಿಕೊಂಡೇ ರಸ್ತೆಗಳಾಗಿವೆ. ಬಡಾವಣೆಗಳಾಗಿವೆ. ಚರಂಡಿ ನೀರು ನೇರ ನನ್ನ ಒಡಲಲ್ಲೇ ಹರಿಯುತ್ತಿರುವುದು ಕಾಣುತ್ತದೆ.

'ಏಕೆ ಹೀಗೆ ಮಾಡಿದಿರಿ' ಎಂದು ರೈತರನ್ನು ಕೇಳಿ. 'ಕೃಷಿಯನ್ನು ನೆಚ್ಚಿಕೊಂಡು ಬದುಕಲು ಸಾಧ್ಯವಿಲ್ಲ' ಎಂಬ ಹತಾಶೆಯ ನುಡಿಗಳು ಕೇಳಿ ಬರುತ್ತವೆ. ಜೊತೆಗೆ, 'ಒಂದು ಎಕರೆಗೆ ಒಂದು ಕೋಟಿ ರುಪಾಯಿ ಬೆಲೆ ಇದೆ. ಜೀವನಪೂರ್ತಿ ಜಮೀನಿನಲ್ಲಿ ದುಡಿದರೂ ಅಷ್ಟು ಸಂಪಾದಿಸಲು ಆಗುವುದಿಲ್ಲ' ಎಂಬ ಪ್ರತಿಪಾದನೆಯೂ ಬರುತ್ತದೆ.

13ನೇ ಪುಟಕ್ಕೆ...



ರೈಲು ಹಳಿಗಳ ಮೇಲೆ ವರುಣಾ ನಾಲೆ ಹೀಗೆ ಸಾಗುತ್ತದೆ...

ಲಾಕ್‌ಡೌನ್ ನೆನಪಿಸುವ ರಸ್ತೆ...

ಯಲ್ಲಾಪುರದ ಹೊರ ಮಂಗಳವಾರ!

• ಬೀರಣ್ಣ ನಾಯಕ ಮೊಗಟಾ

ಬೆಳಗಿನ ಐದು ಗಂಟೆ. ಸಾಮಾನ್ಯವಾಗಿ ಮಾರುಕಟ್ಟೆಯ ಗದ್ದಲಕ್ಕೆ, ಬಸ್ ನಿಲ್ದಾಣದ ಕೂಗು-ಗಲಾಟೆಗೆ ಎಚ್ಚರವಾಗುವ ಯಲ್ಲಾಪುರ ಪಟ್ಟಣ ಆ ದಿನ ಬೇರೆ ರಾಗ ಹಿಡಿದಿರುತ್ತದೆ. ಮನೆಮನೆಗಳಲ್ಲಿ ಸಡಗರ, ಸಂಭ್ರಮ. ಹೆಂಗಸರು ಗಡಿಬಿಡಿಯಲ್ಲೇ ಒಲೆಗಳನ್ನು ಹಚ್ಚುತ್ತಾರೆ. ಕುರುಕು ತಿಂಡಿಗಳ ಸುವಾಸನೆ, ಬುತ್ತಿ ಕಟ್ಟುವ ಗದ್ದಲ-ಇವೆಲ್ಲವೂ ಹಬ್ಬದ ಮುನ್ಸೂಚನೆ ನೀಡುತ್ತವೆ.

ಆದರೆ ಬೆಳಿಗ್ಗೆ ಹತ್ತು ಗಂಟೆ ಹೊತ್ತಿಗೆ ಅದೇ ಪಟ್ಟಣ ಲಾಕ್‌ಡೌನ್ ಆದಂತೆ ನಿಶ್ಯಬ್ದವಾಗಿಬಿಡುತ್ತದೆ. ಅಂಗಡಿ ಮುಂಗಟ್ಟುಗಳು ಮುಚ್ಚಿ, ಮನೆಗಳಿಗೆ ಬೀಗ ಹಾಕಿ, ರಸ್ತೆಗಳಲ್ಲಿ ನರಪಿಳ್ಳೆಯೂ ಕಾಣದ ದೃಶ್ಯ ಹೊಸಬರಿಗೆ ಆಶ್ಚರ್ಯವನ್ನು ಉಂಟು ಮಾಡಬಹುದು.

ಇದು ಯಲ್ಲಾಪುರದ ಅಪರೂಪದ ಸಂಪ್ರದಾಯ–'ಹೊರ ಮಂಗಳವಾರ'.

ಜಾತ್ರೆಗೆ ನಾಂದಿ

ಉತ್ತರ ಕನ್ನಡ ಜಿಲ್ಲೆಯ ಈ ಪಟ್ಟಣದಲ್ಲಿ ಗ್ರಾಮದೇವಿಯ ಜಾತ್ರೆ ಪ್ರತಿ ಮೂರು ವರ್ಷಕ್ಕೊಮ್ಮೆ ಒಂಬತ್ತು ದಿನ ಅದ್ದೂರಿಯಾಗಿ ನಡೆಯುತ್ತದೆ. ಈ ವರ್ಷ ಫೆಬ್ರುವರಿ 11ರಿಂದ ಜಾತ್ರೆ ಆರಂಭವಾಗಿದೆ. ಜಾತ್ರೆಗೆ ಮುನ್ನ ಬರುವ ಮೂರು ಅಥವಾ ಐದು ಮಂಗಳವಾರಗಳನ್ನು 'ಹೊರ ಮಂಗಳವಾರ' ಎಂದು ಆಚರಿಸುವುದು ಶತಮಾನಗಳ ಹಿಂದಿನಿಂದ ಬಂದಿರುವ ನಂಬಿಕೆ.

ಗ್ರಾಮದೇವಿಯ ಅನುಗ್ರಹದಿಂದಲೇ ಊರು ಉಳಿದಿದೆ ಎಂಬ ಭಕ್ತಿಭಾವ ಇಲ್ಲಿ ಗಾಢವಾಗಿದೆ. ಜಾತ್ರೆಗೆ ನಾಂದಿ ಹಾಡುವಂತೆ ಈ ಮಂಗಳವಾರಗಳು ಆಚರಣೆಗೊಳ್ಳುತ್ತವೆ. ಇದು ಕೇವಲ ಒಂದು ಧಾರ್ಮಿಕ ವಿಧಿಯಲ್ಲ; ಒಂದು ಸಮೂಹ ಅನುಭವ.

ಮನೆ ಬಿಡುವ ಕ್ಷಣ...

ಆ ದಿನ ಬೆಳಗ್ಗೆ ಹತ್ತು ಗಂಟೆಯೊಳಗೆ ಪಟ್ಟಣದ ಎಲ್ಲರೂ ಮನೆಗೆ ಬೀಗ ಹಾಕಿ ಹೊರಡಬೇಕು ಎಂಬ ಅಲಿಖಿತ ನಿಯಮ. ಹೊರಡುವ ಮುನ್ನ ಮನೆಯ ಹಿರಿಯ ಮುತ್ತೈದೆ ದೇವರಿಗೆ ಪೂಜೆ ಸಲ್ಲಿಸಿ, ದೇವರ ಬಟ್ಟಲಲ್ಲಿ ಅರಿಸಿನ-ಕುಂಕುಮ ಇಟ್ಟು, 'ಅಮ್ಮ ಮನೆಗೆ ಬನ್ನಿ' ಎಂಬ ಮನದ ಮಾತು ಹೇಳಿ ಹೊರಡುತ್ತಾರೆ.

ಭಕ್ತರ ನಂಬಿಕೆಯಂತೆ, ಆ ದಿನ ದೇವಿ ಮನೆಗೆ ಬಂದು ಆ ಅರಿಸಿನ-ಕುಂಕುಮವನ್ನು ಸ್ವೀಕರಿಸುತ್ತಾಳೆ. ದೇವಿಯ ಗಣಗಳು ಊರನ್ನು ಸುತ್ತಾಡುತ್ತವೆ ಎಂಬ ಮತ್ತೊಂದು ಶ್ರದ್ಧೆಯೂ ಇದೆ. ದೇವಿಯ ಸಂಚಾರಕ್ಕೆ ಮನೆಗಳು ತೆರವಾಗಿರಬೇಕು ಎಂಬ ಭಾವನೆ ಈ ಆಚರಣೆಯ ಹಿಂದಿನ ನಂಬಿಕೆ.

ಎಲ್ಲಿಗೆ ಹೋಗುತ್ತಾರೆ?

'ಹೊರ ಮಂಗಳವಾರ' ಎಂದರೆ ಶೋಕದ ದಿನವಲ್ಲ, ಅದು ಸಂತಸದ ದಿನ. ಕುಟುಂಬಗಳು ಸಮೀಪದ ಉದ್ಯಾನಗಳು, ಜಲಪಾತಗಳು, ಕಾನುಗಳು, ತಾಣಗಳು, ಹೊರ ಊರುಗಳ ಕಡೆಗೆ ತೆರಳುತ್ತಾರೆ. ಅಲ್ಲಿ ಚಾಪೆ, ಜಮಖಾನ ಹಾಸುತ್ತಾರೆ. ಮನೆಯಿಂದ ತೆಗೆದುಕೊಂಡು ಹೋಗಿರುವ ತಿಂಡಿ-ತಿನಿಸು, ಊಟದ ಡಬ್ಬಿಗಳು, ಬುತ್ತಿ, ಗಂಟುಗಳನ್ನು ಇಡುತ್ತಾರೆ. ಜೊತೆಗೆ ಕುಡಿಯುವ ನೀರಿನ ಕ್ಯಾನ್‌ಗಳೂ ಇರುತ್ತವೆ.

ಮಕ್ಕಳಿಗೆ ಆಟವಾಡುವ ಸಂಭ್ರಮ. ಕಣ್ಣಾಮುಚ್ಚಾಲೆ, ಓಡಾಟ. ಹಿರಿಯರಿಗೆ ಮನೆಮನೆ ಕತೆಗಳನ್ನು ಹಂಚಿಕೊಳ್ಳುವ ಅವಕಾಶ. ಯುವ ಸಮೂಹಕ್ಕೆ ರೀಲ್ಸ್ ಮಾಡುವ ಉತ್ಸಾಹ. ಗಂಡಸರಿಗೆ ಲೋಕ-ರಾಜಕೀಯದಿಂದ ಹಿಡಿದು ಕೃಷಿ-ವ್ಯಾಪಾರದವರೆಗಿನ ಚರ್ಚೆಗಳು ಜಾರಿಯಲ್ಲಿರುತ್ತವೆ.

ಅಲ್ಲಿ ಎಲ್ಲರೂ ತಮ್ಮ ತಮ್ಮ ಮನೆಗಳಿಂದ ತಂದ ಬುತ್ತಿಗಳನ್ನು ಹಂಚಿಕೊಂಡು ತಿನ್ನುತ್ತಾರೆ. ಆ ಕ್ಷಣದಲ್ಲಿ ತಾರತಮ್ಯವೆಲ್ಲ ಕರಗಿಹೋಗುತ್ತವೆ. ಉಳಿಯುವುದು ಕೇವಲ ಒಟ್ಟುಗೂಡುವ ಸಂತೋಷ. ಇವೆಲ್ಲವೂ ಒಂದು ಧಾರ್ಮಿಕ ಪಿಕ್‌ನಿಕ್‌ನ ನೆನಪನ್ನು ಮೂಡಿಸುತ್ತವೆ. ಬದುಕಿನ ಜಂಜಾಟದಿಂದ ಒಂದು ದಿನದ ವಿರಾಮ–ಮೊಬೈಲ್ ಸಿಗ್ನಲ್‌ಗಿಂತ ಸಂಬಂಧಗಳ ಸಿಗ್ನಲ್ ಬಲವಾಗುವ ದಿನ.

ವಿನಾಯಿತಿಯೂ ಉಂಟು

ಮನೆಯಲ್ಲಿ ರೋಗಿಗಳು ಇದ್ದರೆ ವಿನಾಯಿತಿ ಇದೆ. ಅವರನ್ನು ಹೊರಗೆ ಕರೆತರಲು ಸಾಧ್ಯವಾಗದ ಕಾರಣ ಮನೆಯಲ್ಲೇ ಬಿಡುತ್ತಾರೆ. ಅವರನ್ನು ನೋಡಿಕೊಳ್ಳಲು ಒಬ್ಬರನ್ನು ಇರಿಸಲಾಗುತ್ತದೆ. ಇಂತಹ ಮನೆಗಳಲ್ಲೂ ಮುಂದಿನ ಬಾಗಿಲಿಗೆ ಬೀಗ ಹಾಕಲಾಗುತ್ತದೆ; ಮತ್ತೊಂದು ಬಾಗಿಲು ತೆರೆದಿರುತ್ತದೆ. ಆಚಾರಕ್ಕೂ, ಅವಶ್ಯಕತೆಗೂ ಮಧ್ಯದ ಸಮತೋಲನ.

ಸರ್ಕಾರಿ ಕಚೇರಿಗಳು ತೆರೆದಿರುತ್ತವೆ. ಆದರೆ ಸಿಬ್ಬಂದಿ ಹಾಜರಾತಿ ಕಡಿಮೆ. ಜನಸಂಚಾರವೇ ಇಲ್ಲದ ಕಾರಣ, ಆ ಕಚೇರಿಗಳೂ ಮೌನಕ್ಕೆ ಸಾಕ್ಷಿಯಾಗುತ್ತವೆ.

ಹಬ್ಬದ ಸೊಗಡು

ಇಡೀ ಪಟ್ಟಣ ಬೀಗ ಹಾಕಿದಂತೆ ಕಂಡರೂ, ಅದರೊಳಗೆ ಭಕ್ತಿಯ ನಾಡಿ ಸ್ಪಂದಿಸುತ್ತಲೇ ಇರುತ್ತದೆ. ಸಂಜೆ ಐದು ಗಂಟೆಯ ನಂತರ ಎಲ್ಲರೂ ಮನೆಗೆ ಮರಳುತ್ತಾರೆ. ಮನೆ ಬಾಗಿಲು ತೆರೆದು ಒಳಬರುವಾಗ ಮೂಡುವ ಆಧ್ಯಾತ್ಮಿಕ ನೆಮ್ಮದಿ–'ದೇವಿ ನಮ್ಮ ಮನೆಗೆ ಬಂದಿದ್ದಾಳೆ' ಎಂಬ ನಂಬಿಕೆಯ ಖುಷಿ.

ಈ ಸಂಪ್ರದಾಯ ಒಂದು ಕಡೆ ಭಕ್ತಿಯ ಅಭಿವ್ಯಕ್ತಿ; ಮತ್ತೊಂದು ಕಡೆ ಸಾಮಾಜಿಕ ಏಕತೆಯ ಸಂಕೇತ. ಒಂದೇ ನಿಯಮ ಪಾಲಿಸುವುದು, ಸಮೂಹವಾಗಿ ಹೊರಡುವುದು, ಸಂಜೆ ಮರಳಿ ಮನೆ ಸೇರಿ ಅನುಭವ ಹಂಚಿಕೊಳ್ಳುವುದು ಇಡೀ ಪಟ್ಟಣವನ್ನು ಒಂದು ಕುಟುಂಬವನ್ನಾಗಿಸುವ ಶಕ್ತಿ.

'ಹೊರ ಮಂಗಳವಾರ' ಯಲ್ಲಾಪುರದ ಆತ್ಮ. ಇದು ಕೇವಲ ಮನೆಗೆ ಬೀಗ ಹಾಕುವ ದಿನವಲ್ಲ; ಹೃದಯದ ಬಾಗಿಲು ತೆರೆಯುವ ದಿನ. ಜಾತ್ರೆಯ ಘೋಷಕ್ಕೆ ಮುಂಚೆ, ಭಕ್ತಿಯ ಮಂಗಳವಾದ್ಯ ಮೊಳಗಿಸುವ ಸಂಪ್ರದಾಯ. ಸಂಪ್ರದಾಯಗಳು ಕೇವಲ ದೇವರಿಗಾಗಿ ಅಲ್ಲ; ಜನರನ್ನು ಒಟ್ಟುಗೂಡಿಸಲು. ಯಲ್ಲಾಪುರದ 'ಹೊರ ಮಂಗಳವಾರ' ಅದಕ್ಕೆ ಜೀವಂತ ಉದಾಹರಣೆ. ❖

ಹಳ್ಳಿಯಿಂದ ದಿಲ್ಲಿವರೆಗೆ...

• ನಾಗರಾಜ್ ಎಂ.

ಈ ಹುಡುಗನಿಗೆ ಕಷ್ಟ, ನೋವು, ಅವಮಾನ, ಹಸಿವು ಚೆನ್ನಾಗಿ ಗೊತ್ತು. ಆದರೆ, ಇವುಗಳನ್ನೆಲ್ಲ ಪಕ್ಕಕ್ಕೆ ಸರಿಸಿದ. ಕನಸುಗಳ ಹಾದಿಯಲ್ಲಿ ನಡೆದ. ಹಳ್ಳಿಯ ಈತ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ ಕರ್ನಾಟಕದ ಶೈಕ್ಷಣಿಕ ವ್ಯವಸ್ಥೆ ಮತ್ತು ಯುವಜನರ ಹಕ್ಕುಗಳ ಬಗ್ಗೆ ಧ್ವನಿ ಎತ್ತಿದ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸತ್ಯನಾರಾಯಣ ಕ್ಯಾಂಪ್ ನನ್ನ ಊರು. ಇಲ್ಲಿ ಬೆಳಿಗ್ಗೆ ಎದ್ದಾಗ ಮೊದಲು ಕೇಳುವುದು ಕೋಳಿಗಳ ಕೂಗು ಅಲ್ಲ, ಬದುಕಿನ ಕಠಿಣ ಸತ್ಯ. ಮಣ್ಣಿನೊಳಗೆ ಹುದುಗಿರುವ ನೋವು, ಹಸಿವು, ಅವಮಾನ ಮತ್ತು ಹೋರಾಟದ ಗುರುತುಗಳು ಕಾಣುತ್ತವೆ. ನಾನು ಬೆಳೆದ ಹಳ್ಳಿಯಲ್ಲಿ ಕನಸು ಕಾಣುವುದೇ ಅಪರಾಧವಾಗಿತ್ತು.

ನಮ್ಮವರನ್ನು ಜಾತಿ ಕಾರಣಕ್ಕಾಗಿ ಕೀಳಾಗಿ ನೋಡುವ ಕಣ್ಣುಗಳು ಎಲ್ಲೆಡೆ. 'ಬೆಳಿಗ್ಗೆ ಇವರ ಮುಖ ನೋಡಿದರೆ ಅಪಶಕುನ' ಎನ್ನುವ ಮಾತು ನನ್ನ ಕಿವಿಯಲ್ಲಿ ಅಲ್ಲ, ಎದೆಯಲ್ಲಿ ಹಾಗೇ ಉಳಿದಿದೆ. ನಮ್ಮ ಮನೆ ದೊಡ್ಡದಾಗಿರಲಿಲ್ಲ. ಮಣ್ಣಿನ ಗೋಡೆಗಳು, ಒರಗಿದ ಮೇಲ್ಛಾವಣಿ. ಆದರೆ ನನ್ನ ಕನಸುಗಳು ಮಾತ್ರ ಆಕಾಶಕ್ಕಿಂತ ದೊಡ್ಡದಾಗಿದ್ದವು. ಬಡತನ ನನ್ನ ಬದುಕಿನ ನೆರಳಾಗಿದ್ದರೂ, ಅದು ನನ್ನ ಕನಸಿಗೆ ಎಂದಿಗೂ ಬಂಧನವಾಗಲಿಲ್ಲ.

ನಾನು ಹಳ್ಳಿಯ ಸರ್ಕಾರಿ ಶಾಲೆಯ ವಿದ್ಯಾರ್ಥಿ. ಹಸಿವಿನಿಂದ ಹೊಟ್ಟೆ ಕರಗಿದ ದಿನಗಳೂ ಇದ್ದವು. ಆದರೆ ಪುಸ್ತಕದ ಪುಟಗಳು ನನ್ನ ಮುಂದೆ ಹೊಸಲೋಕವನ್ನೇ ತೆರೆದವು. ಕೆಲವೊಮ್ಮೆ ಶಾಲೆಯಿಂದ ಮನೆಗೆ ಬಂದಾಗ ಪಾಠ ಓದಲು ಬೆಳಕು ಇರಲಿಲ್ಲ. ಆದರೆ ನನ್ನ ಮನಸ್ಸಿನೊಳಗೆ ಬೆಳಕು ಹೊತ್ತಿಸಿದ್ದು ಅಮ್ಮನ ಮಾತುಗಳು.

'ಓದು ಮಾತ್ರ ನಮ್ಮನ್ನು ಮೇಲಕ್ಕೆತ್ತುತ್ತದೆ ಮಗಾ' ಈ ಮಾತು ನನ್ನ ಜೀವನದ ಮಂತ್ರವಾಯಿತು.

ಮನೆಯಲ್ಲಿ ಓದಿಗೆ ಬೇಕಾದಷ್ಟು ಹಣ ಇರಲಿಲ್ಲ. ಪ್ರತಿದಿನವೂ ಒಂದು ಪ್ರಶ್ನೆ ಕಾಡುತ್ತಿತ್ತು–ಓದು ಮುಂದುವರಿಸಬೇಕೋ? ಅಥವಾ ಕೆಲಸಕ್ಕೆ ಹೋಗಬೇಕೋ? ಅದೇ ದ್ವಂದ್ವದ ನಡುವೆ ಒಂದು ದಿನ ದೊಡ್ಡ ತೀರ್ಮಾನ ತೆಗೆದುಕೊಂಡೆ. ಓದಿಗಾಗಿ, ಕನಸಿಗಾಗಿ, ಅಸ್ತಿತ್ವಕ್ಕಾಗಿ ಮನೆ ಬಿಟ್ಟು ಹೊರಗೆ ಹೋಗುವುದು.

ಅಮ್ಮನ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದವು. 'ಹಿಂತಿರುಗಿ ಬಾ ಮಗಾ' ಎಂದಾಗ, ನಾನು ಉತ್ತರಿಸಲಿಲ್ಲ. ಮಾತಾಡಿದರೆ ಕಣ್ಣೀರು ನನ್ನ ಧೈರ್ಯವನ್ನು ಕರಗಿಸಿ ಬಿಡುತ್ತಿದ್ದವು.

ಕ್ಯಾಂಪ್ ಟು ಬೆಂಗಳೂರು...

ಬೆಂಗಳೂರು ನನಗೆ ಕನಸಿನ ನಗರವಾಗಿರಲಿಲ್ಲ, ಬದುಕನ್ನು ಪರೀಕ್ಷಿಸುವ ನಗರವಾಗಿತ್ತು. ಚಿಕ್ಕ ಕೋಣೆ, ಅಪರಿಚಿತ ಮುಖಗಳು, ಗೊತ್ತಿಲ್ಲದ ಭಾಷೆ. ಹಗಲು ಕಾಲೇಜು, ರಾತ್ರಿ ಸಣ್ಣ ಕೆಲಸ. ಕೆಲ ದಿನ ಊಟ ತಪ್ಪಿತು, ಕೆಲ ರಾತ್ರಿ ನೆಲದ ಮೇಲೆ ನಿದ್ದೆ.

'ನಾನು ಸೋತರೆ, ನನ್ನ ಕನಸುಗಳೂ ಸೋಲುತ್ತವೆ' ಎಂಬ ಭಯವೇ ನನ್ನನ್ನು ಪ್ರತಿದಿನ ಮುಂದಕ್ಕೆ ತಳ್ಳುತ್ತಿತ್ತು. ಬೆಂಗಳೂರಿನ ಯಡಿಯೂರು ಸರ್ಕಾರಿ ಕಾಲೇಜಿನಲ್ಲಿ ಡಿಗ್ರಿಯ ಮೊದಲನೇ ವರ್ಷದ ವಿದ್ಯಾರ್ಥಿಯಾಗಿದ್ದಾಗ ಬದುಕು ಇನ್ನಷ್ಟು ಕಠಿಣವಾಯಿತು. ಆ ಸಮಯದಲ್ಲೇ ಕಾಲೇಜಿಗೆ 'ಸಂವಾದ' ಎಂಬ ಸಂಸ್ಥೆಯು ಮಾಹಿತಿ ನೀಡುವ ಕಾರ್ಯಕ್ರಮಕ್ಕಾಗಿ ಬಂದಿತು. ಒಂದು ಗಂಟೆಯ ಕಾರ್ಯಕ್ರಮವದು. ಆದರೆ ಅದು ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿತು.

'ಸಂವಾದ' ನನ್ನೊಳಗಿನ ನೋವನ್ನು ಕೇಳಿತು. ನನ್ನ ಮಾತಿಗೆ ಕಿಮ್ಮತ್ತು ನೀಡಿತು. 'ನಿನ್ನ ಕಥೆ ನಿನ್ನದಷ್ಟೇ ಅಲ್ಲ, ಇದು ಸಾವಿರಾರು ಹಳ್ಳಿ ಮಕ್ಕಳ ಕಥೆ' ಎಂದು ಅವರು ಹೇಳಿದರು. ಆ ದಿನದಿಂದ ನಾನು ಒಂಟಿಯಲ್ಲ ಅನಿಸಿತು.

12ನೇ ಪುಟಕ್ಕೆ...

ನಾಗರಾಜ್ ಎಂ.
ಚಿತ್ರ: ಪ್ರಶಾಂತ್ ಎಚ್.ಜಿ.

ರಾಂಪುರ ಬದನೆಕಾಯಿ ಬೆಳೆ

ಹಲವು ವಿಶೇಷಗಳ ರಾಂಪುರ...

ಆಂಧ್ರ ಪ್ರದೇಶ ಗಡಿಯಲ್ಲಿರುವ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ರಾಂಪುರ ಹಲವು ವಿಶೇಷಗಳಿಂದ ಗಮನ ಸೆಳೆಯುತ್ತದೆ. ಹೆಸರಿನ ಹಿಂದಿರುವ 'ಎಲೆ' ಈಗ ಮಾನ್ಯತೆ ಕಳೆದುಕೊಂಡಿದೆ. 'ಬದನೆಕಾಯಿ ರಾಂಪುರ'ವೂ ಮಾಯವಾಗಿದೆ. ಬಳಿಕ ಈ ಊರು 'ಈರುಳ್ಳಿ ರಾಂಪುರ' ಎಂದು ಹೆಸರಾಯಿತು. ಈಗ ಬರೀ ರಾಂಪುರವಾಗಿ ಉಳಿದಿದೆ!

• ಎಂ.ಎನ್.ಯೋಗೇಶ್

'ಒಂಚೂರು ಒಗರು–ಸ್ವಲ್ಪ ಸಿಹಿ. ರಾಂಪುರ ವೀಳ್ಯದೆಲೆಯನ್ನು ಬಾಯಿಗಿಟ್ಟರೆ ಮನಸ್ಸು ಹಗುರಾಗುತ್ತೆ, ಬಾಯಿ ಘಮ್‌ಗುಡುತ್ತೆ...' ಎಂದು ಚಿತ್ರದುರ್ಗದ ಅಜ್ಜಿಯೊಬ್ಬರು ಹೇಳಿದ್ದರು. ನಾನು ಅವರ ಮಾತಿನ ಜಾಡುಹಿಡಿದು 'ಎಲೆ ರಾಂಪುರ'ಕ್ಕೆ ಹೊರಟೆ.

ಅಲ್ಲಿನ ಖಾಸಗಿ ಬಸ್ ನಿಲ್ದಾಣದ ಕಟ್ಟೆ ಮೇಲೆ ಕುಳಿತಿದ್ದ ರೈತರೊಂದಿಗೆ ಮಾತಿಗಿಳಿದು, 'ರಾಂಪುರ ಎಲೆ ನೋಡಬೇಕು, ತೋಟಗಳು ಎಲ್ಲಿವೆ' ಎಂದೆ. ಒಬ್ಬರಿಗೊಬ್ಬರು ಮುಖ ನೋಡಿಕೊಂಡು ಮುಗುಳ್ನಕ್ಕರು. 'ಸಂತೆಯ ದಿನವೇ ಬಂದಿದ್ದೀರಿ, ಸೀದಾ ಹೋಗಿ, ಅಲ್ಲಿ ವೀಳ್ಯದೆಲೆ ಮಾರುತ್ತಿದ್ದಾರೆ, ಅವರನ್ನ ಕೇಳಿ' ಎಂದರು.

ಎಲೆಪಿಂಡಿ ಮುಂದೆ ನಿಂತು 'ಇವು ರಾಂಪುರ ಎಲೆಯೇ' ಎಂದಾಗ 'ರಾಂಪುರ ಎಲೆ ಈಗೆಲ್ಲಿ, ಅದು ಹತ್ತಾರು ವರ್ಷಗಳ ಹಿಂದಿನ ಕತೆ. ಕಪ್ಪಲಿಯಿಂದ ನೀರು ಸೇದಿ ವೀಳ್ಯದೆಲೆ ತೋಟ ಮಾಡುವ ಕಾಲ ಹೊರಟು ಹೋಗಿದೆ. ರಾಯದುರ್ಗದಿಂದ ತರಿಸಿದ ಎಲೆ ಮಾರುತ್ತಿದ್ದೇನೆ' ಎಂದರು ವ್ಯಾಪಾರಿ ತಿಪ್ಪಣ್ಣ.

ಮೂವತ್ತು ವರ್ಷಗಳ ಹಿಂದೆ ಬರ ಬಂದಾಗ ರೈತರು ಸಂಡೂರು ಗಣಿ, ಹೊಸಪೇಟೆ, ಬೆಂಗಳೂರಿಗೆ ಕೆಲಸ ಅರಸಿ ಹೋದರು. ಮುಂದೆ ರಾಂಪುರಕ್ಕೆ ಹೆದ್ದಾರಿ ಬಂದ ಮೇಲೆ ಭೂಮಿಗೆ ಚಿನ್ನದ ಬೆಲೆ ಸಿಕ್ಕಿತು. ಎಲೆತೋಟ ನಾಶವಾದವು. ಈಗ ರಾಂಪುರವಷ್ಟೇ ಉಳಿದಿದೆ.

ರಾಂಪುರ ಬದನೆಕಾಯಿ

ಇನ್ನು 'ರಾಂಪುರ ಬದನೆಕಾಯಿ' ಕತೆ ಏನಾಯ್ತು? ಎನ್ನುವುದನ್ನು ಕೆದಕುತ್ತಾ ಹೋದೆ. ವಾಂಗೀಬಾತ್, ಪುಲಾವ್‌ಗೆ ವಿಶೇಷ ರುಚಿ ತಂದುಕೊಡುತ್ತಿದ್ದ ಸಣ್ಣಗಾತ್ರದ ಗುಂಡು ಬದನೆಕಾಯಿ ರಾಂಪುರ ಮಣ್ಣಿನ ಜೊತೆ ಬೆರೆತುಕೊಂಡಿತ್ತು. ಕರ್ನಾಟಕ ಮಾತ್ರವಲ್ಲದೇ ಆಂಧ್ರ ಪ್ರದೇಶ, ತಮಿಳುನಾಡಿಗೂ ಈ ಬದನೆಕಾಯಿ ರವಾನೆಯಾಗುತ್ತಿತ್ತು. ವಿಶೇಷ ಸಂದರ್ಭಗಳಲ್ಲಿ ರಾಂಪುರ ಬದನೆ ಬೆಲೆ ಪ್ರತಿ ಕೆ.ಜಿಗೆ ₹ 300 ತಲುಪುತ್ತಿತ್ತು. ವರ್ತಕರು ರಾಂಪುರ ಬದನೆಕಾಯಿಗೆ ಚಿನ್ನದ ಮಾನ್ಯತೆ ಕೊಡುತ್ತಿದ್ದರು.

'ರೈತರು ಮೆಕ್ಕೆಜೋಳಕ್ಕೆ ಬದಲಾದ ಕಾರಣ ಬದನೆಕಾಯಿ ಬೆಳೆ ಕುಗ್ಗಿತು. ಈಗ ಶೇಕಡ 10ರಷ್ಟು ಇರಬಹುದಷ್ಟೇ. ಬೆಲೆ ಏರಿಳಿತ, ನೀರಿನ ಕೊರತೆಯಿಂದಾಗಿ ರಾಂಪುರದಲ್ಲಿ ಬದನೆಕಾಯಿ ಬೆಳೆಯುವವರು ಇಲ್ಲವಾಗುತ್ತಿದ್ದಾರೆ' ಎಂದು ರೈತ ಮುಖಂಡ ನಾಗರಾಜ್ ಹೇಳಿದರು. ಅಲ್ಲಿಗೆ ಬದನೆಕಾಯಿಯ ಕತೆಯೂ ಮುಗಿದಂತೆ ಆಯಿತು.

'ರಾಂಪುರ ಈರುಳ್ಳಿ ಹೇಗಿದೆ' ಎಂಬ ಪ್ರಶ್ನೆಗೆ ರೈತ ಧನಂಜಯಪ್ಪ 'ದಶಕದ ಹಿಂದೆ ರಾಂಪುರ ಈರುಳ್ಳಿ ವಿಶೇಷ ಸ್ಥಾನ ಪಡೆದಿತ್ತು. ಈಗ ಅಂಥದ್ದೇನೂ ಇಲ್ಲ. ಈರುಳ್ಳಿ ಸಾರ್ವತ್ರಿಕಗೊಂಡಿದೆ. ಚಿತ್ರದುರ್ಗದ ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆಯುವ ಈರುಳ್ಳಿಯನ್ನೇ ಬೆಳೆಯುತ್ತಿದ್ದೇವೆ' ಎಂದರು.

ರಾಮ, ಅಶೋಕನೇ ಶಾಶ್ವತ

ರಾಂಪುರ ನಾಲ್ಕು ದಶಕಗಳಿಂದೀಚೆಗೆ ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಊರಿನ ಜೊತೆಗಿದ್ದ ಹಲವು ವಿಶೇಷತೆಗಳು ಅಳಿದು ಹೋಗಿವೆ. ಆದರೆ ರಾಂಪುರದ ಜೊತೆಗಿರುವ ಪೌರಾಣಿಕ, ಐತಿಹಾಸಿಕ ಹಿನ್ನೆಲೆ ಮಾತ್ರ ಶಾಶ್ವತವಾದುದು. ಊರಿನಿಂದ 6 ಕಿ.ಮೀ ದರದಲ್ಲಿರುವ ಜಟಂಗಿ ರಾಮೇಶ್ವರ ಬೆಟ್ಟದತ್ತ ಹೊರಟೆ. ತಟದಿಂದ 1.8. ಕಿ.ಮೀ ಮೆಟ್ಟಿಲುಗಳ ಹಾದಿ, ಸಮುದ್ರಮಟ್ಟದಿಂದ 3.470 ಅಡಿ ಎತ್ತರದಲ್ಲಿದೆ.

ಸಾಲು ಬೆಟ್ಟಗುಡ್ಡಗಳು ಮನಸೂರೆಗೊಳ್ಳುವಂತಿದ್ದವು. ಎಲ್ಲಿಂದಲೋ ಕಲ್ಲುಗಳನ್ನು ತಂದು ಜೋಡಿಸಿಟ್ಟಂತೆ ಕಂಡವು. ಜಟಂಗಿ ರಾಮೇಶ್ವರ ಸಣ್ಣ ಬೆಟ್ಟ ಹತ್ತಲು ಒಂದು ಗಂಟೆ ಹಿಡಿಯಿತು. ಕಲ್ಲು ಮೆಟ್ಟಿಲುಗಳ ಪಕ್ಕದಲ್ಲಿ ರೈಲಿಂಗ್ ಅಳವಡಿಸಿರುವ ಕಾರಣ ಏರಲು ಸಹಾಯವಾಯಿತು. ಬೆಟ್ಟದ ತುದಿ ತಲುಪಿದಾಗ ದೇಗುಲದ ಆವರಣದಲ್ಲಿ ಅಸಂಖ್ಯ ಶಿವಲಿಂಗಗಳು ಕಂಡವು!

ಬೆಟ್ಟದ ಐತಿಹಾಸಿಕ ಹಿನ್ನೆಲೆಯತ್ತ ಕಣ್ಣೊರಳಿಸಿದರೆ ಸೀತಾಪಹರಣ ಕಾಲಕ್ಕೆ ಬಂದು ನಿಲ್ಲುತ್ತದೆ. ರಾವಣ ಸೀತೆಯನ್ನು ಹೊತ್ತೊಯ್ಯುವಾಗ ಜಟಾಯು ಪಕ್ಷಿ ಅವನೊಂದಿಗೆ ಕಾದಾಡಿತು. ರಾವಣ ರೆಕ್ಕೆ ಕತ್ತರಿಸಿದಾಗ ಜಟಾಯು ಬಿದ್ದ ಸ್ಥಳವೇ ಜಟಂಗಿ ರಾಮೇಶ್ವರವಾಯಿತು. ಅದರ ಕುರುಹಾಗಿ ಈಗಲೂ ದೊಡ್ಡಬೆಟ್ಟದ ತುದಿಯಲ್ಲಿ ಜಟಾಯು ಸಮಾಧಿಯುಂಟು ಎಂದು ಸ್ಥಳೀಯರು ಹೇಳುತ್ತಾರೆ.

ಸಾಯುವುದಕ್ಕೂ ಮೊದಲು ಜಟಾಯು ಶ್ರೀರಾಮನಿಗೆ ಸೀತಾಪಹರಣ ವಿಷಯ ತಿಳಿಸಿತು. ಈ ಸ್ಥಳದಲ್ಲಿ ಶಿವಲಿಂಗ ಸ್ಥಾಪಿಸುವಂತೆ ಮನವಿ ಮಾಡಿತು. ಜಟಾಯು ಪ್ರಾರ್ಥನೆಯಂತೆ ರಾಮ ಕಲ್ಲುಗಳಲ್ಲೇ ಶಿವಲಿಂಗ ಸ್ಥಾಪಿಸಿದ ಸ್ಥಳ ಜಟಂಗಿ ರಾಮೇಶ್ವರ ದೇವಾಲಯವಾಯಿತು.

ರಾಮನಿಂದ ಸ್ಥಾಪಿಸಲ್ಪಟ್ಟ ಜಟಂಗಿ ರಾಮೇಶ್ವರ ಈಗ ಲಕ್ಷಾಂತರ ಭಕ್ತರ ಮನೆ ದೇವರು. ಶಿವರಾತ್ರಿ, ಕಾರ್ತೀಕ, ಶ್ರಾವಣ ಮಾಸದಲ್ಲಿ ಬಲುದೊಡ್ಡ ಉತ್ಸವ ಇಲ್ಲಿ ನಡೆಯುತ್ತದೆ. ಪೌರಾಣಿಕ ಹಿನ್ನೆಲೆಯುಳ್ಳ, ರಾಮಾಯಣಕ್ಕೆ ಸಂಬಂಧಿಸಿ ರಾಜ್ಯದಲ್ಲಿ ಸಿಕ್ಕ ಪ್ರಥಮ ಶಾಸಕ ಎನ್ನಲಾದ ಬಂಡೆ ಶಾಸನ (ಕ್ರಿ.ಶ 961) ಬೆಟ್ಟದ ಮೇಲೆ ಕಾಣಬಹುದಾಗಿದೆ.

ಐತಿಹಾಸಿಕ ಹಿನ್ನೆಲೆ

ರಾಂಪುರ ಪೌರಾಣಿಕ ಕತೆಯ ಜೊತೆಗೆ ಐತಿಹಾಸಿಕ ಹಿನ್ನೆಲೆಯನ್ನೂ ಹೊಂದಿದೆ. ಜಟಂಗಿ ರಾಮೇಶ್ವರ ಬೆಟ್ಟವಿಳಿದು ಅಶೋಕ ಸಿದ್ದಾಪುರ ಗ್ರಾಮದಲ್ಲಿರುವ ಬ್ರಹ್ಮಗಿರಿ ಬೆಟ್ಟದ ತಟ ಸೇರಿದಾಗ ಮುಸ್ಸಂಜೆಯಾಗಿತ್ತು. ಇದು ಮೌರ್ಯರ ನೆಲೆವೀಡಾಗಿತ್ತು. ದೇವನಾಂಪ್ರಿಯ ಅಶೋಕನೇ ಬರೆಸಿದ್ದಾನೆ ಎನ್ನಲಾದ ಅಪರೂಪದ ಹೆಬ್ಬಂಡೆ ಅಶೋಕ ಶಾಸನ ಬ್ರಹ್ಮಗಿರಿ ಬೆಟ್ಟದ ತಟದಲ್ಲಿ ಸಿಗುತ್ತದೆ. ಪ್ರಾಕೃತ ಭಾಷೆಯಲ್ಲಿರುವ ಈ ಶಾಸನವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ (ಎಎಸ್‌ಐ) ಸಂರಕ್ಷಣೆ ಮಾಡಿದೆ. ಶಾಸನಕ್ಕೆ ಬಿಸಿಲು ಮಳೆ ತಾಕದಂತೆ ವಿಶೇಷ ವಿನ್ಯಾಸದಲ್ಲಿ ಸಂರಕ್ಷಣಾ ಕಟ್ಟಡ ನಿರ್ಮಿಸಿರುವುದು ನೋಡಲು ಸೊಗಸಾಗಿದೆ. ಸ್ಥಳದಲ್ಲಿ ಉದ್ಯಾನವೂ ಇದ್ದು ನೋಡುಗರ ಮನಸೂರೆಗೊಳ್ಳುತ್ತದೆ.

ಅಶೋಕ ಶಾಸನದಿಂದ ಕೊಂಚ ಮುಂದೆ ಸಾಗಿದರೆ ಮೌರ್ಯರ ಸಮಾಧಿಗಳಿವೆ.



ಅಶೋಕ ಶಾಸನವಿರುವ ಸ್ಥಳ ಚಿತ್ರಗಳು: ಚಂದ್ರಪ್ಪ ವಿ

ತಲೆನೋವಾದ ನಿಧಿ ಹುಡುಕಾಟ

ರಾಂಪುರ ಸುತ್ತಲಿನ ಸ್ಮಾರಕಗಳಲ್ಲಿ ಅಪಾರ ಪ್ರಮಾಣದ ನಿಧಿ ಹುದುಗಿದೆ ಎಂಬ ಗಾಳಿಸುದ್ದಿ ಕಿಡಿಗೇಡಿಗಳಿಗೆ ನಿದ್ದೆಗೆಡಿಸುತ್ತದೆ. ಎಎಸ್‌ಐ ಸಂರಕ್ಷಣೆ ಇದ್ದರೂ ಅಲ್ಲಲ್ಲಿ ನಿಧಿಗಾಗಿ ಸ್ಮಾರಕ ಸ್ಥಳ ಅಗೆದಿರುವುದು ವರದಿಯಾಗುತ್ತಲೇ ಇದೆ. ಈಚೆಗೆ ಜಟಂಗಿ ರಾಮೇಶ್ವರ ಬೆಟ್ಟದಲ್ಲಿರುವ ವೀರಭದ್ರ ಗುಡಿಯ ಮೂರುತಿ ತಳ ಅಗೆದು ದುಷ್ಕರ್ಮಿಗಳು ನಿಧಿ ಹುಡುಕಾಟ ಮಾಡಿದ್ದರು. ಇದರಿಂದಾಗ ಐತಿಹಾಸಿಕ ವೀರಭದ್ರೇಶ್ವರ ಮೂರುತಿ ಬಿದ್ದು ಎರಡು ತುಂಡಾಗಿತ್ತು. ಭಕ್ತರು ಮತ್ತೊಂದು ಮೂರುತಿ ಸ್ಥಾಪನೆ ಮಾಡಿದ್ದರು.

ಮಣ್ಣಲ್ಲಿ ಮುಚ್ಚಿ ಹೋದ ಸ್ಥಿತಿಯಲ್ಲಿರುವ ಸಮಾಧಿಗಳ ಸುತ್ತಾ ಕಾಂಪೌಂಡ್ ನಿರ್ಮಿಸಿ ಸಂರಕ್ಷಣೆ ಮಾಡಲಾಗಿದೆ. ಇನ್ನೂ ಕೊಂಚ ಮುಂದೆ ಸಾಗಿದಾಗ ರೊಪ್ಪ ಗ್ರಾಮದಲ್ಲಿ ಜೈನ ಬಸದಿಗಳಿವೆ. ರಾಂಪುರದಲ್ಲಿ ಜೈನರೂ ಇದ್ದರು ಎಂಬ ಇತಿಹಾಸ ತೆರೆದುಕೊಳ್ಳುತ್ತದೆ.

ರಾಂಪುರ ಸುತ್ತಮುತ್ತ ಹುದುಗಿರುವ ಐತಿಹಾಸಿಕ ಹಿನ್ನೆಲೆ ಮಾನವ ಸಂಸ್ಕೃತಿ ವಿಕಾಸದ ಹಾದಿಯ ಪ್ರಮುಖ ಕುರುಹಾಗಿದೆ. ಶಿಲಾಯುಗ ಕಾಲದ ಕುರುಹುಗಳೂ ಇಲ್ಲಿವೆ ಎಂದು ಇತಿಹಾಸ ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಈ ಕಾರಣದಿಂದ ಎಎಸ್‌ಐ, ಧಾರವಾಡದ ಕವಿವಿ ತಜ್ಞರು ಅಮೆರಿಕಾದ ಪೆನ್ಸಿಲ್ವೇನಿಯಾ ವಿವಿ ಇತಿಹಾಸ ತಜ್ಞರ ಸಹಯೋಗದೊಂದಿಗೆ ಉತ್ಖನನ ಆರಂಭಿಸಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಯೊಂದಿಗೆ ವಿವಿಧ ಹಂತಗಳಲ್ಲಿ ಈ ಹುಡುಕಾಟ ನಡೆಯಲಿದೆ ಎಂದು ಸಂಶೋಧಕರು ತಿಳಿಸುತ್ತಾರೆ.

ಪಡುವಣದಲ್ಲಿ ಮುಳುಗುತ್ತಿದ್ದ ಸೂರ್ಯ, ಬ್ರಹ್ಮಗಿರಿ ಬೆಟ್ಟದ ತಟದಲ್ಲಿದ್ದ ಶಿವನ ದೇವಾಲಯ, ಗುಡಿ ಮುಂದಿನ ಕೊಳ ಮನಸ್ಸಿಗೆ ಮುದ ನೀಡಿತು. ಗಡಿ ಗ್ರಾಮ ರಾಂಪುರ ಕಾಲನ ಸುಳಿಗೆ ಸಿಲುಕಿ ಹಲವು ಬದಲಾವಣೆಗಳಿಗೆ ತೆರೆದುಕೊಂಡಿದ್ದರೂ ಇಲ್ಲಿಯ ಪ್ರಾಗೈತಿಹಾಸ ಮಾತ್ರ ತಲೆತಲೆಮಾರುಗಳ ಕುತೂಹಲದ ತಾಣವಾಗಿದೆ.


ಜಟಂಗಿ ರಾಮೇಶ್ವರ ಬೆಟ್ಟದ ನೋಟ

ಕಥೆ

ತೆಲುಗು ಮೂಲ: ಮರ್ಸಿ ಮಾರ್ಗರೇಟ್
ಕನ್ನಡಕ್ಕೆ: ಶಿವಕುಮಾರ್ ಕಂಪ್ಲಿ
ಅವರ **ಸೊನ್ನೆಗಳು**

prajavani.net/short-story

ಕವನ

ತಾರಿಣಿ ಶುಭದಾಯಿನಿ
ಅವರ **ಒಳಗೊಳಗೆ**

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ನಿಡಸೋಸಿಯ ಬಿಲ್ವವನದಲ್ಲೊಂದು ಸುತ್ತು...

• ಚಂದ್ರಶೇಖರ ಎಸ್ ಚಿನಕೇಕರ

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯಲ್ಲಿ ಮೂರು ಶತಮಾನದ ಇತಿಹಾಸ ಹೊಂದಿರುವ ಗ್ರಾಮದ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠಕ್ಕೆ ಸೇರಿದ 'ಬಿಲ್ವಾಶ್ರಮ' ಅಪರೂಪದ ಬಿಲ್ವಪತ್ರೆಯ ವನವಾಗಿದೆ.

ಬಿಲ್ವಪತ್ರೆ ವನ ಬೆಳೆಸಿದ ಶ್ರೇಯಸ್ಸು ನಿಡಸೋಸಿಯ ಸಿದ್ಧಸಂಸ್ಥಾನ ಮಠದ ದ್ವಿತೀಯ ಶಿವಲಿಂಗೇಶ್ವರ ಸ್ವಾಮೀಜಿಗೆ ಸಲ್ಲುತ್ತದೆ. ಮೂರು ಎಕರೆಯಲ್ಲಿ ಹರಡಿಕೊಂಡಿರುವ ಬಿಲ್ವಾಶ್ರಮದ ಪತ್ರಿಬನದಲ್ಲಿ 250ಕ್ಕೂ ಹೆಚ್ಚು ಬಿಲ್ವಪತ್ರೆ ಮರಗಳು ಇವೆ!

ಈ ಜಾಗದಲ್ಲಿ ಸಸಿ ನೆಟ್ಟಿದ್ದು ದ್ವಿತೀಯ ಶಿವಲಿಂಗೇಶ್ವರ ಸ್ವಾಮೀಜಿ. ಆದರೆ ಇವುಗಳನ್ನು ಪೋಷಣೆ ಮಾಡಿ ವನದ ರೂಪ ನೀಡಿದ್ದು, ಮೂರನೇ ನಿಜಲಿಂಗೇಶ್ವರ ಸ್ವಾಮೀಜಿ ಹಾಗೂ ನಾಲ್ಕನೇ ಶಿವಲಿಂಗೇಶ್ವರ ಸ್ವಾಮೀಜಿ. ಇವರಿಗೆ ಮರಗಿಡಗಳೆಂದರೆ ಬಲುಪ್ರೀತಿ. ಧರ್ಮ ಪ್ರಸಾರ ಕಾರ್ಯದೊಂದಿಗೆ ಪರಿಸರ ರಕ್ಷಣೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದವರಾಗಿದ್ದರು. ಹೀಗಾಗಿ ಪತ್ರಿಬನ ಸೇರಿದಂತೆ ಮಠಕ್ಕೆ ಸೇರಿದ ಜಮೀನಿನಲ್ಲಿ ವಿವಿಧ ಜಾತಿಯ ಮರಗಿಡಗಳನ್ನು ಪೋಷಿಸಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

'ಇದರ ಬೇರು, ತೊಗಟೆ, ಕಾಂಡ, ಕಾಯಿ, ಹಣ್ಣು, ಬೀಜ, ಎಲೆ ಒಂದಿಲ್ಲವೊಂದು ರೋಗ ನಿವಾರಣೆ ಮಾಡುವ ಔಷಧಿ ಗುಣ ಹೊಂದಿವೆ. ಅದರಲ್ಲೂ ಬಿಲ್ವದ ಎಲೆಗಳು ಶಿವನ ಪೂಜೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿವೆ. ಮಠ ಮಂದಿರಗಳಲ್ಲಿ ಪೂಜೆಗೆ ಬಿಲ್ವಪತ್ರೆ ಬೇಕೇಬೇಕು. ಹಾಗೇನೇ ಔಷಧಿಯಾಗಿ ಬಳಕೆ ಮಾಡಲು ಅನುಕೂಲ ಎಂಬ ಉದ್ದೇಶದಿಂದ ಬಿಲ್ವಪತ್ರೆ ವನ ಮಾಡಲಾಗಿದೆ' ಎಂದು ಬಿಲ್ವಾಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಬಸವರಾಜ ಕೋಥಳಿ ಹೇಳುತ್ತಾರೆ.

ಬಿಲ್ವವನದ ಒಳಗೆ...

ಗ್ರಾಮದಿಂದ ಮೂರು ಕಿಲೋಮೀಟರ್ ದೂರದಲ್ಲಿರುವ ಪತ್ರಿಬನದ ಉಸ್ತುವಾರಿಯನ್ನು ಶಿವಲಿಂಗ ಪದ್ಮಣ್ಣವರ, ಪರಪ್ಪ ವಾಣಿ, ಗಂಗಾಧರ ಕುರೋಳಿ, ಕಲ್ಲಪ್ಪ ಸೂಜಿ, ವೀರಭದ್ರ ಬಾಡ, ರಾಜು ಪಿಂಪಳಗಾವಿ ಸೇರಿದಂತೆ ಹದಿನೈದಕ್ಕೂ ಹೆಚ್ಚು ಸ್ಥಳೀಯರು ತಾವೇ ಸೇರಿಕೊಂಡು 'ಪತ್ರಿಬನ ನಿರ್ವಹಣಾ ಸಮಿತಿ' ರಚಿಸಿಕೊಂಡಿದ್ದಾರೆ. ನಿಡಸೋಸಿ ಸಿದ್ಧಸಂಸ್ಥಾನಮಠದ ಹತ್ತನೇ ಪೀಠಾಧಿಪತಿ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಸಲಹೆ ಸೂಚನೆಯನ್ವಯ ಸಮಿತಿ ಕಾರ್ಯನಿರ್ವಹಿಸುತ್ತಿದೆ.

ವನದ ಪ್ರವೇಶ ದ್ವಾರ

ವನ ವೀಕ್ಷಣೆಯಲ್ಲಿ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ

ಪತ್ರಿಬನದಲ್ಲಿ ಕಳೆ ತೆಗೆಯುವುದು, ನೀರುಣಿಸುವುದು, ಮರಗಿಡಗಳನ್ನು ನೆಟ್ಟು ಬೆಳೆಸುವುದು ಸೇರಿದಂತೆ ವಿವಿಧ ಹೊಣೆಗಾರಿಕೆಯನ್ನು ಪತ್ರಿಬನ ನಿರ್ವಹಣಾ ಸಮಿತಿ ಯಾವುದೇ ಫಲಾಪೇಕ್ಷೆ ಇಲ್ಲದೇ ಸ್ವಯಂಸ್ಫೂರ್ತಿಯಾಗಿ ಮಾಡುತ್ತಿದೆ. ಸ್ಥಳೀಯ ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ವಿವಿಧ ಸಂಘ ಸಂಸ್ಥೆಗಳು ಪತ್ರಿಬನದ ಶ್ರೇಯೋಭಿವೃದ್ಧಿಗೆ ಆಗಾಗ ಶ್ರಮದಾನ ಮಾಡುತ್ತಾ ಬಂದಿವೆ. ಸಾರ್ವಜನಿಕರ ಸಹಭಾಗಿತ್ವದಿಂದ ವನ ನಳನಳಿಸುತ್ತಿದೆ. ಪತ್ರಿಬನದ ಆವರಣದಲ್ಲಿ ನಾಲ್ಕೈದು ಶತಮಾನ ಕಂಡ ಬೃಹದಾಕಾರದ ಹುಣಸೆಮರವಿದ್ದು, ಇದು ಕೂಡ ಇಲ್ಲಿಗೆ ಬರುವವರ ಆಕರ್ಷಣೆಯ ಕೇಂದ್ರವಾಗಿದೆ.

ಪತ್ರಿಬನ ಮಠಕ್ಕೆ ಸೇರಿದ್ದಾಗಿದ್ದರೂ ಸ್ಥಳೀಯರು ಸ್ವಯಂಸ್ಫೂರ್ತಿಯಿಂದ ಸಂರಕ್ಷಣೆ ಮಾಡುವಲ್ಲಿ ತಮ್ಮದೇ ಆದ ಪಾತ್ರ ಹೊಂದಿದ್ದಾರೆ. ಎರಡು ಕೊಳವೆಬಾವಿಗಳಿದ್ದು, ಆಗಾಗ ಸ್ಥಳೀಯರು ಹೊಂದಾಣಿಕೆಯ ಮೇರೆಗೆ ಮರಗಿಡಗಳಿಗೆ ನೀರುಣಿಸುತ್ತಾರೆ. ಪ್ರಾಣಿ ಪಕ್ಷಿ ಸಂಕುಲಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಪತ್ರಿಬನದ ಆವರಣದಲ್ಲಿಯೇ ನಿಡಸೋಸಿ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠದ ನಾಲ್ಕನೇ ಶಿವಲಿಂಗೇಶ್ವರ ಸ್ವಾಮೀಜಿಯಿಂದ ಒಂಬತ್ತನೇ ನಿಜಲಿಂಗೇಶ್ವರ ಸ್ವಾಮೀಜಿ ಸೇರಿದಂತೆ ಏಳು ಜನ ಲಿಂಗೈಕ್ಯ ಸ್ವಾಮೀಜಿಗಳ ಸಮಾಧಿಗಳು ಇವೆ. ಹೀಗಾಗಿ ಇಲ್ಲಿಗೆ ಬರುವ ಸಹಸ್ರಾರು ಭಕ್ತರಿಗೆ ಪತ್ರಿಬನ ಪೂಜನೀಯ ಸ್ಥಳವಾಗಿದೆ. ಪ್ರತಿವರ್ಷ ಶ್ರಾವಣ ಹಾಗೂ ಭಾದ್ರಪದ ಮಾಸದಲ್ಲಿ ಭಕ್ತರು ಬಂದು ಇಲ್ಲಿ ವಿಶ್ರಮಿಸಿ ಹೋಗುತ್ತಾರೆ. ಸಂಕೇಶ್ವರ-ಜೇವರ್ಗಿ ರಾಜ್ಯ ಹೆದ್ದಾರಿಯಿಂದ ಒಂದು ಕಿಲೋಮೀಟರ್ ಅಂತರದಲ್ಲಿರುವುದರಿಂದ ಬೇಸಿಗೆಯಲ್ಲಿ ಸಾಕಷ್ಟು ಜನ ಇಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಾರೆ.

ಪತ್ರಿಬನದಲ್ಲಿ ನವಿಲು, ಗಿಳಿ, ಗುಬ್ಬಿ, ಮಂಗ ಸೇರಿದಂತೆ ವಿವಿಧ ಪ್ರಾಣಿ ಪಕ್ಷಿಗಳ ವಾಸಸ್ಥಾನವಾಗಿದೆ. ಅದರಲ್ಲೂ ಕಲ್ಲು ಸೇಬು ಎಂದು ಕರೆಯಲ್ಪಡುವ ಬಿಲ್ವಮರದ ಮಾಗಿದ ಹಣ್ಣುಗಳ ತಿರುಳು ಮಂಗಗಳಿಗೆ ಬಹು ಇಷ್ಟ. ಹೀಗಾಗಿ ಈ ಹಣ್ಣಿನ ತಿರುಳು ತೆಗೆದು ತಿನ್ನುವ ಮೂಲಕ ಪತ್ರಿಬನದ ಸುತ್ತಮುತ್ತಲಿನ ಪ್ರದೇಶದಲ್ಲಿ ಮಂಗಗಳು ಬೀಜಪ್ರಸರಣ ಮಾಡುವುದು ಕಂಡು ಬರುತ್ತದೆ.

'ಪತ್ರಿಮರದ ಎಲೆಯ ತ್ರಿದಳಗಳು ವಾತ, ಪಿತ್ತ ಮತ್ತು ಕಫ ರೋಗದ ಮೂರು ಸಂಕೇತವಾಗಿವೆ. ಹೀಗಾಗಿ ಪ್ರತಿಯೊಂದು ಮನೆ, ಕಚೇರಿ, ಮಠ, ದೇವಾಲಯಗಳಲ್ಲಿ ಇವುಗಳನ್ನು ಬೆಳೆಸುವುದರಿಂದ ವಾತಾವರಣದಲ್ಲಿ ಆಮ್ಲಜನಕದ ಪ್ರಮಾಣವೂ ಹೆಚ್ಚುತ್ತದೆ' ಎಂದು ಚಿಕ್ಕೋಡಿಯ ಸಸ್ಯಶಾಸ್ತ್ರಜ್ಞ ರಾಜೇಶ ನಾಯಿಕ ಹೇಳುತ್ತಾರೆ.

'ಉತ್ತರ ಭಾರತದಲ್ಲಿ ಬಿಲ್ವಪತ್ರೆ ಹಣ್ಣುಗಳಿಂದ ರಸ ತಯಾರಿಸಿ ಸೇವಿಸಲಾಗುತ್ತದೆ. ಬಹುಪಯೋಗಿಯಾಗಿರುವ ಬಿಲ್ವಪತ್ರೆ ಸಸಿಗಳನ್ನು ಮಾಡಿ ವಿತರಿಸುವ ಆಲೋಚನೆ ಹೊಂದಲಾಗಿದೆ. ಇಲ್ಲಿ ಬೆಳೆದ ಬಿಲ್ವಪತ್ರೆ, ಹಣ್ಣು ಮುಂತಾದವುಗಳನ್ನು ಸಾಕಷ್ಟು ಜನರು ತೆಗೆದುಕೊಂಡು ಹೋಗುತ್ತಾರೆ' ಎಂದು ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಹೇಳುತ್ತಾರೆ.

ಹಸಿರು ಸಿರಿಯಿಂದ ಕಂಗೊಳಿಸುತ್ತಿರುವ ಈ ಸುಂದರ ವನದಲ್ಲಿ ಇನ್ನಷ್ಟು ವನಗಳ ನಿರ್ಮಾಣಕ್ಕೆ ಪ್ರೇರಣೆಯಾಗಲಿ.

ಮುನ್ನೋಟ 15-02-2026 ರಿಂದ 21-02-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವಾರದ ಆರಂಭದಲ್ಲಿ ಸ್ವಲ್ಪ ಸಿಟ್ಟು, ಸೆಡವುಗಳಿರುತ್ತವೆ. ಆದಾಯವು ಕಡಿಮೆ ಇದ್ದರೂ ಕೂಡ ತೊಂದರೆ ಇರುವುದಿಲ್ಲ. ಹಿರಿಯರ ಸಹಕಾರ ನಿಧಾನವಾಗಿ ದೊರೆಯುತ್ತದೆ. ಕೃಷಿ ವ್ಯವಹಾರಗಳ ಆದಾಯ ಮಂದಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಸಿಗುವುದಿಲ್ಲ. ಕೆಲವರಿಗೆ ಕಣ್ಣಿನ ತೊಂದರೆ ಕಾಣಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ದೊಡ್ಡ ಮನುಷ್ಯರಂತೆ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ನಿಮ್ಮ ನಿರೀಕ್ಷೆಯನ್ನು ಮೀರಿ ಇರುತ್ತದೆ. ಬಂಧುಗಳ ನಡುವೆ ಅಸಹನೆ ತಲೆದೋರಬಹುದು. ಕೃಷಿಭೂಮಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ವೃತ್ತಿ ಸ್ಥಳದಲ್ಲಿ ಮೇಲಾಧಿಕಾರಿಗಳು ನಿಮ್ಮನ್ನು ತರಾಟೆಗೆ ತೆಗೆದುಕೊಳ್ಳಬಹುದು. ಮೂತ್ರ ಸಂಬಂಧಿ ದೋಷಗಳು ಸ್ವಲ್ಪ ಕಾಡಬಹುದು. ವ್ಯವಹಾರಗಳಲ್ಲಿ ಮುನ್ನಡೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಮಾಜದಿಂದ ಗೌರವ ಸಿಗುವ ಸಾಧ್ಯತೆಗಳಿವೆ. ಆದಾಯ ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ಬಂಧುಗಳು ನಿಮ್ಮ ಒಳ್ಳೆಯ ಕೆಲಸಗಳಿಗೆ ಮಾತ್ರ ಸಹಕಾರ ನೀಡುತ್ತಾರೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಇರುತ್ತದೆ. ಆಯುಧಗಳನ್ನು ಉಪಯೋಗಿಸುವಾಗ ಎಚ್ಚರವಿರಲಿ. ಸಂಗಾತಿಯಿಂದ ನಿಮಗೆ ಪೂರ್ಣ ಸಹಕಾರ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆಲಸಿತನ ಮೈದುಂಬಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಧಾರ್ಮಿಕ ಕಾರ್ಯಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸಂಗಾತಿ ಆದಾಯ ಕಡಿಮೆಯಾಗಬಹುದು. ಸಂಗಾತಿಯು ನಿಮ್ಮ ಮೇಲೆ ಕೋಪ ಮಾಡಿಕೊಳ್ಳುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿನ ಅನುಕೂಲವಿರುತ್ತದೆ. ಪಿತ್ತ ದೋಷಗಳು ನಿಮ್ಮನ್ನು ಕಾಡಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಪ್ರಗತಿ ಇರುವುದಿಲ್ಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಏನೋ ಕಳೆದುಕೊಂಡಂತೆ ಭಾಸವಾಗುತ್ತಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ಸಂಗಾತಿಯಿಂದ ಆರ್ಥಿಕ ಸಹಕಾರ ಸಿಗುತ್ತದೆ. ಹಿರಿಯ ಮಹಿಳೆಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಾಯ ಸಿಗುತ್ತದೆ. ಭೂಮಿಯ ವ್ಯವಹಾರಗಳಲ್ಲಿ ಲಾಭ ಇರುವುದಿಲ್ಲ. ಹೈನುಗಾರಿಕೆಯಲ್ಲಿ ಅಭಿವೃದ್ಧಿ ಇರುವುದಿಲ್ಲ. ಶೀತ ಸಂಬಂಧಿ ದೋಷಗಳು ಕೆಲವರನ್ನು ಕಾಡುತ್ತವೆ. ವಿದೇಶದಲ್ಲಿರುವ ನಿಮ್ಮ ಸಂಗಾತಿಯನ್ನು ಹೋಗಿ ಸೇರಿಕೊಳ್ಳಲು ಈಗ ಅನುಕೂಲಕರ ಸಮಯ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಚುರುಕಾಗಿ ಕೆಲಸ ಮಾಡಲು ಪ್ರಯತ್ನ ಪಡುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ಬಂಧುಗಳ ನಡುವೆ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಪ್ರಯತ್ನ ಪಡುವಿರಿ. ಆಸ್ತಿ ಮಾರಾಟ ಮಾಡುವ ಮಧ್ಯವರ್ತಿಗಳಿಗೆ ಈಗ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಚರ್ಮ ಸಂಬಂಧಿ ದೋಷಗಳು ಕಾಣಿಸಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿ ಮಾರಾಟ ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಪಡೆಯುವ ಯೋಗವಿದೆ. ಕೆಲವರಿಗೆ ಪಾದದ ನೋವು ಕಾಣಿಸಬಹುದು. ಆಭರಣ ಮಾರಾಟಗಾರರಿಗೆ ಸ್ವಲ್ಪ ಹಿನ್ನಡೆಯಾಗಬಹುದು. ಹಿರಿಯರ ಆಸ್ತಿಗಾಗಿ ಸಾಕಷ್ಟು ಪ್ರಯತ್ನ ಪಡುವಿರಿ. ವೃತ್ತಿಯಲ್ಲಿ ಅಂತಹ ಪ್ರಗತಿ ಇರುವುದಿಲ್ಲ. ಕೃಷಿ ಸಂಶೋಧಕರಿಗೆ ಅಭಿವೃದ್ಧಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಯೋಜನಾ ಬದ್ಧವಾಗಿ ಕೆಲಸ ಮಾಡಲು ಪ್ರಯತ್ನಪಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶದಲ್ಲಿರುವವರು ಈಗ ಆಸ್ತಿ ಮಾಡಿಕೊಳ್ಳಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಮುನ್ನಡೆಯನ್ನು ಕಾಣಬಹುದು. ಗಣಿಗಾರಿಕೆ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಹರಿತವಾದ ಆಯುಧಗಳನ್ನ ಉಪಯೋಗಿಸುವಾಗ ಎಚ್ಚರವಿರಲಿ. ವೃತ್ತಿಯ ಸ್ಥಳದಲ್ಲಿ ಹಿತಶತ್ರುಗಳಿರುತ್ತಾರೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆದಾಯ ಮಧ್ಯಮಗತಿಯಲ್ಲಿರುತ್ತದೆ. ಸರ್ಕಾರಿ ಅನುದಾನಗಳು ದೊರೆಯುತ್ತವೆ. ವಿದೇಶದಲ್ಲಿನ ನಿಮ್ಮ ಸ್ನೇಹಿತರು ನಿಮಗೆ ಸಹಕಾರ ನೀಡುವರು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗಿ ಲಾಭ ಬರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ಒಡಹುಟ್ಟಿದವರ ಜೊತೆಯಲ್ಲಿ ಮಾಡಿದ ಹಣಕಾಸಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗುತ್ತವೆ. ಗಂಭೀರ ನಡವಳಿಕೆಯನ್ನು ನಿಮ್ಮಲ್ಲಿ ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಅತಿ ಉತ್ಸಾಹದೊಂದಿಗೆ ಮುನ್ನುಗ್ಗುವಿರಿ. ವಿವೇಚನೆಯಿಂದ ಕೆಲಸ ಮಾಡುವಿರಿ. ಆದಾಯ ಉತ್ತಮವಾಗಿರುತ್ತದೆ. ವಾಗ್ಮಿಗಳಿಗೆ ಉತ್ತಮ ವೇದಿಕೆಗಳು ದೊರೆಯುತ್ತವೆ. ಕೃಷಿಭೂಮಿ ವ್ಯಾಪಾರ ಮಾಡುವವರಿಗೆ ಅತಿ ಹೆಚ್ಚು ಲಾಭವಿರುತ್ತದೆ. ಸಂಸಾರದಲ್ಲಿ ಈಗ ಸಂತೋಷವಿರುತ್ತದೆ. ಲಲಿತ ಕಲೆ ಅಭ್ಯಾಸ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ವಿವಾಹ ಸಂಬಂಧದ ವಿಷಯದಲ್ಲಿ ಸ್ವಲ್ಪ ಎಚ್ಚರವಾಗಿರಿ. ವೃತ್ತಿಯಲ್ಲಿ ಆದಾಯ ಹೆಚ್ಚುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಾರದ ಆರಂಭದಲ್ಲಿ ಬಹಳ ಬಿರುಸಿನಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಮಾತನಾಡುವಾಗ ಬಹಳ ಎಚ್ಚರವಿರಲಿ. ನಿಮ್ಮೆಲ್ಲ ಕೆಲಸಗಳಿಗೆ ತಾಯಿಯ ಸಹಕಾರ ಸಿಗುತ್ತದೆ. ಆಸ್ತಿ ಕೊಳ್ಳಲು ಈಗ ಹಣದ ವ್ಯವಸ್ಥೆ ಮಾಡಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಉದ್ಯೋಗದ ಸ್ಥಳದಲ್ಲಿ ಏಳಿಗೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವಾರದ ಆರಂಭದಲ್ಲಿ ಬಹಳ ಉದಾಸೀನತೆ ಇರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಸಂಗಾತಿ ಕಡೆಯುವರಿಂದ ನಿಮ್ಮ ಕೆಲಸಗಳಿಗೆ ಸಹಾಯ ದೊರೆಯಬಹುದು. ವಿದ್ಯಾರ್ಥಿಗಳಿಗೆ ಸ್ವಲ್ಪ ಕಷ್ಟಕರ ವಾತಾರವಣವಿರುತ್ತದೆ. ಹೊಟ್ಟೆಯಲ್ಲಿ ನೋವು ಕಾಣಿಸಬಹುದು. ಸಂಗಾತಿಯ ಖರ್ಚುಗಳು ಹೆಚ್ಚಾಗುವ ಸಂದರ್ಭವಿದೆ.

ಪದಬಂಧ 2931

ಮೇಲಿನಿಂದ ಕೆಳಕ್ಕೆ

1. ಮಾಡುವ ಮೋಸ ದಗಾ	3
2. ಮನಸ್ಸಿಗೆ ಉಲ್ಲಾಸದ ಮೆರಗು ನೀಡುವವಳು	3
3. ಸುರುಳಿ ಸುತ್ತುವ ಮುಂಗುರುಳು	3
4. ಕನ್ನಡದ ವಿದ್ಯಾರ್ಜನೆ ಕೆಳಗಿನಿಂದ ಮೇಲೆ	3
7. ಕನ್ನಡವಾದ ಆಂಗ್ಲ ಬೇಡಿಕೆ	3
9. ಕೂಳಿಗಾಗಿ ಕಾಡಿ ಬೇಡುವವ	3
11. ಸಂಸ್ಕೃತದ ದಂತ ಪಂಕ್ತಿ	3
12. ಊರ ಮುಂದೆ ಕನಸು ಕಂಡ ಭಿಕ್ಷುಕ	3
13. ಜನ್ಮ ನೀಡಿದ ಮಾತೆ	3
14. ರಾಹುಗ್ರಸ್ಥನಾದ ಸಿದ್ಧಾರ್ಥನ ಮಗ	3
17. ಮೂಗಿನಷ್ಟೇ ಪ್ರಮುಖ ಊರು	3
19. ಸರ್ಕಾರಿ ಕಚೇರಿಯ ಮೇಜಿನ ಮೇಲೆ ರಾಶಿಯಾಗುವ ಫೈಲು	3
20. ನಾಡಿಯನ್ನು ಮಿಡಿಯುವ ದೇಶಸ್ಥ	3
21. ಬಹಳ ಎತ್ತರವಾದುದು ಎಟುಕಲಾರದ ಪದ	3
22. ಮನಸ್ಸು ಕರಗಿ ನೀರಾಗುವ ಭಾವ ಜೀವಿ	3
23. ಪೂಜಾ ಪಾತ್ರೆಗೆ ಬರುವ ವಿರಳವಾದ ಕೆಂಪು ಲೋಹ	3

ಎಡದಿಂದ ಬಲಕ್ಕೆ

1. ತಾಯಿಯನ್ನು ನಮಿಸುವ ನಮ್ಮ ದೇಶ ಗೀತೆ, ಸ್ವಾತಂತ್ರ್ಯ ಸಂಗ್ರಾಮದ ಘೋಷ	5
3. ಒಟ್ಟಿಗೆ ಸೇರಿ ಮಾಡುವ ಮಸಲತ್ತು	5
5. ಒಂದೇ ಸಮನೆ ತೊಟ್ಟಿಕ್ಕುವ ಮಳೆ	3
6. ಮಳೆಗಾಲದಲ್ಲಿ ಮೂಗಿಗೆ ಬಡಿಯುವ ಕಾಯಿಲೆ	5
8. ಮಹಾಶಿವನಿಗೆ ಮಾಡುವ ಹಾಲು ಮೊಸರುಗಳ ಮಜ್ಜನ	5
10. ಮೂಲ ಪ್ರತಿಯಿಂದ ಮಾಡಿದ ನಕಲು	5
13. ಮಿಥಿಲಾಪುರದ ಅರಸ ಸೀತೆಯ ತಂದೆ	5
15. ರೋಗಕ್ಕೆ ಅಂಟಿಕೊಂಡ ವ್ಯಾಧಿ	3
16. ಪ್ರತಿಷ್ಠೆಯ ಮಂದಿಯ ಒಡೆಯ	5
18. ಪ್ರತಿದಿನವೂ ನಡೆಯುವ ಜಗಳ ಮನಸ್ತಾಪ	5
20. ನಾವು ಪಾತ್ರಧಾರಿಗಳಾದರೆ ಈ ಜೀವನವೇ ಒಂದು ಪ್ರದರ್ಶನದ ವೇದಿಕೆ	5
22. ನಮ್ಮ ರಾಷ್ಟ್ರ ತಾಯಿ	5
24. ಇಂದು ಒಂದರೆಡಲ್ಲ ಒಂದಷ್ಟು	3
25. ಆಕಾಶ ಮುಖೇನ ಪ್ರಯಾಣ	5
26. ದಯೆಯ ಹಸ್ತ ಚಾಚುವವ	5



ಪದಬಂಧ ಉತ್ತರ -2930

ಮೇಲಿಂದ ಕೆಳಕ್ಕೆ

1ಹರಿನಾಮ 2.ಸುಪನಾತಿ 3.ಮಹಾರಾಶಿ 4.ವಶೀಲಿ 6.ಕಲಹಂಸ 7.ಲಕ್ಷಾಧೀಶ 9.ಶಾಂಭವಿ 11.ಕರನ್ಯಾಸ 12.ಸಿಗಂದೂರು 14.ಕಮಾನು 16. ಸಮಾರೋಪ 17.ಆರ್ಯಭಟ 18.ದಮನಕ 20.ಕದನ

ಎಡದಿಂದ ಬಲಕ್ಕೆ

1.ಹಣಕಾಸು 3.ಮಹಾಶಿವರಾತ್ರಿ 5.ನಾಗರಾ 6.ಕಲಿಗಾಲ 8.ಮನಃಶಾಂತಿ 10.ಶಿಥಿಲ 11.ಕಸಿವಿಸಿ 13.ಸಕಲೇಶ 15.ದೂರ್ವಾಸ 17.ಅನುವಾದ 19.ಸಭಿಕರು 21.ಮಾಧುರ್ಯ 22.ಸದನಕಲಾಪ 23.ಟಕಟಕ

ಹುಬ್ಬಳ್ಳಿಯ ಸಿದ್ಧಾರೂಢರ ಮಠದ ಐತಿಹಾಸಿಕ ಕೈಲಾಸ ಮಂಟಪ ರಾಜಸ್ಥಾನ ಶೈಲಿಯ ಗ್ಲಾಸ್ ಪೇಂಟಿಂಗ್ ಅಲಂಕಾರದಿಂದ ಕಂಗೊಳಿಸುತ್ತಿದೆ. ಈ ಕಲಾಕೃತಿಯು ಇಲ್ಲಿಗೆ ಬಂದ ಬಗೆ, ಅದರ ವೈಶಿಷ್ಟ್ಯಗಳ ಕುರಿತು ಬೆಳಕು ಚೆಲ್ಲುವ ಲೇಖನ...

'ಮೀನಾಕರಿ' ಕಲೆಯಿಂದ ವಿನ್ಯಾಸ ಮಾಡಲಾದ ಪೂಜಾಮಂಟಪದಲ್ಲಿ ಭಕ್ತರು
ಚಿತ್ರಗಳು: ಗೋವಿಂದರಾಜ ಜವಳಿ

ಕೈಲಾಸ ಮಂಟಪದಲ್ಲಿ ಗ್ಲಾಸ್ ಪೇಂಟಿಂಗ್ ಸೆಳೆತ

'ಮೀನಾಕರಿ' ಕಲೆಯ ವಿನ್ಯಾಸ

• ಗೌರಮ್ಮ ಕಟ್ಟಿಮನಿ

ಹುಬ್ಬಳ್ಳಿಯ ಸಿದ್ಧಾರೂಢರ ಮಠದ ಆವರಣಕ್ಕೆ ಕಾಲಿಟ್ಟ ಕ್ಷಣದಿಂದಲೇ ಭಕ್ತಿಯ ಜೊತೆಗೆ ಕಣ್ಣುಗಳಿಗೂ ಹಬ್ಬ. 'ಹುಬ್ಬಳ್ಳಿ ಎಂಬುದು ಕೈಲಾಸ, ಸಿದ್ಧಾರೂಢರೇ ಪರಮೇಶ' ಎನ್ನುವ ಮಾತು ಇಲ್ಲಿ ಕೇವಲ ಭಾವನೆ ಮಾತ್ರವಲ್ಲ; ದೃಶ್ಯರೂಪದಲ್ಲಿ ಮೂಡಿಬಂದ ಅನುಭವ.

ಐತಿಹಾಸಿಕ ಕೈಲಾಸ ಮಂಟಪ ರಾಜಸ್ಥಾನ ಶೈಲಿಯ ಗ್ಲಾಸ್ ಪೇಂಟಿಂಗ್ ಅಲಂಕಾರದಿಂದ ಕಂಗೊಳಿಸುತ್ತಿದೆ. ಉತ್ತರ ಭಾರತದ ದೇವಾಲಯಗಳಲ್ಲಿ ಕಾಣುವ 'ಮೀನಾಕರಿ' ಕಲೆಯ ಸ್ಪರ್ಶ ಇಲ್ಲಿ ಪ್ರತಿಯೊಂದು ಗೋಡೆ, ಪ್ರತಿಯೊಂದು ಮೂಲೆಗೂ ಬೆಳಕು ತುಂಬಿದೆ. 'ಮೀನಾ' ಎಂದರೆ ಸ್ವರ್ಗ, 'ಕರಿ' ಎಂದರೆ ಸೃಷ್ಟಿ–ಅಕ್ಷರಶಃ ಸ್ವರ್ಗಸೌಂದರ್ಯವನ್ನು ಭೂಮಿಯ ಮೇಲೆ ಮೂಡಿಸುವ ಕಲೆಯಿದು.

ರಾಜಸ್ಥಾನದಿಂದ ಕೈಲಾಸದವರೆಗೆ...

ಈ ಕನಸಿಗೆ ರೂಪ ಕೊಟ್ಟದ್ದು ಮಠದ ಅಂದಿನ ಚೇರ್ಮನ್ ಮಹೇಂದ್ರ ಸಿಂಘಿ ಅವರ ಕಲಾದೃಷ್ಟಿ. ಉತ್ತರ ಭಾರತದ ದೇವಾಲಯಗಳ ಗಾಜಿನ ವಿನ್ಯಾಸ ಅವರನ್ನು ಬಹುವಾಗಿ ಸೆಳೆದಿತ್ತು. ಅದೇ ಶೈಲಿಯನ್ನು ತಮ್ಮ ಕೈಲಾಸ ಮಂಟಪದಲ್ಲೂ ಅರಳಿಸಬೇಕು ಎಂದು ನಿರ್ಧರಿಸಿದರು. ಬಳಿಕ ರಾಜಸ್ಥಾನದ ಅಜ್ಮೀರ್ ಜಿಲ್ಲೆಯ ಕಿಶನ್‌ಘರ್‌ಗೆ ತೆರಳಿದರು. ಅಲ್ಲಲ್ಲ ಹುಡುಕಾಡಿ ಐದು ಮಂದಿ ಪರಿಣತ ಕಲಾವಿದರನ್ನು ಹುಬ್ಬಳ್ಳಿಗೆ ಕರೆತಂದರು.

ಇದಕ್ಕಾಗಿ ಜೈಪುರದಿಂದಲೇ ಕಚ್ಚಾವಸ್ತುಗಳನ್ನು ತರಿಸಲಾಯಿತು. ಸುಮಾರು ಒಂಬತ್ತು ತಿಂಗಳು ನಡೆದ ಶ್ರಮ, ಸೂಕ್ಷ್ಮ ಕುಸರಿ ಮತ್ತು ಕಲಾತ್ಮಕ ತಾಳ್ಮೆಯ ಫಲವಾಗಿ ಈ ಗ್ಲಾಸ್ ಪೇಂಟಿಂಗ್ ಅದ್ಭುತವಾಗಿ ಜೀವ ತಳೆಯಿತು.

ಕಲೆಯ ಒಳನೋಟ

ಮೊದಲು ಆಯಿಲ್ ಪೇಂಟ್‌ನಿಂದ ಜ್ಯಾಮಿತೀಯ ಆಕೃತಿಗಳನ್ನು ಚಿತ್ರಿಸಲಾಯಿತು. ಅದರ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಲೇಪಿಸಿ, ವಿನ್ಯಾಸಕ್ಕೆ ಅನುಗುಣವಾಗಿ ಬಣ್ಣ ಬಣ್ಣದ ಗಾಜಿನ ತುಣುಕುಗಳನ್ನು ನಿಖರವಾಗಿ ಕತ್ತರಿಸಿ ಜೋಡಿಸಲಾಯಿತು. ಚಿನ್ನ, ಬೆಳ್ಳಿ, ತಾಮ್ರದ ತೆಳುವಾದ ಪದರಗಳಿಂದ ಮಂಟಪಕ್ಕೆ ಮೆರುಗು ನೀಡಲಾಯಿತು.

'ಮೇಲ್ಭಾಗದಲ್ಲಿ ಬೆಳ್ಳಿಯ ಲೇಪನದ ಜ್ಯಾಮಿತೀಯ ವಿನ್ಯಾಸಗಳು ಹೊಳೆಯುತ್ತಾ, ಮಧ್ಯದಲ್ಲಿ ಅಳವಡಿಸಿರುವ ಸಿದ್ಧಾರೂಢ ಸ್ವಾಮಿ ಹಾಗೂ ಗುರುನಾಥ ಅಜ್ಜನ ಮೂರ್ತಿಗಳನ್ನು ಪ್ರತಿಬಿಂಬಿಸುತ್ತವೆ. ಸುತ್ತಲೂ ಆಲಂಕಾರಿಕ ಹೂಜಿ, ಬಾತುಕೋಳಿಗಳು, ಪಕ್ಷಿಗಳು ಹಾಗೂ ನಿಖರ ಜ್ಯಾಮಿತೀಯ ಆಕೃತಿಗಳು ಕಂಗೊಳಿಸುತ್ತವೆ. ಕನ್ನಡ ಹಾಗೂ ಹಿಂದಿಯಲ್ಲಿ ಚಿನ್ನ-ಬೆಳ್ಳಿಯ ಪದರಗಳಿಂದ ಬರೆಯಲಾದ 'ಓಂ' ಮಂತ್ರ, ಕಲೆಗೆ ಆಧ್ಯಾತ್ಮಿಕ ಸ್ಪರ್ಶವನ್ನು ನೀಡುತ್ತದೆ' ಎಂದು ರಾಜಸ್ಥಾನದ ಕಿಶನಘರ್‌ನ ಜೆ.ಪಿ.ಆರ್ಟ್ಸ್‌ನ ಕಲಾವಿದ ಸೋಹನಲಾಲ್ ಕುಮಾವತ್ ಹೇಳುತ್ತಾರೆ.

ಬೆಳಕು, ಪ್ರತಿಬಿಂಬ ಮತ್ತು ಭಕ್ತಿ

ಬಾಗಿಲಿಲ್ಲದ ವಿಶಾಲ ಕೈಲಾಸ ಮಂಟಪದಲ್ಲಿ ಬೆಳಕು ಒಳಗೆ ಬಂದಾಗ, ಗಾಜಿನ ತುಣುಕುಗಳು ನೂರಾರು ಕಿರಣಗಳಾಗಿ ಚಿಮ್ಮುತ್ತವೆ. ಪ್ರತಿಯೊಂದು ತುಣುಕು ತನ್ನದೇ ಆದ ಕಥೆಯನ್ನು ಹೇಳುವಂತೆ ಭಾಸವಾಗುತ್ತದೆ. ಭಕ್ತರು, ಕಲಾಸಕ್ತರು ಮಂಟಪದೊಳಗೆ ನಿಂತ ಕ್ಷಣ, ಅವರ ಪ್ರತಿಬಿಂಬವೂ ಆ ಕಲೆಯ ಭಾಗವಾಗಿಬಿಡುತ್ತದೆ. ಭಕ್ತಿ ಮತ್ತು ಕಲೆ ಒಂದೇ ಚೌಕಟ್ಟಿನಲ್ಲಿ ಕಾಣಿಸುತ್ತವೆ.

1926ರಲ್ಲಿ ನಿರ್ಮಿತವಾದ ಕೈಲಾಸ ಮಂಟಪ, ಶತಮಾನದ ಸಂಭ್ರಮದಲ್ಲಿರುವ ಈ ಸಂದರ್ಭದಲ್ಲಿ ಹೊಸತನ್ನು ಪಡೆದಿದೆ. ಅಂದಾಜು ₹12 ಲಕ್ಷಕ್ಕೂ ಅಧಿಕ ವೆಚ್ಚದಲ್ಲಿ ಹೊಸ ವಿನ್ಯಾಸ ಪಡೆದ ಈ ಮಂಟಪವನ್ನು ಜುಲೈ 28, 2011 ರಂದು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ನೈರುತ್ಯ ರೈಲ್ವೆ ವಲಯದ ಅಂದಿನ ಜನರಲ್ ಮ್ಯಾನೇಜರ್ ಕುಲದೀಪ ಚತುರ್ವೇದಿ ಅವರು ಉದ್ಘಾಟಿಸಿದರು ಎನ್ನುತ್ತಾರೆ ಮಠದ ಕಮಿಟಿಯ ಮಾಜಿ ಚೇರ್ಮನ್ ಮಹೇಂದ್ರ ಸಿಂಘಿ.

ಇಂದು ಕೈಲಾಸ ಮಂಟಪ ಕೇವಲ ಪೂಜಾ ಸ್ಥಳವಲ್ಲ. ಅದು ಉತ್ತರ ಭಾರತದ ರಾಜಸ್ಥಾನಿ ಗ್ಲಾಸ್ ಪೇಂಟಿಂಗ್ ಕಲೆಯ ಸೌಂದರ್ಯ ಮತ್ತು ಉತ್ತರ ಕರ್ನಾಟಕದ ಭಕ್ತಿಯ ಸಂವೇದನೆ ಒಂದಾಗಿರುವ ಸಾಂಸ್ಕೃತಿಕ ಸೇತುವೆಯಾಗಿದೆ.

ಭಕ್ತರು ಇಲ್ಲಿ ದರ್ಶನಕ್ಕೆ ಬರುತ್ತಾರೆ. ಆದರೆ ಹಿಂತಿರುಗುವಾಗ, ಅವರ ಕಣ್ಣುಗಳಲ್ಲಿ ಹೊಳೆಯುವುದು ಕೇವಲ ಮೂರ್ತಿಯ ಪ್ರತಿಬಿಂಬವಲ್ಲ; ರಾಜಸ್ಥಾನದಿಂದ ಕೈಲಾಸದವರೆಗೆ ಪ್ರಯಾಣಿಸಿದ ಕಲೆಯ ಪ್ರಕಾಶವೂ ಆಗಿದೆ. ❖

ಪುಸ್ತಕಗೂಡಿನಲ್ಲಿ ಓದುಗರು

ಗುಟ್ಕಾ ಕಲೆಗಳಿಂದ ಪುಸ್ತಕದ ಬೆಳಕಿಗೆ...

• ಗುರುಪ್ರಸಾದ್ ಎಸ್.ಎಂ.

ಆಗ...

ಬಸ್ ತಂಗುದಾಣದ ಗೋಡೆಗಳು ಗುಟ್ಕಾ, ಪಾನ್ ಉಗುಳಿದ ಕಲೆಗಳಿಂದ ಗಲೀಜಾಗಿದ್ದವು. ನೆಲದಲ್ಲಿ ಬೀಡಿ–ಸಿಗರೇಟ್ ತುಂಡುಗಳು ಚೆಲ್ಲಾಪಿಲ್ಲಿಯಾಗಿದ್ದವು. ಅಲ್ಲಿ ಕುಳಿತುಕೊಳ್ಳಲು ಯಾರೂ ಇಷ್ಟಪಡುತ್ತಿರಲಿಲ್ಲ. ಬಸ್ಸಿಗಾಗಿ ಹೊರಗೆ ನಿಂತೇ ಕಾಯಬೇಕಾಗುತ್ತಿತ್ತು.

ಈಗ...

ಅದೇ ತಂಗುದಾಣದ ಗೋಡೆಗೆ ಸುಂದರ ಕಪಾಟು ಅಲಂಕಾರವಾಗಿದೆ. ಅದರಲ್ಲಿ 900ಕ್ಕೂ ಹೆಚ್ಚು ವಿವಿಧ ಪ್ರಕಾರದ ಪುಸ್ತಕಗಳು, ಓದಲು ಬೆಂಚುಗಳು, ಮೇಜುಗಳು ಇವೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಯುವಕರು, ಲೋಕ ಅರಿಯಲು ಬಯಸುವ ಹಿರಿಯರು—ಎಲ್ಲರೂ ಇಲ್ಲಿಗೆ ಬರುತ್ತಾರೆ. ನೆಮ್ಮದಿಯಾಗಿ ಕುಳಿತು ಓದಿನಲ್ಲಿ ಮಗ್ನರಾಗುತ್ತಾರೆ.

ಇದು ಕೊಟ್ಟೂರು ತಾಲ್ಲೂಕಿನ ಹ್ಯಾಳ್ಯಾ ಬಸ್ ತಂಗುದಾಣದಲ್ಲಿರುವ 'ಪುಸ್ತಕ ಗೂಡಿ'ನ ಚಿತ್ರಣ.

ಈ ಗೂಡಿನಲ್ಲಿ ಕುವೆಂಪು, ವಿ.ಕೃ.ಗೋಕಾಕ್, ದ.ರಾ. ಬೇಂದ್ರೆ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಕಂಬಾರ, ಕುಂ.ವೀರಭದ್ರಪ್ಪ, ಈಚನೂರು ಶಾಂತ, ವ್ಯಾಸರಾಯ ಬಲ್ಲಾಳ ಸೇರಿದಂತೆ ಅನೇಕ ಶ್ರೇಷ್ಠ ಲೇಖಕರ ಕಾದಂಬರಿ, ಕಥಾಸಂಕಲನ, ಕವನಸಂಕಲನ, ನಾಟಕಗಳು ಹಾಗೂ ಸಾಹಿತ್ಯೇತರ ಕೃತಿಗಳಿವೆ.

ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ ನಿಯತಕಾಲಿಕೆಗಳೂ ಲಭ್ಯ.

ಡಿಜಿಟಲ್ ಯುಗದಲ್ಲಿ ಓದುವ ಹವ್ಯಾಸ ಕುಂಠಿತವಾಗುತ್ತಿದೆ ಎನ್ನುವ ಮಾತು ಜೋರಾಗಿದೆ. ಆದರೆ ಹ್ಯಾಳ್ಯಾದ ಈ ಪುಸ್ತಕ ಗೂಡು ಅದಕ್ಕೆ ಅಪವಾದ. ಓದಿನ ಅಭಿರುಚಿ ಹೆಚ್ಚಿಸುವ ಮಾದರಿಯಾಗಿ ಇದು ಗಮನ ಸೆಳೆಯುತ್ತಿದೆ.

2024ರಲ್ಲಿ ಹ್ಯಾಳ್ಯಾ ಗ್ರಾಮ ಪಂಚಾಯಿತಿ ₹30 ಸಾವಿರ ವೆಚ್ಚದಲ್ಲಿ ಅಧ್ಯಕ್ಷೆ ಡಿ. ಹಾಲಮ್ಮ ನಿಜೇಶ್ ಕುಮಾರ್ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿ.ಎಚ್.ಎಂ. ಗಂಗಾಧರಯ್ಯ ಅವರ ಆಸಕ್ತಿಯಿಂದ ಈ ಯೋಜನೆ ಆರಂಭವಾಯಿತು. ಗ್ರಂಥಪಾಲಕ ಬಿ. ಲೋಕೇಶ್ ಅವರ ಕಲ್ಪನೆಯ ಕೂಸಾದ ಈ ಗೂಡಿಗೆ ಇಲಾಖೆಯ ಸಹಕಾರವೂ ಸಿಕ್ಕಿದೆ.

'ಮಳೆ, ಗಾಳಿ, ಬಿಸಿಲಿನಿಂದ ಪುಸ್ತಕಗಳನ್ನು ರಕ್ಷಿಸಲು ಕಪಾಟುಗಳನ್ನು ನಿರ್ಮಿಸಿದ್ದೇವೆ. ವಾಹನಗಳ ಹೊಗೆ ಮತ್ತು ಧೂಳಿನಿಂದ ಸಂಪೂರ್ಣ ರಕ್ಷಣೆಗಾಗಿ ಗ್ಲಾಸ್ ಅಳವಡಿಸಲು ₹78 ಸಾವಿರ ಮಂಜೂರಾಗಿದೆ. ಮಕ್ಕಳನ್ನು ಆಕರ್ಷಿಸಲು ಚಿತ್ರಗಳನ್ನು ಬಿಡಿಸುವ ಯೋಜನೆಯೂ ಇದೆ' ಎನ್ನುತ್ತಾರೆ ಗ್ರಂಥಪಾಲಕ ಬಿ. ಲೋಕೇಶ್.

ಓದುಗರ ಅನುಕೂಲಕ್ಕಾಗಿ ಫ್ಯಾನ್ ಅಳವಡಿಸಲಾಗಿದೆ. ಸಿಸಿಟಿವಿ ಕಣ್ಗಾವಲೂ ಇದೆ. ಹೀಗಾಗಿ ಪುಸ್ತಕಗಳು ಸುರಕ್ಷಿತ.

'ಓದುವ ಹವ್ಯಾಸ ಇದ್ದರೆ ಸೋಮಾರಿತನಕ್ಕೆ ಜಾಗವಿಲ್ಲ',
'ಪುಸ್ತಕವಿಲ್ಲದ ಮನೆ ಆತ್ಮವಿಲ್ಲದ ದೇಹವಿದ್ದಂತೆ',
'ಪುಸ್ತಕವನ್ನು ತಲೆತಗ್ಗಿಸಿ ಓದಿದರೆ ಅದು ನಿನ್ನನ್ನು ತಲೆಯೆತ್ತುವಂತೆ ಮಾಡುತ್ತದೆ'—
ಇಂತಹ ಗೋಡೆ ಬರಹಗಳು ಓದುಗರ ಮನ ಸೆಳೆಯುತ್ತವೆ.

'ತಂಬಾಕು, ಬೀಡಿ–ಸಿಗರೇಟ್ ಕಸದ ತಾಣವಾಗಿದ್ದ ಈ ಸ್ಥಳದ ಸಂಪೂರ್ಣ ಚಿತ್ರಣವನ್ನು ಪುಸ್ತಕ ಗೂಡು ಬದಲಿಸಿದೆ. ಓದಿನ ಶಕ್ತಿಯೇ ಇದು' ಎನ್ನುತ್ತಾರೆ ಸ್ನಾತಕೋತ್ತರ ಪದವೀಧರ ಕೊಟ್ರೇಶ್.

'ಮಕ್ಕಳಿಗೆ ಕಥೆ ಪುಸ್ತಕಗಳು, ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ನಿಯತಕಾಲಿಕೆಗಳು—ಎಲ್ಲವೂ ಇಲ್ಲಿವೆ. ಸಮಯ ವ್ಯರ್ಥಗೊಳಿಸುವ ಬದಲು ಓದಿನಲ್ಲಿ ತೊಡಗಿಸಿಕೊಳ್ಳುವ ಸಂಸ್ಕೃತಿ ಬೆಳೆದಿದೆ' ಎನ್ನುತ್ತಾರೆ ಯುವ ಮುಖಂಡ ಟಿ. ಮಹಾಂತೇಶ್.

'ಪುಸ್ತಕ ಜೋಳಿಗೆ' ಯೋಜನೆಯಡಿ ಜನರಿಂದ ದಾನವಾಗಿ ಪುಸ್ತಕಗಳನ್ನು ಸಂಗ್ರಹಿಸಲಾಗುತ್ತಿದೆ. ಗ್ರಂಥಾಲಯ ಇಲಾಖೆಯೂ ಪುಸ್ತಕಗಳನ್ನು ಪೂರೈಸುತ್ತಿದೆ.

'ವಿದ್ಯಾರ್ಥಿಗಳಿಗೆ ಓದುವ ಹವ್ಯಾಸ ರೂಢಿಸಲು ಪಂಚಾಯಿತಿ ಮತ್ತು ಗ್ರಂಥಪಾಲಕರ ಪರಿಶ್ರಮವೇ ಕಾರಣ' ಎಂದು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುತ್ತಿರುವ ಕೆ. ಹರ್ಷವರ್ಧನ್ ಅಭಿಪ್ರಾಯಪಡುತ್ತಾರೆ.

ಹೊಸತನವನ್ನು ಯೋಚಿಸುವ ಅಧಿಕಾರಿಗಳು, ಬೆಂಬಲಿಸುವ ಜನಪ್ರತಿನಿಧಿಗಳು, ಜೊತೆಯಾಗುವ ಗ್ರಾಮಸ್ಥರು ಇದ್ದರೆ—ಪುಸ್ತಕ ಗೂಡು ಎಲ್ಲೆಡೆಯೂ ಸಾಧ್ಯ. ❖

ಹ್ಯಾಳ್ಯಾ ಬಸ್ ತಂಗುದಾಣದ ಪುಸ್ತಕ ಗೂಡು

ಹಳ್ಳಿಯಿಂದ ದಿಲ್ಲಿವರೆಗೆ...

10ನೇ ಪುಟದಿಂದ...

ಅವರ ಬೆಂಬಲದಿಂದ ನನಗೆ ನವದೆಹಲಿಯ ಒಂದು ಮಹತ್ವದ ಕಾನ್ಫರೆನ್ಸ್‌ಗೆ ಅರ್ಜಿ ಹಾಕುವ ಅವಕಾಶ ದೊರಕಿತು. ಆದರೆ, ಅದು ಸುಲಭದ ದಾರಿ ಆಗಿರಲಿಲ್ಲ. ಸುಮಾರು 600 ಜನ ಬೇರೆ ಬೇರೆ ರಾಜ್ಯಗಳಿಂದ ಅರ್ಜಿ ಸಲ್ಲಿಸಿದ್ದರು. ಕರ್ನಾಟಕದಿಂದ ಕೇವಲ ಇಬ್ಬರು!

ನಾನು ಆಯ್ಕೆಯಾಗಬಹುದೇ? ಈ ಪ್ರಶ್ನೆ ದಿನವೂ ಕಾಡುತ್ತಿತ್ತು.

ನನಗೆ ಇಂಗ್ಲಿಷ್ ದೊಡ್ಡ ಸವಾಲಾಗಿತ್ತು. ಆದರೆ 'ಸಂವಾದ' ನನ್ನನ್ನು ಕೈ ಬಿಡಲಿಲ್ಲ. ಅವರು ನನಗೆ ಇಂಗ್ಲಿಷ್ ಮಾತನಾಡಲು ಕಲಿಸಿದರು. ಆತ್ಮವಿಶ್ವಾಸ ತುಂಬಿದರು. ನನ್ನ ನೋವನ್ನೇ ನನ್ನ ಶಕ್ತಿಯನ್ನಾಗಿ ಮಾಡಿದರು. ಪ್ರತಿ ಹಂತವೂ ನನ್ನನ್ನು ಪರೀಕ್ಷಿಸಿತು. ನಾನು ಮತ್ತೆ ಮತ್ತೆ ನನ್ನ ಬದುಕಿನ ನೋವನ್ನು ಹೇಳಿಕೊಳ್ಳಬೇಕಾಯಿತು.

ಸೋತರೆ ಅನುಭವ, ಗೆದ್ದರೆ ಸಾಧನೆ ಎಂಬ ನಂಬಿಕೆಯಿಂದ ಮುಂದುವರಿದೆ. ಕೊನೆಗೆ ಆಯ್ಕೆಯಾದವರ ಪಟ್ಟಿ ಪ್ರಕಟವಾಯಿತು. ನನ್ನ ಎದೆಯಲ್ಲಿ ಆತಂಕ. ನಾನು ಆಯ್ಕೆಯಾಗಿದ್ದೆ! ಆಗ ಕಣ್ಣುಗಳು ಜಿನುಗಿದವು. ಆ ಕ್ಷಣದಲ್ಲಿ ನನಗೆ ರೆಕ್ಕೆ ಬಂದಂತಾಯಿತು. ಸಂತೋಷಕ್ಕೆ ಆ ರಾತ್ರಿ ನಿದ್ದೆ ಬರಲೇ ಇಲ್ಲ.

ನಾನು ನವದೆಹಲಿಗೆ ಹೊರಡುವ ದಿನ ಬಂದಿತು. ಅದು ನನ್ನ ಮೊದಲ ಬಾರಿ ವಿಮಾನ ಪ್ರಯಾಣ. ಹಳ್ಳಿಯಲ್ಲಿ ವಿಮಾನ ಹಾರುವುದನ್ನು ನೋಡಿ 'ಅಬ್ಬಾ' ಎಂದಿದ್ದ ನಾನು, ಅದರೊಳಗೆ ಕುಳಿತಿದ್ದೆ! ವಿಮಾನ ನಿಲ್ದಾಣದಲ್ಲಿ ನನ್ನ ಕೈಗಳು ನಡುಗುತ್ತಿದ್ದವು. ಆಕಾಶದತ್ತ ಹಾರಿದಾಗ ನನ್ನ ಕಣ್ಣಲ್ಲಿ ಹಳ್ಳಿಯ ಮಣ್ಣು, ಅಮ್ಮನ ಕಣ್ಣೀರು, ಅಪ್ಪನ ಮೌನ...ಎಲ್ಲವೂ ನುಗ್ಗಿ ಬಂದವು.

ಭಯವೂ..ಗರ್ವವೂ...

ನವದೆಹಲಿ ತಲುಪಿದ ದಿನ ಎದೆಯಲ್ಲಿ ಭಯವೂ ಇತ್ತು, ಗರ್ವವೂ ಇತ್ತು. ಬೇರೆ ಭಾಷೆ, ಬೇರೆ ಸಂಸ್ಕೃತಿ, ಬೇರೆ ಜನ. ಆದರೂ ನನ್ನ ಕಾಲುಗಳು ನೆಲವನ್ನು ತಟ್ಟಿದ ಕ್ಷಣದಲ್ಲಿ ಧೈರ್ಯ ಹುಟ್ಟಿತು. ವೇದಿಕೆಯ ಹಿಂದೆ ನಿಂತು ಉಸಿರೆಳೆದಾಗ, ಇಪ್ಪತ್ತೊಂದು ವರ್ಷ ವಯಸ್ಸಿನವನಾದ ನಾನು ಒಳಗೆ ಅಲುಗಾಡುತ್ತಿದ್ದೆ. ಆದರೆ ಕಣ್ಣು ಮುಚ್ಚಿದಾಗ ನನಗೆ ನನ್ನ ಹಳ್ಳಿ ಕಂಡಿತು. ಅಲ್ಲಿ ನಾನು ಮಾತಾಡಲು ಹೆದರಿದ್ದೆ. ಇಲ್ಲಿ ನಾನು ಮಾತನಾಡಲೇಬೇಕಿತ್ತು. ಅಲ್ಲಿ ಮಾತಾಡಲಾರದ ಸಾವಿರಾರು ಯುವಕರ ಧ್ವನಿಯಾಗಿದ್ದೆ. ನನ್ನ ಧ್ವನಿಯಲ್ಲಿ ಅವರ ಕನಸುಗಳು, ಅವರ ನೋವು, ಅವರ ನಿರೀಕ್ಷೆಗಳೂ ಸೇರಿಕೊಂಡಿದ್ದವು.

ದೆಹಲಿ ಸಮ್ಮೇಳನದಲ್ಲಿ ಪ್ರತಿನಿಧಿಗಳು

ವೇದಿಕೆ ಮೇಲೆ ಕಾಲಿಟ್ಟಾಗ ಹೃದಯದ ಬಡಿತ ಕೇಳಿಸಿಕೊಳ್ಳುವಷ್ಟು ಮೌನವಿತ್ತು. ಮಾತನಾಡಲು ಆರಂಭಿಸಿದಾಗ, ಪದಗಳು ನನ್ನೊಳಗಿಂದ ಹರಿದುಬಂದವು. ಅರ್ಜಿ ಹಾಕಿದ ದಿನದಿಂದ ಅನುಭವಿಸಿದ ಅವಮಾನ, ಹಸಿವು, ನಿರಾಸೆ ಅವುಗಳೆಲ್ಲ ನನ್ನ ಮಾತಿನೊಳಗೆ ಜೀವ ಪಡೆದವು. ಬೇರೆ ಬೇರೆ ರಾಜ್ಯಗಳಿಂದ ಬಂದವರು ತಮ್ಮ ರಾಜ್ಯಗಳ ಬಗ್ಗೆ ಹೆಮ್ಮೆಪಟ್ಟು ಮಾತನಾಡಿದರು. ನಾನು ಕರ್ನಾಟಕದ ಬಗ್ಗೆ ಮಾತನಾಡಿದೆ.ಸಂಸ್ಕೃತಿಯ ತವರೂರಾದ ನಮ್ಮ ರಾಜ್ಯ, ಕಲೆಗಳು, ಜನರ ಸಹನಶೀಲತೆ–ಎಲ್ಲವನ್ನೂ ಎದೆಯಿಂದ ಹೊರಬಂದಂತೆ ಹೇಳಿದೆ.

ಶಿಕ್ಷಣ ಹಳ್ಳಿ ಮಕ್ಕಳಿಗೆ ಐಶ್ವರ್ಯವಲ್ಲ, ಅದು ಬದುಕಿನ ಏಕೈಕ ದಾರಿ ಎಂದು ನೋವಿನಿಂದ ಹೇಳಿದೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎಂಬ ಮಾತುಗಳನ್ನು ವೇದಿಕೆಯಲ್ಲಿ ಹಿಂದಿಯಲ್ಲಿ ಹೇಳುವಾಗ, ನನ್ನೊಳಗಿನ ಹಳ್ಳಿ ಹುಡುಗನೂ ನನ್ನ ಜೊತೆ ಮಾತಾಡುತ್ತಿದ್ದ.

ಯುವಜನರ ಬಗ್ಗೆ ಮಾತನಾಡುವಾಗ ನನ್ನ ಧ್ವನಿಯಲ್ಲಿ ಭರವಸೆ ಇತ್ತು. ಬದಲಾವಣೆ ಯಾರಿಂದ ಸಾಧ್ಯ ಎಂದು ಪ್ರಶ್ನಿಸಿದಾಗ, ಉತ್ತರ ನನ್ನೊಳಗೇ ಇತ್ತು-ಅದು ಯುವಜನರಿಂದಲೇ. ಆದರೆ ಮೊದಲು ನಾವು ಬದಲಾಗಬೇಕು ಎಂದು ಭಯವಿಲ್ಲದೇ ಹೇಳಿದೆ. ಲಿಂಗತ್ವದ ಕುರಿತು ಮಾತನಾಡುವಾಗ ಧೈರ್ಯ ನನ್ನನ್ನು ಹಿಡಿದಿಟ್ಟಿತು. ಸಮಾನತೆ ಇಲ್ಲದೆ ಸಮಾಜ ಮುಂದೆ ಸಾಗಲಾರದು ಎಂದು ಸ್ಪಷ್ಟವಾಗಿ ಹೇಳಿದೆ. ಶಿಕ್ಷಣದಲ್ಲಿ ಲಿಂಗತ್ವದ ಅರಿವು ಅತ್ಯಂತ ಮುಖ್ಯ, ಇನ್ನೊಬ್ಬರ ಅಸ್ತಿತ್ವವನ್ನು ಗೌರವಿಸುವುದೇ ನಿಜವಾದ ಪ್ರಗತಿ ಎಂದು ಹೇಳಿದೆ. ಸಭಾಂಗಣ ಮೌನವಾಗಿ ಕೇಳುತಿತ್ತು. ಆ ಮೌನದಲ್ಲಿ ನನ್ನ ಕಷ್ಟಗಳ ಪ್ರತಿಧ್ವನಿ, ನನ್ನ ಧೈರ್ಯದ ಪ್ರತಿಬಿಂಬ, ನನ್ನ ಹೋರಾಟದ ಗೌರವ ಇತ್ತು.

ನಂತರ ಎದ್ದ ಚಪ್ಪಾಳೆ ಅದು ಕೇವಲ ಶಬ್ದವಲ್ಲ. ಅದು ನನ್ನ ಬದುಕಿನ ಹಾದಿಗೆ ಸಿಕ್ಕ ದೃಢೀಕರಣವಾಗಿತ್ತು. ನನ್ನ ಕಥೆ ಹಳ್ಳಿಯಿಂದ ಡೆಲ್ಲಿಗೆ ನಡೆದ ಒಂದು ಭೌತಿಕ ಪ್ರಯಾಣವಲ್ಲ. ಅದು ಹಸಿವಿನಿಂದ ಹೋರಾಟಕ್ಕೆ, ಕಣ್ಣೀರಿನಿಂದ ಧೈರ್ಯಕ್ಕೆ, ಮೌನದಿಂದ ಮಾತಿಗೆ ನಡೆದ ಒಂದು ಮಹಾಯಾನ.

ನಾನು ಬೆಂಗಳೂರೆಂಬ ಮಹಾನಗರದಲ್ಲಿ ನಿಂತಿದ್ದರೂ, ನನ್ನೊಳಗೆ ಇನ್ನೂ ಹಳ್ಳಿಯ ಮಣ್ಣು ಜೀವಂತವಾಗಿದೆ. ಆ ಮಣ್ಣಿನಿಂದಲೇ ನನ್ನ ಧ್ವನಿ ಹುಟ್ಟಿದೆ. ಆ ಧ್ವನಿಯೇ ನನ್ನ ಶಕ್ತಿ. ಆ ಶಕ್ತಿಯೇ ನನ್ನ ಮುಂದಿನ ಪ್ರಯಾಣಕ್ಕೆ ದಾರಿ ತೋರಿಸುತ್ತದೆ ಎನ್ನುವ ನಂಬಿಕೆ ಇದೆ. ❖

ಮೊದಲ ಓದು



ಮತ್ತೆ ಮುಖ್ಯಮಂತ್ರಿ
ಲೇ: ಕೆ.ವೈ. ನಾರಾಯಣಸ್ವಾಮಿ
ಪ್ರ: ಮಾವಲಿ ಪಬ್ಲಿಕೇಶನ್
ಸಂ: 6360915721

ರಾಜಕಾರಣದ ವಾಸ್ತವವಾದಿ ನಾಟಕ

ಪ್ರಜಾಪ್ರಭುತ್ವದ ಮೂಲ ರೂವಾರಿಗಳು ಪ್ರಜೆಗಳೇ ಆಗಿದ್ದರೂ ವಾಸ್ತವದ ಅಧಿಕಾರದಲ್ಲಿ ಅವರೇನು ಆಗಿದ್ದಾರೆ ಎನ್ನುವುದನ್ನು 'ಮತ್ತೆ ಮುಖ್ಯಮಂತ್ರಿ' ನಾಟಕ ಪ್ರತಿಬಿಂಬಿಸುತ್ತದೆ.

ನಾಟಕಕಾರರು ಇಂದಿನ ರಾಜಕಾರಣದ ಒಳ ಹೊರಗಿನ ಪರಿಸ್ಥಿತಿಯ ವ್ಯಂಗ್ಯವನ್ನು ಇಲ್ಲಿ ತಂದಿದ್ದಾರೆ. ಅಧಿಕಾರದ ಹಪಹಪಿಯ ಈ ರಂಗರೂಪ ಸಂವಿಧಾನದ ಆಶಯವನ್ನು ಹಾಳುಮಾಡುತ್ತಿರುವ ವಿವಿಧ ರೂಪವನ್ನೂ ಓದುಗನಿಗೆ ದಾಟಿಸುತ್ತದೆ. ವ್ಯಕ್ತಿಯನ್ನು ವೋಟಿನ ಲೆಕ್ಕಾಚಾರದಲ್ಲಿ ನೋಡುವ ರಾಜಕಾರಣದಲ್ಲಿ ಸಂವಿಧಾನದ ಆಶಯದ ಘನತೆಗೆ ಕುಂದುಂಟಾಗುತ್ತಿದೆ. ಇದನ್ನು ನಿಯಂತ್ರಿಸುವ ಯಾವ ವ್ಯವಸ್ಥೆಯೂ ಸಮರ್ಪಕವಾಗಿಲ್ಲ. ಆ ವಿಷಯದಲ್ಲಿ ಮಾಧ್ಯಮ ರಂಗವೂ ವೈಫಲ್ಯ ಆಗುತ್ತಿರುವುದು ಈ ಕಥನದ ಹೂರಣ.

ವಾಸ್ತವವಾದಿ ವಸ್ತುವನ್ನು ರಂಗಕ್ಕೆ ವಿನ್ಯಾಸ ಮಾಡುವುದು ಸವಾಲಿನ ಕೆಲಸ. ಅದರಲ್ಲೂ ರಾಜಕೀಯ ಪ್ರಧಾನ ಆಗಿದ್ದರೆ ಅದರ ಭಾರ ಮತ್ತಷ್ಟು ಹೆಚ್ಚೇ ಆಗುತ್ತದೆ. ಅಂತಹ ಸವಾಲನ್ನು ಇಟ್ಟುಕೊಂಡು ಕೆ.ವೈ. ನಾರಾಯಣಸ್ವಾಮಿ ಈ ನಾಟಕವನ್ನು ರಚಿಸಿದ್ದಾರೆ. 'ಗೋವಿನ ಹಾಡು' ಜನಪದ ಕಥನ ಗೀತೆಯನ್ನು ರಂಗರೂಪಕ್ಕೆ ಪರಿವರ್ತಿಸಿದ್ದಾರೆ. ಆ 'ಪೂರ್ವರಂಗ' ಗೀತೆ ಗಾಂಧಿ–ಅಂಬೇಡ್ಕರ್, ಬಸವಾದಿ ಮಾರ್ಗದ ಪ್ರಜಾತಂತ್ರದ ಕನಸನ್ನು ಸ್ಮರಿಸುತ್ತದೆ. ಮುಖ್ಯಮಂತ್ರಿ ಶೀಲವಂತ ಆದರ್ಶವಾದಿ ರಾಜಕಾರಣಿಯಾಗಿ ಕಾಣಿಸುತ್ತಾರೆ.

ರಾಜ್ಯದ ದೀರ್ಘ ರಾಜಕಾರಣದ ಒಂದಂಶ ನಾಟಕದ ಕೇಂದ್ರವಾಗಿದೆ. ಜಾತಿ ಮತ್ತು ಭ್ರಷ್ಟಾಚಾರ ವ್ಯವಸ್ಥೆಯ ದಿಕ್ಕನ್ನು ಯಾವತ್ತೂ ತಪ್ಪಿಸುತ್ತದೆ. ಅದನ್ನು ಮೌಢ್ಯ ಮತ್ತಷ್ಟು ಪೋಷಣೆ ಮಾಡುತ್ತದೆ. ಮುಖ್ಯಮಂತ್ರಿ ಶೀಲವಂತ, ಗೋಪಾಲಗೌಡರ ಪಾದದ ಮೇಲೆ ಆಣೆ ಮಾಡಿ ಅಧಿಕಾರದ ಗದ್ದುಗೆ ಏರಿದ್ದಾನೆ. ಚುನಾವಣೆ ರಾಜಕಾರಣದಲ್ಲಿ ಆತನೇ ಯಶಸ್ಸಿನ ಅಸ್ತ್ರವಾಗುತ್ತಾನೆ. ಆಡಳಿತದಲ್ಲಿ ಆದ ಲೋಪಗಳಿಂದ ನ್ಯಾಯದ ಕಟಕಟೆಯಲ್ಲಿ ಆತನೇ ನಿಲ್ಲಬೇಕಾಗುತ್ತದೆ. ತನ್ನ ಅಧಿಕಾರದ ಅಕ್ರಮಗಳಿಂದ ಪ್ರಾಮಾಣಿಕ ಅಧಿಕಾರಿಗಳೂ ಶಿಕ್ಷೆಗೆ ಒಳಗಾಗಿದ್ದಾರೆ. ಅವರನ್ನು ರಕ್ಷಿಸಬೇಕು, ತನ್ನ ಆಡಳಿತದ ಅಕ್ರಮಕ್ಕೆ ಸಂಬಧಿಸಿ ತನಿಖೆಗೆ ಆದೇಶಿಸಬೇಕು ಎಂದು ನ್ಯಾಯಪೀಠಕ್ಕೆ ವಿನಂತಿಸುತ್ತಾನೆ. ಕೆಲವೇ ಕ್ಷಣದಲ್ಲಿ ಮುಖ್ಯಮಂತ್ರಿ ಎದೆಗೆ ಗುಂಡು ನಾಟುತ್ತದೆ. ಪ್ರಾಮಾಣಿಕ ವ್ಯವಸ್ಥೆಯ ನಿರೀಕ್ಷೆ ಇನ್ನೂ ನ್ಯಾಯಪೀಠದ ಮುಂದಿದೆ ಎನ್ನುವುದನ್ನು ಧ್ವನಿಸುತ್ತಲೇ ನಾಟಕ ಮುಗಿಯುತ್ತದೆ. ಮತ್ತೆ ಪೂರ್ವರಂಗ ಗೀತೆ ಅನುರಣಿಸುತ್ತದೆ.

ಪುಟ: 96 ₹130



ಇಮೈಯಮ್ ಕಥೆಗಳು
ತಮಿಳು ಮೂಲ: ಇಮೈಯಮ್
ಕನ್ನಡಕ್ಕೆ: ಕನಕರಾಜ್ ಆರನಕಟ್ಟೆ
ಅಶೋಕ್ ಕುಮಾರ್ ಎಂ.
ಪ್ರ: ಅಹರ್ನಿಶಿ
ಸಂ: 9449174662

ಶೋಷಿತರ ನೋವಿಗೆ ಕನ್ನಡಿ ಹಿಡಿಯುವ ಕಥೆಗಳು

ತಮಿಳಿನ ಖ್ಯಾತ ಲೇಖಕ ಇಮೈಯಮ್ (ವಿ.ಅಣ್ಣಾಮಲೈ) ಅವರ 'ನನ್ ಮಾರನ್ ಕೋಟ್ಟೈ ಕಥೈ' ಕಥಾ ಸಂಕಲನವು ಕನ್ನಡದಲ್ಲಿ 'ಇಮೈಮಮ್ ಕಥೆಗಳು' ಎಂದು ಪ್ರಕಟಗೊಂಡಿದೆ. ಒಟ್ಟು ಒಂಬತ್ತು ಕಥೆಗಳ ಗುಚ್ಛ ಇದು. ಇಲ್ಲಿನ ಕಥೆಗಳು ಜನಸಾಮಾನ್ಯನ ನೋವನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯ ಮಹಿಳೆಯೊಬ್ಬಳ ತಳಮಳಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಸಮಾಜದಲ್ಲಿ ಅಡರಿರುವ ಜಾತಿಯ ಮೇಲರಿಮೆ ಬಗ್ಗೆ ಗಾಢವಾಗಿ ಚಿತ್ರಿಸುತ್ತವೆ. ಜನಸಾಮಾನ್ಯರಿಗೆ ಸಿಗುವ ಗೆಲುವನ್ನು ಜಾತಿಯನ್ನೇ ಉಸಿರಾಡಿಕೊಂಡಿರುವವರು ಹೇಗೆ ನುಂಗಿಹಾಕುತ್ತಾರೆ ಎನ್ನುವುದನ್ನು ಇಲ್ಲಿನ ಕಥೆಗಳಲ್ಲಿ ಕಟ್ಟಿಕೊಡಲಾಗಿದೆ. ತಳಮಟ್ಟದ ಜನ ನೋವು, ಸಂಕಟ, ವೇದನೆಗಳೇ ಇಲ್ಲಿನ ಕಥೆಗಳ ವಸ್ತುಗಳು. ಅದನ್ನು ಅಷ್ಟೇ ಸೊಗಸಾಗಿ ಕಟ್ಟಿಕೊಂಡಿದ್ದಾರೆ. ತಮಿಳುನಾಡನ್ನು ಕೇಂದ್ರೀಕರಿಸಿ ಬರೆಯಲಾಗಿದ್ದರೂ ಇಡೀ ದೇಶದ ಸಾಮಾಜಿಕ, ರಾಜಕೀಯ ಚಿತ್ರಣಗಳು ಇಲ್ಲಿನ ಕಥೆಗಳಲ್ಲಿ ಸಿಗುತ್ತದೆ.

ಶಿಕ್ಷಣದಿಂದ ಜಾತಿಯ ಮೇಲರಿಮೆ ಹೋಗದು, ಅದು ಮನಸೊಳಗೆ ಅಡರಿರುವ ರೋಗ ಎನ್ನುವುದು ಇಲ್ಲಿನ 'ಪೊಲೀಸ್' ಕಥೆ ನಿರೂಪಿಸುತ್ತದೆ. ಇಲ್ಲಿನ ಪ್ರತಿಯೊಂದು ಕಥೆಗಳಲ್ಲಿ ಇಂತಹ ಗುಣಗಳಿವೆ. ನೆಲಮೂಲದ ವಿಷಯಗಳನ್ನು ಇಟ್ಟುಕೊಂಡು ಅವರ ನೋವುಗಳನ್ನು, ಇನ್ನೂ ಮುಗಿಯದ ಅವರ ಸಂಕಟಗಳನ್ನು, ಅವರನ್ನು ಇನ್ನೂ ಮನುಷ್ಯರನ್ನಾಗಿ ನೋಡದವರ ದರ್ಪವನ್ನು ಕಥೆಗಾರ ಓದುಗರಿಗೆ ದಾಟಿಸಿದ್ದಾರೆ. ಒಂದೇ ಉಸಿರಿನಲ್ಲಿ ಓದಿಸಿಕೊಂಡು ಹೋಗುವ ಇಲ್ಲಿನ ಕಥೆಗಳ ಸಾರ ಸೂಕ್ಷ್ಮ ಹಾಗೂ ಅದೇ ಬೇಗುದಿ ಅನುಭವಿಸಿದ ಓದುಗನಿಗೆ ಬೇಗನೆ ತಟ್ಟುತ್ತದೆ.

ನೋವುಂಡವರ ಭಾಷೆಯಲ್ಲಿಯೇ ಬರೆದಿರುವುದು ಈ ಪುಸ್ತಕದ ವಿಶೇಷ. 'ಶುದ್ಧ ಸಾಹಿತ್ಯ'ವನ್ನು ಪ್ರತಿಪಾದಿಸುವವರಿಗೆ ಇಲ್ಲಿನ ಭಾಷೆ 'ಮೈಲಿಗೆ' ಎನಿಸಬಹುದು. ಅಂಥವರಿಗೆ ಇಲ್ಲಿನ ಕಥೆಯ ಸಾರವೂ ತಿಳಿಯದು. ಅನುವಾದಕರೂ ಕೂಡ ಮೂಲ ಕಥೆಗಾರರ ಆ ಸೊಡಗನ್ನೇ ಉಳಿಸಿಕೊಂಡಿದ್ದು ಢಾಳಾಗಿ ಕಾಣುತ್ತದೆ. ಒಟ್ಟಾರೆಯಾಗಿ ಈ ಪುಸ್ತಕ ಇಡೀ ಸಮಾಜದ ಶೋಷಿತರ ನೋವಿಗೆ ಕನ್ನಡಿ ಹಿಡಿಯುತ್ತದೆ.

ಪುಟ: 168 ₹185



ಅಂತರಿಕ್ಷಕ್ಕೆ ಹಂತಹಂತದ ಮೆಟ್ಟಿಲು ಖಗೋಳ ದರ್ಶನ
ಸಂಪಾದಕ: ಡಾ. ಬಿ.ಎಸ್. ಶೈಲಜಾ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080 – 22161900

ಅಂತರಿಕ್ಷಕ್ಕೆ ಮೆಟ್ಟಿಲುಗಳ 'ದರ್ಶನ'

ಖಗೋಲ ತಜ್ಞರು, ಖಭೌತ ತಜ್ಞರು ಎಲ್ಲರ ಲೇಖನಗಳನ್ನು ಒಟ್ಟುಗೂಡಿಸಿದ ಸಚಿತ್ರ ಪುಸ್ತಕ ಇದಾಗಿದೆ. ಚಿಣ್ಣರಿಂದ ಆರಂಭಿಸಿ, ಆಕಾಶ, ತಾರೆ, ಆಕಾಶ ಕಾಯಗಳ ಬಗೆಗಿನ ಕುತೂಹಲ ಇರುವವರಿಗೆ ಇದು ರಸದೌತಣವಾಗಿದೆ. ಆಸಕ್ತಿ ಇರದಿದ್ದಲ್ಲಿ ಆಸಕ್ತಿ ಹುಟ್ಟಿಸುವಂಥ ಹಲವಾರು ಅಂಶಗಳು ಈ ಪುಸ್ತಕದಲ್ಲಿವೆ. ನೆತ್ತಿ ಎತ್ತಿದರೆ ಸಾಕು, ಸೋಜಿಗದ ಹರವು ವಿಸ್ತಾರವಾಗುತ್ತ ಹೋಗುತ್ತದೆ. ಈ ಕಾಯಗಳ ನಡುವಿನ ದೂರ ಏನು? ಗುಣಲಕ್ಷಣಗಳು ಏನು? ತಾರೆ ಮತ್ತು ಗ್ರಹಗಳ ನಡುವಿನ ವ್ಯತ್ಯಾಸ ಹೇಗೆ ಕಂಡು ಹಿಡಿಯಬಹುದು? ನಿಮ್ಮ ಅಂಗೈ ಎತ್ತಿ ಹಿಡಿದು ಮುಂಗೈ ನೋಡುತ್ತ, ಬೆರಳುಗಳ ಸಹಾಯದಿಂದ ದಿಕ್ಕು ಕಂಡು ಹಿಡಿಯುವುದು ಹೇಗೆ ಎಂಬ ವಿಷಯಗಳಿಂದ ಈಗ ನವತಂತ್ರಜ್ಞಾನದ ಬಳಕೆ ಹೇಗೆ ಎಂಬುದನ್ನೂ ವಿವರಿಸಿ ಹೇಳುತ್ತದೆ.

ತಜ್ಞರು ಸರಳ ಕನ್ನಡದಲ್ಲಿ, ವಿವರಗಳನ್ನು ಚಿತ್ರಗಳ ಮೂಲಕ, ಅಗತ್ಯವಿದ್ದಲ್ಲಿ ಡಯಾಗ್ರಾಮುಗಳಲ್ಲಿ ವಿವರಿಸುತ್ತ ಹೋಗುವುದರಿಂದ ಯಾವ ವಯೋಮಾನದವರೂ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ ಖಗೋಳವನ್ನು ಭೂಗೋಳದಷ್ಟೇ ಸರಳವಾಗಿ ವಿವರಿಸಿರುವುದರಿಂದ ಈ ಪುಸ್ತಕ ಎಲ್ಲ ಶಾಲಾ ಗ್ರಂಥಾಲಯದಲ್ಲಿಡಬಹುದಾದ ಕೃತಿಯಾಗಿದೆ. ಅಪರೂಪವೆನಿಸುವ ಸೌರ ಮಾರುತ, ಪರಿಣಾಮ ಎಲ್ಲವನ್ನೂ ಚಿತ್ರಗಳ ಮೂಲಕವೇ ವಿವರಿಸಲಾಗಿದೆ. ಖಗೋಳ ಲೋಕದ ವಿಸ್ಮಯಗಳನ್ನೂ, ವಿಷಯಗಳನ್ನೂ ಯಾರಾದರೂ ಸರಳವಾಗಿ ಅರ್ಥ ಮಾಡಿಕೊಳ್ಳುವಂತೆ ವಿವರಿಸಲಾಗಿದೆ. ಗುರುತ್ವ, ಗಣಿತ, ಆಕಾಶ ಗಂಗೆ, ಆಗಸದ ಬಣ್ಣಗಳು, ಗಗನಯಾನ, ಗಗನಯಾನಿಗಳು ಮುಂತಾದವೆಲ್ಲವೂ ಸಮಗ್ರ ಚಿತ್ರಣವನ್ನು ನೀಡುತ್ತಲೇ ಇನ್ನೂ ಅರಿಯಬೇಕು ಎಂಬ ಹಸಿವನ್ನೂ ಹುಟ್ಟಿಸುವಂಥ ಪುಸ್ತಕವಾಗಿದೆ.

ಪುಟ: 472 ₹1950

ಅಗಸ್ತ್ಯನ ಮುಡಿಯಿಂದ ಕಂಡ ಇಳೆ!



ಅಗಸ್ತ್ಯಮಲೆಯಿಂದ ಹುಲಿಯ ಪಂಜದಂತೆ ಕಾಣುವ 'ಐಂತಲೈ ಪೊದಿಗೈ' ಪರ್ವತಗಳು

ಕೇರಳ ಹಾಗೂ ತಮಿಳುನಾಡು ಗಡಿಯಲ್ಲಿರುವ ಅಗಸ್ತ್ಯಕೂಡಂ ಬೆಟ್ಟವು ಚಾರಣಿಗರಿಗೆ ಸವಾಲು ಒಡ್ಡುವಂತಿದೆ. ಇದು ಒಂದು ದಿನದಲ್ಲಿ ಪೂರ್ಣಗೊಳಿಸಬಹುದಾದ ಚಾರಣವಲ್ಲ. ಇದನ್ನು ಕೈಗೊಳ್ಳಲು ದೇಹ ಮಾತ್ರ ಗಟ್ಟಿಯಾಗಿದ್ದರೆ ಸಾಲದು ಎದೆಯೂ ಗಟ್ಟಿಯಾಗಿರಬೇಕು. ದಕ್ಷಿಣ ಕೈಲಾಸವೆಂದೂ ಖ್ಯಾತಿ ಪಡೆದಿರುವ ಇಂತಹ ಗಿರಿ ಹತ್ತಿದ ಲೇಖಕರು ಅಲ್ಲಿಂದ ಕಂಡ ಇಳೆಯ ಸೌಂದರ್ಯಕ್ಕೆ ಅಕ್ಷರ ರೂಪ ನೀಡಿದ್ದಾರೆ.

• ಮೋಹನ್ ಕುಮಾರ ಸಿ.

ಅಗಸ್ತ್ಯಕೂಡಂ, ದಕ್ಷಿಣ ಭಾರತದಲ್ಲೇ ಅತಿ ಕಠಿಣ ಚಾರಣಗಳಲ್ಲಿ ಒಂದು. ಕೇರಳದ ರಾಜಧಾನಿ ತಿರುವನಂತಪುರಂಗೆ ಸಮೀಪವಿರುವ ಈ ಗಿರಿಶಿಖರ 1,868 ಮೀಟರ್ ಎತ್ತರವಿದ್ದು, ಇದನ್ನು ಏರಲು ಮೂರು ದಿನ ಬೇಕು!

48 ಕಿ.ಮೀ ಹಾದಿಯ ಚಾರಣದಲ್ಲಿ ಪ್ರತಿ ಕಿಲೊಮೀಟರ್‌ಗೂ ಜಲಪಾತ, ನದಿ ಕಣಿವೆ, ಹುಲ್ಲುಗಾವಲು, ಸೂರ್ಯನ ಕಿರಣ ಬೀಳದಷ್ಟು ಹಬ್ಬಿದ ಮಳೆಕಾಡುಗಳನ್ನು ಹೊಕ್ಕು ಸಾಗಬೇಕಾಗುತ್ತದೆ. ಕೊನೆಯ 600 ಮೀಟರ್ ಅನ್ನು ಹಗ್ಗ ಹಿಡಿದುಕೊಂಡೇ ಹತ್ತುವಾಗ ಎದೆ ನಡುಗುತ್ತದೆ.

ಪಶ್ಚಿಮಘಟ್ಟಗಳ ಸಾಲಿನ ಕೊನೆಯ ಎತ್ತರದ ಈ ಗಿರಿಯು ಕೇರಳ–ತಮಿಳುನಾಡಿನ ಗಡಿಯಾಗಿದೆ. ಹಿಂದೂ ಮಹಾಸಾಗರ, ಅರಬ್ಬಿ ಸಮುದ್ರ ಗಿರಿಯ ನೆತ್ತಿಯಿಂದ ಕಾಣುತ್ತವೆ. ಇಲ್ಲಿ ಅಗಸ್ತ್ಯ ಮುನಿ ಮೂರ್ತಿಯಿದ್ದು, ತಮಿಳಿಗರಿಗೆ ಪುಣ್ಯಭೂಮಿಯಾಗಿದೆ. ಕಾವೇರಿಯನ್ನು ಬ್ರಹ್ಮಗಿರಿಯಿಂದ ತಮಿಳುನಾಡಿಗೆ ಹರಿಸಿದ ಅಗಸ್ತ್ಯ ಮುನಿ ಇಲ್ಲಿಯೇ ನೆಲೆಗೊಂಡರೆಂಬ ಐತಿಹ್ಯವೂ ಇದೆ. ಹೀಗಾಗಿಯೇ ಅಗಸ್ತ್ಯಮಲೈ, ಪೊದಿಗೈಮಲೈ ಎಂಬ ಹೆಸರಿನಿಂದಲೂ, ತ್ರಿಭುಜಾಕಾರದಲ್ಲಿರುವ ಗಿರಿಶಿಖರವು ಕೈಲಾಸ ಶಿಖರ ಹೋಲುವುದರಿಂದ ದಕ್ಷಿಣ ಕೈಲಾಸವೆಂದೂ ಖ್ಯಾತಿ ಪಡೆದಿದೆ.

ನಮ್ಮ ಕುದುರೆಮುಖ ಗಿರಿಶಿಖರಕ್ಕಿಂತ ತುಸು ಕಡಿಮೆ ಎತ್ತರವಿದ್ದರೂ, ಅಗಸ್ತ್ಯಕೂಡಂ ತುತ್ತತುದಿ ತಲುಪಲು ಸುಮಾರು 24 ಕಿ.ಮೀ ಕ್ರಮಿಸಬೇಕು. ಕುದುರೆಮುಖ ಮತ್ತು ಕುಮಾರ ಪರ್ವತದ ಚಾರಣ ಸುಖದ ಮಿಳಿತ ಈ ಚಾರಣದಲ್ಲಿ ಸಿಗುವುದು ಖಚಿತ. ಕುದುರೆಮುಖದಂತೆ ಶೋಲಾ ಕಾಡುಗಳು, ಹುಲ್ಲುಗಾವಲು, ಕುಮಾರಪರ್ವತದಂತೆ ದಟ್ಟ ಕಾನನ, ಕಲ್ಲುಹಾಸಿನ ಮೇಲಿನ ಚಾರಣದ ಸುಖವು ಅಗಸ್ತ್ಯಮಲೈನಲ್ಲಿ ಸಂಧಿಸುವಂತೆ ಭಾಸವಾಗುತ್ತದೆ.

ಬುಕ್ಕಿಂಗ್ ಕೂಡ ಸಾಹಸ

ವರ್ಷದಲ್ಲಿ ಜನವರಿಯಿಂದ ಮೇ ವರೆಗೆ ಚಾರಣಕ್ಕೆ ಅವಕಾಶವಿದ್ದು, ಬುಕ್ಕಿಂಗ್ ಮಾಡುವುದೇ ಸಾಹಸ. ಮುಂಗಾರು ಮತ್ತು ಹಿಂಗಾರಿನಲ್ಲಿ ಹೆಚ್ಚು ಪ್ರಮಾಣದ ಮಳೆಯನ್ನು ಕಾಣುವ ಪಶ್ಚಿಮಘಟ್ಟದ ಈ ಭಾಗದಲ್ಲಿ ನದಿ–ಝರಿಗಳು ಡಿಸೆಂಬರ್‌ವರೆಗೂ ಉಕ್ಕಿ ಹರಿಯುತ್ತವೆ.

ಚಾರಣ

ಹೀಗಾಗಿಯೇ ಕೇರಳ ಅರಣ್ಯ ಇಲಾಖೆಯು ಚಾರಣಕ್ಕೆ ಅವಕಾಶವನ್ನು ವರ್ಷದ ಮೊದಲ ಐದು ತಿಂಗಳು ನೀಡಿದೆ. ಈ ಅವಧಿಯಲ್ಲಿ ಚಾರಣ ಪ್ರಿಯರು ಕೇರಳ ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಟಿಕೆಟ್ ಪಡೆಯಲು ಕಾಯುತ್ತಿರುತ್ತಾರೆ. ಎರಡು ದಿನಕ್ಕೊಮ್ಮೆ 100 ಜನರಿಗೆ ಪ್ರವೇಶಾವಕಾಶ ನೀಡುವುದರಿಂದ ಕೆಲವೇ ಗಂಟೆಗಳಲ್ಲಿ ಆನ್‌ಲೈನ್ ಟಿಕೆಟ್ ಬಿಕರಿಯಾಗುತ್ತದೆ. ಟಿಕೆಟ್ ಪಡೆದರೂ ಚಾರಣ ಮಾಡಲು ಏಳು ದಿನವಿರುವಂತೆ ವೈದ್ಯಕೀಯ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ತರಬೇಕು. ಅದಿದ್ದರೆ ಮಾತ್ರ ಪ್ರವೇಶ.

ನಮ್ಮ ಪ್ರಯಾಣ

ಚಾರಣಕ್ಕೆ ಬರುವ ನೂರು ಮಂದಿಯಲ್ಲಿ ಹತ್ತುವವರು ಅರ್ಧದಷ್ಟು ಮಾತ್ರ! ನಾನು, ಸ್ನೇಹಿತರಾದ ಅಜಿತ್ ಮತ್ತು ರವಿ ಶಫೀ ಮೂವರು ಅಗಸ್ತ್ಯಕೂಡಂ ಚಾರಣ ಕೈಗೊಂಡಿದ್ದೆವು. ನಮ್ಮಲ್ಲಿ ಗಿರಿಶಿಖರ ತಲುಪಿದ್ದು ನಾನೊಬ್ಬನೇ.

ಹಗ್ಗ ಹಿಡಿದು ಹತ್ತುವ ಸಾಹಸ

ತಿರುವನಂತಪುರದ ಸಮುದ್ರದ ತೀರದಲ್ಲಿದ್ದ ನಾವು ಸುಮಾರು 500 ಮೀಟರ್ ಎತ್ತರದ 61 ಕಿ.ಮೀ ದೂರದ ಪಶ್ಚಿಮಘಟ್ಟಗಳ ಟ್ರೆಕ್ಕಿಂಗ್ ಆರಂಭದ ಜಾಗವಾದ ಬೋನಾಕಾಡ್ ತಲುಪಿದಾಗ ಬೆಳಿಗ್ಗೆ 7.30. ಅಲ್ಲಿ ಆಗಲೇ ಹತ್ತಾರು ಮಂದಿ ಸೇರಿದ್ದರು. ದಾಖಲೆಗಳ ಪರಿಶೀಲನೆಯೂ ನಡೆದಿತ್ತು. ಅರಣ್ಯ ಸಿಬ್ಬಂದಿ ನಮ್ಮ ಬ್ಯಾಗ್‌ನಲ್ಲಿದ್ದ ಬ್ರಷ್, ಪೇಸ್ಟ್ ಹೊರತು ಪಡಿಸಿ ಉಳಿದೆಲ್ಲವನ್ನೂ ಕಸದಬುಟ್ಟಿಗೆ ಎಸೆದರು. ಜೀವವೈವಿಧ್ಯದ ಸೂಕ್ಷ್ಮತಾಣವಾದ ಈ ಪ್ರದೇಶಕ್ಕೆ ಪ್ಲಾಸ್ಟಿಕ್ ಒಯ್ಯುವಂತಿಲ್ಲ.

ಮೊದಲ ದಿನ 16 ಕಿ.ಮೀ ದೂರದ ಅಗಸ್ತ್ಯಕೂಡಂ ಅಥಿರುಮಲೆ ಬೇಸ್‌ಕ್ಯಾಂಪ್‌ಗೆ ತಲುಪಬೇಕಿತ್ತು. ಅಲ್ಲಿಂದ ಚಾರಣ ಶುರುವಾಯಿತು. ದಟ್ಟ ಕಾನನದ ಹಾದಿಯಲ್ಲಿ ಮುಗಿಲಿನೆತ್ತರಕ್ಕೆ ಬೆಳೆದಿದ್ದ ಮರಗಳ ಅಡಿಯಲ್ಲಿ ಸಾಗಿದ ನಾವು, ಜಲಪಾತ, ಹುಲ್ಲುಗಾವಲು ಕಂಡೆವು. ದೊಡ್ಡ ಝರಿಯಲ್ಲಿ ಸ್ನಾನ ಮಾಡಿ, ಊಟ ಮುಗಿಸಿ ಅಥಿರುಮಲೆ ತಲುಪಿದಾಗ ಮಧ್ಯಾಹ್ನ 3.30. ಕಾಲುಗಳು ಪದ ಹಾಡುತ್ತಿದ್ದವು.

ಬೇಸ್ ಕ್ಯಾಂಪ್ ಸಮೀಪದ ಹುಲ್ಲುಗಾವಲಿನ ಹಿನ್ನೆಲೆಯಲ್ಲಿ ಪಿರಮಿಡ್‌ನಂತೆ ಕಾಣುತ್ತಿದ್ದ ಅಗಸ್ತ್ಯಮಲೈ ಅನ್ನು ಸಂಜೆ ಸೂರ್ಯನ ಹೊಂಬಣ್ಣದ ಬೆಳಕಿನಲ್ಲಿ ಕಣ್ತುಂಬಿಕೊಂಡೆವು. ಮಲೆಯಲ್ಲಿ ಹುಟ್ಟುವ ನೆಯ್ಯಾರ್ ನದಿ ಅಲ್ಲಿ ತಣ್ಣನೆ ಕೊರೆಯುವಂತೆ ಹರಿಯುತ್ತಿತ್ತು. ಜಳಕವ ಮಾಡಿ ಕ್ಯಾಂಪ್‌ನಲ್ಲಿ ಸಿಕ್ಕ ಅನ್ನ ಉಪ್ಪುಗಂಜಿ ಊಟ ಮಾಡಿದೆವು. ಪಶ್ಚಿಮ ಘಟ್ಟದ ಗಿರಿ ಶಿಖರಗಳ ಹಿನ್ನೆಲೆಯಲ್ಲಿ ಹೊಳೆಯುತ್ತಿದ್ದ ತಾರೆ–ನಕ್ಷತ್ರಪುಂಜಗಳನ್ನು ಕಣ್ತುಂಬಿಕೊಂಡು ಮಲಗಿದೆವು. ಎಲ್ಲೆಲ್ಲಿಂದಲೊ ಬಂದವರು ಒಂದೇ ಸೂರಿನಡಿಯಲ್ಲಿದ್ದೆವು. ಮಲಯಾಳ, ತಮಿಳು, ಕನ್ನಡ, ತೆಲುಗು, ಹಿಂದಿಯಲ್ಲಿ ಆಡುತ್ತಿದ್ದ ಮಾತುಗಳು ಪ್ರಕೃತಿಯನ್ನೇ ಧೇನಿಸುತ್ತಿದ್ದವು.

ಶಿಖರದ ಸವಾಲು

ಮಾರನೆಯ ದಿನ ಶಿಖರವೇರುವ 7–8 ಕಿ.ಮೀ ಹಾದಿ, ಜೊತೆಯಲ್ಲಿ ಅರಣ್ಯ ಸಿಬ್ಬಂದಿಯೂ ರಕ್ಷಣೆಗೆ ಜೊತೆಯಲ್ಲಿದ್ದರು. ಅಲ್ಲಲ್ಲಿ ಆನೆ ಲದ್ದಿಯನ್ನು ಕಂಡೆವು. ದಾರಿಯಲ್ಲಿ ಸಿಕ್ಕ ಝರಿಯಲ್ಲಿ ಪ್ರಾಣಿಗಳಂತೆ ತುಟಿ ಸೋಕಿಸಿ ನೀರನ್ನು ಹೀರಿದೆವು. ನನ್ನ ಗೆಳೆಯರಿಬ್ಬರು ಮುಂದೆ ಸಾಗಲು ಅಸಾಧ್ಯವೆಂದು ಕುಳಿತುಬಿಟ್ಟರು. ಚಾರಣದಲ್ಲಿ ನಡೆಯಲಾಗದೆಂದು ಕುಳಿತವರನ್ನು ಬಲವಂತ ಮಾಡಬಾರದೆಂಬುದು ಅಲ್ಲಿಯೇ ಗೊತ್ತಾಗುತ್ತದೆ. ಜೀವವೇ ಹೋದಂತೆ ಸಿಟ್ಟಾಗಿ ಬೈಗುಳ ಕೇಳುವುದಕ್ಕಿಂತ ಸಾವಧಾನವಾಗಿ ಕುಳಿತುಕೊಳ್ಳಿರೆಂದು, ಬರುವವರೆಗೂ ಕಾಯಿರೆಂದು ನಾನು ಶಿಖರದ ಹಾದಿಯನ್ನು ಹಿಡಿದೆ.

ಅವರಿಗೂ ನನ್ನ ಕುರಿತು ಆತಂಕ. ಏಕೆಂದರೆ, ದಶಕದ ಹಿಂದೆ ಇದೇ ಕಲ್ಲುಹಾಸಿನಿಂದ ಜಾರಿ, ಕಣಿವೆಯ ಬಿದಿರ ಮೆಳೆಗೆ ವಿಜ್ಞಾನಿಯೊಬ್ಬರು ಬಿದ್ದಿದ್ದರು. ಎಡಗಣ್ಣಿಗೆ ಬಿದಿರು ಹೊಕ್ಕು ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿದ್ದರು. ಈ ಘಟನೆಯನ್ನು ನಮ್ಮ ಜೊತೆಗೆ ಬಂದಿದ್ದ ಅರಣ್ಯ ಸಿಬ್ಬಂದಿ ಹೇಳಿದ್ದರು. ಅಲ್ಲದೇ ಹೃದಯಾಘಾತದಿಂದ ಹಲವರು ಮೃತಪಟ್ಟಿದ್ದಾರೆ ಎಂಬ ಮಾತುಗಳು ಇನ್ನೇನು ಶಿಖರ ಹತ್ತಿರವಿದೆ ಎಂದಾಗ ಕಾಡಲು ಶುರುವಾಗಿತ್ತು.

50ರಿಂದ 150 ಅಡಿ ಎತ್ತರವಿರುವ ಮೂರು ಜಾರು ಬಂಡೆಗಳನ್ನು ಹಗ್ಗ ಹಿಡಿದು ಹಿಂದಿನ ಸಾವಿರ ಮೀಟರ್‌ನ ಆಳದ ಕಣಿವೆಯನ್ನು ನೋಡದೇ ಹತ್ತಲು ಆರಂಭಿಸಿದೆ. ಈಗಾಗಲೇ ಎರಡ್ಮೂರು ಬಾರಿ ಹತ್ತಿದವರು ಮೇಲೆ ಕುಳಿತು ನೀಡುತ್ತಿದ್ದ ಸಲಹೆಗಳು ಧೈರ್ಯ ತುಂಬಿದವು. ಕೊನೆಗೂ ಶಿಖರದ ಮೇಲೆ ನಿಂತು ಕಣ್ಣು ಹಾಯಿಸಿದಾಗ ಒಂದೆಡೆ ಬಿಳಿಹಾಸಿಗೆಯ ಮೋಡಗಳು, ಅಜಾನುಬಾಹುವಿನಂತೆ ನಿಂತಿರುವ ಪಶ್ಚಿಮ ಘಟ್ಟದ ಸಾಲು. ಎದುರು ಸುಂದರವಾಗಿ, ಭೂಮಿ ಹುಟ್ಟಿದಾಗಿಂದಲೂ ನಿಂತಿದ್ದ 'ಐಂತಲೈ ಪೊದಿಗೈ' ಶಿಖರಗಳು. ಅವನ್ನು ನೋಡುತ್ತಿದ್ದಂತೆ 'ಇಳಾ' ಎಂದು ಪ್ರಕೃತಿಯೇ ಬರೆದಂತೆ ಅನ್ನಿಸಿತ್ತು. ಇಳೆಯ ಸೌಂದರ್ಯವು ಅಗಸ್ತ್ಯನ ಮುಡಿಯಲ್ಲಿ ನಿಂತು ಕಂಡದ್ದು ಅನಿರ್ವಚನೀಯ!

ಕೊನೆಯಲ್ಲಿ ಹತ್ತಲಾರದವರು ಮತ್ತೆ ಹೋಗುವ ಶಪಥ ಮಾಡಿಯೇ ಮಲೆಯನು ಇಳಿಯಲು ಜೊತೆಯಾದರು. ಚಾರಣ ಮುಗಿಸಿದಾಗ ಕಾಲು ನಡುಗುತ್ತಿದ್ದವು. ಮೂರು ದಿನದ ಚಾರಣ ಎರಡೇ ದಿನಕ್ಕೆ ಪೂರ್ಣಗೊಳಿಸಲು ನಿರ್ಧರಿಸಿದ್ದೆವು. ಅಗಸ್ತ್ಯಕೂಡಂ ಚಾರಣ ಅಸಾಧ್ಯವನ್ನು ಸಾಧ್ಯವಾಗಿಸಿದ ಸಾರ್ಥಕವನ್ನು ತಂದುಕೊಟ್ಟಿತು. ❖

ಅಥಿರುಮಲೆ ಬೇಸ್‌ಕ್ಯಾಂಪ್ ಬಳಿ ಕಾಣುವ ಅಗಸ್ತ್ಯಮಲೆ

ನಾಲೆಯ ಆಚೀಚೆಯ ಕೃಷಿ ಚಟುವಟಿಕೆ...

ಇಂತಿ ನಿಮ್ಮ ಪ್ರೀತಿಯ ವರುಣಾ

10ನೇಪುಟದಿಂದ...

ನಾನು ಹರಿದುಹೋಗಿರುವ ಪ್ರದೇಶವು ಎಲ್ಲೆಲ್ಲಿ ಅಭಿವೃದ್ಧಿಯಾಗಿದೆಯೋ ಅಲ್ಲೆಲ್ಲ ಇದೇ ಪರಿಸ್ಥಿತಿ. ಬರಗಾಲಕ್ಕೆ ಸಡ್ಡು ಹೊಡೆಯಲೆಂದೇ ಹೋರಾಟ ಮಾಡಿ ಪಡೆದ ನನ್ನ ಮಹತ್ವವು ಅಭಿವೃದ್ಧಿಯ ನಾಗಾಲೋಟದಲ್ಲಿ ಕರಗುತ್ತಿದೆ.

'ನನ್ನ ಅಚ್ಚುಕಟ್ಟು ಪ್ರದೇಶವನ್ನು ಹಸಿರು ವಲಯ ಎಂದು ಘೋಷಿಸಿಲ್ಲವೇ' ಎಂದು, ಕಾವೇರಿ ಜಲಾನಯನ ಯೋಜನೆಗಳನ್ನು ನಿರ್ವಹಿಸಬೇಕಾದ ಕಾವೇರಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಕಾಡಾ)ದ ಎಂಜಿನಿಯರುಗಳನ್ನು ಕೇಳಿ. ನಿರುಮ್ಮಳವಾಗಿ 'ಇಲ್ಲ' ಎನ್ನುತ್ತಾರೆ. 'ಅಷ್ಟಕ್ಕೂ ಅದು ರೈತರ ಜಮೀನು. ಅವರ ಆಸ್ತಿ. ಅದನ್ನು ಮಾರಬೇಡಿ ಎಂದು ನಾವು ಹೇಳಲು ಬರುವುದಿಲ್ಲ' ಎಂಬ ಸಮಜಾಯಿಷಿಯೂ ಸಿದ್ಧ. ಹಸಿರು ವಲಯ ಎಂದು ಘೋಷಿಸಲು ಏನು ಅಡ್ಡಿ? ಇದಕ್ಕೆ ಯಾರ ಬಳಿಯೂ ಉತ್ತರವಿಲ್ಲ.

ನನ್ನ ಉದ್ದಕ್ಕೂ ಸೋರಿಕೆ ಪ್ರತಿ ವರ್ಷದ ಸಮಸ್ಯೆ. ಅದು ಆರಂಭದಿಂದಲೂ ಇದೆ. ಆರು ತಿಂಗಳು ನೀರು ಹರಿಸಿ, ಇನ್ನಾರು ತಿಂಗಳು ನಿರ್ವಹಣೆ ಮಾಡಬೇಕಾದ ಕೆಲಸವೂ ಸಮರ್ಪಕವಾಗಿ ನಡೆಯದ ಕಾರಣ, ಕಾಡಾ ಎಂಜಿನಿಯರುಗಳು ರೈತರಿಂದ ಪೂರ್ಣ ಅಂಕ ಪಡೆಯಲು ಆಗಿಲ್ಲ. ಆದರೂ ಕೋಟಿ ಕೋಟಿ ವೆಚ್ಚದಲ್ಲಿ ದುರಸ್ತಿ ಮಾತ್ರ ನಡೆಯುತ್ತಲೇ ಇದೆ!

ಬಡಾವಣೆಗಳ ಕೊಳಚೆ ನೀರು ಯಾವ ತಡೆಯೂ ಇಲ್ಲದೆ ನನ್ನೊಡಲಲ್ಲಿ ಹರಿಯುತ್ತಿದೆ ಎಂಬುದು ಕಾಡಾಕ್ಕೆ, ಸ್ಥಳೀಯ ಪಂಚಾಯಿತಿಗಳ ಎಲ್ಲರಿಗೂ ಗೊತ್ತು. ಆದರೆ ಅದನ್ನು ನಿಲ್ಲಿಸುವ ಪ್ರಯತ್ನ ಮಾತ್ರ ಕಾಗದ ಪತ್ರಗಳಲ್ಲಿ ಮಾತ್ರ ನಡೆದಿದೆ. ಗ್ರಾಮ ಪಂಚಾಯಿತಿಗಳಿಗೆ ಎಂಜಿನಿಯರುಗಳು ಬರೆದ ಪತ್ರಗಳು, ಪಂಚಾಯಿತಿಗಳ ನಿರ್ಲಿಪ್ತ ಉತ್ತರಗಳೂ ಅಸಂಖ್ಯ. ನನ್ನೊಡಲು ನೀರು, ಚರಂಡಿ ನೀರು ಒಂದೇ. ಇದೇ ನೀರು ಕೆರೆ, ಕಟ್ಟೆಗಳನ್ನೂ ಸೇರುತ್ತಿದೆ. ಯಾವುದೋ ಒಂದು ರೂಪದಲ್ಲಿ ಜನರ ಹೊಟ್ಟೆಯನ್ನೂ ಸೇರುತ್ತಿದೆ.

ಸೇರಿಸಿ...ಸೇರಿಸಬೇಡಿ...

ಕೃಷಿಯಿಂದ ವಿಮುಖರಾಗಿರುವ ಮೈಸೂರು ಭಾಗದ ನನ್ನ ಫಲಾನುಭವಿ ರೈತರ ನಡುವೆ ಇನ್ನೊಂದು ಸಂಘರ್ಷ ಏರ್ಪಡುವ ದಿನಗಳೂ ಬಂದಿವೆ. ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನು ರಚಿಸಲು ಇತ್ತೀಚೆಗೆ ಅಧಿಸೂಚನೆ ಹೊರಡಿಸಿರುವ ಸರ್ಕಾರಕ್ಕೆ ಸಲ್ಲಿಕೆಯಾಗುತ್ತಿರುವ ಆಕ್ಷೇಪಣೆಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ.

ನಾನು ಹರಿದು ಹೋಗುವ ವರುಣಾ ಕ್ಷೇತ್ರದ ಕೆಲವರು, 'ಅಲ್ಲಿನ ಹಳ್ಳಿಗಳನ್ನು ಪಾಲಿಕೆಗೆ ಸೇರಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರತಿಭಟನಾ ಸಭೆಗಳನ್ನೂ ನಡೆಸಿದ್ದಾರೆ. ಇದೇ ವೇಳೆ, 'ನಾಲೆ ಹರಿದು ಹೋಗುವ ಹಳ್ಳಿಗಳನ್ನು ಯಾವುದೇ ಕಾರಣಕ್ಕೂ ಪಾಲಿಕೆ ವ್ಯಾಪ್ತಿಗೆ ಸೇರಿಸಬಾರದು. ಅಲ್ಲಿನ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಬೇಕು. ಅಷ್ಟೋ ಇಷ್ಟೋ ಉಳಿದಿರುವ ಹಸಿರು ವಲಯವನ್ನು ಉಳಿಸಬೇಕು' ಎಂದು ರೈತರು ಆಗ್ರಹಿಸಿ ಆಕ್ಷೇಪಣೆ ಸಲ್ಲಿಸುತ್ತಿದ್ದಾರೆ.

ನಾನೀಗ ಇಬ್ಬಗೆಯ ರೈತರ ಹಗ್ಗಜಗ್ಗಾಟದಲ್ಲಿ ಸಿಲುಕಿದ್ದೇನೆ. ಒಬ್ಬರು, ಏನಾದರೂ ಸರಿ, ಕೃಷಿಯನ್ನು ಬಿಟ್ಟು ಬದುಕನ್ನು ಹುಡುಕಿಕೊಳ್ಳಬೇಕೆಂದು ಹೊರಟವರು. ಇನ್ನೊಬ್ಬರು, ಕೃಷಿಯೇ ಬದುಕೆಂದುಕೊಂಡವರು. ಇನ್ನೊಂದು ವರ್ಗವಿದೆ. ನನ್ನ ಅಚ್ಚುಕಟ್ಟು ಪ್ರದೇಶವನ್ನು ಹಸಿರು ವಲಯವೆಂದು ಘೋಷಿಸಬೇಕು. ನನ್ನ ನಿರ್ಮಾಣದ ಉದ್ದೇಶವನ್ನು ಕಾಪಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತಿರುವವರು.

ಇದರ ನಡುವೆ, ನಾಲ್ಕು ದಶಕದ ಅವಧಿಯಲ್ಲಿ ನನ್ನ ಬದಿಯ ಅಚ್ಚುಕಟ್ಟು ಪ್ರದೇಶದ ರೈತರ ಅನ್ನದ ತಟ್ಟೆಯಂತೂ ಇಷ್ಟಿಷ್ಟೇ ಬರಿದಾಗುತ್ತಿದೆ. ಆದರೆ, ನಾನೂ ಉಳಿಯಬೇಕು. ಜನರ ನಾಳೆಯೂ ಉಳಿಯಬೇಕು. ಅಭಿವೃದ್ಧಿಯೂ ಆಗಬೇಕು. ಅದು ಹೇಗೆ? ನೀವೇ ಯೋಚಿಸಿ...

ವಂದನೆಗಳು ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಗುರಿ	+	ಮುದ	+	ಗೆ	=	
2	ಬಾಳೆ	+	ದರ	+	ಮ	=	
3	ಸಾಗು	+	ಸುರಿ	+	ಧಿ	=	
4	ಹುಳಿ	+	ಕಾರು	+	ಳು	=	
5	ಕೋಳ	+	ಗಜ	+	ಳಿ	=	

ಶಬ್ದಾಟ

ಇಲ್ಲಿರುವ ಪದ ಹಾಗೂ ಎರಡಕ್ಷರ ಸೇರಿಸಿ ಒಂದೇ ಪದ ಮಾಡಿ.

ಹೆರಿಗೆ + ಮುಡ =

ಗಣಿತದಲ್ಲಿ ಗರ್ದಿಗಮ್ಮತ್ತು

ಬೆಸ ಸಂಖ್ಯೆಗಳನ್ನು ಕೂಡುವುದರಿಂದ ಬರುವ ವರ್ಗಸಂಖ್ಯೆಗಳು

$1=1=1^2$
$1+3=4=2^2$
$1+3+5=9=3^2$
$1+3+5+7=16=4^2$
$1+3+5+7+9=25=5^2$
$1+3+5+7+9+11=36=6^2$
$1+3+5+7+9+11+13=49=7^2$
$1+3+5+7+9+11+13+15=64=8^2$
$1+3+5+7+9+11+13+15+17=81=9^2$
$1+3+5+7+9+11+13+15+17+19=100=10^2$

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ತನ್ನ ಸ್ನೇಹಿತೆಯೊಂದಿಗೆ ವಾಯುವಿಹಾರಕ್ಕೆ ಹೋಗಿದ್ದ. ಆಕೆ ಧರಿಸಿದ್ದ ಉಡುಪಿನಲ್ಲಿ ಹೂವುಗಳ ಚಿತ್ರವಿತ್ತು. ಜೊತೆಗೆ ಆ ಬಟ್ಟೆಗೆ ಸುಗಂಧ ದ್ರವ್ಯ ಹಾಕಿದ್ದಳು. ಕೆಲವು ಹೆಜ್ಜೆ ಹಾಕುವಷ್ಟರಲ್ಲೇ ಚಿಟ್ಟೆಗಳು ಆಕೆಯನ್ನು ಹಿಂಬಾಲಿಸತೊಡಗಿದವು. ಕೆಲ ಹೊತ್ತಿನಲ್ಲಿ ಹತ್ತಾರು ಚಿಟ್ಟೆಗಳು ಆಕೆಯ ಸುತ್ತ ಸುತ್ತುತ್ತಿದ್ದವು. ಇದನ್ನು ಗುಂಡ ಆಶ್ಚರ್ಯದಿಂದ ನೋಡಿದ.

ಚಿಟ್ಟೆ ಬಂತು ಚಿಟ್ಟೆ...



ಪದ ಶೋಧ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಂದು ಚಲನಚಿತ್ರದ ಹೆಸರನ್ನು ಹುಡುಕಿ.

1.ಅಲೆನೋವಿನ ಸಂಗತಿ
2.ಕಾರು ಡಿಕ್ಕಿಯ ಪ್ರಸಂಗ
3.ಅತಿ ಸ್ವಾಭಿಮಾನವುಳ್ಳ
4.ಅಸ್ವಾಮಿನ ಅಧಿಕಾರಿ
5.ಜನನಾಯಕನ ಕಾರ್ಯ
6.ಕೊಳವಿಬಾವಿ ನೀರು
7.ಅವರೋಹಣ ಪದ್ಧತಿ
8.ಮರ್ಯಾದೆ ಹೆಚ್ಚಿಸಿಕೊಳ್ಳಿ
9.ನಿನ್ನ ಹೀನಾಯ ಕೆಲಸ
10.ನನಗೆ ಖುಷಿ ಆಗಿದೆ.

ಉತ್ತರ:

ಮೋಜಿನ ಇಂಗ್ಲಿಷ್

ಪದ–ಬದಲಾಟ

1.ಇಲ್ಲಿರುವ ಇಂಗ್ಲಿಷ್ ಪದಗಳ ಅವೇ ಅಕ್ಷರಗಳನ್ನು ಬಳಸಿಕೊಂಡು ಬೇರೊಂದು ಪದ ಮಾಡಿ.

1	STOP	
2	RATE	
3	READ	
4	ABLE	
5	RATS	

2.ಇಲ್ಲಿ ಕೊಟ್ಟಿರುವ 'BE' ಪದದ ಮುಂದೆ ಇನ್ನೊಂದು ಇಂಗ್ಲಿಷ್ ಪದ ತುಂಬಿ. ಎರಡನ್ನೂ ಕೂಡಿಸಿ ಓದಿದಾಗ ಹೊಸದೊಂದು ಪದವಾಗುವಂತೆ ಯಾವ ಪದ ತುಂಬುತ್ತೀರಿ?

1	BE	
2	BE	
3	BE	
4	BE	
5	BE	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮಧ್ಯದ 'ಕ್ಷ' ಅಕ್ಷರಕ್ಕೆ ಅಕ್ಷರಪಟ್ಟಿಯಿಂದ ಎರಡು ಅಕ್ಷರ ಆಯ್ದುಕೊಂಡು ಆಚೀಚೆ ಸೇರಿಸಿ ಅರ್ಥಬದ್ಧ ಮೂರಕ್ಷರದ ಪದ ಮಾಡಿ.

1		ಕ್ಷ		
2		ಕ್ಷ		
3		ಕ್ಷ		
4		ಕ್ಷ		
5		ಕ್ಷ		
6		ಕ್ಷ		
7		ಕ್ಷ		
8		ಕ್ಷ		
9		ಕ್ಷ		
10		ಕ್ಷ		

ಅಕ್ಷರ ಪಟ್ಟಿ

ಣೆ	ದ	ನ	ತೆ	ತ್ರ
ಣ	ರ	ಅ	ಣ	ರ
ಶಿ	ಲ	ತ	ಣ	ಭ
ಅ	ಮ್ಯ	ಅ	ಕ	ತೆ

ಒಗಟು ಪದಬಂಧ

ಒಗಟು ಬಿಡಿಸು–ಪದಬಂಧ ಬಿಡಿಸು

ಸುಳಿವು

ಎಡದಿಂದ ಬಲಕ್ಕೆ

2.ಕರ್ರಗ ಮಿಣಿ ಮಿಣಿ ಕೊರದರ ಕೊಬ್ಬರಿ, ಒಳಗೆಲ್ಲ ಮೆಣಸಿನ ಬೀಜ
4.ಬಾವಿ ಸುತ್ತ ಬೆಳ್ಳಿಗೂಟ

ಮೇಲಿನಿಂದ ಕೆಳಕ್ಕೆ

1.ಎಲೆಯಲ್ಲಿ ಬಡಿಸಿದ ಪದಾರ್ಥಗಳ ಹೆಸರು ಹೇಳಿ, ಆಮೇಲೆ ಏನು ತೆಗೆದರೆ ರುಚಿ ಹತ್ತುವುದು?
3.ಹೋದಲ್ಲೆಲ್ಲ ಬರತಾನ ಕರಿಯಪ್ಪ
4.ಹಸಿರು ಗಿಡದಾಗ ಬೆಣ್ಣೆ ಉಂಡೆ

					1
	2		3		
4					

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸಂಸ್ಕೃತಿ ಎಸ್.ಆರ್.
ಮಡಿಕೇರಿ

ಶ್ರೀನಿಧಿ ಹುಲಗಬಾಳ
ಸಿಂದಗಿ

ನಮನ್‌ಗೌಡ ಕೆ.ಹರ್ಷ
ರಾಣೆಬೆನ್ನೂರು

ನಿಯತಿ ನಾವಡ
ಕುಂದಾಪುರ

ಯಜತ್ ಎಚ್.ಆರ್.
ಹೊಸಕೋಟೆ

ನಿತೇಶ್ ಕೆ.ಎಂ.
ಬೆಂಗಳೂರು

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಚಿನ್ನಾರಿಮುತ್ತ 2.ಶಾಂತಿಸಾಗರ 3.ಕೆಲಸಗಾರ 4.ವಿಭೂತಿಪಟ್ಟ 5.ಕಲಾಪಬಲಿ
ಪೇಚಿನ ಪ್ರಶ್ನೆ: 108 = 9 dozen
ಶಬ್ದಾಟ: ರಸ್ತೆಗಿಳಿದ
ವರ್ಡ್‌ಗೇಮ್: HONESTY
ಜಾಣಪದ ಆಟ1: 1.ಕೈವಾರ 2.ಕೈತುತ್ತು 3.ಕೈಗಡ 4.ಕೈಚಾಚು 5.ಕೈಲಾಸ 6.ಕೈಹಿಡಿ 7.ಕೈಕೊಡು 8.ಕೈಎತ್ತು 9.ಕೈಕಾಲು 10.ಕೈವಶ
ಜಾಣಪಟ ಆಟ 2: 1.ಅವಿರೋಧ 2.ಅವಿಭಾಜ್ಯ 3.ಅವಿರೋಧ 4.ಅವಿವೇಕ 5.ಅವಿಶ್ವಾಸ

ಬಿಎಫ್‌ಸಿಗೆ ಉತ್ತಮ ಪ್ರದರ್ಶನ ಗುರಿ

ಐಎಸ್‌ಎಲ್: ಇಂದು ಕಂಠೀರವ ಕ್ರೀಡಾಂಗಣದಲ್ಲಿ ದೆಹಲಿ ವಿರುದ್ಧ ಪಂದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಶಿವರಾತ್ರಿಯ ದಿನವಾದ ಭಾನುವಾರ ಫುಟ್‌ಬಾಲ್ ಪ್ರೇಮಿಗಳಿಗೆ ಸಿಹಿಸುದ್ದಿ ಲಭಿಸಿದೆ. ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಈ ವರ್ಷದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ.

'ಹಾಲಿ ರನ್ನರ್ಸ್ ಅಪ್' ಆಗಿರುವ ಬಿಎಫ್‌ಸಿಯು ಸ್ಪೋರ್ಟಿಂಗ್ ಕ್ಲಬ್ ದೆಹಲಿ ತಂಡವನ್ನು ಎದುರಿಸಲಿದೆ. ಹೋದ ವರ್ಷ ಸೂಪರ್ ಕಪ್ ಟೂರ್ನಿಯ ಗುಂಪು ಹಂತದಲ್ಲಿ ನಿರ್ಗಮಿಸಿದ್ದ ಬಿಎಫ್‌ಸಿಯು 102 ದಿನಗಳ ನಂತರ ಮತ್ತೆ ಕಣಕ್ಕಿಳಿಯುತ್ತಿದೆ. ಭಾರತ ಫುಟ್‌ಬಾಲ್ ರಂಗದ ದಂತಕತೆ ಸುನಿಲ್ ಛೆಟ್ರಿ ಅವರು ಆಡಲಿದ್ದಾರೆ.

ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಎಫ್‌ಸಿ ತಂಡದ ಮುಖ್ಯ ಕೋಚ್ ರೆನೆಡಿ ಸಿಂಗ್, 'ನಮ್ಮ ತಂಡವು ಎಲ್ಲ ಪೂರ್ವಸಿದ್ಧತೆ ಮಾಡಿಕೊಂಡಿದೆ. ಟೂರ್ನಿಯುದ್ದಕ್ಕೂ ತಂಡದ ಆಟಗಾರರು ಸ್ಥಿರ ಪ್ರದರ್ಶನ ನೀಡಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಈ ಆವೃತ್ತಿಯಲ್ಲಿ 13 ಪಂದ್ಯಗಳು ನಡೆಯಲಿವೆ. ರಕ್ಷಣಾ ವಿಭಾಗ ಹಾಗೂ ಆಕ್ರಮಣಕಾರಿ ಆಟಗಾರರ ನಡುವೆ ಸಮತೋಲನ ಕಾಯ್ದುಕೊಳ್ಳಲಾಗುವುದು' ಎಂದರು.

ಬಿಎಫ್‌ಸಿ ನಾಯಕ ಸುನಿಲ್ ಛೆಟ್ರಿ ಶನಿವಾರ ತಾಲೀಮು ನಡೆಸಿದರು

'ಸಾಂಘಿಕ ಆಟದೊಂದಿಗೆ ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸಿಕೊಳ್ಳುತ್ತೇವೆ. ಆಕ್ರಮಣಕಾರಿ ಆಟವೂ ತಂಡದ ಕಾರ್ಯತಂತ್ರದ ಭಾಗವಾಗಿದೆ' ಎಂದು ಫಾರ್ವರ್ಡ್ ಆಟಗಾರ ರಿಯಾನ್ ವಿಲಿಯಮ್ಸ್ ತಿಳಿಸಿದರು.

'ಈ ಬಾರಿಯ ಐಎಸ್‌ಎಲ್ ಟೂರ್ನಿ ಆರಂಭವಾಗುವುದನ್ನೇ ಎದುರು ನೋಡುತ್ತಿದ್ದೆ. ಅದರಲ್ಲೂ, ತಂಡದ ಅಭಿಮಾನಿಗಳಿಂದ ತುಂಬಿರುವ ತವರಿನ ಅಂಗಳದಲ್ಲಿ ಆಡಲು ಕಾತರಿಸುತ್ತಿದ್ದೇನೆ. ತಂಡದ ಆಟಗಾರರೊಂದಿಗೆ ಉತ್ತಮ ಹೊಂದಾಣಿಕೆ ಇದ್ದು, ಎರಡನೇ ಬಾರಿಗೆ ಪ್ರಶಸ್ತಿ ಗೆಲ್ಲುವ ವಿಶ್ವಾಸವಿದೆ' ಎಂದರು.

ಇಂದಿನ ಪಂದ್ಯ

ಜಮ್ಷೆಡ್‌ಪುರ ಎಫ್‌ಸಿ	V/s	ಮೊಹಮ್ಮಡನ್ ಎಫ್‌ಸಿ
ತಾಣ: ಜಮ್ಷೆಡ್‌ಪುರ, ಆರಂಭ: ಸಂಜೆ 5		
ಬೆಂಗಳೂರು ಎಫ್‌ಸಿ	V/s	ಸ್ಪೋರ್ಟಿಂಗ್ ಕ್ಲಬ್ ದೆಲ್ಲಿ
ತಾಣ: ಬೆಂಗಳೂರು, ಆರಂಭ: ರಾತ್ರಿ 7.30		

ಲೈವ್: ಸೋನಿ ಸ್ಪೋರ್ಟ್ಸ್ ಟೆನ್ 2, ಫ್ಯಾನ್‌ಕೋಡ್

ರಿಯಾನ್ ಅವರು ಕಳೆದ ವರ್ಷ ಆಸ್ಟ್ರೇಲಿಯಾದ ಪಾಸ್‌ಪೋರ್ಟ್ ಮರಳಿಸಿ ಭಾರತದ ಪೌರತ್ವ ಪಡೆದಿದ್ದಾರೆ.

2018–19ರ ಆವೃತ್ತಿಯ ಚಾಂಪಿಯನ್ ಬಿಎಫ್‌ಸಿ ತಂಡವು ತನ್ನ ಮೊದಲ ಮೂರೂ ಪಂದ್ಯಗಳನ್ನು ತವರಿನಲ್ಲಿಯೇ ಆಡಲಿದೆ. 40 ವರ್ಷ ವಯಸ್ಸಿನ ಛೆಟ್ರಿ ಅವರಿಗೆ ಇದು ಕೊನೆಯ ಆವೃತ್ತಿಯಾಗಬಹುದು ಎಂದೂ ಹೇಳಲಾಗಿದೆ.

ಕಳೆದ ಆವೃತ್ತಿಯಲ್ಲಿ ಫೈನಲ್ ತಲುಪಿದ್ದಾಗ ಕೋಚ್ ಆಗಿದ್ದ ಜೆರಾರ್ಡ್ ಝರ್ಗೋಝಾ ಅವರು ತಂಡವನ್ನು ತೊರೆದಿದ್ದು, ಬಿಎಫ್‌ಸಿಗೆ ಸವಾಲಾಗಿದೆ.

ಅಲೆಕ್ಸ್ ಸಜಿ ನಾಯಕತ್ವದ ದೆಹಲಿ ತಂಡಕ್ಕೆ ಅನುಭವಿ ಆಟಗಾರರು ಹಾಗೂ ವಿದೇಶಿ ಆಟಗಾರರ ಕೊರತೆ ಎದ್ದು ಕಾಣುತ್ತಿದೆ. ಕೇರಳದ ಅವಳಿ ಸಹೋದರರಾದ ಐಮೆನ್ ಹಾಗೂ ಅಜರ್ ಅವರ ಮೇಲೆ ಅಟ್ಯಾಕಿಂಗ್ ವಿಭಾಗ ಅವಲಂಬಿತವಾಗಿದೆ.

ಮೋಹನ್ ಬಾಗನ್ ಶುಭಾರಂಭ

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಉದ್ಘಾಟನಾ ಪಂದ್ಯದಲ್ಲಿ 2–0 ಗೋಲುಗಳಿಂದ ಕೇರಳ ಬ್ಲಾಸ್ಟರ್ಸ್ ತಂಡವನ್ನು ಸೋಲಿಸಿ, ಇಂಡಿಯನ್ ಸೂಪರ್ ಲೀಗ್ ಅಭಿಯಾನವನ್ನು ಉತ್ತಮ ರೀತಿಯಲ್ಲಿ ಆರಂಭಿಸಿತು.

ವಿವೇಕಾನಂದ ಯುವಭಾರತಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಈ ಪಂದ್ಯದಲ್ಲಿ ಜೇಮಿ ಮೆಕ್‌ಲಾರೆನ್ (36ನೇ ನಿಮಿಷ) ವಿರಾಮಕ್ಕೆ ಮೊದಲು ಮೋಹನ್‌ಬಾಗನ್ ತಂಡಕ್ಕೆ ಮುನ್ನಡೆ ಒದಗಿಸಿದರು. ಕೊನೆಯ ನಿಮಿಷ ಟಾಮ್ ಅಲ್‌ಫ್ರೆಡ್ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು. ಆಸ್ಟ್ರೇಲಿಯಾದವರಾದ ಮೆಕ್‌ಲಾರೆನ್ 'ಪಂದ್ಯದ ಆಟಗಾರ' ಗೌರವಕ್ಕೆ ಪಾತ್ರರಾದರು.

ಗೋವಾದ ಫಟೋರ್ಡಾದ ಪಿಜೆಎನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಫ್‌ಸಿ ಗೋವಾ 1–1ರಿಂದ ಇಂಟರ್ ಕಾಶಿ ವಿರುದ್ಧ ಡ್ರಾ ಸಾಧಿಸಿತು.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಮಹಿಳಾ ಟಿ20: ಭಾರತ–ಆಸ್ಟ್ರೇಲಿಯಾ ಪಂದ್ಯ ಇಂದು

ಸಿಡ್ನಿ (ಪಿಟಿಐ): ಈ ವರ್ಷದ ಮಧ್ಯದಲ್ಲಿ ನಿಗದಿಯಾಗಿರುವ ಮಹಿಳಾ ಟಿ20 ವಿಶ್ವಕಪ್‌ಗೆ ಸಿದ್ಧತೆಯಾಗಿ ಭಾರತ ತಂಡವು, ಆಸ್ಟ್ರೇಲಿಯಾ ವಿರುದ್ಧ ಮೂರು ಟಿ20 ಪಂದ್ಯಗಳ ಸರಣಿಯನ್ನು ಆಡಲಿದ್ದು, ಮೊದಲನೇ ಪಂದ್ಯ ಭಾನುವಾರ ಇಲ್ಲಿ ನಡೆಯಲಿದೆ.

ಭಾರತ ತಂಡವು ಆಸ್ಟ್ರೇಲಿಯಾ ಪ್ರವಾಸದಲ್ಲಿ ಮೂರೂ ಮಾದರಿಗಳಲ್ಲಿ ಆಡಲಿದೆ. ಟಿ20 ಸರಣಿಯ ನಂತರ, ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡ ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ನಂತರ ಪರ್ತ್‌ನಲ್ಲಿ ಏಕೈಕ ಟೆಸ್ಟ್ ಪಂದ್ಯ ಆಡಲಿದೆ. ಮಾರ್ಚ್ 6ರಿಂದ ಈ ಟೆಸ್ಟ್ ಹಗಲು–ರಾತ್ರಿ ಮಾದರಿಯಲ್ಲಿ ನಡೆಯಲಿದೆ.

ಹೋದ ವರ್ಷ ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತ ತಂಡವು ಮೊದಲ ಬಾರಿ ವಿದೇಶ ಪ್ರವಾಸ ಕೈಗೊಂಡಿದೆ. ಸಿಡ್ನಿಯಲ್ಲಿ ಮೊದಲ ಟಿ20 ಪಂದ್ಯದ ನಂತರ ಎರಡನೇ ಪಂದ್ಯ ಕೆನ್‌ಬೆರಾದಲ್ಲಿ, ಮೂರನೇ ಪಂದ್ಯ ಅಡಿಲೇಡ್ ಓವಲ್‌ನಲ್ಲಿ ನಡೆಯಲಿದೆ.

ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ ತಂಡದ ಕೈಲಿ ಸೋಲನುಭವಿಸಿದ್ದ ಆಸ್ಟ್ರೇಲಿಯಾ ತಂಡವು ಈ ಸರಣಿಯಲ್ಲಿ ತನ್ನ ಸಾಮರ್ಥ್ಯ ತೋರಲು ತುದಿಗಾಲಲ್ಲಿದೆ. ಆಸ್ಟ್ರೇಲಿಯಾ ಕಂಡ ಶ್ರೇಷ್ಠ ಬ್ಯಾಟರ್‌ಗಳಲ್ಲಿ ಒಬ್ಬರಾದ ಅಲಿಸಾ ಹೀಲಿ ಈ ಸರಣಿಯ ನಂತರ ನಿವೃತ್ತರಾಗಲಿದ್ದಾರೆ. ಸೋಫಿ ಮಾಲಿನೆ ಮೊದಲ ಬಾರಿ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಪಂದ್ಯ ಆರಂಭ: **ಮಧ್ಯಾಹ್ನ 1.45. ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್**